"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

15ನೇ ಮಾರ್ಚ್ 2021
ಸೋಮವಾರ

## ವಿಷಯಾನುಕ್ರಮಣಿಕೆ


**1.ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1339 – ಪಂಚಾಕ್ಷರಿ ಗವಾಯಿಗಳ ಪ್ರಾಧಿಕಾರ ರಚನೆ ಬಗ್ಗೆ.**
- ಶ್ರೀ ಮಾನೆ ಶ್ರೀನಿವಾಸ್
- ಶ್ರೀ ಅರವಿಂದ ಲಿಂಬಾವಳಿ(ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**963 – ಕಾಡು ಪ್ರಾಣಿಗಳು ವಸತಿ ಪ್ರದೇಶಕ್ಕೆ ಬರುತ್ತಿರುವ ಬಗ್ಗೆ**
- ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
- ಶ್ರೀ ಅರವಿಂದ ಲಿಂಬಾವಳಿ(ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**1307 – ಬೀದರ್‌ನಲ್ಲಿರುವ ಐತಿಹಾಸಿಕ "ಕರೇಜ್ ಸುರಂಬ ಬಾವಿಯ" ಬಗ್ಗೆ**
- ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
- ಶ್ರೀ ಸಿ.ಪಿ.ಯೋಗೇಶ್ವರ್(ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು)

**949 – ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ**
- ಡಾ:ಚಂದ್ರಶೇಖರ್ ಬಿ. ಪಾಟೀಲ್
- ಡಾ:ಅಶ್ವಥ್ ನಾರಾಯಣ ಸಿ.ಎನ್.(ಉಪ ಮುಖ್ಯಮಂತ್ರಿಗಳು, ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

**155 – 1995ರ ನಂತರ ಆರಂಭವಾದ ಅನುದಾನ ರಹಿತ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ**
- ಶ್ರೀ ಅರುಣ ಶಹಾಪುರ
- ಶ್ರೀ ಎಸ್.ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)

**1349 – ಸರ್ಕಾರಿ ಶಾಲೆಗಳ ಜಾಗಗಳ ಬಗ್ಗೆ**
- ಶ್ರೀ ಕಾಂತರಾಜ್(ಬಿಎಂಎಲ್)
- ಶ್ರೀ ಎಸ್.ಸುರೇಶ್‌ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**952 – ಕಾಡು ಪ್ರಾಣಿಗಳು ವಸತಿ ಪ್ರದೇಶಕ್ಕೆ ಬರುತ್ತಿರುವ ಬಗೆ.**
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಅರವಿಂದ ಲಿಂಬಾವಳಿ(ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**978 – ವೈದ್ಯಕೀಯ ಕಾಲೇಜುಗಳಲ್ಲಿ ಸೀಟ್ ಬ್ಲಾಕಿಂಗ್ ಬಗ್ಗೆ**
- ಶ್ರೀ ಎನ್.ರವಿಕುಮಾರ್
- ಡಾ:ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)

ತಡೆಹಿಡಿಯಲಾದ ಪ್ರಶ್ನೆ

ಸಂಖ್ಯೆ **126 – ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯ್ದೆ–2006ರ ಬಗ್ಗೆ**
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಡಾ:ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**2.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ)** ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂದ ಕುಗ್ರಾಮಕ್ಕೆ ಸಾರಿಗೆ ಸೌಲಭ್ಯ ಒದಗಿಸದೆ ಇರುವ ಬಗ್ಗೆ.
- ಮುನಿರಾಜು ಗೌಡ ಪಿ.ಎಂ.(ತುಳಸಿ)
- ಶ್ರೀ ಎಸ್.ಸುರೇಶ್ ಕುಮಾರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ ಇವರ ಪರವಾಗಿ)

**ಆ)** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರಾರಂಭಿಸಿದ ನಾಗರಿಕ ಸಹಾಯವಾಣಿ ಕೇಂದ್ರವನ್ನು ಸ್ಥಗಿತಗೊಳಿಸದೆ ಜನಸಾಮಾನ್ಯರ ಹಿತದೃಷ್ಟಿಯಿಂದ ಮುಂದುವರೆಸುವ ಬಗ್ಗೆ.
- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಡಾ:ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)

**ಇ)** ಬಿಬಿಎಂಪಿ ವ್ಯಾಪ್ತಿಯಲ್ಲಿನ ನಗರ ಯೋಜನಾ ವಿಭಾಗಗಳಲ್ಲಿ ಕಳೆದ 5 ವರ್ಷಗಳಲ್ಲಿ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ, ಸ್ವಾಧೀನ ಪ್ರಮಾಣ ಪತ್ರ ನೀಡುವಲ್ಲಿ ಆಗಿರುವ ಆಡಳಿತ ವೈಫಲ್ಯಗಳನ್ನು ಸಮಗ್ರ ತನಿಖೆಗೆ ಒಳಪಡಿಸುವ ಬಗ್ಗೆ.
- ಶ್ರೀ ಪಿ.ಆರ್.ರಮೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**3.ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ**

ಅ) ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಪರವಾಗಿ)

ಆ) ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಖಾಸಗಿ ಬಿ.ಇಡಿ. ಕಾಲೇಜುಗಳಲ್ಲಿ ಸೀಟು ಮಾರಾಟ ದಂಧೆ ನಡೆಸುತ್ತಿರುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಪರವಾಗಿ)

ಇ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ ಅರಣ್ಯ ಪ್ರದೇಶಕ್ಕೆ ಬೆಂಕಿ ಬಿದ್ದು ಅರಣ್ಯ ನಾಶವಾಗುತ್ತಿರುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಪರವಾಗಿ)

ಈ) ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಡೊಮಗೇರಾ ಗ್ರಾಮವನ್ನು ನೂತನ ದಾಂಡೇಲಿ ತಾಲ್ಲೂಕಿಗೆ ಸೇರಿಸಬಾರದೆನ್ನುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ)

ಉ) ಕೊಡಗು ಜಿಲ್ಲೆ ತಿತಿಮತಿ ಗ್ರಾಮ ಪಂಚಾಯಿತಿ ಹಾಗೂ ಕಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಡಿಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಕಟ್ಟಲು ಅರಣ್ಯ ಇಲಾಖೆ ನಿಯಮಗಳು ಅಡ್ಡಿಯಾಗಿರುವ ಬಗ್ಗೆ.
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಪರವಾಗಿ)

**4.ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಅಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ: ತಳವಾರ್ ಸಾಬಣ್ಣ
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೆ.ಎ.ತಿಪ್ಪೇಸ್ವಾಮಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**5.ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು**

ಅ) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಮೀನುಗಾರರ ಸರ್ವತೋಮುಖ ಅಭಿವೃದ್ಧಿಗೆ ನಿರ್ದಿಷ್ಟ ಕಾಲಮಿತಿ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ.

- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಎಸ್.ಅಂಗಾರ(ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

ಆ) ಹೈದ್ರಾಬಾದ್-ಕರ್ನಾಟಕ(ಕಲ್ಯಾಣ ಕರ್ನಾಟಕ) ಪ್ರದೇಶಾಭಿವೃದ್ಧಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಗೆ ತಂದಿರುವ ತಿದ್ದುಪಡಿಯು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು/ನಿರುದ್ಯೋಗಿಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ.

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ)

**6.ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:-** ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸ, ಶಿರೋಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಬಗ್ಗೆ

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಕೆ.ಎಸ್.ಈಶ್ವರಪ್ಪ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

**7.ಪ್ರಕಟಣೆ**

**8.ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:-** ಕೊಡಗು ಜಿಲ್ಲೆಯಲ್ಲಿ ವನ್ಯ ಪ್ರಾಣಿಗಳ ದಾಳಿಯಿಂದಾಗಿ ಜೀವಹಾನಿ ಹಾಗೂ ಬೆಳೆಹಾನಿ ಹೆಚ್ಚಾಗಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಬಗ್ಗೆ.

- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಪಿ.ಆರ್.ರಮೇಶ್
- ಶ್ರೀ ಅರವಿಂದ ಲಿಂಬಾವಳಿ(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು)
- ಶ್ರಿ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಕೆ.ಟಿ.ಶ್ರೀಕಂಠೇಗೌಡ

~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(366)/15-3-2021/10-50/ಎಲ್ಎಂ/ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

**ಸೋಮವಾರ, 15ನೇ ಮಾರ್ಚ್ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಪೂರ್ವಾಹ್ನ 10 ಗಂಟೆ 59 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು**
**ಪೀಠದಲ್ಲಿ ಉಪಸ್ಥಿತರಿದ್ದರು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1.ಪ್ರಶ್ನೋತ್ತರಗಳು**

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾಗುವ ಉತ್ತರಗಳು

**(367)15–03–2021(11–00)ಬಿಎಸ್‌ಡಿ–ಎಂಡಿ**

**ಪ್ರಶ್ನೆ ಸಂಖ್ಯೆ: 1339**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೇ, ಬಹಳ ವರ್ಷಗಳಿಂದ ಈ ಬೇಡಿಕೆ ಸರ್ಕಾರದ ಮುಂದೆ ಇದೆ ಎಂಬ ಉತ್ತರವು ನನಗೆ ಸಿಗುತ್ತಿದೆ. ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿಹಳ್ಳಿ ಗ್ರಾಮವು ಪಂಡಿತ್ ಪಂಚಾಕ್ಷರಿ ಗವಾಯಿಗಳ ಜನ್ಮಸ್ಥಳವಾಗಿದೆ. ಸಂಗೀತ ಲೋಕಕ್ಕೆ ದೊಡ್ಡ ಕೊಡುಗೆಯನ್ನು ಅವರು ನೀಡಿದ್ದು, ವಿಶೇಷವಾಗಿ ಅಂಧ ಮಕ್ಕಳು ಸಂಗೀತದ ಮೂಲಕ ಉಪಜೀವನ ಮಾಡುವ ದಾರಿದೀಪವಾಗಿ ಮಠವು ನಡೆಯುತ್ತಿದೆ. ಹಾಗಾಗಿ ಬಹುಶಃ ಇದಕ್ಕೆ ಹೆಚ್ಚಿನ ಹಣಕಾಸಿನ ಅವಶ್ಯಕತೆ ಇಲ್ಲ. ಅಲ್ಲಿ ಯಾತ್ರಿನಿವಾಸ ಮತ್ತು ಸಂಗೀತ ಶಾಲೆಯನ್ನು ಮಾಡಲು ಹಾಗೂ ಪ್ರಾಧಿಕಾರ ರಚನೆಗೆ ಅನುಕೂಲ ಮಾಡಿಕೊಟ್ಟರೆ ಪಂಡಿತ್ ಪಂಚಾಕ್ಷರಿ ಗವಾಯಿಗಳಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಈ ಕೆಲಸವನ್ನು ಎಷ್ಟು ಕಾಲಾವಕಾಶದಲ್ಲಿ ಮಾಡುತ್ತಾರೆ ಎಂಬ ನಿಖರ ಉತ್ತರವನ್ನು ಮಾನ್ಯ ಸಚಿವರು ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಉಪ ಪ್ರಶ್ನೆಗಳಿಗೆ ಸರ್ಕಾರವು ನಿಶ್ಚಿತವಾಗಿ ಸ್ಪಂದಿಸುತ್ತದೆ. ಪ್ರಾಧಿಕಾರದ ರಚನೆ ಬಗ್ಗೆ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಮಾಡಬೇಕಾಗುತ್ತದೆ. ಆದರೆ ಅವರು ಯಾತ್ರಿನಿವಾಸ ಮತ್ತು ಸಂಗೀತ ಶಾಲೆಗಳ ಸ್ಥಾಪನೆ ಬಗ್ಗೆ ಎರಡು ಸಲಹೆಗಳನ್ನು ನೀಡಿದ್ದಾರೆ. ಪಂಡಿತ್ ಪಂಚಾಕ್ಷರಿ ಗವಾಯಿಗಳ ಬಗ್ಗೆ ತಮಗೂ ಅದೇ ಭಾಗದವರಾಗಿರುವುದರಿಂದ ಬಹಳ ಚೆನ್ನಾಗಿ ಗೊತ್ತಿದೆ. ಸಂಗೀತಾಸಕ್ತರು, ಅದರಲ್ಲೂ ವಿಶೇಷವಾಗಿ ಕಣ್ಣು ಇಲ್ಲದೇ ಇಲ್ಲದವರಿಗೆ ಅವರು ಕೊಡುತ್ತಿರುವ ತರಬೇತಿ ಮುಂದುವರೆದು ಚೆನ್ನಾಗಿ ಆಗಬೇಕು ಎಂಬುದು ನನ್ನ ಆಗ್ರಹವೂ ಆಗಿದೆ. ಯಾತ್ರಿನಿವಾಸ ಮತ್ತು ಸಂಗೀತ ಶಾಲೆಯ ಬಗ್ಗೆ ತಕ್ಷಣ ಈ ವರ್ಷ budget ಇಲಾಖೆಯಿಂದ ಯೋಜನೆಯನ್ನು ಸಿದ್ದ ಮಾಡುತ್ತೇನೆ. ಪ್ರಾಧಿಕಾರದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮಾನೆ ಶ್ರೀನಿವಾಸ:–** ಈ ಎರಡು ಯೋಜನೆಗಳನ್ನು ಜಾರಿಗೊಳಿಸಿದರೆ ನಾನು ಸ್ವಾಗತ ಮಾಡುತ್ತೇನೆ.

**ಸಭಾಪತಿಯವರು:–** ನಂತರ ಶ್ರೀಮತಿ ಭಾರತಿಶೆಟ್ಟಿ ರವರು ಪ್ರಶ್ನೆ ಕೇಳಲು ಸದನದಲ್ಲಿ ಇಲ್ಲ. ನಂತರ ಶ್ರೀ ಎಂ. ನಾರಾಯಣಸ್ವಾಮಿ ರವರು ಪ್ರಶ್ನೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1316**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರಿಸುವ ಸಚಿವರು ಸದನದಲ್ಲಿ ಇಲ್ಲ. . . .

**ಸಭಾಪತಿಯವರು:–** ಮಾನ್ಯ ಮಂತ್ರಿಯವರು ಇಲ್ಲ, ಅವರು ಬರಲಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಮಂತ್ರಿಯವರು ಬಂದಾಗ ಅವಕಾಶ ಕೊಟ್ಟರೆ ಪ್ರಸ್ತಾಪ ಮಾಡುತ್ತೇನೆ.

**ಶ್ರೀ ಕೆ.ಸಿ. ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, ಆ ವಿಚಾರವನ್ನು ಬಾರಿ ಬಾರಿ ಪ್ರಸ್ತಾಪಿಸುವ ಅಗತ್ಯ ಇಲ್ಲ. . . .

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಕೆ.ಸಿ. ನಾರಾಯಣಗೌಡ:–** ಅದನ್ನು ಬಾರಿ ಬಾರಿ ಹೇಳುವ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮಾತನಾಡುತ್ತಿದ್ದೇನೆ, ಅವರಿಗೆ ಮಾತನಾಡುತ್ತಿಲ್ಲ. . . .

**(ಗೊಂದಲ)**

**ಶ್ರೀ ಕೆ.ಸಿ. ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಯಾವ ವಿಚಾರಗಳು ಕಡತಕ್ಕೆ ಹೋಗಬಾರದು. ಮಾನ್ಯ ಸಚಿವರಾಗಿ ನೀವು ಎಲ್ಲರೂ ಮಾತನಾಡಿದಂತೆ ಏನು ಬೇಕಾದರೂ ಮಾತನಾಡುತ್ತೀರಾ, ಕುಳಿತುಕೊಳ್ಳಿ. ನಾನು ಹೇಳಿದಾಗ ಮಾತನಾಡಿ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ವಿರೋಧಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಹಾಗೂ ತೋಟಗಾರಿಕೆ ಹಾಗೂ ಪೌರಾಡಳಿತ ಇಲಾಖೆ ಸಚಿವರಾದ ಶ್ರೀ ಕೆ.ಸಿ.ನಾರಾಯಣಗೌಡರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀ ಕೆ.ಸಿ. ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಸಿ.ನಾರಾಯಣಗೌಡ:–** ಅವರು ಅನೇಕ ಬಾರಿ ಈ ರೀತಿ ಮಾತನಾಡಬಹುದೇ?

**ಸಭಾಪತಿಯವರು:–** ನಾನು ಅವರಿಗೆ ಹೇಳಿದ್ದೇನೆ, ಮೊನ್ನೆ ಇದೇ ರೀತಿ ಆದಾಗ ಕಡತದಿಂದ ತೆಗೆದುಹಾಕಲಾಗಿದೆ, ತಾವು ಕುಳಿತುಕೊಳ್ಳಿ. ಯಾವ ವಿಚಾರಗಳು ಕಡತಕ್ಕೆ ಹೋಗಬಾರದು. ಅವರವರ ಜಗಳ........

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಕೃಷಿ ಸಚಿವರಾದ ಶ್ರೀ ಬಿ.ಸಿ.ಪಾಟೀಲ್‌ರವರು ಹಾಗೂ ತೋಟಗಾರಿಕೆ ಹಾಗೂ ಪೌರಾಡಳಿತ ಇಲಾಖೆ ಸಚಿವರಾದ ಶ್ರೀ ಕೆ.ಸಿ.ನಾರಾಯಣಗೌಡರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ನಾವು ತಮ್ಮ ಮಾತು ಕೇಳಿ ಸುಮ್ಮನಿದ್ದೇವೆ.......

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ,......

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶ್ರೀ ರವಿಕುಮಾರ್‌ರವರೇ, ಕುಳಿತುಕೊಳ್ಳಿ. ನಾನು ಹೇಳಿದ್ದೇನೆ, ಮತ್ತೆ ಮಾತನಾಡುವುದು ಬೇಡ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:–** ನಾವು ತಮ್ಮ ಮಾತಿನಂತೆ ಸುಮ್ಮನೆ ಇದ್ದೇವೆ......

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, **. . .**

**ಸಭಾಪತಿಯವರು:–** ನೀವು ಪ್ರಶ್ನೆ ಕೇಳಿ.

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ 1316 ಅನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಗೆ ಕೇಳಬೇಕಾಗಿತ್ತು **. . .**

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ, ನಾನು allow ಮಾಡಿಲ್ಲ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ವಿರೋಧಪಕ್ಷದ ಮುಖ್ಯ ಸಚೇತಕರಾದ ಶ್ರೀ ಎಂ.ನಾರಾಯಣಸ್ವಾಮಿಯವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**Sri S.R.PATIL:-** It is the right of a member whether to ask the question or not. ಕೇಳಬಾರದು ಎಂದರೆ ಏನು ಎಂದು ಹೇಳಬೇಕಲ್ಲವೇ? ಮಧ್ಯೆ ಮಧ್ಯೆ interruption ಆಗುತ್ತಿರುತ್ತಾರೆ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ನಮ್ಮ ತೀರ್ಮಾನ ಕೇಳಬೇಕು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಸಿ. ನಾರಾಯಣಗೌಡ:–** ಮಾನ್ಯ ಸಭಾಪತಿಯವರೇ, **. . .**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ತೋಟಗಾರಿಕೆ ಹಾಗೂ ಪೌರಾಡಳಿತ ಇಲಾಖೆ ಸಚಿವರಾದ ಶ್ರೀ ಕೆ.ಸಿ.ನಾರಾಯಣಗೌಡರವರು ಮಾತನಾಡಿದ್ದು ದಾಖಲಿಸಲಿಲ್ಲ)**

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳುವುದು ಬಿಡುವುದು ಸದಸ್ಯರಿಗೆ ಬಿಟ್ಟ ವಿಚಾರ. It is an inherent right of a member. ಅವರು ಕೇಳುವುದಿಲ್ಲ ಎಂದರೆ ಮುಗಿಯಿತು.

**ಸಭಾಪತಿಯವರು:–** ಪ್ರಶ್ನೆ ಕೇಳುವುದಿಲ್ಲ ಎಂದರೆ ಬಿಟ್ಟುಬಿಡಿ. ನಿಮ್ಮ right ನಂತೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತಾರೆ, ಇಲ್ಲದಿದ್ದರೆ ಇಲ್ಲ ಎಂದು ಹೇಳಿದ್ದೇನೆ. ಮಾನ್ಯ ಮಂತ್ರಿಗಳೇ ಜಾಸ್ತಿ ಮಾತನಾಡುತ್ತಾರೆ. ನಾನು ಕಾರಣ ಹೇಳುವಂತಿಲ್ಲ ಎಂದು ಹೇಳಿದ್ದೇನೆ. ಪ್ರಶ್ನೆ ಕೇಳದಿದ್ದರೆ ಬಿಡಿ ಎಂದು ಹೇಳಿದ್ದೇನೆ. ಪ್ರಶ್ನೆ ಕೇಳುವುದು ಅಥವಾ ಬಿಡುವುದು ಅವರ right ಆಗಿದೆ. ನಾನು ಅವರಿಗೆ ಒತ್ತಾಯ insist ಮಾಡುವುದಿಲ್ಲ, ಎಲ್ಲರೂ ಕುಳಿತುಕೊಳ್ಳಿ. ನಂತರ ಡಾ: ತಳವಾರ್ ಸಾಬಣ್ಣನವರು ಪ್ರಶ್ನೆ ಕೇಳಿ.

**ಶ್ರೀ ಅರವಿಂದ ಲಿಂಬಾವಳಿ:–** ಅವರು ಪ್ರಶ್ನೆ ಕೇಳುವುದಿಲ್ಲ ಎಂದರೆ ಸದನದ property. ಬೇರೆ ಯಾರಾದರೂ ಉಪ ಪ್ರಶ್ನೆ ಕೇಳಬಹುದಲ್ಲವೇ? ಅದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳಿದ್ದೇನೆ, ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಪ್ರಶ್ನೆ ಕೇಳಿದಾಗ supplementary ಪ್ರಶ್ನೆ ಬರುತ್ತದೆ. ಅವರು ಪ್ರಶ್ನೆಯನ್ನೇ ಕೇಳುವುದಿಲ್ಲ ಎಂದರೆ ಮುಗಿಯಿತು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರವಿಂದ ಲಿಂಬಾವಳಿಃ-** ನಾನು ಈ ಕಾರಣಕ್ಕೆ ಪ್ರಶ್ನೆಯನ್ನು ಕೇಳುವುದಿಲ್ಲ ಎಂದು ಶ್ರೀ ಎಂ.ನಾರಾಯಣಸ್ವಾಮಿಯವರು ಪದೇ ಪದೇ ಒತ್ತಿ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ.ಸಿ. ನಾರಾಯಣಗೌಡಃ-** ಮಾನ್ಯ ಸಭಾಪತಿಯವರೇ, **. . .**

**(ಗೊಂದಲ)**

**ಸಭಾಪತಿಯವರುಃ-** <u>ಯಾವುದೂ ಕಡತಕ್ಕೆ ಹೋಗಬಾರದು.</u> ಮಾನ್ಯ ನಾರಾಯಣಗೌಡರೇ ಕೇಳಿ. ಮಾನ್ಯ ನಾರಾಯಣಸ್ವಾಮಿಯವರೇ ಕುಳಿತುಕೊಳ್ಳಿ.

**ಶ್ರೀ ಕೆ.ಸಿ. ನಾರಾಯಣಗೌಡಃ-** ಮಾನ್ಯ ಸಭಾಪತಿಯವರೇ, **. . .**

**(ಗೊಂದಲ)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ಃ-** ಮಾನ್ಯ ಸಭಾಪತಿಯವರೇ, **. . .**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ತೋಟಗಾರಿಕೆ ಹಾಗೂ ಪೌರಾಡಳಿತ ಇಲಾಖೆ ಸಚಿವರಾದ ಶ್ರೀ ಕೆ.ಸಿ.ನಾರಾಯಣಗೌಡರವರು ಹಾಗೂ ಕಾರ್ಮಿಕ ಇಲಾಖೆ ಸಚಿವರಾದ ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ ರವರು ಮಾತನಾಡಿದ್ದು ದಾಖಲಿಸಲಿಲ್ಲ)**

**ಸಭಾಪತಿಯವರುಃ-** ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದಿಲ್ಲ ಎಂದರೆ ಕೇಳಬೇಡಿ. ನಾನು ಅವರಿಗೆ reason ಬಗ್ಗೆ ಕೇಳಲಿಲ್ಲ. ಒಂದು ಬಾರಿ ಹೇಳಿರುವುದರಿಂದ ಪುನಃ ಪುನಃ ಹೇಳುವ ಅವಶ್ಯಕತೆ ಇಲ್ಲವೆಂದು ಹೇಳಿದ್ದೇನೆ.

**ಶ್ರೀ ಕೆ.ಸಿ. ನಾರಾಯಣಗೌಡಃ-** ಮಾನ್ಯ ಸಭಾಪತಿಯವರೇ, ಆ ಬಗ್ಗೆ ಮಾತನಾಡಕೂಡದು.

**ಸಭಾಪತಿಯವರುಃ-** ನಾನು ಹೇಳುವುದನ್ನು ಕೇಳಿ, ನೀವು ಮಂತ್ರಿಗಳು, ಶಾಸಕರಲ್ಲ! ಕುಳಿತುಕೊಳ್ಳಿ. ಮಾನ್ಯ ನಾರಾಯಣಗೌಡರೇ ಕೇಳಿ, ಸಭಾಪತಿಯಾದವರು ಏನು ಮಾಡಬೇಕೆಂದು ಹೇಳಿ. ನಾನು ಹೇಳಿದ್ದೇನೆ. ಪ್ರಶ್ನೆ ಕೇಳುವುದಾದರೆ ಕೇಳಿ, ಕೇಳುವುದಿಲ್ಲವೆಂದರೆ ಬಿಟ್ಟುಬಿಡಿ. ಅವರು ಏಕೆ ಪ್ರಶ್ನೆ ಕೇಳಿಲ್ಲ ಎಂದು ನಾನು ಕೇಳುವುದಿಲ್ಲ. ನಾನು ಹೇಳಿದ್ದೇನೋ ಇಲ್ಲವೋ? ಅವರು ಮಾತನಾಡಿದರೆ ಸಚಿವರಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೀವುಗಳು ಏಕೆ ಮಾತನಾಡುತ್ತೀರಿ? ನಂತರ ಮಾನ್ಯ ಸಾಬಣ್ಣನವರ ಪ್ರಶ್ನೆಗೆ ಉತ್ತರ ಬಂದಿಲ್ಲದೆ ಇರುವುದರಿಂದ ಅದನ್ನು ಮುಂದಿನ ವಾರ ತೆಗೆದುಕೊಳ್ಳೋಣ.

**(ಮುಂದು)**

**(368)/15.03.2021/11.10/ಹೆಚ್‌ವಿಃಎಂಡಿ**

**ಸಭಾಪತಿಯವರು (ಮುಂದು):–**

ಮಾನ್ಯ ಸದಸ್ಯರಾಗಿರುವ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿಯವರು ಕೇಳಿರುವಂತಹ ಪ್ರಶ್ನೆ ಸಂಖ್ಯೆಃ173(1082) ಅನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳಾಗಿರುವ ಶ್ರೀ ಲಕ್ಷ್ಮಣ ಸವದಿಯವರೇ, ಪ್ರಶ್ನೆಗಳನ್ನು ಬೇರೆ ಇಲಾಖೆಗೆ ವರ್ಗಾವಣೆಗೊಂಡಿದೆ ಎನ್ನುವ ಉತ್ತರವನ್ನು ನೀಡುತ್ತಾರೆ. ನಮ್ಮ ಸಚಿವಾಲಯದಿಂದ ಮೊದಲೇ ಪ್ರಶ್ನೆಗಳನ್ನು ಕಳುಹಿಸಿಕೊಡಲಾಗಿರುತ್ತದೆ. ತಾವು ತಕ್ಷಣವೇ ಸಂಬಂಧಪಟ್ಟ ಇಲಾಖೆಗೆ ವರ್ಗಾವಣೆ ಮಾಡಿ ಅಲ್ಲಿಂದ ಉತ್ತರವನ್ನು ತರಿಸಿಕೊಡಬೇಕು. ಪ್ರಶ್ನೆ ಕೇಳಿರುವ ಸದಸ್ಯರಿಗೆ ಈಗ ವರ್ಗಾವಣೆಗೊಂಡಿದೆ ಎನ್ನುವ ಉತ್ತರವನ್ನು ನೀಡಿದರೆ ಹೇಗೆ? ಇದು ತಮಗೆ ಸರಿ ಅನಿಸುತ್ತದೆಯೇ? ಇದರ ಬಗ್ಗೆ ಸರ್ಕಾರಕ್ಕೆ ತಿಳಿಸಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):–** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸೂಚನೆ ನೀಡಲಾಗುತ್ತದೆ. ಪರಿಷತ್ತಿನ ಸಚಿವಾಲಯದಿಂದ ಪ್ರಶ್ನೆಗಳು ಬಂದ ಕೂಡಲೇ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿಕೊಟ್ಟು ಉತ್ತರವನ್ನು ತರಿಸಿಕೊಳ್ಳಲಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ದಿನ ಈ ಬಗ್ಗೆ ಸುದೀರ್ಘವಾದ ಚರ್ಚೆ ನಡೆದಿತ್ತು. ಪುನಃ ಈ ರೀತಿ ಮಾಡುವುದೇ ಸರಿಯೇ? ಪ್ರಶ್ನೆ ಕೇಳುವುದು ಮಾನ್ಯ ಸದಸ್ಯರ ಹಕ್ಕಾಗಿದೆ. ಇಲಾಖೆಯನ್ನು ತಪ್ಪಾಗಿ ನಮೂದು ಮಾಡಿರಬಹುದು, ಬುಲೆಟಿನ್ ಮಾಡುವಂತಹ ಸಂದರ್ಭದಲ್ಲಿ ಸಚಿವಾಲಯದವರು ಅದನ್ನು ಸರಿಪಡಿಸಬೇಕು. ಉತ್ತರ ಕೊಡುವಂತಹ ಉದ್ದೇಶ ಸರ್ಕಾರಕ್ಕಿಲ್ಲ.

**ಸಭಾಪತಿಯವರು:–** ಪ್ರಶ್ನೆಗಳು ಬಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಇಲಾಖೆಗಳಿಂದ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಒಬ್ಬ ಸಚಿವರು ಉತ್ತರ ಕೊಡಲು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

20 ದಿನಗಳ ಕಾಲಾವಕಾಶವನ್ನು ಕೇಳಿದ್ದಾರೆ, 20 ದಿನಗಳ ಕಾಲ ಸದನ ನಡೆಯುವುದೇ ಇಲ್ಲ. ಪ್ರಶ್ನೆ ಕೇಳಿರುವ ಸದಸ್ಯರಿಗೆ ಉತ್ತರ ದೊರೆಯುವುದೇ ಇಲ್ಲ. ಆದ್ದರಿಂದ ಮುಂದಿನ ಒಂದು ವಾರದೊಳಗಾಗಿ ಸರ್ಕಾರ ಬಾಕಿ ಉಳಿದಿರುವ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕೆಂದು ನಾನು ನಿರ್ದೇಶನವನ್ನು ನೀಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:963**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ವಿರಾಜಪೇಟೆ ವ್ಯಾಪ್ತಿಗೆ ಬರುವಂತಹ ಸಾರ್ವಜನಿಕರು ಇವತ್ತು ಭಯಭೀತರಾಗಿದ್ದಾರೆ. ಏಕೆಂದರೆ, ಪತ್ರಿಕೆಗಳಲ್ಲಿ 'ಭಯಾನಕವಾಗುತ್ತಿವೆ ದಿನಗಳು' 'ಜನತೆಯ ಬದುಕು ಅಲ್ಲೋಲಕಲ್ಲೋಲ' ಎನ್ನುವ ಶೀರ್ಷಿಕೆಗಳಡಿಯಲ್ಲಿ ವರದಿಗಳು ಪ್ರಕಟಗೊಳ್ಳುತ್ತಿವೆ. ಈ ತಿಂಗಳ 25 ದಿನಗಳಲ್ಲಿ ಮೂರು ಜನರನ್ನು ಹುಲಿ ಬಲಿ ತೆಗೆದುಕೊಂಡಿದೆ. ಇದರಿಂದಾಗಿ ಕಾಫಿ ತೋಟಕ್ಕೆ ಯಾರೂ ಕೆಲಸಕ್ಕೆ ಬರುತ್ತಿಲ್ಲ. ಮಾಲೀಕರು ಯಾರೂ ತೋಟಕ್ಕೆ ಹೋಗುವಂತಿಲ್ಲ, ಅಂತಹ ಭಯಭೀತ ಪರಿಸ್ಥಿತಿ ನಿರ್ಮಾಣವಾಗಿದೆ. ಹುಲಿಯನ್ನು ಸೆರೆ ಹಿಡಿಯುವ ಕಾರ್ಯಾಚರಣೆಗಾಗಿ 150 ಜನ ಕ್ಷೇತ್ರ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎನ್ನುವ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಪತ್ರಿಕೆಯಲ್ಲಿ 'ಶಾರ್ಪ್ ಶೂಟರ್ ಸುನೀಲ್ ಹಠಾತ್ ನಿರ್ಗಮನ' ಎಂದು ಪ್ರಕಟವಾಗಿದೆ. ಮಾನ್ಯ ಸಚಿವರು '5 ಜನ ಶಾರ್ಪ್ ಶೂಟರ್‌ಗಳನ್ನು ಮತ್ತು ಸುಮಾರು 150 ಜನ ಕ್ಷೇತ್ರ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಅವರುಗಳು ಕಾರ್ಯನಿರ್ವಹಿಸುತ್ತಿದ್ದಾರೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ಆದರೆ, ಪತ್ರಿಕೆಗಳಲ್ಲಿ ಇಂತಹ ಸುದ್ದಿ ಪ್ರಕಟವಾದಾಗ ಅದಕ್ಕೆ ಪೂರಕವಾಗಿರುವ ಮಾಹಿತಿಯನ್ನು ಜನತೆಗೆ ಒದಗಿಸಬೇಕಾಗುತ್ತದೆ. ಆನೆ ಕಾಟದಿಂದಾಗಿ ನಾವು ಪ್ರತಿದಿನ ಕಷ್ಟವನ್ನು ಅನುಭವಿಸುತ್ತಿದ್ದೆವು. ಈಗ ಕಳೆದ 25 ದಿನಗಳಿಂದೀಚೆಗೆ ಹುಲಿ 03 ಜನರನ್ನು ಬಲಿ ತೆಗೆದುಕೊಂಡಿದೆ. ಸರ್ಕಾರ ಏನು ಮಾಡುತ್ತಿದೆಯೆಂದು ಜನರು ಪ್ರಶ್ನೆ ಮಾಡುತ್ತಿದ್ದಾರೆ ಮತ್ತು ಧರಣಿ ಮಾಡುತ್ತಿದ್ದಾರೆ. ಅಲ್ಲಿನ ಸಾರ್ವಜನಿಕರು ಬಹಳ ಕಷ್ಟದಲ್ಲಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಈ ಸಂದರ್ಭದಲ್ಲಿ ಮಾನ್ಯ ಅರಣ್ಯ ಸಚಿವರು ಕೊಡಗಿಗೆ ಭೇಟಿ ನೀಡಿ, ವಿವರವಾಗಿರುವ ವರದಿಯನ್ನು ತೆಗೆದುಕೊಂಡು, ಸಾರ್ವಜನಿಕರ ಕಷ್ಟಕ್ಕೆ ಸ್ಪಂದಿಸಬೇಕಾಗಿದೆ. ಮಾನ್ಯ ಸಚಿವರು ಕೆಳಮನೆಯ ಸದಸ್ಯರನ್ನೊಳಗೊಂಡ ಒಂದು ಸಭೆಯನ್ನು ಕರೆದಿದ್ದರು. ಆ ಸಭೆಗೆ ಮೇಲ್ಮನೆಯ ಸದಸ್ಯರನ್ನು ಕರೆದಿರಲಿಲ್ಲ. ಸಚಿವರು ಈ ರೀತಿ ಮಾಡುವುದು ಅಷ್ಟು ಸೂಕ್ತವಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಮೇಲ್ಮನೆಯ ಸದಸ್ಯರಿಗೂ ಗೌರವವನ್ನು ಕೊಡುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು, ಸಭೆಗೆ ತಾವು ಕೆಳಮನೆಯ ಸದಸ್ಯರನ್ನು ಮಾತ್ರ ಕರೆದಿದ್ದೀರಿ, ಮೇಲ್ಮನೆಯ ಸದಸ್ಯರನ್ನು ಕರೆದಿಲ್ಲ. ಮೇಲ್ಮನೆಯ ಸದಸ್ಯರನ್ನು ಲೆಕ್ಕಕ್ಕಿಡುವುದಿಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಅರವಿಂದ ಲಿಂಬಾವಳಿ:-** ಸನ್ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯಲ್ಲಿ ಹುಲಿಯ ಕಾಟವಿದೆ. ಇದಕ್ಕೆ ಸಂಬಂಧಪಟ್ಟಂತೆ ವಿವರವಾಗಿರುವ ಉತ್ತರವನ್ನು ನಾನು ಲಿಖಿತರೂಪದಲ್ಲಿ ಕೊಟ್ಟಿದ್ದೇನೆ. ಯಾವ ಹುಲಿ ಜನರಿಗೆ ಬಹಳ ತೊಂದರೆ ಕೊಡುತ್ತಿತ್ತು ಆ ಹುಲಿಯನ್ನು ಹಿಡಿಯುವುದಕ್ಕೆ ಹೋಗಿ ಬೇರೆ ಎರಡು ಹುಲಿಗಳನ್ನು ಹಿಡಿದಿದ್ದಾರೆ. ತೊಂದರೆ ಕೊಡುತ್ತಿರುವ ಹುಲಿ ಇನ್ನೂ ಸಿಕ್ಕಿಬಿದ್ದಿಲ್ಲ. ಪಕ್ಕದ ಜಿಲ್ಲೆಯಾಗಿರುವ ಚಾಮರಾಜನಗರದಿಂದ 05 ಜನ ಶಾರ್ಪ್ ಶೂಟರ್‌ಗಳನ್ನು ಮತ್ತು 150 ಜನ ಕ್ಷೇತ್ರ ಸಿಬ್ಬಂದಿಗಳನ್ನು ಈ ಹುಲಿ ಹಿಡಿಯುವುದಕ್ಕಾಗಿ ಕೊಡಗು ಜಿಲ್ಲೆಗೆ ಕಳುಹಿಸಿ ಕೊಡಲಾಗಿದೆ. 'ಆ ಹುಲಿ ಸಾರ್ವಜನಿಕರಿಗೆ ಬಹಳಷ್ಟು ತೊಂದರೆ ಕೊಡುತ್ತಿದೆ. ಈಗಾಗಲೇ 03 ಜನರನ್ನು ಕೊಂದಿದೆ ಅದನ್ನು ಶೂಟ್ ಮಾಡುವುದಕ್ಕೆ ಅವಕಾಶವನ್ನು ನೀಡಿ' ಎಂದು ಸ್ಥಳೀಯ ಶಾಸಕರ ಅಂದರೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳ ಬೇಡಿಕೆ ಇತ್ತು. ಇಲಾಖೆಯಿಂದ ಅದಕ್ಕೂ ಕೂಡ ಅವಕಾಶವನ್ನು ನೀಡಿದ್ದೇವೆ. ಆ ಹುಲಿ ತಪ್ಪಿಸಿಕೊಂಡು ಓಡಾಡುತ್ತಿದೆ. ಎಲ್ಲಾದರೂ ಈ ಹುಲಿ ಕಂಡು ಬಂದರೆ, ಜನರು ಬಂದು ಗದ್ದಲ ಮಾಡುತ್ತಿರುವುದರಿಂದ ಈ ಹುಲಿ ತಪ್ಪಿಸಿಕೊಂಡು ಹೋಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಆ ಹುಲಿಯನ್ನು ಹಿಡಿಯುವಂತಹ ಪ್ರಯತ್ನವನ್ನು ಇಲಾಖೆಯ ಸಿಬ್ಬಂದಿಗಳು ಮಾಡುತ್ತಿದ್ದಾರೆ. ಲೋಕಲ್ ಟ್ರಾಕರ್ಸ್‌ಗಳನ್ನು ಸಹ ಬಳಸಿಕೊಂಡು ಆ ಹುಲಿ ಎಲ್ಲಿದೆ ಎಂದು ಪತ್ತೆ ಹಚ್ಚುವಂತಹ ಕೆಲಸವನ್ನು ಇಲಾಖೆಯವರು ಮಾಡುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಆನೆ, ಹುಲಿ ಮತ್ತು ಚಿರತೆಯ ಹಾವಳಿಗಳಿಗೆ ಸಂಬಂಧಪಟ್ಟಂತೆ ಕೆಳಮನೆಯಲ್ಲಿ ಪ್ರಸ್ತಾಪವಾಗಿತ್ತು. ಆ ಸಂದರ್ಭದಲ್ಲಿ ಸದನದಲ್ಲಿ ವಿಧಾನಸಭಾ ಸದಸ್ಯರ ಸಭೆಯನ್ನು ಕರೆದು ಚರ್ಚಿಸಲಾಗುವುದು ಎನ್ನುವ ಭರವಸೆಯನ್ನು ನೀಡಿದ್ದೆ. ಆ ಹಿನ್ನೆಲೆಯಲ್ಲಿ ವಿಧಾನಸಭಾ ಸದಸ್ಯರ ಸಭೆಯನ್ನು ಕರೆಯಲಾಗಿತ್ತು. ಅದಕ್ಕೆ ಯಾವುದೇ ರೀತಿಯ ಮೀಸಲಾತಿ ಇಲ್ಲ. ಮೇಲ್ಮನೆಯ ಸಂಬಂಧಪಟ್ಟ ಸದಸ್ಯರ ಸಭೆಯನ್ನು ಕರೆದು, ಅವರುಗಳ ಸಲಹೆಗಳನ್ನು ತೆಗೆದುಕೊಂಡು ಇದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಶಾರ್ಪ್ ಶೂಟರ್ ಸುನೀಲ್‌ಕುಮಾರ್‌ರವರು ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಕೆಲವು ದಿನಗಳ ಕಾಲ ಬೇರೆ ಕಡೆಗೆ ಹೋಗಿದ್ದಾರೆ. ಅವರು ನಮ್ಮ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ. ಬೇರೆ ಶೂರ್ಪ್ ಶೂಟರ್‌ಗಳನ್ನು ಅಲ್ಲಿಗೆ ನಿಯೋಜನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗಿದೆ. ಸ್ಥಳೀಯರು ಅದಕ್ಕೆ ಸಹಕಾರವನ್ನು ನೀಡಿದರೆ, ಆ ಹುಲಿಯನ್ನು ಬೇಗನೇ ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಕಾಡುಗಳನ್ನು ಕಾಯ್ದುಕೊಂಡು ಬಂದಿರುವವರು ಸ್ಥಳೀಯರು. ವಿಧಾನಸಭಾ ಸದಸ್ಯರೊಬ್ಬರು ಆ ಹುಲಿಯನ್ನು ಹೊಡೆಯುವ ಕೆಲಸವನ್ನು ನಮಗೇ ವಹಿಸಿಕೊಡಿ ಎಂದು ಕೇಳುತ್ತಿದ್ದಾರೆ. ಈ ಕೆಲಸವನ್ನು ಅವರಿಗೆ ವಹಿಸಿಕೊಡುವುದಕ್ಕೆ ಸಾಧ್ಯವಿಲ್ಲ. ಇಲಾಖೆ ಕ್ರಮ ತೆಗೆದುಕೊಂಡು ಆದಷ್ಟು ಬೇಗ ಆ ಹುಲಿಯನ್ನು ಬಂಧಿಸಲಾಗುತ್ತದೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.:–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿ ಭಯಭೀತ ವಾತಾವರಣವಿರುವಂತಹ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ 'ಶಾರ್ಪ್ ಶೂಟರ್ ಸುನೀಲ್ ಹಠಾತ್ ನಿರ್ಗಮನ' 'ಇಲಾಖೆಗಳ ವಿಭಿನ್ನ ನಿಲುವುಗಳು' 'ಕೈಕಟ್ಟಿ ಕುಳಿತಿರುವ ಸ್ಥಳೀಯ ಸಿಬ್ಬಂದಿ' ಎನ್ನುವ ಸುದ್ದಿಗಳು ಪ್ರಕಟವಾದರೆ, ಜನರು ಇನ್ನಷ್ಟೂ ಹೆದರಿಕೆಗೆ ಒಳಗಾಗುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಪ್ರತಿದಿನ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವುದರ ಬಗ್ಗೆ ಒಂದು ಹೇಳಿಕೆಯನ್ನು ನೀಡಬೇಕಾಗುತ್ತದೆ. ಏಕೆಂದರೆ, ಅಲ್ಲಿನ ಜನರು ಹೊರಗೆ ತಿರುಗಾಡುವುದಕ್ಕೂ ಹೆದರುತ್ತಿದ್ದಾರೆ. ಮಕ್ಕಳು ಶಾಲೆಗೆ ಹೋಗುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ಕಾಫಿ ತೋಟಗಳಿಗೆ ಕೆಲಸಕ್ಕೆ ಜನರು ಬರುತ್ತಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಮಾನ್ಯ ಸಚಿವರು ಸ್ಥಳಕ್ಕೆ ಒಮ್ಮೆ ಭೇಟಿ ನೀಡಿದರೆ ಉತ್ತಮವಾಗುತ್ತದೆ ಮತ್ತು ಹುಲಿ ಹಿಡಿಯುವ ಕಾರ್ಯಕ್ಕೆ ವೇಗ ದೊರೆಯುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಜನರಿಗೆ ಧೈರ್ಯ ತುಂಬುವ ಕೆಲಸವನ್ನು ಮಾನ್ಯ ಸಚಿವರು ಸ್ಥಳಕ್ಕೆ ಭೇಟಿ ನೀಡುವ ಮೂಲಕ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಅರವಿಂದ ಲಿಂಬಾವಳಿ:–** ಸನ್ಮಾನ್ಯ ಸಭಾಪತಿಯವರೇ, ಈ ಘಟನೆ ಸಂಭವಿಸುವುದಕ್ಕೂ ಮೊದಲೇ ನಾನು ಕೊಡಗು ಜಿಲ್ಲೆಗೆ ಭೇಟಿ ನೀಡಿದ್ದೇನೆ. ಆಗ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರು ನನ್ನ ಜೊತೆಗೆ ಇದ್ದರು. ಆಗ ಅಧಿಕಾರಿಗಳ ಮಟ್ಟದಲ್ಲಿ ಆನೆ ತುಳಿತ, ಹುಲಿ ಮತ್ತು ಮನುಷ್ಯರ ನಡುವೆ ಹೊಡೆದಾಟ, ಚಿರತೆ ದಾಳಿ ಈ ಎಲ್ಲ ವಿಚಾರಗಳ ಬಗ್ಗೆ ಚರ್ಚಿಸಲಾಗಿತ್ತು. ಸರಿಯಾದಂತಹ ವ್ಯವಸ್ಥೆಗಳನ್ನು ಮಾಡುವುದಕ್ಕೆ ನಾನು ಆಗಲೇ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟು ಬಂದಿದ್ದೇನೆ. ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಪರಿಗಣಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 175(1175) ಅನ್ನು ಕೇಳಿರುವ ಮಾನ್ಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ಸದನದಲ್ಲಿ ಉಪಸ್ಥಿತರಿಲ್ಲ. ಮುಂದಿನ ಪ್ರಶ್ನೆ ಮಾನ್ಯ ರಘುನಾಥ್‌ರಾವ್ ಮಲ್ಕಾಪೂರೆಯವರದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1307**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಕೊಟ್ಟಿರುವಂತಹ ಉತ್ತರವನ್ನು ಮಾನ್ಯ ಸಚಿವರು ಯಥಾವತ್ತಾಗಿ ನೀಡಿದ್ದಾರೆಂದು ನಾನು ಭಾವಿಸುತ್ತೇನೆ. ಒಂದು ವೇಳೆ ನನ್ನ ಅನಿಸಿಕೆ ತಪ್ಪಾಗಿದ್ದರೆ ಅದನ್ನು ಸರಿಪಡಿಸಿಕೊಳ್ಳುತ್ತೇನೆ. 'ಬೀದರ್ ಜಿಲ್ಲೆಯಲ್ಲಿರುವ ವಿಶ್ವ ವಿಖ್ಯಾತ ಕರೇಜ್ ಸುರಂಗ ಬಾವಿಯ ಪುನರುಜ್ಜೀವನಕ್ಕೆ ಇಲ್ಲಿಯವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು, ವೆಚ್ಚ ಮಾಡಿರುವ ಅನುದಾನವೆಷ್ಟು; ಕೈಗೆತ್ತಿಕೊಂಡಿರುವ ಕಾಮಗಾರಿಗಳು ಯಾವುವು?' ಎನ್ನುವ ನನ್ನ ಪ್ರಶ್ನೆಗೆ, '270 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಮೊದಲ ಕಂತಾಗಿ 50 ಲಕ್ಷ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ, ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿರುತ್ತದೆ.' ಎನ್ನುವ ಉತ್ತರವನ್ನು ನೀಡಿದ್ದಾರೆ. ಇದು 2019–20ನೇ ಸಾಲಿನಲ್ಲಿ ಬಿಡುಗಡೆಗೊಳಿಸಿರುವ ಮೊತ್ತವಾಗಿದೆ. ನನ್ನ ಬಳಿ ಇರುವಂತಹ ಮಾಹಿತಿಯ ಪ್ರಕಾರ 2015–16ನೇ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆಗೊಳಿಸಲಾಗಿದೆ.

(ಮುಂದು)

(369) 15.3.2021 11.20 ಪಿಕೆ/ಎಕೆ

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ**(ಮುಂದು):–

2015–16ರಲ್ಲಿ ಸುಮಾರು 500 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿತ್ತು. 250 ಲಕ್ಷ ರೂ.ಗಳನ್ನು ಮುನಿಸಿಪಾಲಿಟಿಗೆ ಕೊಟ್ಟಿತ್ತು. ಅದರಲ್ಲಿ 97 ಲಕ್ಷ ರೂ.ಗಳನ್ನು ಬೇಕಾಬಿಟ್ಟಿಯಾಗಿ ಮನಸ್ಸು ಬಂದ ಹಾಗೆ ಖರ್ಚು ಮಾಡಿದ್ದಾರೆ. ಉಳಿದ 250 ಲಕ್ಷ ರೂ.ಗಳನ್ನು ಅಲ್ಲಿನ ನಿರ್ಮಿತಿ ಕೇಂದ್ರಕ್ಕೆ ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ನಿರ್ಮಿತಿ ಕೇಂದ್ರಗಳ ಅಕೌಂಟ್ ಎಲ್ಲಾ ಕಡೆ ಕ್ಲೋಸ್ ಆಗಿದ್ದರಿಂದ, ಆ ಹಣವನ್ನು ಆದಾಯ ತೆರಿಗೆ ಇಲಾಖೆಯವರು ಸೀಜ್ ಮಾಡಿದ್ದಾರೆ. ಈ ಕರೇಜ್ ಸುರಂಗ ಬಾವಿಯನ್ನು ಸರಿಯಾದ ನಿಟ್ಟಿನಲ್ಲಿ ಅಭಿವೃದ್ಧಿ ಮಾಡಿದರೆ ಬೀದರ್ ವಿಶ್ವವಿಖ್ಯಾತ ಪ್ರವಾಸಿ ತಾಣವಾಗಿ ಬೆಳೆಯುತ್ತದೆ ಎನ್ನುವುದು ಅಲ್ಲಿನ ಜನರ ಆಸೆಯಾಗಿದೆ. ಆದರೆ, ಹಲವಾರು ವರ್ಷಗಳಿಂದ ಸರ್ಕಾರಗಳು ಮತ್ತು ಇಲಾಖೆ ರಚನಾತ್ಮಕವಾಗಿ ಕೆಲಸ ಮಾಡದೇ ನಿರುತ್ಸಾಹದಿಂದ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸಚಿವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೂತನವಾಗಿ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅವರು ಇದರ ಬಗ್ಗೆ ಕೂಲಂಕಷವಾಗಿ ವರದಿಗಳನ್ನು ತರಿಸಿಕೊಂಡು ಉತ್ತರ ಕೊಡಲಿ ಅಥವಾ ಈ ಕುರಿತು ಏನು ಹೇಳುತ್ತಾರೋ ಹೇಳಲಿ ನಂತರ ನಾನು ಉಪಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಸಿ.ಪಿ.ಯೋಗೇಶ್ವರ್:–** ಮಾನ್ಯ ಸಭಾಪತಿಯವರೇ, ಬೀದರ್ ಡಿಸಿಯವರು ಸದರಿ ಜಾಗವನ್ನು ರಿಪೇರಿ ಮಾಡಲು 3.00 ಕೋಟಿ ರೂ.ಗಳನ್ನು ಕೇಳಿದ್ದಾರೆ. ನಾವು 3.00 ಕೋಟಿ ರೂ.ಗಳನ್ನು ಕೊಡುವುದಕ್ಕೆ ಬದ್ಧವಾಗಿದ್ದೇವೆ. ಜೊತೆಗೆ, ಸುರಂಗ ಪ್ರವಾಸೋದ್ಯಮವನ್ನು ಪ್ರವಾಸೋದ್ಯಮ ಉತ್ಪನ್ನವಾಗಿ ಅಭಿವೃದ್ಧಿಪಡಿಸುವ ಸಾಧ್ಯತೆಯ ಬಗ್ಗೆ ಭಾರತ ಸರ್ಕಾರವು 'Niche Tourism' ಉತ್ಪನ್ನದಡಿಯಲ್ಲಿ ರಾಜ್ಯಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಿದ್ದಾರೆ. ಬೀದರ್‌ಗೆ ಸಂಬಂಧಪಟ್ಟಂತೆ ಸುಮಾರು 19.50 ಕೋಟಿ ರೂ.ಗಳ ಪ್ರಸ್ತಾವನೆ ಕಳುಹಿಸದ್ದೇವೆ; ಅದರ ನಿರೀಕ್ಷೆಯಲ್ಲಿದ್ದೇವೆ. ಮಾನ್ಯ ಶಾಸಕರ ಕೋರಿಕೆಯಂತೆ ನಾನು ಖುದ್ದಾಗಿ ಆ ಜಾಗಕ್ಕೆ ಹೋಗಿ ಪರಿಶೀಲನೆ ಮಾಡಿ ಅದನ್ನು ಪುನಶ್ಚೇತನಗೊಳಿಸುವ ದೃಷ್ಟಿಯಿಂದ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬೀದರ್‌ಗೆ ಬಂದು ಸವಿಸ್ತಾರವಾಗಿ ಇನ್ನೊಂದು ಸಲ ಸಭೆ ಮಾಡಲಿ, ಸಂತೋಷ. ಆದರೆ, "ದಿಕ್ಕೆಟ್ಟ ಬೀದರ್‌ನ ಐತಿಹಾಸಿಕ ಕರೇಜ್ ಸುರಂಗ ಬಾವಿ" ಎಂಬ ಶೀರ್ಷಿಕೆಗಳು ಬರುತ್ತಿವೆ. ಮಾನ್ಯ ಸಭಾಪತಿಯವರೇ, ಬೀದರ್ ಒಂದು ಐತಿಹಾಸಿಕ ನಗರವಾಗಿದೆ. 14ನೇ ಶತಮಾನದಲ್ಲಿ ಬಸವಣ್ಣನವರು ವಿಶ್ವಕ್ಕೆ ಪರಿಚಯ ಮಾಡಿಕೊಟ್ಟಂಥ ಅನುಭವ ಮಂಟಪ ಆಗಿರಬಹುದು ಅಥವಾ ನಮ್ಮಲ್ಲಿರುವ ಜೈನ ಬಸದಿಗಳು, ಜೈನ ತೀರ್ಥಂಕರರ ದೇವಸ್ಥಾನಗಳು ಇದ್ದು ಅವು ದಿನೇ ದಿನೇ ನಾಶವಾಗುತ್ತಿವೆ. ಅಲ್ಲಿ ಗುರುನಾನಕ್ ಝೀರಾ ಸಾಹೇಬ್ ಕೂಡ ಇದೆ. ಮಾನ್ಯ ಸಭಾಪತಿಯವರೇ, ಈ ಕರೇಜ್ ಸುರಂಗ ಬಾವಿಯಿಂದ ಬಹಳ ಬೆನಿಫಿಟ್ ಇದೆ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ಬಡಿದಾಡಿಕೊಳ್ಳುವ ಪರಿಸ್ಥಿತಿ ಇದ್ದರೆ ನಮ್ಮ ಬೀದರ್ ನಗರದಲ್ಲಿ 80 ರಿಂದ 120 ಅಡಿ ಕೊಳವೆ ಬಾವಿ ಕೊರೆದರೆ ಸಾಕು ನೀರು ಬರುತ್ತದೆ. ಈ ಕರೇಜ್ ಸುರಂಗ ಬಾವಿ ಇರುವುದರಿಂದ ವಾಟರ್ ಟೇಬಲ್ ಕೂಡ ಹೆಚ್ಚಾಗುತ್ತದೆ. ಇಂತಹ ಮಹತ್ವವಾದ ಯೋಜನೆಯನ್ನು ಮಾನ್ಯ ಸಚಿವರ ಗಂಭೀರವಾಗಿ ತೆಗೆದುಕೊಂಡು, ಬೀದರ್‌ಗೆ ಬಂದು ಮೀಟಿಂಗ್ ಮಾಡಿ ಈ ಪ್ರಾಜೆಕ್ಟನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಪಿ.ಯೋಗೇಶ್ವರ:-** ಮಾನ್ಯ ಸಭಾಪತಿಯವರೇ, ಮುಂದಿನ ತಿಂಗಳು ನಾನೇ ಅಲ್ಲಿ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿ, ಅವರ ಜೊತೆ ಚರ್ಚೆ ಮಾಡಿ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವ ಕೆಲಸ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರೇ, 1286 + 1083 ಈ ಪ್ರಶ್ನೆಗಳಿಗೆ ಉತ್ತರಿಸಲು ಸರ್ಕಾರ 15 ದಿವಸಗಳ ಸಮಯವನ್ನು ತೆಗೆದುಕೊಂಡಿದೆ. ಮಾನ್ಯ ಲಿಂಬಾವಳಿಯವರೇ, ನೀವು 15 ದಿವಸ ಸಮಯ ಕೇಳಿದ್ದೀರಿ. ಆದರೆ ಆ ಅವದಿಯಲ್ಲಿ ಅಧಿವೇಶನ ಇರುವುದಿಲ್ಲ. ಆದ್ದರಿಂದ ಮುಂದಿನ ವಾರ ಈ ಪ್ರಶ್ನೆಗೆ ಉತ್ತರ ಕೊಡಬೇಕಾದುದು ನಿಮ್ಮ ಜವಾಬ್ದಾರಿಯಾಗಿದೆ.

**ಶ್ರೀ ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯ ಬಗ್ಗೆ ಸದನದಲ್ಲಿ 3 ಸಲ ಚರ್ಚೆಯಾಗಿದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಸರ್ಕಾರ ಇದಕ್ಕೆ ಉತ್ತರ ಕೊಟ್ಟಿಲ್ಲ. ಸಮಯಾವಕಾಶ ಕೇಳಿದ್ದಾರೆ. ಹಾಗಾಗಿ ಇದರ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಮುಂದಿನ ವಾರ ಇದಕ್ಕೆ ಉತ್ತರ ಒದಗಿಸಿ ಕೊಡಬೇಕೆಂದು ಸರ್ಕಾರಕ್ಕೆ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 949**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ಚಂದ್ರಶೇಖರ್ ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯಲ್ಲಿ ಪ್ರಸ್ತಾಪಿಸಿದಂತೆ ವಿಶ್ವವಿದ್ಯಾಲಯಗಳಲ್ಲಿ ಶೇಕಡ 60ಕ್ಕಿಂತಲೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದ ಶಿಕ್ಷಣ ಕೊಡಬೇಕು; ಉತ್ತಮ ಫಲಿತಾಂಶ ಕೊಡಬೇಕು ಎಂದು ಸರ್ಕಾರ ಅನೇಕ ಶಿಕ್ಷಣ ಯೋಜನೆಗಳನ್ನು ಜಾರಿಗೆ ತಂದಿದೆ. ಆದರೆ ಅಲ್ಲಿ ಬೋಧಕ ಹುದ್ದೆಗಳು ತುಂಬದೇ ಹೋದರೆ ಗುಣಮಟ್ಟದ ಶಿಕ್ಷಣವನ್ನು ಹೇಗೆ ನೀಡುವುದಕ್ಕಾಗುತ್ತದೆ?

**ಡಾ: ಅಶ್ವಥ್‌ನಾರಾಯಣ ಸಿ.ಎನ್:-** ಮಾನ್ಯ ಸಭಾಪತಿಯವರೇ, ಈ ಸಮಸ್ಯೆಯನ್ನು ಬಗೆಹರಿಸುವಂಥದ್ದು ಆಗುತ್ತದೆ. ಸದ್ಯ ಆರ್ಥಿಕ ಇಲಾಖೆಯ ಒಂದು ಸುತ್ತೋಲೆಯ ಕಾರಣದಿಂದಾಗಿ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ತಡವಾಗಿದೆ. ಹುದ್ದೆಗಳನ್ನು ತುಂಬುವ ಅವಶ್ಯಕತೆ ಇದೆ. ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವಂಥದ್ದಾಗಬೇಕು. ಅದರಲ್ಲೂ ಪ್ರಮುಖವಾಗಿ ಕಲ್ಯಾಣ ಕರ್ನಾಟಕದ ಭಾಗಕ್ಕೆ ಆದ್ಯತೆ ಕೊಡಬೇಕಾಗುತ್ತದೆ. ಸಂವಿಧಾನದ ರೀತ್ಯ 371 ಜೆ ತಂದಿರುವುದರ ಹಿನ್ನೆಲೆಯಲ್ಲಿ ಇದಕ್ಕೆ ಆದ್ಯತೆ ಕೊಟ್ಟು ನೇಮಕ ಮಾಡುವಂತಹ ಪ್ರಕ್ರಿಯೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧಗಂಟೆ ಚರ್ಚೆಗೆ ಹಾಕಿಕೊಂಡರೆ ಈ ರೀತಿ ಸಮಸ್ಯೆ ಎದುರಿಸುತ್ತಿರುವ ಎಲ್ಲಾ ವಿಶ್ವವಿದ್ಯಾಲಯಗಳ ಬಗ್ಗೆ ಬೆಳಕು ಚೆಲ್ಲಬಹುದು.

**ಸಭಾಪತಿಯವರು:-** ಇದು ನಿಮ್ಮ ಪ್ರಶ್ನೆಯೇ? ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಪಾಟೀಲ್‌ರವರೇ ಇನ್ನೇನಾದರೂ ತಾವು ಉಪಪ್ರಶ್ನೆ ಕೇಳುವುದಿದೆಯೇ?

**ಡಾ: ಚಂದ್ರಶೇಖರ್ ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದ ಭಾಗದಲ್ಲಿರುವ ಗುಲ್ಬರ್ಗ ವಿಶ್ವವಿದ್ಯಾಲಯ ಸ್ಥಾಪನೆಯಾಗಿ 20 ವರ್ಷವಾಯಿತು. ಆದರೆ ಇದುವರೆಗೂ ಯಾರನ್ನೂ ನೇಮಕಾತಿ ಮಾಡಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ: ಅಶ್ವಥ್ ನಾರಾಯಣ ಸಿ.ಎನ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕೋವಿಡ್–19ರಿಂದ ಉಂಟಾದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯ ಒಂದು ಸುತ್ತೋಲೆ ಇರುವ ಕಾರಣದಿಂದ ನೇಮಕ ಮಾಡುವಂಥದ್ದಕ್ಕೆ ತಡೆಯಿದೆ. ಆರ್ಥಿಕ ಇಲಾಖೆಯು ವಿಧಿಸಿರುವ ನಿರ್ಬಂಧಗಳನ್ನು ತೆರವುಗೊಳಿಸಿದ ನಂತರ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಆದಷ್ಟು ಶೀಘ್ರದಲ್ಲಿ ಭರ್ತಿ ಮಾಡುವಂತಹ ಕೆಲಸ ಮಾಡುತ್ತೇವೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಸಂಖ್ಯೆ 1245 ಮಾನ್ಯ ಎಸ್.ರವಿ ಅವರದ್ದು. ಅವರು ಸದನದಲ್ಲ ಇಲ್ಲ. ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ 30(173). ಅವರೂ ಸದನದಲ್ಲಿ ಇಲ್ಲ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 155**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಅನುದಾನರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ದೃಷ್ಟಿಯಿಂದ ಮಾನ್ಯ ಶಿಕ್ಷಣ ಸಚಿವರು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತಿದ್ದಾರೆ. ಅದರ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಮಾನ್ಯ ಸಚಿವರು ಗಮನಿಸಬೇಕು. 1995ರಿಂದ ಇಲ್ಲಿಯ ತನಕ ಆರಂಭವಾಗಿರುವಂತಹ ಪ್ರಾಥಮಿಕ, ಪ್ರೌಢ, ಪದವಿಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಒಟ್ಟು ಸಿಬ್ಬಂದಿ ವರ್ಗ 60801. ಸುಮಾರು 60 ಸಾವಿರ ಸಿಬ್ಬಂದಿ ಒಂದೇ ಒಂದು ಪೈಸೆ ಸರ್ಕಾರದ ಕಡೆಯಿಂದ ತೆಗೆದುಕೊಳ್ಳದೇ ಸುಮಾರು 20-25 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈ ರಾಜ್ಯದ ಶಿಕ್ಷಣದ ಪ್ರಸರಣಕ್ಕಾಗಿ ಅವರು ತಮ್ಮದೇ ಆದ ಕೊಡುಗೆಯನ್ನು, ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಸರ್ಕಾರ ಒಂದಷ್ಟು ಬ್ಲಾಕ್‌ವೈಸ್ ಅನುದಾನಕ್ಕೆ ಒಳಪಡಿಸಬೇಕೆಂದು ಅವರು ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ನನ್ನದೊಂದು ನಿವೇದನೆ ಇದೆ. ಈಗಾಗಲೇ ಬಜೆಟ್ ಮಂಡನೆಯಾಗಿದೆ. ಬಜೆಟ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಾದರೂ ಸರ್ಕಾರದ ಕಡೆಯಿಂದ ಇವರನ್ನು ಅನುದಾನಕ್ಕೆ ಒಳಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಕುರಿತು ತಮ್ಮ ಉಪಸ್ಥಿತಿಯಲ್ಲಿ ಒಂದು ಸಭೆಯನ್ನು ಮಾಡಿದ್ದೇವೆ. 1995 ರಿಂದ 2020 ರವರೆಗೆ ಒಟ್ಟಾಗಿ ಕೊಡುವುದು ಕಷ್ಟವಾಗುತ್ತದೆ, ಹಾಗಾಗಿ ಐದೈದು ವರ್ಷದ ಬ್ಲಾಕ್ ಅವಧಿಗೆ ಸಂಬಂಧಪಟ್ಟಂತೆ ಮಾಡಬೇಕೆಂದು ತೀರ್ಮಾನಿಸಲಾಗಿತ್ತು. ಮತ್ತೆ, ತಾತ್ವಿಕವಾಗಿ ಅದನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ಈ ಕುರಿತು ಈಗಾಗಲೇ ಆರ್ಥಿಕ ಇಲಾಖೆಯವರ ಗಮನಕ್ಕೆ ತಂದಿದ್ದೇವೆ. 1995ರಿಂದ 2000 ವರೆಗಿನ ಬ್ಲಾಕ್ ಏನಿದೆ, ಅದಕ್ಕೆ ಕೊಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 1349**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜ್(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರಿ ಶಾಲೆಗಳ ಜಾಗದ ಬಗ್ಗೆ ಪ್ರಶ್ನೆ ಕೇಳಿದ್ದೆ. ಹಿಂದೆ ಶಾಲೆಗಳನ್ನು ಕಟ್ಟಲು ಜಾಗವನ್ನು ದಾನವಾಗಿ ಕೊಡುತ್ತಿದ್ದರು. ಕೆಲವು ಕಡೆ ಶಾಲೆಗಳನ್ನು ಕೊಟ್ಟಿದ್ದರೂ ಆ ಜಾಗವನ್ನು ದಾನವಾಗಿ ಕೊಟ್ಟಿರಲಿಲ್ಲ. ಅಂತಹ ಕಡೆ ಕಟ್ಟಡವನ್ನು ಕಟ್ಟಿದ್ದೀರಿ ಮತ್ತು ಕಾಂಪೌಂಡ್ ಕಟ್ಟಿದ್ದೀರಿ. ಆದರೆ ಈ ಜಾಗಗಳ ದಾಖಲಾತಿ ಸರ್ಕಾರದ ಹೆಸರಿನಲ್ಲಿ ಇರುವುದಿಲ್ಲ. ಈ ರೀತಿಯ ಹಲವಾರು ಪ್ರಕರಣಗಳು ಇವೆ. ಇನ್ನೂ ಕೆಲವು ಪ್ರಕರಣಗಳಲ್ಲಿ, ತಾತಂದಿರೋ, ಮುತ್ತಾತಂದಿರೋ ಅಥವಾ ತಂದೆ-ತಾಯಿಗಳು ಜಾಗ ದಾನ ಕೊಡುವಾಗ ಸುಮ್ಮನೆ ಪಂಚಾಯಿತಿಯಲ್ಲಿ ಒಂದು ಖಾತೆ ಮಾಡಿಸಿಬಿಟ್ಟಿದ್ದಾರೆ. ಅದನ್ನೇ ಇಟ್ಟುಕೊಂಡು, ಇದು ಸರ್ಕಾರಿ ಜಾಗ ಎಂದು ಹೇಳುವಂಥದ್ದು ಆಗುತ್ತಿದೆ.

**(ಮುಂದು)**

**(370) 15-03-2021 11.30 ಡಿಎಸ್-ಎಕೆ**

**ಶ್ರೀ ಕಾಂತರಾಜ್(ಬಿಎಂಎಲ್)(ಮುಂದು):-**

ಅದು ಕಾನೂನು ಪ್ರಕಾರ ಆಗಿರುವುದಿಲ್ಲ. ಈ ರೀತಿಯ ಪ್ರಕರಣಗಳು ಬಹಳ ಇವೆ. ನಮ್ಮ ಸ್ವಂತ ಊರಿನಲ್ಲೇ ಒಂದು ಪ್ರಕರಣವಾಗಿದೆ. ತುಮಕೂರಿನಲ್ಲೂ ಈ ರೀತಿಯ ಪ್ರಕರಣವಾಗಿದೆ. ಚಿಕ್ಕಬಿದಿರಕಲ್ಲಿನ ಹತ್ತಿರ ಜಿಂದಾಲ್‌ನವರು ಶಾಲೆಯನ್ನು ಕಟ್ಟಿಸಿದ್ದಾರೆ. ಅಲ್ಲೂ ಇದೇ ರೀತಿಯ ಸಮಸ್ಯೆಯಾಗಿದೆ. ಇದ್ದರ ಬಗ್ಗೆ ಮಾನ್ಯ ಸಚಿವರು ಸಮಿತಿಯನ್ನು ಮಾಡಿ legalization ಮಾಡಬೇಕೆಂದು ನಾನು ಕೇಳುತ್ತಿದ್ದೇನೆ.

**ಶ್ರೀ ಎಸ್.ಸುರೇಶ್ ಕುಮಾರ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಅವರ ಪ್ರಶ್ನೆಗೆ ಪೂರ್ತಿಯಾಗಿ ವಿವರಗಳನ್ನು ಉತ್ತರದಲ್ಲಿ ಕೊಟ್ಟಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿರುವುದು ನಮ್ಮೆಲ್ಲರ ಗಮನಕ್ಕೆ ಬಂದಿದೆ. ಈಗ ನಮ್ಮ ಎಲ್ಲಾ ಜಾಗಗಳು possession ನಲ್ಲಿವೆ. ನಾವು ದಾಖಲಾತಿಯನ್ನು ಮಾಡಬೇಕು. ದಾಖಲಾತಿ ಮಾಡದಿರುವುದರಿಂದ ಮತ್ತೆ ಮತ್ತೆ ಇದು ಸಮಸ್ಯೆಯಾಗುತ್ತಿದೆ. ಅದಕ್ಕೆ ನಾವು ಕೇವಲ ದಾಖಲಾತಿ ಮಾಡುವುದಷ್ಟೇ ಅಲ್ಲ, ನಮ್ಮ ಹತ್ತಿರ ಪೂರ್ತಿ ದಾಖಲೆ ಇರಬೇಕು. ಅದಕ್ಕೆ ಒಂದು ಸಾಫ್ಟ್‌ವೇರ್‌ನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡೆವಲಪ್ ಮಾಡುತ್ತಿದ್ದೇವೆ. ಈಗ ನಮ್ಮ ಎಲ್ಲಾ ಶಾಲೆಗಳ ಒಟ್ಟು extent of land, ಅದರ ಜೊತೆಗೆ ಆರ್‌ಟಿಸಿ ನಂಬರ್, ಎನ್‌ಕ್ರೋಚ್‌ಮೆಂಟ್ ಏನಾದರು ಆಗಿದೆಯೇ, ಜೊತೆಗೆ ಆ ಶಾಲೆಯ ಕಟ್ಟಡದಲ್ಲಿ laboratory ಇದೆಯೇ ಎಂದೆಲ್ಲಾ ಮಾಹಿತಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಹೆಚ್ಚು ಕಡಿಮೆ ಸುಮಾರು 26,000 ಕಟ್ಟಡಗಳ ಮಾಹಿತಿ ಈ ಸಾಫ್ಟ್‌ವೇರ್‌ನಲ್ಲಿ ಲಭಿಸಿದೆ. ಬರುವ ಮೂರು ತಿಂಗಳಿನಲ್ಲಿ ಈ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ದಾಖಲಾತಿಯನ್ನು ಅಧಿಕೃತವಾಗಿ ಸಕ್ರಮ ಮಾಡುತ್ತೇವೆ. ನಮ್ಮ ಶಾಲೆಗಳ ಆಸ್ತಿ ಬಗ್ಗೆ ಪೂರ್ತಿ ದಾಖಲಾತಿ ನಮ್ಮ ಹತ್ತಿರ ಇರುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕಾಂತರಾಜ್(ಬಿಎಂಎಲ್):–** ಮಾನ್ಯ ಸಭಾಪತಿಯವರೇ, ದೇವಸ್ಥಾನಗಳ ಜಾಗಗಳಲ್ಲಿ ಶಾಲೆಗಳನ್ನು ಕಟ್ಟಿದ್ದಾರೆ. ಸರ್ಕಾರದ ಅನುದಾನದಿಂದ ಹೆಚ್ಚುವರಿಯಾಗಿ ಕೊಠಡಿಗಳನ್ನು ಕಟ್ಟಬೇಕೆಂದರೆ, ದೇವಸ್ಥಾನದವರಿಗೂ ಮತ್ತು ಶಾಲೆಯ ಪ್ರಿನ್ಸಿಪಾಲರಿಗೂ ಜಗಳವಾಗುತ್ತಿದೆ. ಇವೆಲ್ಲಾ ನಿವಾರಣೆ ಮಾಡಬೇಕೆಂದರೆ, ಡಿಸಿ ಯವರು ಎಲ್ಲಾ District Headquarter ನಲ್ಲಿ ಸಭೆಯನ್ನು ಮಾಡಿ ಅಕ್ರಮ ಸಕ್ರಮ ಯಾವ ರೀತಿಯಲ್ಲಿ ಮಾಡುತ್ತೇವೆಯೋ, ಅದೇ ರೀತಿ ಸಕ್ರಮವನ್ನು ಮಾಡಬೇಕು. ಈ ಜಾಗ ನಮ್ಮ ಸರ್ಕಾರಕ್ಕೆ ಸೇರಿದ್ದು ಎಂದು ಮಾಡಿಕೊಳ್ಳಬೇಕು. ಆಗ ಕೇವಲ ಶಾಲೆಯ ಜಾಗವನ್ನು ಮಾಡಿದರೆ ಆಗುವುದಿಲ್ಲ. ಅಕಸ್ಮಾತ್ ಆಗಿ ಜಾಗ ದೊಡ್ಡದಿದ್ದರೆ ಮೈದಾನಕ್ಕೂ ಆದ್ಯತೆ ಕೊಡಬೇಕು. ಅದನ್ನು ಅಕ್ರಮ ಸಕ್ರಮ ರೀತಿಯಲ್ಲಿ ಮಾಡಿ ಮಾನ್ಯ ಸಚಿವರ ಇಲಾಖೆಯೇ ವಹಿಸಿಕೊಳ್ಳುವಂತಹ ಕೆಲಸ ಆಗಬೇಕು. ಆ ರೀತಿ ಮಾಡಿದರೆ ಮುಂದಿನ ದಿವಸಗಳಲ್ಲಿ ಯಾವುದೇ ರೀತಿಯ ಅನಾನುಕೂಲವಾಗುವುದಿಲ್ಲ. ಏಕೆಂದರೆ, ದೇವಸ್ಥಾನದವರು ಕಾರ್ಯಕ್ರಮ ಮಾಡಿದಾಗ ಏನಾದರೂ ತಂದಿಟ್ಟುಬಿಡುತ್ತಾರೆ. ಮಕ್ಕಳು ಓಡಾಡುವುದಕ್ಕಾಗುವುದಿಲ್ಲ, ಬರುವುದಕ್ಕಾಗುವುದಿಲ್ಲ. ಈ ರೀತಿಯ ಸಮಸ್ಯೆ ಬಹಳ ಇದೆ. ಆದ್ದರಿಂದ ನಾನು ಇದನ್ನು ಸಕ್ರಮ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕೆಲವು ಜಾಗಗಳಲ್ಲಿ ಪಹಣಿ, mutation ಇರುತ್ತದೆ, ಕೋರ್ಟ್‌ನಲ್ಲಿ ಕೇಸ್ ಆಗಿದರು ನಿಮಗೆ ಜಾಗ ಸಿಗುವುದಿಲ್ಲ. ಅಂಥವರಿಗೆ ಪರಿಹಾರವನ್ನಾದರೂ ಕೊಟ್ಟು ಜಾಗವನ್ನು ಉಳಿಸಿಕೊಳ್ಳಿ. ಏಕೆಂದರೆ, ಅದು ಕೋಟ್ಯಾಂತರ ರೂಪಾಯಿಯ ಜಾಗ, ಮಕ್ಕಳು ಓದುವಂತಹ ಜಾಗ, ಆ ರೀತಿಯ ಜಾಗ ಸಿಗುವುದಿಲ್ಲ. ಬೆಂಗಳೂರು, ತುಮಕೂರು ನಗರಗಳಲ್ಲಿ ಅಂತಹ ಒಂದು ಇಂಚು ಜಾಗ ಸಿಗುವುದಿಲ್ಲ. ಈ ಜಾಗಗಳನ್ನು ಉಳಿಸಿಕೊಳ್ಳುವಂತಹ ಕೆಲಸ ಮಾಡಿ ಎಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಎಷ್ಟೋ ಮಂದಿ ದಾನಿಗಳು ಶಿಕ್ಷಣ ಸಂಸ್ಥೆಗಳಿಗಾಗಿ ದಾನ ಮಾಡಿದ್ದಾರೆ. ರಾಜ್ಯಪಾಲರ ಹೆಸರಿನ ಮೇಲೆ ಬಹಳಷ್ಟು ದಾನಿಗಳು ಶಿಕ್ಷಣ ಸಂಸ್ಥೆಗಳಿಗಾಗಿ ಉದಾರ ಮನಸ್ಸಿನಿಂದ ಶಿಕ್ಷಣಕ್ಕೆ ಅನುಕೂಲವಾಗಲಿ ಎಂದು ದಾನ ಕೊಟ್ಟಿರುತ್ತಾರೆ. ಆ ಜಾಗಗಳೆಲ್ಲಾ ನೋಂದಣಿಯಾಗಬೇಕು. ಆ ಆಸ್ತಿಗಳಿಗೆಲ್ಲಾ fencing ಮಾಡಬೇಕು. ಶಿಕ್ಷಣ ಇಲಾಖೆಯಲ್ಲಿ ಇಂತಹ ಪ್ರಾಥಮಿಕ ಶಾಲೆಗೆ ಅಥವಾ ಪ್ರೌಢಶಾಲೆಗೆ ಅಥವಾ ಪದವಿ ಪೂರ್ವ ಕಾಲೇಜಿಗೆ ಇಷ್ಟು ಆಸ್ತಿ ಇದೆ ಎಂದು ನೋಂದಣಿಯಾಗಿರುತ್ತದೆ. ಆ ಜಾಗಗಳಿಗೆ fencing ಕೂಡ ಮಾಡಬೇಕು. Fencing ಮಾಡದಿದ್ದರೆ ಅತಿಕ್ರಮಣ ಆಗಿಯೇ ಆಗುತ್ತದೆ. ಆದ್ದರಿಂದ ಆಸ್ತಿಯನ್ನು ರಕ್ಷಣೆ ಮಾಡಬೇಕಾಗುತ್ತದೆ. ಮಾನ್ಯ ಕಾಂತರಾಜುರವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಶಿಕ್ಷಣ ಇಲಾಖೆಯ ಆಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ಕಾನೂನು ಬದ್ಧವಾಗಿ ದಾಖಲೆಗಳಲ್ಲಿ ಎಂಟ್ರಿಯಾಗುವುದಷ್ಟೇ ಅಲ್ಲ, ಭೌತಿಕವಾಗಿ ಅದಕ್ಕೆ ಜಿಜಟಿಛಿಟಿಂ ಮಾಡಿ ಅದನ್ನು ರಕ್ಷಣೆ ಮಾಡುವಂತಹ ಕೆಲಸ ಸರ್ಕಾರ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಎಸ್.ಸುರೇಶ್‌ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕಾಂತರಾಜ್‌ರವರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ನಾನು ಖಂಡಿತ ಪರಿಶೀಲಿಸುತ್ತೇನೆ. ನಾನು ಸ್ವತಃ ಮಾನ್ಯ ಕಾಂತರಾಜ್‌ರವರ ಜೊತೆ ಮಾತನಾಡಿ ಇದನ್ನು ಇನ್ನಷ್ಟು ವ್ಯವಸ್ಥಿತವಾಗಿ ಯಾವ ರೀತಿ ಮಾಡಬಹುದೆಂದು ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:952**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸಚಿವರು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಈಗ ನಮ್ಮಲ್ಲೂ 'Villagers protest as Leopard kills man in Koppal' ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಕೇವಲ ಹಾಸನ, ಕೊಡಗು, ಚಿಕ್ಕಮಗಳೂರು, ಇಂತಹ ಕಡೆಯಷ್ಟೇ ಕಾಡು ಪ್ರಾಣಿಗಳಿವೆ ಎಂದು ಬಹಳಷ್ಟು ಜನ ತಿಳಿದುಕೊಂಡಿದ್ದಾರೆ. ಆದರೆ ನಮ್ಮ ಉತ್ತರ ಕರ್ನಾಟಕ ಭಾಗದಲ್ಲಿ ಕನಕಗಿರಿಯ, ತಾವರಗೆರೆಯಲ್ಲಿ, ಆನೆಗುಂದಿ ಭಾಗದಲ್ಲಿ ಸಾಕಷ್ಟು ಚಿರತೆಗಳಿವೆ. ನಮ್ಮಲ್ಲಿ ಚಿರತೆಗಳಿಗಿಂತ ಕರಡಿಗಳು ಜಾಸ್ತಿ ಇವೆ. ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಎಲ್ಲಿ ಪ್ರಾಣಿಗಳಿವೆ ಆ ಪ್ರದೇಶದಲ್ಲಿ ಎಚ್ಚರಿಕೆಯನ್ನು ಕೊಡುವಂತಹ ಕೆಲಸ ಮಾಡಬೇಕು. ನಾವು ಕೊಪ್ಪಳ, ಆನೆಗುಂದಿ, ಗಂಗಾವತಿಯಲ್ಲಿರುತ್ತೇವೆ. ಅಲ್ಲಿ ಚಿರತೆ ಇದೆ ಎಂಬುದೇ ಗೊತ್ತಿರಲಿಲ್ಲ. ಒಂದು ಸಲ ಚಿರತೆ ಮನುಷ್ಯನನ್ನು ಖಲಾಸ್ ಮಾಡಿದ ಮೇಲೆಯೇ ಗೊತ್ತಾಯಿತು. ಇವತ್ತು ಅಲ್ಲಿ ಆ ಪರಿಸ್ಥಿತಿ ಇದೆ. ಅರಣ್ಯ ಇಲಾಖೆಯವರಿಗೆ ಎಲ್ಲೆಲ್ಲಿ ಪ್ರಾಣಿಗಳಿವೆ ಎಂಬುದು ಅವರಿಗೂ ಕೂಡ ಗೊತ್ತಿರುವುದಿಲ್ಲ. ಬಹುಶಃ ಅರಣ್ಯ ಇಲಾಖೆಯವರಿಗೆ ದಕ್ಷಿಣ ಕರ್ನಾಟಕದಲ್ಲಿ ಅರಣ್ಯಗಳು ಎಲ್ಲಿ ಇರುತ್ತದೆಂದು ಚೆನ್ನಾಗಿ ಗೊತ್ತಿರುತ್ತದೆ. ಆದರೆ ಉತ್ತರ ಕರ್ನಾಟಕದಲ್ಲಿ ಅರಣ್ಯ ಇಲಾಖೆಯವರಿಗೆ ಅರಣ್ಯಗಳು ಎಲ್ಲಿ ಇವೆ ಎಂಬುದೇ ಅವರಿಗೆ ಸರಿಯಾಗಿ ಗೊತ್ತಿರುವುದಿಲ್ಲ. ಕೇವಲ ಗಿಡ ನೆಡುವುದು, ರೊಕ್ಕ ತಿನ್ನುವುದು ಅಷ್ಟೆ. ಆದರೆ ಒಂದು ಗಿಡವೂ ಇರುವುದಿಲ್ಲ ಆ ಒಂದು ಪರಿಸ್ಥಿತಿ ನಮ್ಮ ಭಾಗದಲ್ಲಿದೆ. ಅದಕ್ಕೆ ಮಾನ್ಯ ಸಚಿವರಿಗೆ ವಿನಂತಿಸುವುದೇನೆಂದರೆ, ಇಡೀ ನಮ್ಮ ಕರ್ನಾಟಕದಲ್ಲಿ ಯಾವ್ಯಾವ ಪ್ರದೇಶದಲ್ಲಿ ಕಾಡು ಪ್ರಾಣಿಗಳಿವೆ ಅವೆಲ್ಲಾ ಏಕೆ ಹೊರಗೆ ಬರುತ್ತಿವೆ ಎಂದರೆ, ಆ ಪ್ರಾಣಿಗಳಿಗೆ ತಿನ್ನುವುದಕ್ಕೆ ಸರಿಯಾಗಿ ಆಹಾರ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ. ಈ ಅರಣ್ಯ ಪ್ರದೇಶದಲ್ಲಿ ಪ್ರಾಣಿಗಳಿಗೆ ಅವಶ್ಯಕವಿರುವ ಆಹಾರ ನೀಡುವಂತಹ ಗಿಡ-ಮರಗಳನ್ನು ಬೆಳೆಸುವಂತಹ ವ್ಯವಸ್ಥೆ ಮಾಡಬೇಕು, ಕುಡಿಯುವ ನೀರಿಗೆ water bodies create ಮಾಡಬೇಕು. ಅರಣ್ಯದಲ್ಲಿ ಕುಡಿಯುವುದಕ್ಕೆ ನೀರು, ಆಹಾರ ಇಲ್ಲದಿದ್ದರೆ ಪ್ರಾಣಿಗಳು ಊರಿಗೆ ಬರದೆ ಮತ್ತೆ ಎಲ್ಲಿಗೆ ಹೋಗಬೇಕು? ಆರಣ್ಯದಲ್ಲಿ ಪ್ರಾಣಿಗಳಿಗೆ ಏನು ಆಹಾರ ಬೇಕು ಆ ಆಹಾರವನ್ನು ಬೆಳೆಯುವಂತಹ ಕಾರ್ಯಕ್ರಮವಾಗಬೇಕು. Water bodies create ಮಾಡಿ ಅಲ್ಲಲ್ಲಿ ನೀರು ಕುಡಿಯುವುದಕ್ಕೆ ಅನುಕೂಲ ಮಾಡಿಕೊಡಬೇಕು. ಜಿಂಕೆಗಳ ತಳಿಯನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕು. ಏಕೆಂದರೆ, ಆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಳಿಗಳನ್ನು ನಾವು multiplication ಮಾಡಿದಾಗ ಮಾತ್ರ ಅವು sufficient ಆಗಿ ಕಾಡಿನಲ್ಲಿರುತ್ತವೆ. ಇವತ್ತು ಮೈಸೂರಿನಂತಹ ನಗರದಲ್ಲಿ ಪ್ರಾಣಿಗಳು ಹೊರಗೆ ಬರುತ್ತಿವೆ. ಮೈಸೂರು ಮಹಾರಾಜ ಕಾಲೇಜಿನ ಒಳಗೆಯೇ ಆನೆ ನುಗ್ಗಿತ್ತು. ಲಲಿತ ಮಹಲ್‌ನೊಳಗೆ ಚಿರತೆಗಳು ನುಗ್ಗಿದ್ದವು. ಇಷ್ಟೆಲ್ಲಾ ಓಪನ್ ಆಗಿ ತಿರುಗಾಡಿದ ಮೇಲೆ ಅಲ್ಲಿ ನಾವು ಹೇಗೆ ಬದುಕಬೇಕು? ಕೊಡಗು ಜಿಲ್ಲೆಯಲ್ಲಿ ಹತ್ತು ಮಂದಿ ಸತ್ತಿದ್ದಾರೆ. ತಮ್ಮ ಮುಖಾಂತರ ನಾನು ಮಾನ್ಯ ಅರಣ್ಯ ಸಚಿವರಿಗೆ ಕೇಳಿಕೊಳ್ಳುವುದೇನೆಂದರೆ, ಮಾನ್ಯ ಸಚಿವರು ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ನಾವೆಲ್ಲಾ ಕ್ರಮ ತೆಗೆದುಕೊಂಡಿದ್ದೇವೆಂದು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಇಪ್ಪತ್ತು ವರ್ಷಗಳಿಂದಲೂ ಇದನ್ನು ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಈಗ 3-4 ವರ್ಷಗಳಿಂದ ಪ್ರಾಣಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದನ್ನು ನೋಡುತ್ತಿದ್ದೇವೆ. ಮೊದಲು ಇಷ್ಟು ಬರುತ್ತಿರಲಿಲ್ಲ. ಆದರೆ ಈಗ ಮಾನ್ಯ ಸಚಿವರು ತಕ್ಷಣವೇ ನಿರ್ದಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಅಷ್ಟರಲ್ಲಿ ಎಷ್ಟು ಮಂದಿ ಸಾಯುತ್ತಾರೆಯೋ ಗೊತ್ತಿಲ್ಲ. ಇವತ್ತು ಆ ಪರಿಸ್ಥಿತಿ ಇದೆ. ಇವತ್ತು ಪ್ರಕೃತಿ ಕೂಡ ಸರಿಯಾಗಿಲ್ಲ. ಕೊಡಗಿನಲ್ಲಿ ಪ್ರಕೃತಿ ವಿಕೋಪದಿಂದಾಗಿ ಕಾಡು, ಮನೆಗಳು, ರಸ್ತೆಗಳು ಹಾಳಾಗಿ ಹೋದವು. ಭೂಮಿ ಯಾವುದು ಎಂದು ಗೊತ್ತಿರಲಾರದ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಇಂತಹ ವಿಚಾರಗಳು ಇದ್ದಾಗ ಮಾನ್ಯ ಅರಣ್ಯ ಸಚಿವರು ಬಹಳ efficient ಇದ್ದಾರೆ. ಅವರನ್ನು ನಾವು ಮೊದಲಿನಿಂದಲೂ ನೋಡಿದ್ದೇವೆ. ತಮ್ಮ ನೇತೃತ್ವದಲ್ಲಿ ತಕ್ಷಣವೇ ಕ್ರಮ ತೆಗೆದುಕೊಳ್ಳುವಂತಹ ಕೆಲಸ ಆಗಬೇಕು. ಅರಣ್ಯ ಇಲಾಖೆಯಲ್ಲಿ ಗಾರ್ಡ್ಸ್‌ನ್ನು ಇಟ್ಟುಕೊಂಡಿದ್ದಾರೆ. ಆ ಗಾರ್ಡ್ಸ್‌ನ ಕೆಲಸವೇನು? ಆ ಗಾರ್ಡ್ಸ್ ಇಂತಹ ಕಡೆ ಪ್ರಾಣಿಗಳಿವೆ ಎಂದು ಹಳ್ಳಿ ಜನರಿಗೆ ಹೇಳಬೇಕಲ್ಲವೇ? ಗಾರ್ಡ್ಸ್‌ಗಳಲ್ಲಿ ಸರಿಯಾದ ಸಮವಸ್ತ್ರಗಳಿಲ್ಲ, ಗನ್‌ಗಳು ಇಲ್ಲ, ಅರಿವಳಿಕೆ ಚುಚ್ಚುಮದ್ದು ಇರುವುದಿಲ್ಲ. ಚಿರತೆ ಅಥವಾ ಇತರೆ ಪ್ರಾಣಿಗಳಿಂದ ಹಾವಳಿಯಾದ ಮೇಲೆ ಗಾರ್ಡ್‌ಗಳು ಮನೆಗೆ ಅಥವಾ ಕಚೇರಿಗೆ ಗನ್ ಹುಡುಕಿಕೊಂಡು, ಅರಿವಳಿಕೆ ಚುಚ್ಚುಮದ್ದು ಹುಡುಕಿಕೊಂಡು ಹೋಗುತ್ತಾರೆ. ಈ ಪರಿಸ್ಥಿತಿ ಇದೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಇಟಗಿಯವರು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ವಾಸ್ತವ ಸ್ಥಿತಿ ಕೆಲವೊಂದು ಅವರು ಹೇಳಿರುವುದು ನಿಜವಿದೆ. ನಮ್ಮ ಮೊದಲ ಆದ್ಯತೆ Western Ghat ಮತ್ತು Eastern Ghat ಭಾಗದಲ್ಲಿದೆ. ದಟ್ಟವಾದ ಅರಣ್ಯ ಈ ಪ್ರದೇಶದಲ್ಲಿದೆ. ಸ್ವಾಭಾವಿಕವಾಗಿ ಈ ಭಾಗದಲ್ಲಿ ಪ್ರಾಣಿಗಳ ಸಂಖ್ಯೆ ಜಾಸ್ತಿ ಇದೆ. ಆ ಭಾಗದಲ್ಲೂ ನಿನ್ನೆ ನಾನು ಕಪ್ಪತಗುಡ್ಡಕ್ಕೆ ಹೋಗಿದ್ದೆ. ಮಾನ್ಯ ಸದಸ್ಯರು ಕನಕಗಿರಿಯ ಬಗ್ಗೆಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದಾರೆ. ಚಿಂಚೋಳಿ, ಬೆಳಗಾವಿ, ಧಾರವಾಡ, ತಲಘಟ್ಟಿ ಭಾಗದಲ್ಲಿ ದಟ್ಟ ಅರಣ್ಯವಿದೆ. ಅದನ್ನು ಬೆಳೆಸುವ ದೃಷ್ಟಿಯಿಂದ ಯೋಜನೆಯನ್ನು ಸಿದ್ಧಪಡಿಸುತ್ತಿದ್ದೇವೆ. ಸ್ವಾಭಾವಿಕವಾಗಿ ಮಾನ್ಯ ಸದಸ್ಯರೇ ಉತ್ತರವನ್ನು ಹೇಳಿಬಿಟ್ಟಿದ್ದಾರೆ. ಅರಣ್ಯ ಪ್ರದೇಶದೊಳಗೆ ಮನುಷ್ಯರು ನುಗ್ಗುವುದಕ್ಕೆ ಪ್ರಾರಂಭ ಮಾಡಿದ್ದೇವೆ. ನಾನು ಆ ಜಿಲ್ಲೆಯ ಹೆಸರು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

**(ಮುಂದು)**

**(371)15–03–2021/ಬಿಕೆಪಿ-ಆರ್‌ಎನ್**

**ಶ್ರೀ ಅರವಿಂದ್ ಲಿಂಬಾವಳಿ(ಮುಂದು)**

ಅಲ್ಲಲ್ಲಿ ಮನೆಗಳನ್ನು ಕಟ್ಟುತ್ತಿದ್ದೇವೆ. ಹೋಂ-ಸ್ಟೇ ಎಂದು ಮಾಡುತ್ತಿದ್ದೇವೆ. ಅಲ್ಲಿ ಸಮಸ್ಯೆ ಏತಕ್ಕೆ ಆಗುತ್ತದೆ ಎಂದರೆ, ಅಲ್ಲಿ ಜನರು ಹೋಗುವುದರಿಂದ ಅರಣ್ಯದಲ್ಲಿನ ಪ್ರಾಣಿಗಳಿಗೆ ಆಹಾರ, ನೀರು ಸಿಗುತ್ತಿಲ್ಲ. ಏಕೆಂದರೆ, ಅದನ್ನು ನಾವುಗಳು ಬಳಸಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಹೀಗಾಗಿ, ಆ ಒಂದು ಸಮಸ್ಯೆಯಿಂದ ಇನ್ನೊಂದು Lantana ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಅಲ್ಲಿ ಹುಲ್ಲು ಸಹ ಬೆಳೆಯುವಂತಹ ಪರಿಸ್ಥಿತಿಯಲ್ಲಿ ಇಲ್ಲ. ನಿನ್ನೆ ನಾನು ಕಪ್ಪದಗುಡ್ಡದಲ್ಲಿದ್ದಾಗ ಹಾವೇರಿ ಜಿಲ್ಲೆಯ ಎರಡು ಕಡೆ ಅಂದರೆ, ಹೊಲದಲ್ಲಿ ಮತ್ತು ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ Chief Conservator of Forest ಗೆ ಅಲರ್ಟ್ ಬಂತು. ನಮ್ಮ ಅಧಿಕಾರಿಗಳು ಅಲರ್ಟ್ ಇದ್ದಾರೆ. ತಕ್ಷಣ ಹೋಗಿ ಅದನ್ನು ನಂದಿಸಿದ್ದಾರೆ. ಆ ಒಂದು ಅಲರ್ಟ್‌ನೆಸ್ ಇದೆ. ತಾವು ಹೇಳಿದ ಹಾಗೆ ಒಂದಿಷ್ಟು equipment ಮತ್ತೊಷ್ಟು modernize ಆಗಬೇಕು. ಆ ನಿಟ್ಟಿನಲ್ಲಿ ಆರ್ಥಿಕ ಇಲಾಖೆಯೊಂದಿಗೆ ಆ ಸಂಗತಿಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ಕೆಲವು ಸಂಗತಿಗಳ ಬಗ್ಗೆ ಒಪ್ಪಿಕೊಂಡಿದ್ದಾರೆ. ಅರಣ್ಯದಲ್ಲಿ ಇರತಕ್ಕ ಗಾರ್ಡ್‌ಗಳು ಸಹ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ನಾನು ನಿನ್ನೆ ಶೆಟ್ಟಿಕೆರೆ ಹತ್ತಿರ ಹೋಗಿದ್ದೆ. ಅಲ್ಲಿ ಅರಣ್ಯ ಸಿಬ್ಬಂದಿಯೇ ಹೋಗಿ ಅಲ್ಲಿರತಕ್ಕಂತಹ ನೀಲಗಿರಿ ಎಲೆಗಳನ್ನು ತೆಗೆದುಕೊಂಡು ಬೆಂಕಿ ನಂದಿಸಿರುವುದನ್ನು ನೋಡಿದೆ. ಅವರೂ ಸಹ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ modernize ಆಗಬೇಕು ಎನ್ನುವುದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ನಾನು ಎಲ್ಲಾ ಸದಸ್ಯರಲ್ಲಿ ಒಂದೇ ಒಂದು ವಿನಂತಿ ಮಾಡುವುದು ಏನೆಂದರೆ, ಅರಣ್ಯ ಬೆಳೆಸುವುದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಏಕೆಂದರೆ, ಅರಣ್ಯದಲ್ಲಿ ಪ್ರಾಣಿಗಳು ಬಂದು ನಮಗೇನೂ ಕೇಳುವುದಿಲ್ಲ. ಅದರ ಪರವಾಗಿ ನಾವೇ ಕೇಳಬಹುದು. ತಾವು ಸರಿಯಾದಂತಹ ವಿಷಯಗಳನ್ನು ಹೇಳಿದ್ದೀರಿ. ಅಲ್ಲಿರತಕ್ಕಂತಹ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾಣಿಗಳ ರಕ್ಷಣೆ ಮಾಡುವ ದೃಷ್ಟಿಯಿಂದ ನಾವು ಅರಣ್ಯ ಬೆಳೆಸುವುದಕ್ಕೆ ಅವಕಾಶ ಕೊಟ್ಟರೆ ಕನಿಷ್ಠಪಕ್ಷ ಆಹಾರ ಮತ್ತು ನೀರು ಸಿಗುವಂತಹ ಪ್ರಯತ್ನ ಮಾಡಿದರೆ ಪ್ರಾಣಿಗಳು ಊರುಗಳಿಗೆ ನುಗ್ಗುವುದಿಲ್ಲ. ಬೆಂಗಳೂರಿನಲ್ಲಿಯೂ ಸಹ ಚಿರತೆ Prestige Construction Company ಯೊಳಗೆ ಕೆಲಸ ನಡೆಯುತ್ತಿರುವಂತಹ ಸಮಯದಲ್ಲಿ ಬಂದಿತ್ತು. ಅರಣ್ಯವನ್ನು ನಾಶ ಮಾಡುತ್ತಿರುವುದರಿಂದ ಊರಿನೊಳಗೆ ಚಿರತೆ ಬರುತ್ತಿವೆ. ಅದಕ್ಕೆ ತಮ್ಮೆಲ್ಲರ ಸಹಕಾರವಿದ್ದರೆ ಇನ್ನೂ ನಾವು ಅರಣ್ಯವನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯತೆಯಿದೆ. ಕರ್ನಾಟಕದಲ್ಲಿ ನಮ್ಮದು green cover ಜಾಸ್ತಿಯಾಗಿದೆ. 18.3% ಇದ್ದಂತಹ green cover ಇವತ್ತು 22.81%ಗೆ ಬಂದಿದೆ. 33%ಗೆ ನಾವು ಟಾರ್ಗೆಟ್ ಇಟ್ಟುಕೊಂಡಿದ್ದೇವೆ. ಸಮಸ್ಯೆಗಳು ಇವೆ. ಆ ಸಮಸ್ಯೆಗಳನ್ನೂ ಸಹಿತ address ಮಾಡಿ, ಪ್ರಾಣಿಗಳಿಗೆ ಮತ್ತು ಕಾಡಿಗೆ ಆದ್ಯತೆಯನ್ನು ನಾವು ಕೊಟ್ಟು ಕೆಲವೊಂದು restrictions ತರುತ್ತಿದ್ದೇವೆ, ಏಕೆಂದರೆ, ಜನರಿಗೆ ತೊಂದರೆಯಾಗಬಾರದು, ಪ್ರಾಣಿಗಳು ಬದುಕಬೇಕು ಎನ್ನುವಂತಹ ದೃಷ್ಟಿಕೋನದೊಳಗೆ ತೆಗೆದುಕೊಂಡು ಹೋಗಬೇಕು ಎನ್ನುವಂತಹ ಯೋಚನೆಯಿದೆ. ಅದಕ್ಕೆ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 978**

**(ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:** ಮಾನ್ಯ ಸಭಾಪತಿಯವರೇ,ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದ್ದರೆ, ಸಮಸ್ಯೆಯನ್ನು ಬಗೆಹರಿಸುವ ರೀತಿಯಲ್ಲಿ ಉತ್ತರವನ್ನು ಒದಗಿಸಿಲ್ಲವೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಸಭಾಪತಿಗಳೇ, ಬಹಳಷ್ಟು ವರ್ಷಗಳಿಂದ ಈ ವೈದ್ಯಕೀಯ ಕ್ಷೇತ್ರದಲ್ಲಿ ಅದರಲ್ಲೂ ಸಹಿತ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಈ ಸೀಟುಗಳ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಈ ನೀಟ್ ವ್ಯವಸ್ಥೆ ಬಂದಮೇಲೆ ಸುಧಾರಿಸಿದೆ. ಪ್ರತಿಭಾವಂತ ವಿದ್ಯಾರ್ಥಿಗಳು ಅದರಲ್ಲಿಯೂ ಕೂಡ ಒಳ್ಳೆಯ ಮೆರಿಟ್ ಇರುವಂತಹ ವಿದ್ಯಾರ್ಥಿಗಳನ್ನು ಮ್ಯಾನೇಜ್‌ಮೆಂಟ್‌ನವರು ಹುಡುಕುತ್ತಾರೆ. ಹುಡುಕಿ ಅವರುಗಳ fee ಅನ್ನು ಮ್ಯಾನೇಜ್‌ಮೆಂಟ್‌ನವರೇ ತುಂಬುತ್ತಾರೆ. ಮ್ಯಾನೇಜ್‌ಮೆಂಟ್‌ನವರೇ ಶುಲ್ಕವನ್ನು ತುಂಬಿ ಆ ಕಾಲೇಜಿನಿಂದ ಅವರು admissions ತೆಗೆದುಕೊಳ್ಳದೇ ಅವರಿಗೆ ಏನು ಕೊಡಬೇಕೋ ಅದನ್ನು ಕೊಟ್ಟು ಅವರಿಗೇ ಕಳುಹಿಸುತ್ತಾರೆ. ಆ ಸೀಟು ಬಿಟ್ಟುಹೋದಮೇಲೆ ಅವರು ಮಂತ್ರಿಗಳ ಬಳಿ ಬರುತ್ತಾರೆ, ಅಧಿಕಾರಿಗಳ ಬಳಿ ಬರುತ್ತಾರೆ, ನಮ್ಮ ಕಾಲೇಜಿಗೆ ಇದನ್ನು ಕೊಡಿ ನಾವು ಕಾಲೇಜು ನಡೆಸುವುದಕ್ಕೆ ಕಷ್ಟ ಎಂದು ಕೇಳುತ್ತಾರೆ. ಕಾಲೇಜು ನಡೆಸುವುದಕ್ಕೆ ನನ್ನದು ಏನೂ ವಿರೋಧವಿಲ್ಲ. ಆದರೆ, ಇದರಿಂದ ಏನಾಗುತ್ತಿದೆ ಎಂದರೆ ಮೆರಿಟ್ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತದೆ. ಕೇವಲ ವಿದ್ಯಾರ್ಥಿಗಳು ಅಷ್ಟೇ ಓದುವುದಿಲ್ಲ, ಅದರ ಜೊತೆಯಲ್ಲಿ ತಂದೆ-ತಾಯಿಗಳು ಓದುತ್ತಾರೆ. ತಂದೆ-ತಾಯಿಗಳಿಗೆ ಇದರಲ್ಲಿ ಅಪಾರವಾದಂತಹ ನೋವಿದೆ. ಒಂದು ಸೀಟು ಬಿಟ್ಟು ಹೋದರೆ ತಂದೆ-ತಾಯಿಗಳು ಬಹಳ ವ್ಯಥೆ ಪಡುತ್ತಾರೆ. ಇಡಿ ಕುಟುಂಬ ನೋವು ಪಡುತ್ತದೆ. ಹಾಗಾಗಿ, ಇದು ಒಂದೆರಡು ಸೀಟುಗಳಲ್ಲ. ಸುಮಾರು 400 ರವರೆಗೂ ಪ್ರತಿ ವರ್ಷ ಸೀಟುಗಳ ದಂಧೆ ನಡೆಯುತ್ತಿದೆ. ಹಾಗಾಗಿ, ವೈದ್ಯಕೀಯ ಶಿಕ್ಷಣ ಸಚಿವರು ಸಮರ್ಥರಿದ್ದಾರೆ. ಈ ವಿಷಯ ಅವರಿಗೆ ಚೆನ್ನಾಗಿ ಅರ್ಥವಾಗುತ್ತದೆ. ಎಲ್ಲಿ ಹೇಗೆ ನಡೆಯುತ್ತದೆ ಎಂದು ಅವರಿಗೆ ಚೆನ್ನಾಗಿ ಗೊತ್ತಿದೆ. ಹಾಗಾಗಿ, ನಾನು ವೈದ್ಯಕೀಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ನೀವು ನೋಟಿಸ್ ಕೊಟ್ಟಿಲ್ಲವೆಂದು ಹೇಳುತ್ತೀರಿ. ಹಾಗಾದರೆ ನೀವು ಕಾಲೇಜಿಗೆ ನೋಟಿಸನ್ನೇ ಕೊಟ್ಟಿಲ್ಲವೆಂದರೆ ಹೇಗೆ ಕ್ರಮ ತೆಗೆದುಕೊಳ್ಳುತ್ತೀರಿ? ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಂದು ನಾನು ಪ್ರಶ್ನೆ ಕೇಳಿದ್ದೇನೆ, ಇಷ್ಟೆಲ್ಲಾ ನಡೆಯುತ್ತಿದ್ದರೂ ಒಂದು ಕಾಲೇಜಿಗೂ ನೋಟಿಸ್ ಕೊಟ್ಟಿಲ್ಲ, ಒಬ್ಬರು ಅಧಿಕಾರಿಯ ಮೇಲೂ ಕ್ರಮ ತೆಗೆದುಕೊಂಡಿಲ್ಲವೆಂದರೆ ಈ ಸಮಸ್ಯೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಗೆ solve ಮಾಡುತ್ತೀರಿ? ಹಾಗಾಗಿ, ನೊಂದ parents ಗೆ, ನೊಂದ ವಿದ್ಯಾರ್ಥಿಗಳಿಗೆ ದಯವಿಟ್ಟು ತಾವು ನ್ಯಾಯ ಒದಗಿಸಿ. ಕನಿಷ್ಟ ಪಕ್ಷ ಮುಂದಿನ ವರ್ಷದಿಂದಾದರೂ ಕೂಡ ಈ ಒಂದು ನಡತೆಗೆ ಸಂಪೂರ್ಣ ಕಡಿವಾಣ ಹಾಕಿ ಎಂದು ಮಾನ್ಯ ಶಿಕ್ಷಣ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಎತ್ತಿರತಕ್ಕಂತಹ ಪ್ರಶ್ನೆ ಬಹಳ ಮುಖ್ಯವಾಗಿರುವಂತಹ ಪ್ರಶ್ನೆಯಾಗಿದೆ. ಹಲವಾರು ವರ್ಷಗಳಿಂದ ಈ ದಂಧೆ ನಡೆಯುತ್ತಿರುವಂತಹದ್ದು ಸತ್ಯ. ಅದನ್ನು ನಾನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆದರೆ, ಕೆಲವು ಕಾನೂನಿನಲ್ಲಿರತಕ್ಕಂತಹ ಲೋಪ-ದೋಷಗಳನ್ನು ಉಪಯೋಗ ಮಾಡಿಕೊಂಡು ಈ ಕೆಲವು ಕಾಲೇಜುಗಳು ಎಂದರೆ ಎಲ್ಲಾ ಕಾಲೇಜುಗಳು ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಸುಮಾರು 65 ವೈದ್ಯಕೀಯ ಕಾಲೇಜುಗಳು ಇವತ್ತು ಇವೆ. ಅದರಲ್ಲಿ 45 ಕ್ಕೂ ಹೆಚ್ಚು ಖಾಸಗಿ ವಿದ್ಯಾಸಂಸ್ಥೆಗಳಿವೆ. ಅದರಲ್ಲಿ ಕೆಲವು ವೈದ್ಯಕೀಯ ಕಾಲೇಜುಗಳು ಈ ರೀತಿಯಲ್ಲಿ ಸುಪ್ರೀಂ ಕೋರ್ಟ್‌ನ ಕೆಲವು ಆದೇಶಗಳನ್ನು ಅವರು ಅವರಿಗೆ ಬೇಕಾದಂತೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಸಚಿವನಾದ ಮೇಲೆ ಒಂದು ಸಮಿತಿಯನ್ನು ಕೂಡ ಈಗಾಗಲೇ ನೇಮಕ ಮಾಡಿದ್ದೇನೆ. ಆ ಉನ್ನತ ಮಟ್ಟದ ಸಮಿತಿಯಲ್ಲಿ ಯಾವ ರೀತಿ ಇದನ್ನು ತಡೆಗಟ್ಟಬಹುದು ಎನ್ನುವುದಕ್ಕೆ ಈಗ ಒಂದು ವರದಿಯನ್ನು ಕೂಡ ಕೊಟ್ಟಿದ್ದಾರೆ. ಹಾಗಾಗಿ ಮುಂದೆ ಬಹುಶಃ ನಾವು ಏನು ಪೆನಾಲ್ಟಿ 5 ಲಕ್ಷ ರೂಪಾಯಿಗಳವರೆಗೆ ಇಲ್ಲಿಯವರೆಗೆ ಇತ್ತು, ಅದನ್ನು ಕನಿಷ್ಠ 5ರಷ್ಟು ಹೆಚ್ಚು ಹೆಚ್ಚುವರಿ ಮಾಡಿದಾಗ ಈ ರೀತಿಯಲ್ಲಿ surrender ಮಾಡುವುದಕ್ಕೆ ಆಗುವುದಿಲ್ಲ. ಯಾರೂ ಕೂಡ 25 ಲಕ್ಷ ರೂಪಾಯಿಗಳ ಪೆನಾಲ್ಟಿಯನ್ನು ಕಟ್ಟಿ surrender ಮಾಡುವುದಿಲ್ಲ. ಅದೇ ರೀತಿ ಇನ್ನೂ ಕೆಲವು ಸಲಹೆಗಳನ್ನು ಈ ಸಮಿತಿಯವರು ಕೊಟ್ಟಿದ್ದಾರೆ. ಈಗಾಗಲೇ ನಡೆದಿರತಕ್ಕಂತಹ ತಪ್ಪುಗಳಿಗೆ ಕೇಂದ್ರ ಸರ್ಕಾರದ ಕೆಲವು ಇಲಾಖೆಗಳು ಈ ಒಂದು ವಿದ್ಯಾಸಂಸ್ಥೆಗಳ ವಿಚಾರವಾಗಿ ಈಗಾಗಲೇ ತನಿಖೆಗೆ ಒಳಪಡಿಸಿದ್ದಾರೆ.

ಹಾಗಾಗಿ, ಇವತ್ತು ರಾಜ್ಯ ಸರ್ಕಾರದವರು ಅವರಿಗೆ ವಿಶೇಷವಾಗಿ ಯಾವುದೇ ಒಂದು ರೀತಿಯ ನೋಟಿಸ್ ಅನ್ನು ಕೊಟ್ಟಿಲ್ಲ. ಹಾಗೆ ಏನೂ ಅವರು ಹೊರಗಡೆಗೆ ಹೋಗಿಲ್ಲ. ಈಗಾಗಲೇ ತನಿಖಾ ಸಂಸ್ಥೆಗಳು ತನಿಖೆಯನ್ನು ಆರಂಭ ಮಾಡಿವೆ. ಹಾಗಾಗಿ ತಪ್ಪು ಕಂಡುಬಂದರೆ ಖಂಡಿತವಾಗಿ ಅವರ ಮೇಲೆ ಶಿಕ್ಷೆಯಾಗುತ್ತದೆ. ಆದರೆ, ಮುಂದಿನ ವರ್ಷದಲ್ಲಿ ಖಂಡಿತವಾಗಿಯೂ ಕೂಡ ಇದಕ್ಕೆ ಸಮರ್ಪಕವಾದಂತಹ ಕೆಲವು ಸ್ಪಷ್ಟ ನೀತಿಯನ್ನು ರೂಪಿಸುವುದರಲ್ಲಿ ನಾವು ಈ ಬಾರಿ ಎಡವುದಿಲ್ಲ. ಅಷ್ಟು ಭರವಸೆಯನ್ನು ಈ ಸದನಕ್ಕೆ ನಾನು ಕೊಡುವುದಕ್ಕೆ ಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿಕುಮಾರ್**:-ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನಾನು ಮತ್ತೊಂದು ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಉತ್ತರವನ್ನು ಅವರು ಕೊಟ್ಟಿದ್ದಾರೆ. ಮೊನ್ನೆ 12 ಕಾಲೇಜುಗಳನ್ನು raid ಮಾಡಿದ್ದಾರೆ. ಆ ಕಾಲೇಜುಗಳಲ್ಲಿ ಹತ್ತಿರ ಹತ್ತಿರ 402 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಅವ್ಯವಹಾರ ನಡೆದುದ್ದರ ಬಗ್ಗೆ ಕಪ್ಪು ಆಸ್ತಿ ಸಿಕ್ಕಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಆ ಕಾಲೇಜುಗಳ ಬಗ್ಗೆ ನೀವು ಏನಾದರೂ ನೋಟಿಸ್ ಕೊಟ್ಟಿದ್ದೀರಿ? ಏನು ಕ್ರಮ ತೆಗೆದುಕೊಂಡಿದ್ದೀರಿ? Raid ಆಗುತ್ತದೆ, ಈ ಕಾಲೇಜುಗಳಲ್ಲಿ ಹೀಗೆಲ್ಲಾ ನಡೆದಿದೆ ಎಂದು ಸಾಕಷ್ಟು ಪ್ರಕರಣಗಳು ಎಲ್ಲಾ ಪತ್ರಿಕೆಗಳಲ್ಲಿಯೂ ಬರುತ್ತದೆ. ಆದರೂ ಏಕೆ ಕ್ರಮ ತೆಗೆದುಕೊಂಡಿಲ್ಲ? ಏಕೆ ನೋಟಿಸ್ ಕೊಟ್ಟಿಲ್ಲ? ಏನು ಒತ್ತಡವಿದೆ? ಹೀಗೆ ನೀವು ಇನ್ನೂ ನೋಟಿಸ್ ಅನ್ನೇ ಕೊಡುವುದಿಲ್ಲ, ಕ್ರಮವನ್ನೇ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರೆ ಬಡ ವಿದ್ಯಾರ್ಥಿಗಳಿಗೆ ಹಾಗೂ parents ಗೆ ಯಾವಾಗ ನ್ಯಾಯ ಸಿಗುವುದು ಎಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ: ಕೆ.ಸುಧಾಕರ್:** ಮಾನ್ಯ ಸಭಾಪತಿಯವರೆ, ಈಗ ಕಪ್ಪು ಹಣ ಯಾರಾದರೂ ಇಟ್ಟುಕೊಂಡಿದ್ದರೆ ಅದು ವೈದ್ಯಕೀಯ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ನಾವು ಆ ವಿಷಯದಲ್ಲಿ ನೋಟಿಸ್ ಕೊಡಲಿಕ್ಕೆ ಆಗುವುದಿಲ್ಲ. ಐ.ಟಿ. ಇಲಾಖೆಯಿದೆ. ಕೇಂದ್ರ ಇಲಾಖೆಯವರು ಈಗಾಗಲೇ ನೋಟಿಸ್ ಕೂಡ ಕೊಟ್ಟಿದ್ದಾರೆ. ತನಿಖೆಯನ್ನು ಕೂಡ ಆರಂಭ ಮಾಡಿದ್ದಾರೆ. ಏನು ಹಣ ಸಿಕ್ಕಿದೆ ಅವರು ಜಪ್ತಿ ಕೂಡ ಮಾಡಿದ್ದಾರೆ. ಆದರೆ, ನಮ್ಮ ಇಲಾಖೆಯಲ್ಲಿ ಬಂದಿರತಕ್ಕಂತಹ ಲೋಪದೋಷಗಳು ಕೆಲವು ನಿಯಮಗಳು ಏನಿತ್ತು, ಅದನ್ನು ಸರಿಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ನಮಗೆ ಒಳಪಟ್ಟಿರುವಂತಹ ಕೆಲವು ಅಂಶಗಳಲ್ಲಿ ಏನಾದರೂ ವೈದ್ಯಕೀಯ ಕಾಲೇಜುಗಳು ತಪ್ಪು ಮಾಡಿದ್ದರೆ ಖಂಡಿತವಾಗಿಯೂ ಕೂಡ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ವಹಿಸುತ್ತೇವೆ.

**ಶ್ರೀ ಎಸ್.ರವಿಕುಮಾರ್**:-ಆ ರೀತಿಯ ಕಾಲೇಜುಗಳ affiliation ಅನ್ನು ರದ್ದು ಮಾಡುವುದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬಹುದಲ್ಲಾ? ಆ ಕಾಲೇಜುಗಳನ್ನು ಕಪ್ಪುಪಟ್ಟಿಗೆ ಸೇರಿಸಬಹುದಲ್ಲಾ? ಒಂದು ಕಾಲೇಜು ಸೇರಿಸಿ, ಎರಡು ಕಾಲೇಜು ಸೇರಿಸಿ. ಅಂತಹ ಕಾಲೇಜುಗಳನ್ನು ಬ್ಲಾಕ್ ಲಿಸ್ಟ್‌ಗೆ ಹಾಕಿ. ಅದರ ಬಗ್ಗೆ ಏನಾದರೂ ಒಂದು ಕ್ರಮ ಕೈಗೊಳ್ಳಿ.

**ಡಾ: ಕೆ.ಸುಧಾಕರ್:** ಮಾನ್ಯ ಸಭಾಪತಿಯವರೆ, ಪರಿಶೀಲಿಸುತ್ತೇನೆ.

**(ಮುಂದು)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(372) 15.03.2021 11.50 ಎಸ್‌ವಿ–ಆರ್‌ಎನ್**

**ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 126**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರ ನನ್ನ ಕೈ ಸೇರಿದೆ. ಆದರೆ ಈ ಉತ್ತರವನ್ನು ತಪ್ಪು ಉತ್ತರ ಎಂದು ಹೇಳಲಿಚ್ಛಿಸುತ್ತೇನೆ. ಆಹಾರ ಸುರಕ್ಷತೆ ಮತ್ತು ಮಾನದಂಡ ಕಾಯಿದೆ 2006ರ ಅಡಿಯಲ್ಲಿ ಒಳಪಡುವ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಯಾವುವು ಎನ್ನುವುದು ನನ್ನ ಮೊದಲನೆಯ ಪ್ರಶ್ನೆ ಆಗಿದೆ. ಅದರ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಇದು 2006ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಕಾಯ್ದೆಯಾಗಿದೆ. ಇದಕ್ಕೆ 2011ರಲ್ಲಿ rules and regulations ಮಾಡಿದ್ದಾರೆ. ಸುಮಾರು ಏಳು ಇಲಾಖೆಗಳಿಗೆ ಸಂಬಂಧಪಟ್ಟಂತೆ ಎಂಟು ಕಾಯ್ದೆಗಳನ್ನು regulate ಮಾಡಬೇಕಾಗಿದೆ. ಅವುಗಳ ಜಾರಿ ಮತ್ತು ಅನುಷ್ಠಾನ ಮಾಡಬೇಕಾಗಿದೆ. ಆರೋಗ್ಯ ಇಲಾಖೆಯಡಿಯಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಮಾನದಂಡ ಅಧಿಕಾರ ಅಂದರೆ ಎಫ್.ಎಸ್.ಎಸ್.ಎ.ಐ. ಎಂಬುದು, ಕೃಷಿ ಇಲಾಖೆಯಡಿಯಲ್ಲಿ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಕಾಯ್ದೆ AGMARK ಗೆ ಸಂಬಂಧಪಟ್ಟ ನೋಂದಣಿ ಕಾಯ್ದೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಡಿಯಲ್ಲಿ ಆಹಾರ ಕಲಬೆರಕೆ ನಿಷೇಧ ಕಾಯ್ದೆ, (ಪ್ರಸ್ತುತ ಇದನ್ನು repeal ಮಾಡಲಾಗಿದ್ದು, ಇನ್ನೂ Essential Commodities Act ಇದೆ. ಅದರಲ್ಲಿ regulations ಮಾಡಿದ್ದಾರೆ) ಅದೇ ರೀತಿ ಅಳತೆ ಮತ್ತು ತೂಕ ಮಾಪನ ಕಾಯ್ದೆ ಇದೆ. ಗ್ರಾಹಕರ ಹಿತರಕ್ಷಣಾ ಕಾಯ್ದೆ ಇದೆ. ಆಹಾರ ಪದಾರ್ಥ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಹಣ್ಣು ಸಂಸ್ಕರಣಾ ನಿಯಮಗಳು, ಮಾಂಸ ಮತ್ತು ಮಾಂಸದ ಪದಾರ್ಥಗಳ ಸಂಸ್ಕರಣಾ ನಿಯಮಗಳಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿಯಲ್ಲಿ ಶಿಶು ಹಾಲಿಗೆ ಪರ್ಯಾಯ ಪದಾರ್ಥವಾದಂತಹ ಹಾಲು ಕುಡಿಯುವ ಶೀಷೆಗಳು, ಶಿಶು ಆಹಾರ ತಯಾರಿಕೆಗೆ ಸಂಬಂಧಪಟ್ಟಂತಹ ಕಾಯ್ದೆಗಳಿವೆ. ಆಹಾರ ಪದಾರ್ಥಗಳಲ್ಲಿ ಏನಾದರೂ radiation ಇದ್ದರೆ irradiation ಮಾಡಬೇಕೆಂಬುದಾಗಿದೆ. ಇದಕ್ಕೆ ಸಂಬಂಧಪಟ್ಟಂತಹ ಒಂದು ಕಾಯ್ದೆ ಇದೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತಹ Trade in Endangered Species Act. ಒಂದು ಕಾಯ್ದೆ ಇದೆ. ಇದರಲ್ಲಿ Ecomorph ಮತ್ತು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಕಅಃ ಮಾಡುವಂತಹದ್ದು, Certificate ನೀಡುವುದು ಇದೆ. ಇವುಗಳ ಬಗ್ಗೆ ಉತ್ತರದಲ್ಲಿ ಏನೂ ಮಾಹಿತಿಯಿಲ್ಲ.

ಇನ್ನು ಉತ್ತರದೊಂದಿಗೆ ಅನುಬಂಧವನ್ನು ಲಗತ್ತಿಸಲಾಗಿದ್ದು, ಅದು ಆಂಗ್ಲಭಾಷೆಯಲ್ಲಿದೆ. Central Government's Food Safety and Standards Authority of India ಅವರು ಇದನ್ನು ಮಾಡಿದ್ದಾರೆ. ಇದಕ್ಕೂ ಕೂಡ ತಲೆಬರಹ ಇರುವುದಿಲ್ಲ. ಇದನ್ನು ದಯಮಾಡಿ ಮಾನ್ಯ ಸಚಿವರು ಪರಿಶೀಲಿಸಬೇಕು.

ನನಗೆ ತಪ್ಪು ಮಾಹಿತಿಯನ್ನು ನೀಡಲಾಗಿದ್ದು, ಈ ವಿಷಯವನ್ನು ಸವಿಸ್ತಾರವಾಗಿ ಚರ್ಚೆ ಮಾಡಬೇಕು. ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಪರಿವರ್ತಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ತಾವು ಲಿಖಿತ ರೂಪದಲ್ಲಿ ಕೊಡಿ. ಅದನ್ನು ನಾನು ಪರಿವರ್ತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಡಾ:ಸಿ.ಎನ್.ಅಶ್ವತ್ಥನಾರಾಯಣ(ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ದಿನಾಂಕ 15ನೇ ಮಾರ್ಚ್ 2021 ಸಮೂಹ–1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 138 ಪ್ರಶ್ನೆಗಳ ಪೈಕಿ 49 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, 138 ಪ್ರಶ್ನೆಗಳಿಗೆ ಕೇವಲ 49 ಪ್ರಶ್ನೆಗಳಿಗೆ ಉತ್ತರವನ್ನು ನೀಡಿದೆ ಎಂದರೆ ಉಳಿದ ಪ್ರಶ್ನೆಗಳ ಗತಿಯೇನು? ಸರ್ಕಾರದ ಕಾರ್ಯವೈಖರಿಯೇನು? ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ತಮ್ಮಲ್ಲಿ ಮನವಿ ಮಾಡಿಕೊಂಡು ಸಮಯವನ್ನು ಕೇಳಿರಬಹುದು. ಆದರೆ ಲಿಖಿತ ಮೂಲಕ ಕೇಳಿರುವ ಉಳಿದ ಪ್ರಶ್ನೆಗಳಿಗೆ ಉತ್ತರಗಳು ಬರುವುದೇ ಇಲ್ಲ.

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಯವರೇ, ಮೂರು ದಿನಗಳೊಳಗಾಗಿ ಉತ್ತರವನ್ನು ನೀಡಬೇಕೆಂದು ನಾನು ಈಗಾಗಲೇ ಹೇಳಿರುತ್ತೇನೆ. ಆದರೆ ಕೊಟ್ಟಿರುವುದಿಲ್ಲ. ಸಭೆಯು ಮುಗಿಯುವುದರೊಳಗಾಗಿ ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾದುದು ಸರ್ಕಾರದ ಜವಾಬ್ದಾರಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಪೀಠದಲ್ಲಿ ಕುಳಿತು ಸಾಕಷ್ಟು ಒಳ್ಳೆಯ ವಿಚಾರಗಳನ್ನು ಹೇಳುತ್ತೀರಿ. ಆದರೆ ಸರ್ಕಾರದವರಿಗೆ ಅದು ಅರ್ಥವಾಗಬೇಕಲ್ಲ?

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಯವರೇ, ಸಂಬಂಧಪಟ್ಟವರಿಗೆ ತಾವು ಸೂಕ್ತ ನಿರ್ದೇಶನವನ್ನು ನೀಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಸಭಾಪತಿಯವರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂಬ ಕುಗ್ರಾಮಕ್ಕೆ ಸಾರಿಗೆ ಸೌಲಭ್ಯ ಒದಗಿಸದೆ ಇರುವ ಬಗ್ಗೆ**

* * *

**ಶ್ರೀ ಮುನಿರಾಜು ಗೌಡ ಪಿ.ಎಂ. (ತುಳಸಿ)(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಕಾರವಾರ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂಬ ಕುಗ್ರಾಮವು ಬಸ್ಸಿನ ಸೌಲಭ್ಯವನ್ನು ಹೊಂದಿಲ್ಲ. ಇದರಿಂದ ಈ ಗ್ರಾಮದ ಮಕ್ಕಳು ಶಾಲೆಗೆ ಹೋಗಲು ಪ್ರತಿದಿನ 8 ಕಿ.ಮೀ. ನಡೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಸುಮಾರು 40 ಮಕ್ಕಳು ದಟ್ಟ ಕಾಡಿನ ನಡುವೆ ನಡೆದುಕೊಂಡು ಹೋಗಿ ಬರುವುದು ಒಂದು ಸಾಹಸವೇ ಸರಿ. ಈ ಮಕ್ಕಳು ನಡೆದುಕೊಂಡು ಶಾಲೆಗೆ ಹೋಗುವುದರಿಂದ ಮಕ್ಕಳು ಶಾಲೆಯ ಚಟುವಟಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಆಯಾಸದ ಕಾರಣ ಶಾಲೆಯ ಪಾಠ-ಪ್ರವಚನಗಳಲ್ಲಿ ಏಕಾಗ್ರತೆಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ. ರಾಷ್ಟ್ರೀಯ ಹೆದ್ದಾರಿ 206ರ ಮಹಿಮೆ ಕ್ರಾಸ್ ಎಂಬಲ್ಲಿಗೆ ತಲುಪಲು ಒಂದು ಗಂಟೆಗೂ ಹೆಚ್ಚು ಅವಧಿ ಬೇಕಾಗಿದೆ. ಈ ಮಹಿಮೆ ಗ್ರಾಮದಲ್ಲಿ ಪ್ರೌಢಶಾಲೆ ಇಲ್ಲದೆ ಇರುವುದರಿಂದ ಸುಮಾರು 20 ಕಿ.ಮೀ. ದೂರದ ಅಳ್ಳಂಕಿ, 25 ಕಿ.ಮೀ. ದೂರದ ಜಲವಳಕರ್ಕಿಗೆ ಹೋಗುವ ಅನಿವಾರ್ಯತೆ ಇದೆ. ಪದವಿ ಹಾಗೂ ಇನ್ನಿತರ ಸೌಲಭ್ಯಗಳಿಗೆ 40 ಕಿ.ಮೀ. ದೂರದ ಹೊನ್ನಾವರ ಪಟ್ಟಣವೇ ಅತಿ ಸಮೀಪದ ನಗರವಾಗಿದೆ. ಮಕ್ಕಳು ಶಾಲೆ ಬಿಟ್ಟ ಬಳಿಕ ಮನೆ ತಲುಪಲು ರಾತ್ರಿಯಾಗುತ್ತದೆ. ಈ ವಿದ್ಯಾರ್ಥಿಗಳಲ್ಲಿ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಒಬ್ಬಂಟಿಯಾಗಿ ಶಾಲೆಗೆ ಹೋಗಿ ಬರುವುದು ಅಸಾಧ್ಯವೇ ಸರಿ. ಇದರಿಂದ ಹೆಚ್ಚಿನ ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿದ ಉದಾಹರಣೆಗಳೂ ಇವೆ. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಮಾತಿದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ಸಲುವಾಗಿ ಮತ್ತು ಗ್ರಾಮದ ಇತರ ತುರ್ತು ಅಗತ್ಯಗಳಿಗಾಗಿ ಕೂಡಲೇ ಈ ಮಹಿಮೆ ಗ್ರಾಮಕ್ಕೆ ಬಸ್ಸಿನ ಸೌಲಭ್ಯವನ್ನು ಒದಗಿಸುವುದು ಅಗತ್ಯವಾಗಿದೆ. ಸಂಜೆ ಶಾಲೆ ಬಿಟ್ಟ ಬಳಿಕ ರಾತ್ರಿಯ ವೇಳೆಯಲ್ಲಿ ಹೆಣ್ಣುಮಕ್ಕಳು ಕಾಡು ದಾರಿಯಲ್ಲಿ ಮನೆಗೆ ಬರಬೇಕಾದ ಸಮಯದಲ್ಲಿ ಏನಾದರೂ ಅನಾಹುತವಾಗುವ ಮೊದಲೇ ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಚ್ಚೆತ್ತು ಕಾರವಾರ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಉಪ್ಪೋಣಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಮಹಿಮೆ ಎಂಬುವ ಕುಗ್ರಾಮಕ್ಕೆ ಬಸ್ಸಿನ ಸೌಲಭ್ಯ ಒದಗಿಸುವಂತೆ ಶೂನ್ಯವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಸುರೇಶ್ ಕುಮಾರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ಮಹಿಮೆ ಎನ್ನುವ ಗ್ರಾಮಕ್ಕೆ ಒಂದು ಕಾರ್ಯಕ್ರಮಕ್ಕಾಗಿ ಹೋಗಿದ್ದೇನೆ ಮತ್ತು ಅಲ್ಲಿನ ಮಕ್ಕಳ ಜೊತೆಯಲ್ಲಿಯೂ ಮಾತನಾಡಿದ್ದೇನೆ. ಆ ಶಾಲೆಯ ಪರಿಸ್ಥಿತಿ ಮತ್ತು ಅಗತ್ಯತೆ ಎರಡನ್ನೂ ನೋಡಿದ್ದೇನೆ. ಈ ವಿಷಯದ ಬಗ್ಗೆ ನಾನು ಈಗಾಗಲೇ ಸಾರಿಗೆ ಸಚಿವರ ಜೊತೆಯಲ್ಲಿ ಮಾತನಾಡಿದ್ದೇನೆ. ನಾವಿಬ್ಬರೂ ಸೇರಿ ಅದಕ್ಕೆ ಒಂದು ಪರಿಹಾರವನ್ನು ಹುಡುಕಿ, ಆ ಮಕ್ಕಳಿಗೆ ಸುಸೂತ್ರವಾಗಿ ಶಿಕ್ಷಣ ದೊರೆಯುವಂತಹ ಒಂದು ಕ್ರಮವನ್ನು ಕೈಗೊಳ್ಳುತ್ತೇವೆ.

**ಆ) ವಿಷಯ:– ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪ್ರಾರಂಭಿಸಿದ ನಾಗರಿಕ ಸಹಾಯವಾಣಿ ಕೇಂದ್ರವನ್ನು ಸ್ಥಗಿತಗೊಳಿಸದೆ ಜನಸಾಮಾನ್ಯರ ಹಿತದೃಷ್ಟಿಯಿಂದ ಮುಂದುವರೆಸುವ ಬಗ್ಗೆ**

* * *

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯದ ಜಿಲ್ಲೆ ಮತ್ತು ಉಪವಿಭಾಗ ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ಗ್ರಾಮೀಣ ಹಾಗೂ ನಗರ ಭಾಗದಿಂದ ಬರುವ ಬಡ ರೋಗಿಗಳಿಗೆ ಕ್ಲುಪ್ತ ಸಮಯದಲ್ಲಿ ವೈದ್ಯಕೀಯ ಸೇವೆ ದೊರಕಬೇಕು ಎನ್ನುವ ಸದುದ್ದೇಶದಿಂದ 2017ರಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ರಾಜ್ಯದ 50 ಕೇಂದ್ರಗಳಲ್ಲಿ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಆರಂಭಿಸಲಾಗಿರುತ್ತದೆ. ಪ್ರತಿ ಕೇಂದ್ರದಲ್ಲಿ ಒಬ್ಬ ವ್ಯವಸ್ಥಾಪಕ ಸೇರಿದಂತೆ 6 ಜನ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಟೆಂಡರ್ ಪಡೆದಿರುವ ಖಾಸಗಿ ಸಂಸ್ಥೆಗಳ ಹೊರಗುತ್ತಿಗೆಯಲ್ಲಿ ಸೇವೆ ಮಾಡುತ್ತಿದ್ದ ಈ ಸಿಬ್ಬಂದಿಗಳ ವೇತನ ಮತ್ತು ಇತರ ನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ 70% ಮತ್ತು ರಾಜ್ಯ ಸರ್ಕಾರದಿಂದ 30% ಅನುದಾನ ದೊರಕುತ್ತಿತ್ತು. ರೋಗಿಗಳಿಗೆ ಆರೋಗ್ಯ ಸೇವೆಯ ಮಾಹಿತಿ ನೀಡುವುದು ಅವರನ್ನು ಸಂಬಂಧಿಸಿದ ವೈದ್ಯರ ಬಳಿ ಕಳುಹಿಸುವುದು, ಪರೀಕ್ಷೆ ತಪಾಸಣೆಗೆ ಸಹಾಯ ಮಾಡುವುದು, ಅಗತ್ಯವಿದ್ದಲ್ಲಿ ತುರ್ತು ಆಂಬ್ಯುಲೆನ್ಸ್ ಸೇವೆ ಒದಗಿಸುವುದು, ರೋಗಿ ಮನೆಯವರೊಂದಿಗೆ ವೈದ್ಯ ಸಿಬ್ಬಂದಿಗಳೊಂದಿಗೆ ಸಮನ್ವಯತೆ ಸಾಧಿಸುವುದು ಮುಂತಾದ ಸೇವೆಗಳಿಂದ ಈ ಸಹಾಯ ಕೇಂದ್ರಗಳು ಜನರಿಗೆ ಉಪಯುಕ್ತ ಸೇವೆ ಸಲ್ಲಿಸುತ್ತಿದ್ದು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೋವಿಡ್ 19ರ ಸಂಕಷ್ಟದ ದಿನಗಳಲ್ಲಿ ಸರ್ಕಾರಿ ಆಸ್ಪತ್ರೆಯ ಕೊಂಡಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. 2020–21ನೇ ಸಾಲಿನಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ನಾಗರಿಕ ಸಹಾಯವಾಣಿ ಕೇಂದ್ರಗಳನ್ನು ಸ್ಥಗಿತಗೊಳಿಸಿ ಗ್ರಿವೆನ್ಸ್ ರಿಡ್ರೆಸಲ್ ವ್ಯವಸ್ಥೆಯಡಿ 104 ಸಹಾಯವಾಣಿಯಲ್ಲಿ ವಿಲೀನಗೊಳಿಸಲು ಮತ್ತು ಮೇರಾ ಹಾಸ್ಪಿಟಲ್ ಕಾರ್ಯಕ್ರಮದ ಮೂಲಕ ಇ–ಆಸ್ಪತ್ರೆಯಡಿ ಅನುಷ್ಠಾನಗೊಳಿಸಲು ಆದೇಶಿಸಲಾಗಿರುತ್ತದೆ. ಗ್ರಾಮೀಣ ಜನರಿಗೆ ಈ ಯಾಂತ್ರೀಕೃತ ಮತ್ತು ಸಾಫ್ಟ್‌ವೇರ್ ಆಧಾರಿತ ಸೇವೆಗಳಿಗಿಂತ ಮಾನವ ಸಂಪನ್ಮೂಲ ಕೇಂದ್ರಿತ ನಾಗರಿಕ ಸಹಾಯವಾಣಿ ಕೇಂದ್ರಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈಗಾಗಲೇ ಕಳೆದ 4 ವರ್ಷಗಳಿಂದ ಈ ಕೇಂದ್ರಗಳು ವ್ಯವಸ್ಥೆಯಲ್ಲಿರುವುದರಿಂದ ಇವುಗಳನ್ನು ಸ್ಥಗಿತಗೊಳಿಸದೆ ಮುಂದುವರೆಸಲು ಅಗತ್ಯ ಕ್ರಮ ವಹಿಸಬೇಕೆಂದು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

**ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ತಾನೇ ಈ ಶೂನ್ಯವೇಳೆ ಪ್ರಸ್ತಾವನೆಯು ನನ್ನ ಬಳಿ ಬಂದಿದೆ. ನಾನು ಇದಕ್ಕೆ ನಾಳೆ ಉತ್ತರ ಒದಗಿಸುತ್ತೇನೆ.

**ಸಭಾಪತಿಯವರು:–** ಆಯಿತು.

**(ಮುಂದು)**

**(373) 15.03.2021, 12.00. KG.VK**

**ಇ) ವಿಷಯ:–** ಬಿಬಿಎಂಪಿ ವ್ಯಾಪ್ತಿಯಲ್ಲಿನ ನಗರ ಯೋಜನಾ ವಿಭಾಗಗಳಲ್ಲಿ ಕಳೆದ 5 ವರ್ಷಗಳಲ್ಲಿ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ, ಸ್ವಾಧೀನ ಪ್ರಮಾಣ ಪತ್ರ ನೀಡುವಲ್ಲಿ ಆಗಿರುವ ಆಡಳಿತ ವೈಫಲ್ಯಗಳನ್ನು ಸಮಗ್ರ ತನಿಖೆಗೆ ಒಳಪಡಿಸುವ ಕುರಿತು

– – –

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಗರ ಯೋಜನೆ ವಿಭಾಗ ವ್ಯಾಪ್ತಿಯಲ್ಲಿ ಪರವಾನಿಗೆ ಪಡೆದ ವಸತಿ ಹಾಗೂ ವಸತಿಯೇತರ ಕಟ್ಟಡಗಳಿಗೆ ಸಂಬಂಧಿಸಿದಂತೆ ನಿಯಮಬಾಹಿರವಾಗಿ ಅಧಿಕಾರ ದುರುಪಯೋಗ ಪಡಿಸಿಕೊಂಡ ಪ್ರಕರಣದಲ್ಲಿ ಶ್ರೀ ದೇವೇಂದ್ರಪ್ಪ, ನಗರ ಯೋಜನಾ ಅಧಿಕಾರಿಗಳು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಲಂಚ ಸ್ವೀಕರಿಸುವ ಸಮಯದಲ್ಲಿ ಎ.ಸಿ.ಬಿ., ದಾಳಿಗೆ ಒಳಗಾಗಿರುವುದು ಮಾಧ್ಯಮಗಳಲ್ಲಿ ಈಗಾಗಲೇ ಬಿತ್ತರವಾಗಿರುತ್ತದೆ.

ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ಬರುವ ವಸತಿ ಹಾಗೂ ವಸತಿಯೇತರ ಕಟ್ಟಡಗಳ ಕಟ್ಟಡ ಮಂಜೂರಾಗಿ (ನಕ್ಷೆ ಸಹಿತ) ಪ್ರಾರಂಭಿಕ ಪ್ರಮಾಣ ಪತ್ರ (ಸಿಸಿ) ಹಾಗೂ ಸ್ವಾಧೀನ ಪಡಿಸಿಕೊಳ್ಳುವ ಪ್ರಮಾಣಪತ್ರ (ಓಸಿ) ನೀಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಿ.ಬಿ.ಎಂ.ಪಿ.,ಯ 8 ವಲಯಗಳಲ್ಲಿ ನಿರ್ದಿಷ್ಟವಾಗಿ 4,000 ಚದರ ಅಡಿ ವಿಸ್ತೀರ್ಣವುಳ್ಳ ನಿವೇಶನಗಳಿಗೆ ಹಾಗೂ ನೆಲ ಮತ್ತು ಮೂರು ಅಂತಸ್ತುಗಳಿರುವ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ವಲಯದಲ್ಲಿ ಪೂರಕ ಪರವಾನಗಿ ಹಾಗೂ ಪ್ರಮಾಣ ಪತ್ರಗಳು ನೀಡಬಹುದು ಮತ್ತು ಜಂಟಿ ನಿರ್ದೇಶಕರು (ದಕ್ಷಿಣ–ಉತ್ತರ) ನಗರ ಯೋಜನೆ ವಿಭಾಗದಿಂದ 4,000 ಚದರ ಅಡಿ ವಿಸ್ತೀರ್ಣ ಮೇಲ್ಪಟ್ಟ ನಿವೇಶನ ಹಾಗೂ ನೆಲ ಮತ್ತು 4 ಅಂತಸ್ತುಗಳಿಗಿಂತ ಮೇಲ್ಪಟ್ಟ ವಸತಿ ಹಾಗೂ ವಸತಿಯೇತರ ಕಟ್ಟಡಗಳಿಗೆ ಪರವಾನಿಗೆ ಹಾಗೂ ಪ್ರಮಾಣ ಪ್ರತಗಳನ್ನು ನೀಡಬಹುದಾಗಿರುತ್ತದೆ. ಪಾಲಿಕೆಯಲ್ಲಿ ನಡೆಯುವ ಈ ಪ್ರಕ್ರಿಯೆಯಲ್ಲಿ ಅಧಿಕಾರಿಗಳಿಂದ ಹಲವು ಕಟ್ಟಡ ನಿಬಂಧನೆಗಳು, ವಲಯ ನಿಯಮ ಹಾಗೂ ಭೂ–ಉಪಯೋಗ ನಿಯಮಗಳ ಉಲ್ಲಂಘನೆ ಆಗಿರಬಹುದಾದಂತಹ ಪ್ರಕರಣಗಳು ಭೌತಿಕವಾಗಿ ಪತ್ತೆ ಹಚ್ಚಬಹುದಾಗಿರುತ್ತದೆ.

ಆದ್ದರಿಂದ, ಈ ಹಿನ್ನೆಲೆಯಲ್ಲಿ ಬಿ.ಬಿ.ಎಂ.ಪಿ., 8 ವಲಯಗಳಲ್ಲಿ ಹಾಗೂ ಜಂಟಿ ನಿರ್ದೇಶಕರ (ದಕ್ಷಿಣ–ಉತ್ತರ) ನಗರ ಯೋಜನಾ ವಿಭಾಗಗಳ ಕಚೇರಿಯಿಂದ ಕಳೆದ 5 ವರ್ಷಗಳಿಂದ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ (ಸಿಸಿ) ಹಾಗೂ ಸ್ವಾಧೀನ ಪಡಿಸಿಕೊಳ್ಳುವ ಪ್ರಮಾಣ ಪತ್ರ (ಓಸಿ) ನೀಡುವಲ್ಲಿ ಆಗಿರಬಹುದಾದಂತಹ ಆಡಳಿತ ವೈಫಲ್ಯಗಳನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಲು ಪ್ರಸ್ತಾಪಿಸಿ ಅಗತ್ಯ ಮತ್ತು ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಮಂಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರ

**ಅ) ವಿಷಯ:-** ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತತೆ ನೀಡುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 04.03.2021 ರಂದು ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ)ವಿಷಯ:-** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿನ ಖಾಸಗಿ ಬಿ.ಇಡಿ ಕಾಲೇಜುಗಳಲ್ಲಿ ಸೀಟು ಮಾರಾಟ ದಂಧೆ ನಡೆಸುತ್ತಿರುವ ಕುರಿತು

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 05.03.2021 ರಂದು ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರರವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐ.ಟಿ ಮತ್ತು ಬಿ.ಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ:–** ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶಕ್ಕೆ ಬೆಂಕಿಬಿದ್ದು ಅರಣ್ಯ ನಾಶವಾಗುತ್ತಿರುವ ಕುರಿತು

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 09.03.2021 ರಂದು ಮಾನ್ಯ ಸದಸ್ಯರಾದ ಶ್ರೀ ಸಂದೇಶ್ ನಾಗರಾಜ್‌ರವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ವಿಷಯ:–** ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಡೊಮಗೇರಾ ಗ್ರಾಮವನ್ನು ನೂತನ ದಾಂಡೇಲಿ ತಾಲ್ಲೂಕಿಗೆ ಸೇರಿಸಬಾರದೆಂಬ ಕುರಿತು

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 9.3.2021 ರಂದು ಮಾನ್ಯ ಸದಸ್ಯರಾದ ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣರವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಮಾನ್ಯ ಕಂದಾಯ ಇಲಾಖೆಯ ಸಚಿವರ ಪರವಾಗಿ ಉತ್ತರವನ್ನು ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉ) ವಿಷಯ:–** ಕೊಡಗು ಜಿಲ್ಲೆ ತಿತಿಮತಿ ಗ್ರಾಮ ಪಂಚಾಯಿತಿ ಹಾಗೂ ಕಾನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಾಡಿಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಕಟ್ಟಲು ಅರಣ್ಯ ಇಲಾಖೆಯ ನಿಯಮಗಳು ಅಡಿಯಾಗುತ್ತಿರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 09.03.2021 ರಂದು ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿರವರು ಪ್ರಸ್ತಾಪಿಸಿದ್ದ ವಿಷಯಕ್ಕೆ ಮಾನ್ಯ ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ತಾವು ಮೊನ್ನೆ ದಿವಸ ಶೂನ್ಯವೇಳೆಯ ಪ್ರಶ್ನೆಗೆ ಇಂದು ಸೋಮವಾರ ಉತ್ತರ ಕೊಡಿ ಎಂದು ಮಾನ್ಯ ಸಭಾನಾಯಕರಿಗೆ ತಿಳಿಸಿದ್ದೀರಿ. ಆದರೆ, ಉತ್ತರ ಕೊಟ್ಟಿರುವುದಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದರು. ಅದಕ್ಕೆ ನಾನು ತಮಗೆ ಉತ್ತರವನ್ನು ಇಂದು ಕೊಡಬೇಕೆಂದು ಹೇಳಿದ್ದೆ. ದಯಮಾಡಿ ಈ ಪೀಠದಿಂದ ಹೇಳಿದ್ದನ್ನು ಸ್ವಲ್ಪ ಪಾಲಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ತರಿಸಿಕೊಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈ ದಿವಸ ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಮಾನ್ಯ ಸಚಿವರುಗಳ ಪಟ್ಟಿ ಈ ಕೆಳಕಂಡಂತೆ ಇದೆ:–

1. ಶ್ರೀ ಲಕ್ಷ್ಮಣ ಸಂಗಪ್ಪ ಸವದಿ, ಮಾನ್ಯ ಉಪ ಮುಖ್ಯಮಂತ್ರಿಗಳು (ಸಾರಿಗೆ ಸಚಿವರು)
2. ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ, ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು
3. ಡಾ॥ಕೆ.ಸಿ.ನಾರಾಯಣಗೌಡ, ಮಾನ್ಯ ಯುವಜನ ಸೇವೆ, ಕ್ರೀಡೆ, ಯೋಜನೆ, ಕಾರ್ಯಕ್ರಮ ಸಂಯೋಜನೆ, ಸಾಂಖ್ಯಿಕ ಸಚಿವರು
4. ಶ್ರೀ ಜೆ.ಸಿ.ಮಾಧುಸ್ವಾಮಿ, ಮಾನ್ಯ ಸಣ್ಣ ನೀರಾವರಿ ಸಚಿವರು (ವಿನಾಯಿತಿ ಕೋರಿದ್ದಾರೆ)
5. ಶ್ರೀ ಆರ್.ಶಂಕರ್, ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
6. ಶ್ರೀ ಬಿ.ಸಿ.ಪಾಟೀಲ್, ಮಾನ್ಯ ಕೃಷಿ ಸಚಿವರು

ಮಾನ್ಯ ಸಭಾನಾಯಕರೇ, ಅದೇರೀತಿ ಈ ದಿವಸ ಸದನದಲ್ಲಿ ಕಡ್ಡಾಯವಾಗಿ ಅಧಿವೇಶನ ಪ್ರಾರಂಭದಿಂದ ಮಧ್ಯಾಹ್ನದವರೆಗೆ ಹಾಜರಿರುವ ಅಧಿಕಾರಿಗಳ ಪಟ್ಟಿ ಈ ಕೆಳಕಂಡಂತೆ ಇದೆ:–

1. ಶ್ರೀ ರಾಜೇಶ್‌ಗೌಡ, ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ.
2. ಡಾ॥ ರವಿಶಂಕರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ಶ್ರೀ ಕೆ.ಎಲ್.ಸುಬ್ರಮಣ್ಯ, ಸರ್ಕಾರದ ಉಪ ಕಾರ್ಯದರ್ಶಿಗಳು, (ವಿಶ್ವವಿದ್ಯಾನಿಲಯಗಳು) ಶಿಕ್ಷಣ ಇಲಾಖೆ

4. ಶ್ರೀ ಬಿ.ಬಿ.ಹೇಮಣ್ಣ ಸರ್ಕಾರದ ಉಪ ಕಾರ್ಯದರ್ಶಿಗಳು, (ವಿಜ್ಞಾನ ಮತ್ತು ತಂತ್ರಜ್ಞಾನ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಮಾನ್ಯ ಸಭಾನಾಯಕರೇ, ಅದೇರೀತಿ ಈ ದಿವಸ ಸದನದಲ್ಲಿ ಕಡ್ಡಾಯವ್ವಾಗಿ ಮಧ್ಯಾಹ್ನದಿಂದ ಮುಕ್ತಾಯದವರೆಗೆ ಹಾಜರಿರುವ ಅಧಿಕಾರಿಗಳ ಪಟ್ಟಿ ಈ ಕೆಳಕಂಡಂತೆ ಇದೆ:-

1. ಶ್ರೀ ವಿ.ಅನ್ಬುಕುಮಾರ್, ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ
2. ಶ್ರೀ ಸಂಜಯ್ ಎಸ್.ಬಿಜ್ಜೂರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

3. ಶ್ರೀ ಆರ್.ಸೋಮಶೇಖರ್, ಸರ್ಕಾರದ ಅಪರ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ)
4. ಶ್ರೀಮತಿ ಪಿ.ಸುಶೀಲಾ, ಸರ್ಕಾರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಮಾನ್ಯ ಸಭಾನಾಯಕರೇ, ನಾನು ಇದನ್ನು ಪ್ರತಿದಿವಸ ಸದನದಲ್ಲಿ ಹೇಳುತ್ತಲೇ ಇದ್ದೇನೆ. ಆದರೆ, ಯಾರು ಸಹ ಹಾಜರು ಇರುವುದಿಲ್ಲ. ಮೊನ್ನೆ ದಿವಸ ಯಾವ ಸಚಿವರು ಸದನದಲ್ಲಿ ಹಾಜರು ಇರಲಿಲ್ಲ. ಹಾಗಾಗಿ, ಅಂದು ಸದನವನ್ನು ಮುಂದಡಲಾಯಿತು. ಇದು ತಮಗೂ ಗೊತ್ತಿದೆ. ದಯಮಾಡಿ, ಈಗಲಾದರೂ ಸಹ ಇದರ ಕಡೆ ಸರ್ಕಾರ ಗಮನಕೊಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**4. ವಿತ್ತೀಯ ಕಾರ್ಯಕಲಾಪ**

## 2021–22ನೇ ಸಾಲಿನ ಅಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರು ಮಾತನಾಡುವುದಕ್ಕೆ ಮುಂಚೆ ಸದನಕ್ಕೆ ಒಂದು ಮಾಹಿತಿಯನ್ನು ಕೊಡುತ್ತೇನೆ. ಇದನ್ನು ಎಲ್ಲಾ ಸದಸ್ಯರು ಗಮನಿಸಬೇಕು. ಇಂದಿನಿಂದ ಅಂದರೆ, ದಿನಾಂಕ 15.03.2021 ರಿಂದ 26.03.2021 ರವರೆಗೆ ಒಟ್ಟು 10 ದಿವಸಗಳ ಕಾಲ 2021–22ನೇ ಸಾಲಿನ ಅಯವ್ಯಯದ ಮೇಲೆ ಸಾಮಾನ್ಯ ಚರ್ಚೆಯನ್ನು ನಡೆಸಲು ಬಿಎಸಿ ಕಮಿಟಿಯಲ್ಲಿ ನಿರ್ಧರಿಸಲಾಗಿದೆ. ಅದರಂತೆ, ಪ್ರತಿದಿವಸ 4 ಗಂಟೆಗಳ ಕಾಲ ಚರ್ಚೆಯನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ. ಸುಮಾರು 40 ಗಂಟೆಗಳ ಕಾಲ ಬಜೆಟ್ ಮೇಲೆ ಚರ್ಚೆ ನಡೆಸಲು ಎಲ್ಲಾ ಸದಸ್ಯರಿಗೆ ಅವಕಾಶ ಇದೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಸಚಿವರಾದ 5 ಜನರು, ಸಭಾಪತಿಯವರು, ಉಪ ಸಭಾಪತಿಯವರು ಹಾಗೂ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಉಳಿದ 67 ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಸದಸ್ಯರಿಗೆ ಸುಮಾರು 30 ನಿಮಿಷಗಳ ಕಾಲಾವಕಾಶವನ್ನು ನಿಗದಿಪಡಿಸಲಾಗಿದೆ. ಹೀಗಾಗಿ, ಭಾರತೀಯ ಜನತಾ ಪಕ್ಷದ 26 ಸದಸ್ಯರಿಗೆ 30 ನಿಮಿಷಗಳಂತೆ ಒಟ್ಟು 13 ಗಂಟೆಗಳು ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ 28 ಸದಸ್ಯರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತು ಪಡಿಸಿ ಸುಮಾರು 14 ಗಂಟೆಗಳ ಕಾಲ ಹಾಗೂ ಜೆ.ಡಿ(ಎಸ್) ಪಕ್ಷದ 12 ಸದಸ್ಯರಿಗೆ ಸುಮಾರು 6 ಗಂಟೆಗಳ ಕಾಲಾವಕಾಶವನ್ನು ನೀಡಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸ್ವಲ್ಪ mistake ಆಗಿದೆ ಎಂದು ಕಾಣುತ್ತದೆ. ಏಕೆಂದರೆ, ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಎಂದು ಇದೆ...

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಮ್ಮನ್ನು ಹೊರತುಪಡಿಸಿ ಎಂದರೆ, ತಮಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ free ಬಿಟ್ಟಿದೆ ಎಂದು ಅರ್ಥ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಲ್ಲಿ ಏನಾಗಿದೆ ಎಂದರೆ, ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಎಂದು ಇಲ್ಲ. ಹಾಗಾಗಿ, ಅದನ್ನು ಸರಿಮಾಡಿಬಿಡಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಆಯಿತು ಬಿಡಿ. ತಾವು ಇಷ್ಟೊಂದು ಕಾಳಜಿಯಾಗಿ ಇರುತ್ತೀರಿ ಎಂದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರುಗಳೇ, ನಿಮಗೆ ನೀಡಿರುವಂತಹ ಸಮಯದೊಳಗೆ ಮಾತನಾಡಿ ಮುಗಿಸಬೇಕು. ಅದು ನಿಮ್ಮ ನಿಮ್ಮ ಜವಾಬ್ದಾರಿ. ಪಕ್ಷದ ನಾಯಕರೇ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಒಬ್ಬರೇ ಮಾತನಾಡಬಹುದು ಇಲ್ಲವೆಂದರೆ, 20 ಜನ ಸದಸ್ಯರಾದರೂ ಸಹ ಮಾತನಾಡಬಹುದು. ಅದು ನನಗೆ ಗೊತ್ತಿಲ್ಲ. ಇಷ್ಟು ಸಮಯವೆಂದು ನಿಗದಿ ಮಾಡಿದೆ. ಅಷ್ಟು ಸಮಯದಲ್ಲಿ ಮಾತನಾಡಿ ಮುಗಿಸಬೇಕು. ಅಷ್ಟು ಸಮಯವಾದ ಮೇಲೆ ನಾನು allow ಮಾಡುವುದಿಲ್ಲ. ಮಾನ್ಯ ಹರಿಪ್ರಸಾದ್‌ರವರೇ, ತಾವೀಗ ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಬಜೆಟ್‌ನ್ನು ಮಂಡನೆ ಮಾಡಿದ್ದು, ಸದರಿ ಬಜೆಟ್‌ನ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ತಮಗೂ ಮತ್ತು ನಮ್ಮ ವಿರೋಧ ಪಕ್ಷದ ನಾಯಕರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು 111 ಪುಟಗಳಲ್ಲಿ ಈ ಬಜೆಟ್ ಬಗ್ಗೆ ಬಹಳ ವಿಸ್ತಾರವಾಗಿ ಪ್ರಸ್ತಾವವನ್ನು ಮಾಡಿದ್ದಾರೆ. ಕೇಂದ್ರ ಮತ್ತು ರಾಜ್ಯದ ಬಜೆಟ್ ಬಗ್ಗೆ ಜನಸಾಮಾನ್ಯರು ಬಹಳ ಕಾತುರದಿಂದ ಕಾಯುತ್ತಿರುತ್ತಾರೆ. ಏಕೆಂದರೆ, ಜನಸಾಮಾನ್ಯರ ಸಂಕಷ್ಟಗಳಿಗೆ ಯಾವ ರೀತಿ ಪರಿಹಾರ ಸಿಗಬಹುದು ಎನ್ನುವ ವಿಚಾರದಲ್ಲಿ ನೋಡುತ್ತಿರುತ್ತಾರೆ. ನಮ್ಮ ರಾಷ್ಟ್ರದ ಬಜೆಟ್ ಮಂಡನೆಯ ಇತಿಹಾಸವನ್ನು ನೋಡಿದಾಗ, 1860ನೇ ಇಸವಿಯಲ್ಲಿ James Wilson, ಇವರು ಬ್ರಿಟಿಷ್ ಮಹಾರಾಣಿಯ ಕಾರ್ಯಬಾರಿಯಾಗಿದ್ದು, ಈ ದೇಶದಲ್ಲಿ ಪ್ರಥಮ ಬಜೆಟ್‌ನ್ನು ಮಂಡಿಸಿದ್ದರು. ತದನಂತರ ಮೊದಲನೇ ಮಹಾಯುದ್ಧ ಮತ್ತು ಪ್ಲೇಗ್ ಬಂದಂತಹ ಬಹಳ ಸಂಕಷ್ಟದ ಸ್ಥಿತಿಯಲ್ಲಿ ಈ ಬಾರಿ ಕೇಂದ್ರ ಮತ್ತು ರಾಜ್ಯದ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಈ ಬಜೆಟ್‌ನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದ ಅಭಿವೃದ್ಧಿ ನೋಟ ಹೀಗಿದೆ ಎಂದು ಹೇಳಿದ್ದಾರೆ. ಇದನ್ನು ಸಂಪೂರ್ಣವಾಗಿ ನೋಡಿದಾಗ, ಇದು ಯಾವ ರೀತಿಯ ಬಜೆಟ್ ಎಂದು ತಿಳಿಯುತ್ತದೆ. ಏಕೆಂದರೆ, ಕೇಂದ್ರ ಸರ್ಕಾರದಲ್ಲಿ ಬಜೆಟ್‌ನ್ನು ಮಂಡನೆ ಮಾಡುವಾಗ ಸಂವಿಧಾನದ 112ನೇ ಅನುಚ್ಛೇದದ ಅನುಗುಣವಾಗಿ ಬಜೆಟ್ ಮಂಡನೆಯಾಗುತ್ತದೆ. ಅದು ರಾಜ್ಯದಲ್ಲಿ ರಾಜ್ಯ ನೀತಿಯ ನಿರ್ದೇಶಕ ತತ್ವಗಳು Directive Principles ಅಡಿಯಲ್ಲಿ ಬರುತ್ತದೆ. Directive Principles ನಲ್ಲಿ ಈ ರೀತಿ ಹೇಳುತ್ತದೆ. "ಜನತೆಯ ಕಲ್ಯಾಣೋನ್ನತ್ತಿಗಾಗಿ ರಾಜ್ಯವು ಸಾಮಾಜಿಕ ವ್ಯವಸ್ಥೆಯನ್ನು ಸುನಿಶ್ಚಿತನಗೊಳಿಸುವುದು. ರಾಜ್ಯವು ರಾಷ್ಟ್ರೀಯ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವು ವ್ಯಕ್ತವಾಗಿರುವ ಸಾಮಾಜಿಕ ವ್ಯವಸ್ಥೆಯನ್ನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಸುನಿಶ್ಚಿತಗೊಳಿಸುವ ಮತ್ತು ಸಂರಕ್ಷಣೆ ಮಾಡುವ ಮೂಲಕ ಜನತೆಯ ಕಲ್ಯಾಣವನ್ನು ಉನ್ನತಿಗೊಳಿಸಲು ಪ್ರಯತ್ನಿಸತಕ್ಕದ್ದು; ರಾಜ್ಯವು ವಿಶೇಷವಾಗಿ ಆದಾಯದಲ್ಲಿನ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಸಮಾನತೆಯನ್ನು ಕಡಿಮೆ ಮಾಡಲು ಪ್ರಯತ್ನಿಸತಕ್ಕದ್ದು ಮತ್ತು ವ್ಯಕ್ತಿ, ವ್ಯಕ್ತಿಗಳಲ್ಲಿ ಮಾತ್ರವಲ್ಲದೇ, ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿರುವ ಜನರ ಗುಂಪುಗಳಲ್ಲಿ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿರುವ ಅಸಮಾನತೆಯನ್ನು ತೆಗೆದುಹಾಕಲು ಪ್ರಯತ್ನಿಸತಕ್ಕದ್ದು;

ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಪುಸ್ತಕದಲ್ಲಿ **'ಅಳುಕಿದೆ ಅವನತಿಯ ದಾರಿ, ಆತ್ಮವಿಶ್ವಾಸ ಯಶಸ್ಸಿನ ಪರಿ'** ಎಂದು ಹೇಳಿದ್ದಾರೆ. ಅಳುಕಿದೆ ಅಳುಕು ಇವೆಲ್ಲಾ ಮಾನಸಿಕ ಸ್ಥೈರ್ಯ ಇಲ್ಲದಾಗ ಉಂಟಾಗುತ್ತದೆ. ಸುಳ್ಳು, ಮೋಸ ಎಸಗಿದಾಗ ಅಳುಕಿದೆ ಆವರಿಸಿಕೊಳ್ಳುತ್ತದೆ, ಸತ್ಯ ಪ್ರತಿಪಾದಿಸಿದರೆ ನ್ಯಾಯವಾಗಿ ನಡೆದುಕೊಂಡರೆ ಆತ್ಮವಿಶ್ವಾಸ ತನ್ನಿಂದ ತಾನೇ ಉಂಟಾಗುತ್ತದೆಂದು ಇದರ ಅರ್ಥ. ಮೊನ್ನೆ ದಿವಸ ತಮ್ಮ ಅನುಮತಿಯ ಮೇರೆಗೆ ಮಾನ್ಯ ಸದಸ್ಯರಾದ ಹಾಗೂ ನನ್ನ ಗೆಳೆಯರಾದ ಶ್ರೀ ವಿಶ್ವನಾಥ್‌ರವರು ಬಜೆಟ್ ಮೇಲೆ ಬಹಳ ಸವಿಸ್ತಾರವಾಗಿ ಮಾತನಾಡುವಂತಹ ಸಂದರ್ಭದಲ್ಲಿ ಬಹಳ ಮಾರ್ಮಿಕವಾಗಿ ಮಾತನಾಡಿದರು. ಆದರೆ, ಮೊದಲು ಸಾಂಪ್ರದಾಯಿಕವಾಗಿ ವಿರೋಧ ಪಕ್ಷದ ನಾಯಕರು ಬಜೆಟ್ ಮೇಲೆ ಮಾತನಾಡಬೇಕು. ಆದರೆ ಅವತ್ತು ಕಾರಣಾಂತರಗಳಿಂದ ಮಾನ್ಯ ವಿಶ್ವನಾಥ್‌ರವರು ಮಾತನಾಡಿದರು. ಮಾನ್ಯ ಸದಸ್ಯರು ಬಜೆಟ್‌ಗೆ ಬೆಂಬಲವನ್ನು ಕೊಟ್ಟರೋ ಅಥವಾ ವಿರೋಧ ಮಾಡಿದರೋ ಎನ್ನುವ ಬದಲು ಅದರಲ್ಲಿನ ಲೋಪದೋಷಗಳೇನಿವೆ ಎನ್ನುವ ವಿಚಾರಗಳನ್ನು ಸದನದ ಮುಂದೆ, ಸದನದ ಮೂಲಕ ಜನಸಾಮಾನ್ಯರಿಗೆ ತಿಳಿಸಿದರು.

**(ಮುಂದು)**

**(374)15-03-2021(12-10)ಎಂವಿ-ವಿಕೆ**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ನಾನು ಹೇಳುವುದು ಇಷ್ಟೆ. ಅವರ ಮುಖ್ಯ ಅಂಶವೇನೆಂದರೆ, ರಾಜ್ಯದಲ್ಲಿ ಹಣಕಾಸಿನ ಮಂತ್ರಾಲಯ ಮಾನ್ಯ ಮುಖ್ಯಮಂತ್ರಿಯವರ ಜೊತೆ ಇರಬಾರದು. ಅದು ಪ್ರತ್ಯೇಕವಾಗಿ ಇರಬೇಕೆಂದು, ಅವರ ಬಹಳಷ್ಟು ಅನಿಸಿಕೆಗಳನ್ನು ಹೇಳಿದ್ದಾರೆ. ಅದು ಹೊಸದೇನು ಅಲ್ಲ. ಕೇಂದ್ರದಲ್ಲಿ ಪ್ರಧಾನ ಮಂತ್ರಿ ಮತ್ತು ಹಣಕಾಸು ಸಚಿವರು ಬೇರೆ ಬೇರೆ ಇರುತ್ತಾರೆ

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರಾದ ಶ್ರೀ ಎಂ.ಕೆ.ಪ್ರಾಣೇಶ್‌ರವರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ, ಅದು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬಂದಿದೆ ಮತ್ತು ಅದರಿಂದ ಏನು ಒಳ್ಳೆಯದಾಗಿದೆ ಎಂಬುದನ್ನು ತಾವು ನೋಡಬೇಕಾಗುತ್ತದೆ. ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾಗಿ ಇರಬಾರದು ಎಂಬುದೇನೂ ಇಲ್ಲ. ಅವರು ಹಣಕಾಸು ಸಚಿವರಾಗಿದ್ದರೂ ಸಹ ಒಳ್ಳೆಯ ಸಲಹೆಗಳನ್ನು ತೆಗೆದುಕೊಳ್ಳುವುದು ಬಹಳ ಮುಖ್ಯ. ಜನರ ನಿತ್ಯ ಜೀವನದ ಮೇಲೆ ಬಹಳ ಪರಿಣಾಮ ಬೀರುವಂತಹ ಈ ಒಂದು ಬಜೆಟ್ ವಿಚಾರದಲ್ಲಿ ಇದು ಬಹಳ ಮುಖ್ಯ. ಕೇಂದ್ರ ಸರ್ಕಾರದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ವಿಶ್ವನಾಥ್‌ರವರು ಇದ್ದಿದ್ದರೆ ಚೆನ್ನಾಗಿರುತಿತ್ತು. ಕೇಂದ್ರ ಸರ್ಕಾರದಲ್ಲಿ ಹಣಕಾಸು ಸಚಿವರಿಗೆ ಆರ್ಥಿಕ ಸಲಹೆಗಾರರು ಇರುತ್ತಾರೆ. ಅವರ ಒಂದು ಸಲಹೆಗಳ ಮೇಲೆ ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು. ಈ ಹಿಂದೆ ಕೇಂದ್ರ ಸರ್ಕಾರದಲ್ಲಿ ಬಹಳಷ್ಟು ಆರ್ಥಿಕ ಸಲಹೆಗಾರರು ಇದ್ದರು. ಅಂದರೆ, ಮೊದಲು ಶ್ರೀ ಅರವಿಂದ ಸುಬ್ರಹ್ಮಣ್ಯಂರವರು ಇದ್ದರು. ಅವರನ್ನು ಕಾಂಗ್ರೆಸ್ ಪಕ್ಷದವರು ನೇಮಕ ಮಾಡಿದ್ದರು ಎಂದು ರಾಜೀನಾಮೆ ಕೊಟ್ಟು ಹೋಗಿರಬಹುದು. ಆಮೇಲೆ ಶ್ರೀ ಊರ್ಜಿತ್ ಪಟೇಲ್ ಮತ್ತು ಶ್ರೀ ಸುರ್ಜಿತ್ ಭಲ್ಲಾ ಇವರೆಲ್ಲರೂ ಸಹ ಭಾರತೀಯ ಜನತಾ ಪಕ್ಷದ ಮಾನ್ಯ ಪ್ರಧಾನ ಮಂತ್ರಿಯವರ ಗುಜರಾತ್ ರಾಜ್ಯದಿಂದ ಬಂದಿರುವಂತಹ ಆರ್ಥಿಕ ಸಲಹೆಗಾರರು. ಇವರುಗಳು ಸಹ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಹೋದರು. ಅದರ ಜೊತೆಗೆ ನೊಬೆಲ್ ಪ್ರಶಸ್ತಿ ವಿಜೇತರಾದಂತಹ ಶ್ರೀ ಅಮರ್ತ್ಯ ಕೆ. ಸೇನ್‌ರವರು ಮತ್ತು ಶ್ರೀ ಅಭಿಜಿತ್ ಬ್ಯಾನರ್ಜಿಯವರು ತಮ್ಮ ಸಲಹೆಗಳನ್ನು ನೀಡಿದಾಗ, ಆ ಸಲಹೆಗಳನ್ನು ಸರ್ಕಾರ ಎಷ್ಟರ ಮಟ್ಟಿಗೆ ತೆಗೆದುಕೊಂಡಿದೆ ಎಂಬುದು ನಮಗೆ ಗೊತ್ತಿದೆ. ಆದುದರಿಂದ ಕೇವಲ ಆರ್ಥಿಕ ಸಲಹೆಗಾರರು ಇದ್ದರೆ ಅಥವಾ ಹಣಕಾಸು ಸಚಿವರು ಬೇರೆಯವರು ಇದ್ದರೆ ಮಾತ್ರ ಒಂದು ಒಳ್ಳೆಯ ಬಜೆಟ್ ಬರುತ್ತದೆ ಎಂಬುದೇನು ಇಲ್ಲ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸರ್ವಜ್ಞರ ಕೆಲವು ವಚನಗಳನ್ನು ಹೇಳಿದರು. ಅದಕ್ಕೆ ನಾನು ಸಹ ಒಂದೆರಡು ವಚನಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**"ಮೂರ್ಖನಿಗೆ ಬುದ್ಧಿಯನು ನೂರ್ಕಾಲ ಪೇಳಿದರೂ**
**ಗೋರ್ಕಲ್ಲ ಮೇಲ್ ಮಳೆಗರೆದರೆ**
**ಆ ಕಲ್ಲು ನೀರು ಕುಡಿವುದೆ ಸರ್ವಜ್ಞ॥"**

ಯಾರಾದರೂ ಬುದ್ಧಿ ಹೇಳಿದ್ದನ್ನು ಅವರು ಕೇಳಿದರೆ ಬಹಳ ಸಂತೋಷವಾಗುತ್ತದೆ. ಅವರು ಅದನ್ನು ಕೇಳಲಿಲ್ಲವೆಂದರೆ ಏನು ಮಾಡುವುದಕ್ಕೆ ಆಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದು ಅಲ್ಲದೆ ಈ ಬಾರಿಯ ಬಜೆಟ್‌ನಲ್ಲಿ ಮೊದಲನೆ ವಲಯವೆಂದರೆ ಕೃಷಿ ಮತ್ತು ಪೂರಕ ಚಟುವಟಿಕೆಗಳು; ಅವರು Economic Survey Report ಅನ್ನು ಸಹ ನೀಡಿದ್ದಾರೆ. ತಾವು ಇದನ್ನು ನೋಡಿದಾಗ, ಕೃಷಿ ವಲಯದ ಉದ್ಯಮದಲ್ಲಿ ಶೇಕಡಾ 6.4ರ ಗಣನೀಯ ಬೆಳವಣಿಗೆ ಉಂಟಾಗಿದೆ. ಆದರೆ, ಬಜೆಟ್ allocation ಅನ್ನು ನೋಡಿದಾಗ ಅದು ಶೇಕಡಾ –17ರಷ್ಟು ಇದೆ. ಅಂದರೆ ರೈತರಿಗೆ ಯಾವ ರೀತಿ ಸಹಾಯಕರಾಗಿದ್ದಾರೆ ಎಂಬುದು ಈ ಬಜೆಟ್‌ನಲ್ಲಿ ಬಹಳ ಸ್ಪಷ್ಟವಾಗಿ ಕಾಣುತ್ತಿದೆ. Medium-Term Fiscal Plan 2020-21 ರಲ್ಲಿ ನೋಡಿದಾಗ, ಅದರಲ್ಲಿ ಸುಮಾರು 2.4ರಷ್ಟು ಕಡಿಮೆಯಾಗಿದೆ. ಶೇಕಡಾ 6.4 ಅನ್ನು ಅಭಿವೃದ್ಧಿಯಲ್ಲಿ ತೋರಿಸಿದ್ದಾರೆ. ಆದರೂ ಸಹ ರೈತರು ಸಂಕಷ್ಟ ಸ್ಥಿತಿಯಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು, 2023ರ ಹೊತ್ತಿಗೆ ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಿ ಹಲವಾರು ಕ್ರಮಗಳನ್ನು ಕೈಗೊಂಡಿದೆ ಎಂದು. ಆದರೆ, ಬಜೆಟ್ ಹಂಚಿಕೆಯನ್ನು ನೋಡಿದಾಗ, ಇದನ್ನು ಯಾವ ರೀತಿ ದ್ವಿಗುಣಗೊಳಿಸುತ್ತಾರೆ ಎಂಬುದು ಗೊತ್ತಿಲ್ಲ. ಆದ್ದರಿಂದ, ಇದು ಕೇವಲ ಬಡವರ ವಿರೋಧಿ ಬಜೆಟ್ ಅಲ್ಲ. ಇದು ರೈತರ ವಿರೋಧಿ ಬಜೆಟ್ ಸಹ. ಈಗ ಬಹಳಷ್ಟು ಬದಲಾವಣೆಗಳಾಗಿದೆ ಎಂದು ಮಾನ್ಯ ಸದಸ್ಯರಾದ ಹೆಚ್.ವಿಶ್ವನಾಥ್‌ರವರು ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ಅವರು ವಿಧಾನಸೌಧವನ್ನು ಒಂದು ಸುಂದರಿಗೆ ಹೋಲಿಸುತ್ತಾ, ತಮ್ಮ ಭಾಷಣವನ್ನು ಪ್ರಾರಂಭ ಮಾಡಿದರು. ಹೌದು, ಅದು ನಿಜ. ನಾವು ವಿಧಾನಸೌಧದಲ್ಲಿ ಬಹಳಷ್ಟು ಬದಲಾವಣೆಗಳನ್ನು ನೋಡಿದ್ದೇವೆ. ಕಾರಣವೇನೆಂದರೆ, ನಾವೆಲ್ಲರೂ ಸಹ ಅದು ಅಂತಹ ಪಾರ್ಟಿ, ಇಂತಹ ಪಾರ್ಟಿ ಎಂದು ಅಲ್ಲ. ಇದಕ್ಕೆ ಎಲ್ಲರೂ ಸಹ ಕಾರಣರು. ಈಗ ಎಷ್ಟು ಬದಲಾವಣೆಯಾಗಿದೆ ಎಂದು ಹೇಳಿದರೆ, ನಾವೆಲ್ಲರೂ ಸಹ ಸಣ್ಣ ವಯಸ್ಸಿನಲ್ಲಿ ಯುವ ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆಗಳಲ್ಲಿ ಇದ್ದಾಗ, ಪುಡಾರಿಗಳು ಎಂದು ಕರೆಯುತ್ತಿದ್ದರು. ಆದರೆ, ಅದು ಬರುತ್ತಾ ಬರುತ್ತಾ ಬದಲಾವಣೆಯಾಗಿ ದಲ್ಲಾಳಿಗಳಾಗಿದೆ ಎಂದು ಮಾನ್ಯ ಸದಸ್ಯರಾದ ಹೆಚ್.ವಿಶ್ವನಾಥ್‌ರವರು ಹೇಳಿದರು. ಆಗ ಮೊದಲು, ಗುಣ ನೋಡಿ ಓಟು ನೀಡುತ್ತಿದ್ದರು. ಆದರೆ, ಈಗ ಹಣ ನೋಡಿ ಓಟು ನೀಡುತ್ತಾರೆ. ಆಗ ನೀತಿ ನೋಡಿ ಓಟು ನೀಡುತ್ತಿದ್ದರು. ಆದರೆ, ಈಗ ಜಾತಿ ನೋಡಿ ಓಟು ನೀಡುತ್ತಿದ್ದಾರೆ. ಈಗ ಬದಲಾವಣೆಗಳಾಗಿವೆ. ಬಹುಶಃ ರಾಜಕಾರಣದಲ್ಲಿರುವಂತಹ ನಮ್ಮಂತಹವರ ನಡೆ ಮತ್ತು ನುಡಿಯೇ ಜನಸಾಮಾನ್ಯರಲ್ಲಿ ರಾಜಕಾರಣಿಗಳ ಬಗ್ಗೆ ಒಂದು ರೀತಿಯ ತುಚ್ಛ ಭಾವನೆ ಮೂಡಿಸಲು ಕಾರಣವಾಗಿರಬಹುದೇನೋ ಎಂದು ನನಗೆ ಅನಿಸುತ್ತದೆ. ಈಗ ಬದಲಾವಣೆಗಳು ಯಾವ ರೀತಿಯಾಗಿದೆ ಎಂದರೆ, ಮಾನ್ಯ ಸಭಾನಾಯಕರು ಮತ್ತಿತರ ನಾಯಕರು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿರುತ್ತಾರೆ, ಸುಮಾರು 70 ವರ್ಷಗಳ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಏನೂ ಮಾಡಿಲ್ಲವೆಂದು. ಆಗಿನ ಕಾಲದಲ್ಲಿ, ವಿಜ್ಞಾನವೆಂದು ಹೇಳುತ್ತಿದ್ದೆವು. ಆದರೆ, ಈಗ ವಿಜ್ಞಾನವೆಂದು ಹೇಳಿದರೆ, ಅದು ಹಿಂದು–ಮುಸ್ಲಿಂ. ಆಗಿನ ಕಾಲದಲ್ಲಿ ತಂತ್ರಜ್ಞಾನವೆಂದು ಹೇಳುತ್ತಿದ್ದೆವು. ಆದರೆ, ಈಗ ಮಂದಿರ–ಮಸೀದಿ ಹೇಳುತ್ತೇವೆ. ಆಗ ಜಿಡಿಪಿ ಎಂದು ಹೇಳುತ್ತಿದ್ದೆವು. ಆದರೆ, ಈಗ ಕೇವಲ Statue ಗಳಾಗಿದೆ. ಈಗ ಉದ್ಯೋಗವೆಂದು ಹೇಳಿದರೆ, ಅದು ದನಕರುಗಳಾಗಿದೆ. ವ್ಯಾಪಾರವೆಂದು ಹೇಳಿದರೆ, ಅದು ದನದ ಮಾಂಸವಾಗಿದೆ. ಆರೋಗ್ಯವೆಂದು ಹೇಳಿದರೆ, ಅದು ಪಾಕಿಸ್ತಾನವಾಗಿದೆ. ಸ್ನೇಹಿತರು ಎಂದರೆ, ಲವ್ ಜಿಹಾದ್ ಆಗಿದೆ. ಯೂನಿಟಿ ಎಂದು ಹೇಳಿದರೆ, ಅದು ಹಿಂದು ರಾಷ್ಟ್ರವಾಗಿರುವುದನ್ನು ನೋಡುತ್ತೇವೆ. ನಾವು ಬಹಳಷ್ಟು ಬದಲಾವಣೆಗಳಾಗಿರುವುದನ್ನು ನೋಡುತ್ತಿದ್ದೇವೆ. ನಾನು ಈ ಬಜೆಟ್ ಮೇಲೆ ಮಾತನಾಡುವಾಗ...

**ಉಪ ಸಭಾಪತಿಯವರು:–** ಈಗ ಆರೋಗ್ಯವೆಂದರೆ ಪಾಕಿಸ್ತಾನ ಎನ್ನುವುದನ್ನು ತಾವು ಸ್ವಲ್ಪ ವಿಶ್ಲೇಷಣೆ ಮಾಡಿ ಹೇಳಿ. ಏಕೆಂದರೆ, ತಾವು ಪಾಕಿಸ್ತಾನವೆಂದು ಹೇಳಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆಯಿತು, ನಾನು ಅದನ್ನು ಕೊನೆಯಲ್ಲಿ ವಿಶ್ಲೇಷಣೆ ಮಾಡುತ್ತೇನೆ. ಈಗ ದೇಶದ ಆರೋಗ್ಯವೆಂದರೆ, ಇದರಲ್ಲಿ ಸ್ವಾಭಿಮಾನ, ಸಾಮರಸ್ಯದಿಂದ ಮತ್ತು ಭ್ರಾತೃತ್ವದಿಂದ ಬಾಳಿರತಕ್ಕಂಥ ರಾಷ್ಟ್ರದಲ್ಲಿ, ಪದೇ ಪದೇ ಯಾವುದೇ ವಿಚಾರ ಬಂದರೂ ಕೂಡ ಮೊದಲು, ಇದಕ್ಕೆ ಮಾನ್ಯ ಜವಾಹರಲಾಲ್ ನೆಹರುರವರು ಕಾರಣವೆಂದು ಹೇಳುತ್ತಿದ್ದರು. ಮಾನ್ಯ ಜವಾಹರಲಾಲ್ ನೆಹರು ಆದಮೇಲೆ, ಕಾಂಗ್ರೆಸ್ ಪಕ್ಷ 70 ವರ್ಷ ಅಧಿಕಾರದಲ್ಲಿ ಇತ್ತು ಎಂದು ಹೇಳುತ್ತಿದ್ದರು. ಅದು ಯಾವುದೂ ಸಿಕ್ಕಿಲ್ಲವೆಂದರೆ, ಪಾಕಿಸ್ತಾನವೆಂದು ಆ ರೀತಿಯಾದಂತಹ ಅನಾರೋಗ್ಯಕರವಾದಂತಹ ರಾಜಕಾರಣ ಬಂದಿದೆ ಎಂದು. ನಾನು ಈಗಾಗಲೇ ಹೇಳಿದಂತೆ, ಈ ಬಜೆಟ್‌ನಲ್ಲಿ ಮೂರು ನಾಮವಿದೆ. ಸುಮಾರು 111 ಪುಟಗಳಿರುವಂತಹ ಪುಸ್ತಕವನ್ನು ನಾವು ನೋಡಬೇಕಾದರೆ, 111 ಪುಟಗಳನ್ನು ಓದುವುದು ಬೇಕಾಗಿಲ್ಲ. ಇವರು ಅನುದಾನಗಳಿಗೆ ಸಂಬಂಧಪಟ್ಟಂತೆ ಕೆಲವು ಓಲೈಕೆ ರಾಜಕಾರಣವನ್ನು ಮಾಡಿದ್ದಾರೆ. ನಾವು ಇದನ್ನು ನೋಡಿದಾಗ ಈ ಸರ್ಕಾರ ಎಷ್ಟರಮಟ್ಟಿಗೆ ಮತ್ತು ಯಾರ ಪರವಾಗಿದೆ ಎಂದು ಗೊತ್ತಾಗುತ್ತದೆ. ಅಂದರೆ, ಒಕ್ಕಲಿಗರ ಅಭಿವೃದ್ಧಿ ನಿಗಮಕ್ಕೆ ಸುಮಾರು 500 ಕೋಟಿ ರೂಪಾಯಿಗಳು. ಲಿಂಗಾಯತ ಅಭಿವೃದ್ಧಿ ನಿಗಮಕ್ಕೆ ಸುಮಾರು 500 ಕೋಟಿ ರೂಪಾಯಿಗಳು. ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಸುಮಾರು 50 ಕೋಟಿ ರೂಪಾಯಿಗಳು. ಎಸ್.ಸಿ/ಎಸ್.ಟಿ ಮತ್ತು ಓಬಿಸಿಯ ಎಲ್ಲಾ ನಿಗಮಗಳಿಗೆ ಸುಮಾರು 500 ಕೋಟಿ ರೂಪಾಯಿಗಳು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದಿಚುಂಚನಗಿರಿ ಮಠದಲ್ಲಿ ನಾಥ ಪಾರಂಪರಿಕ ಕೇಂದ್ರ ಸ್ಥಾಪನೆಗೆ ಸುಮಾರು 10 ಕೋಟಿ ರೂಪಾಯಿಗಳು. ಅಯೋಧ್ಯ ಯಾತ್ರಿ ನಿವಾಸಕ್ಕೆ ಸುಮಾರು 10 ಕೋಟಿ ರೂಪಾಯಿಗಳು. ಡಾ॥ಎಸ್.ಎಲ್.ಭೈರಪ್ಪನವರ 'ಪರ್ವ'ದ ರಂಗ ಪ್ರಯೋಗಕ್ಕೆ ಸುಮಾರು 1 ಕೋಟಿ ರೂಪಾಯಿ. ಜೈನ ಪುಣ್ಯ ಕ್ಷೇತ್ರ ಅಭಿವೃದ್ಧಿಗೆ ಸುಮಾರು 50 ಕೋಟಿ ರೂಪಾಯಿಗಳು. ಸಿದ್ಧಗಂಗಾ ಮಠದ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಸ್ಮೃತಿ ವನಕ್ಕೆ ಸುಮಾರು 2 ಕೋಟಿ ರೂಪಾಯಿಗಳು. ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದರ ಸ್ಮೃತಿಗೆ 2 ಕೋಟಿ ರೂಪಾಯಿಗಳು. ನಾವು ಇದನ್ನು ನೋಡಿದಾಗ, ಸರ್ಕಾರ ಯಾರ ಪರವಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದಕ್ಕೋಸ್ಕರ ನಾನು Directive Principles ಅನ್ನು ಓದಿದ್ದು. ಈಗಲೂ ಸಹ ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಸಹಾಯ ದೊರಕಬೇಕೆಂದು ಕೆಲವರು ಹೇಳುತ್ತಿರುತ್ತಾರೆ. ಆದರೆ, ಅದು ಎಷ್ಟರಮಟ್ಟಿಗೆ ಸಿಕ್ಕಿದೆ ಎಂಬುದನ್ನು ನೋಡಿದಾಗ, ಅದು 'ಶೂನ್ಯ' ಎಂದು ಹೇಳಿದರೆ ತಪ್ಪಾಗಲಾರದು. ಬಹುಸಂಖ್ಯಾತರಾಗಿರುವಂತಹ ಶೇಕಡಾ 70ರಷ್ಟು ಇರುವಂತಹ ಜನರಿಗೂ ಒಂದೇ ರೀತಿ ಮತ್ತು 2-3 ಜಾತಿಗಳಿಗೂ ಸಹ ಒಂದೇ ರೀತಿಯಾಗಿ ಸರಿಸಮಾನವಾಗಿ ಮಾಡಿರುವಂಥದ್ದನ್ನು ನೋಡಿದರೆ, ಸಮಾನತೆಯ ಅಳತೆ ಯಾವರೀತಿ ಇದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಅದರ ಜೊತೆಗೆ ಈ ಒಂದು ಬಜೆಟ್‌ನಲ್ಲಿ 'ಆತ್ಮನಿರ್ಭರ' ಭಾರತ ಅಭಿಯಾನದ ಅಡಿಯಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

**(ಮುಂದು)**

**(375) 12.20 15.03.2021 ಎಲ್‌ಎಲ್/ಬಿಎನ್‌ಎಸ್**

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು)**

ಆತ್ಮ ನಿರ್ಭರ ಅಭಿಯಾನ ಯೋಜನೆಯಡಿಯಲ್ಲಿ ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಪ್ರಸ್ತಾಪಗಳನ್ನು ನೋಡಿದಾಗ... ಅದು Economic Survey of Karnataka 2020-21 ನಲ್ಲಿ ಕೂಡ ಅದರ ಬಗ್ಗೆ ಉಲ್ಲೇಖ ಇರುತ್ತದೆ.

*"**Removal of Distinction between Plan and Non-plan:-** The distinction between Plan and Non-plan in the budgetary system was brought in when the plan model of economic growth was adopted in the country. It is expected that with the*

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*removal of this distinction a direct link between spending and outcome could be established which will be useful in assessing the efficiency of public expenditure. The Union Government removed this distinction in Government Expenditure from the Financial Year 2017-18 onwards. For the reason cited above, the State Government has also removed this distinction . . ."*

ಯಾವ್ಯಾವ ಇಲಾಖೆಗೆ ಎಷ್ಟು ದುಡ್ಡು ಕೊಟ್ಟಿದೆ ಎಂದು ಎಲ್ಲಿಯೂ ಸಹ ಹೇಳಿರುವುದಿಲ್ಲ. ರಾಜ್ಯದ 34 ಅಥವಾ 36 ಇಲಾಖೆಗಳನ್ನು ಒಟ್ಟಿಗೆ ಸೇರಿಸಿ 6 ವಲಯಗಳನ್ನಾಗಿ ಮಾಡಿ, ಅನುದಾನ ಹಂಚಿಕೆ ಮಾಡಿರುವುದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಅದಲ್ಲದೇ, ಈ ಆತ್ಮ ನಿರ್ಭರ ವಿಚಾರದಲ್ಲಿ ಸರ್ಕಾರ ಏನು ಹೇಳಿದೆಯೆಂದರೆ, ಈ ಒಂದು fiscal deficit ಆಗಿ, revenue deficit ನ ಸರಿ ಮಾಡುವುದಕ್ಕಾಗಿ ಸರ್ಕಾರಿ ಆಸ್ತಿಗಳನ್ನು ಮಾರುವಂಥದ್ದಾಗಿದೆ. ಆತ್ಮ ನಿರ್ಭರ ಎಂದರೆ, ಸ್ವಾವಲಂಬನೆ. ಅಂದರೆ, ನಮ್ಮ ಹಿರಿಯರು ಏನು ಆಸ್ತಿಯನ್ನು ಸಂಪಾದನೆ ಮಾಡಿದ್ದಾರೆ, ಅದನ್ನು ನಮ್ಮ ದೈನಂದಿನ ಜೀವನ ನಡೆಸುವುದಕ್ಕಾಗಿ ಅಥವಾ ದೈನಂದಿನ ಅವಶ್ಯಕ ಪದಾರ್ಥಗಳಿಗೋಸ್ಕರ, ಆ ಆಸ್ತಿಯನ್ನು ಮಾರಿ ಜೀವನ ನಡೆಸುವುದು ಇದೆಯಲ್ಲ, ಅದಕ್ಕಿಂತಲೂ ಘೋರ ಅಪರಾಧ ಯಾವುದು ಇರುವುದಿಲ್ಲ. ಹಾಗಾಗಿ, ಸರ್ಕಾರ ಏನಾದರೂ ಕಾರ್ಯಕ್ರಮಗಳನ್ನು ಮಾಡುವುದಾದರೆ, ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬೇಕು. ಅದಕ್ಕಾಗಿ, ಇರುವಂತಹ ಆಸ್ತಿಯನ್ನು ಉಳಿಸಿಕೊಂಡು, ಬರುವಂತಹ ಆದಾಯವನ್ನು ಕ್ರೋಡೀಕರಿಸಿ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬಹುದಾಗಿತ್ತು.

ಸಾಮಾನ್ಯವಾಗಿ ಬಜೆಟ್ ಮಂಡನೆಯಾಗುವಾಗ ಮೊದಲನೆಯದಾಗಿ ಸರ್‌ಪ್ಲಸ್ ಬಜೆಟ್(ಉಳಿತಾಯ ಬಜೆಟ್), ಎರಡನೆಯದಾಗಿ, ಡಿಫಿಸಿಟ್ ಬಜೆಟ್ ಮತ್ತು ಮೂರನೆಯದಾಗಿ, ಬ್ಯಾಲೆನ್ಸ್‌ಡ್ ಬಜೆಟ್(ಸಮತೋಲನ ಬಜೆಟ್) ಎಂಬುದಾಗಿ ಮೂರು ಬಜೆಟ್‌ಗಳು ಇರುವಾಗ ಇದೊಂದು ಹೊಸ ಬಜೆಟ್ ಬಂದಿರುವಂತೆ ಕಾಣುತ್ತದೆ. ಈ ಬಜೆಟ್‌ನಲ್ಲಿರುವಂತಹ ಅಂಕಿ–ಅಂಶಗಳನ್ನು ನೋಡಿದರೆ ಇದೊಂದು 'ಬೋಗಸ್ ಬಜೆಟ್' ಎಂದು ಕಾಣುತ್ತದೆ. ಆದುದರಿಂದ, ಈ ಬಜೆಟ್‌ನಲ್ಲಿರುವ ಅಲೋಕೇಷನ್(ಅನುದಾನ ಹಂಚಿಕೆ)ನನ್ನು ನೋಡಿದಾಗ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಈಗಾಗಲೇ ನಾನು ಹೇಳಿದ ಹಾಗೆ, ಕೋವಿಡ್–19 ಸಂದರ್ಭದಲ್ಲಿ ಅಥವಾ ಕೊರೊನಾ ಮಹಾಮಾರಿ ರೋಗದ ಹೊಡೆತದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧದಲ್ಲಿ ತಮ್ಮ ಜೀವದ ಆಸೆ ಬಿಟ್ಟು ರಕ್ತ, ಬೆವರು ಸುರಿಸಿ, ಈ ದೇಶವನ್ನು ಕಾಪಾಡಬೇಕೆಂಬ ದೃಷ್ಟಿಯಲ್ಲಿ ಯಾರಾದರೂ ಕೆಲಸ ಮಾಡಿದ್ದರೆ ಅದು ರೈತರು ಮಾತ್ರ. Agriculture and allied activities 2019-20ಗೆ 21,990/- ಕೋಟಿ ರೂಪಾಯಿ, 2020-21 16,472/- ಕೋಟಿ ರೂಪಾಯಿ, ರಿವೈಸ್ಡ್ ಬಜೆಟ್ 16,840/- ಕೋಟಿ ರೂಪಾಯಿ ಮತ್ತು Budgetary estimate 14,976/- ಕೋಟಿ ರೂಪಾಯಿ ಅನ್ನು ನೋಡಿದಾಗ, ಶೇಕಡ 17 ಭಾಗದಷ್ಟು agriculture and allied activitiesಗೆ ಕಡಿಮೆ ಮಾಡಿದ್ದಾರೆ. ಇದರ ಅರ್ಥ ಇದು ಸಂಪೂರ್ಣವಾಗಿ ರೈತರ ವಿರೋಧಿ ಬಜೆಟ್ ಆಗಿದೆ. ಅದಲ್ಲದೇ, ಕಾನೂನಿನಲ್ಲಿ, ಸಂವಿಧಾನದಲ್ಲಿ ಏನು ಬಜೆಟ್ ಗಾತ್ರ ಇದೆ ಅದರ ಶೇಕಡ 24 ಭಾಗದಷ್ಟು ಎಸ್.ಸಿ./ಎಸ್.ಟಿ. ಗಳಿಗೆ ಮೀಸಲಿಡಬೇಕು. ಅದನ್ನು ನೋಡಿದಾಗ, 2019-20ನೇ ಸಾಲಿನಲ್ಲಿ 9,951/- ಕೋಟಿ ರೂಪಾಯಿ; 2020-21ನೇ ಸಾಲಿನಲ್ಲಿ 9,402/- ಕೋಟಿ ರೂಪಾಯಿ ಇರುತ್ತದೆ.

ಈಗಾಗಲೇ ನಾನು ತಮಗೆ ಹೇಳಿದ ಹಾಗೆ, ಈ ಬಜೆಟ್‌ನ ಹೈಲೈಟ್ಸ್ ಅನ್ನು ನೋಡಿದಾಗ, ಈ ಬಜೆಟ್ ಯಾವರೀತಿ ಮತ್ತು ಯಾರ ಪರವಾಗಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಅದಲ್ಲದೇ, ಹಲವಾರು ಸಾಮಗ್ರಿಗಳ ಮೇಲೆ ಸಬ್ಸಿಡಿಗಳು ಏನು ಇರುತ್ತದೆ, ಅದು 2019-20ನೇ ಸಾಲಿನಲ್ಲಿ 25,650/- ಕೋಟಿ ರೂಪಾಯಿ, 2020-21ನೇ ಸಾಲಿನಲ್ಲಿ 25,133/- ಕೋಟಿ ರೂಪಾಯಿ ಇರುತ್ತದೆ. ಅದರ ಅರ್ಥ ಪ್ರಸ್ತುತ ಬಜೆಟ್‌ನಲ್ಲಿ ಸಬ್ಸಿಡಿ ಹಣ ಸುಮಾರು 500/- ಕೋಟಿ ರೂಪಾಯಿಗಳು ಕಡಿಮೆ ಆಗಿರುತ್ತದೆ. ಸಬ್ಸಿಡಿಗಳನ್ನು ಯಾರಿಗೆ ಕೊಡುತ್ತಾರೆಂದರೆ, ಅದು ಬಡವರಿಗೋ ಅಥವಾ ಸಾಹುಕಾರರಿಗೆ ಕೊಡುತ್ತಾರೋ? ಸಬ್ಸಿಡಿಗಳನ್ನು ಕೊಡತಕ್ಕಂಥದ್ದು ಯಾರಿಗೆಂದರೆ, ಯಾರು ಬಡತನ ರೇಖೆಗಿಂತ ಕೆಳಗಿರುತ್ತಾರೆ; ಯಾರು ಬಡತನದಲ್ಲಿರುತ್ತಾರೆ ಅಥವಾ ಮಧ್ಯಮವರ್ಗದಲ್ಲಿರುವವರಿಗೆ ಕೊಡುವಂತಹ ಪದ್ಧತಿ ಈ ದೇಶದಲ್ಲಿ ನಡೆದುಕೊಂಡು ಬಂದಿದೆ. ಅದನ್ನು ಸಹ ಈ ಸರ್ಕಾರ ಕಡಿಮೆ ಮಾಡಿರುತ್ತದೆ. ಇದರ ಅರ್ಥ ಈ ಸರ್ಕಾರ ಯಾರ ಪರವಾಗಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ, ಈ ಬಜೆಟ್ ಅನ್ನು ನೋಡಿದಾಗ, 'ಇದು ಕೇವಲ ಒಂದು ನೋಟ' ಎಂದು ಕೊಟ್ಟಿದ್ದಾರೆ. ಆದರೆ, ಅದನ್ನು ನೋಡಿದಾಗ 'ಇದೊಂದು ಸಾಲದ ಆಟ' ಎಂದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಅಂದರೆ, ಉದಾಹರಣೆಗೆ 'ಬಡ್ಡಿ ಪಾವತಿಸಿ ತಂದ ಸಾಲ' ಎಂದು ಇದೆ. "ಸಾಲ ಆದರೂ ಮಾಡಿ ತುಪ್ಪ ತಿನ್ನುವುದು" ಎಂದು ಈ ಮೊದಲು ಹೇಳುತ್ತಿದ್ದರು. ಆ ಕೆಲಸ ಈಗ ಆಗುತ್ತಿದೆ. ಪ್ರಸ್ತುತ ಬಡ್ಡಿ ತಂದಿರುವುದರಲ್ಲಿ ಹೊಸದೇನು ಇಲ್ಲ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಸಹ ಆ ಕೆಲಸ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ್ದು, ಈಗಲೂ ಸಹ ಅದೇ ಕೆಲಸವನ್ನು ಮುಂದುವರೆಸಿಕೊಂಡು ಹೋಗಿದ್ದಾರೆ. ಅದರಲ್ಲಿ ಉದಾರವಾಗಿ ಹಂಚಿ ಎಲ್ಲರನ್ನೂ ಮೆಚ್ಚಿಸುವಂತಹ ಕಸರತ್ತು ನಡೆಸಿದ್ದಾರೆ. ಮುಂಬರುವ ವರ್ಷದಲ್ಲಿ ದಾಖಲೆಗೆ 71,332/- ಕೋಟಿ ಸಾಲ ಪಡೆಯುವುದಾಗಿ ಹೇಳಿದ್ದಾರೆ. ಇದರಿಂದ ವ್ಯವಸ್ಥೆ ಏನಾಗುತ್ತದೆಯೆಂದರೆ, 2022 ಏಪ್ರಿಲ್ ವೇಳೆಗೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ 4.57 ಲಕ್ಷ ಕೋಟಿ ರೂಪಾಯಿ ಮೀರಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇಕಡ 26.9 ರಷ್ಟಾಗುತ್ತದೆ. ಇದಕ್ಕಾಗಿ, ಕಾಯಿದೆ ತಿದ್ದುಪಡಿ ಪ್ರಸ್ತಾವ ಬಜೆಟ್ ಮಂಡಿಸಲಾಗಿದೆ.

ಕರ್ನಾಟಕ ರಾಜ್ಯ fiscal discipline maintain ಮಾಡುವುದರಲ್ಲಿ ಇಡೀ ರಾಷ್ಟ್ರದಲ್ಲಿಯೇ ಬಹಳ ಹೆಸರುವಾಸಿಯಾಗಿತ್ತು. ಸನ್ಮಾನ್ಯ ದಿವಂಗತ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ಇಡೀ ರಾಷ್ಟ್ರದಲ್ಲಿಯೇ ಒಂದು ತಿದ್ದುಪಡಿಯನ್ನು ತಂದು, ಎಲ್ಲಾ ರಾಜ್ಯದವರು 'fiscal deficit' ಅನ್ನುವಂಥದ್ದು ಶೇಕಡ 3 ಭಾಗಕ್ಕಿಂತಲೂ ಮೇಲೆ ಹೋಗಬಾರದೆಂಬ ಒಂದು ತೀರ್ಮಾನವನ್ನು ತೆಗೆದುಕೊಂಡು ಈ ರಾಷ್ಟ್ರದಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದರು. ಆ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳಾದಂತಹವರು ಈಗ ಅವರು ತಮ್ಮ ಪಕ್ಷದಲ್ಲಿದ್ದಾರೆ. ಶ್ರೀ ಎಸ್.ಎಂ. ಕೃಷ್ಣರವರು ಆ fiscal discipline ಬಹಳ ಚೆನ್ನಾಗಿ ನಿರ್ವಹಣೆ ಮಾಡಿದರು. ಅದು ಇಡೀ ರಾಷ್ಟ್ರದಲ್ಲಿಯೇ ಹೆಸರುವಾಸಿಯಾಯಿತು. ತದನಂತರ, ಮುಖ್ಯಮಂತ್ರಿಗಳಾಗಿ ಬಂದಂತಹ ಶ್ರೀ ಧರ್ಮಸಿಂಗ್‌ರವರು ಸಹ ಒಳ್ಳೆಯ fiscal discipline ನಿರ್ವಹಣೆ ಮಾಡಿದರು. ನಂತರ, ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸಹ fiscal discipline ನಿರ್ವಹಣೆ ಮಾಡಿದರು. ಆದರೆ, ಈಗ ಮಾನ್ಯ ಮುಖ್ಯಮಂತ್ರಿಯಾಗಿರುವ ಶ್ರೀ ಬಿ.ಎಸ್. ಯಡಿಯೂರಪ್ಪನವರು ಯಾವರೀತಿ fiscal discipline maintain ಮಾಡಿದ್ದಾರೆಂದು ತಾವೆಲ್ಲರೂ ಯೋಚನೆ ಮಾಡಬೇಕು. ಅದೇ ರೀತಿ, ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಬಂದಾಗಲೂ ಸಹ ಅವರ 5 ವರ್ಷಗಳ ಅಧಿಕಾರಾವಧಿಯಲ್ಲಿ ಯಾವತ್ತೂ ಸಹ ಶೇಕಡ 3 ಕ್ಕಿಂತಲೂ ಮೇಲೆ ಹೋಗಲಿಲ್ಲ. ಈಗಾಗಲೇ ಬಜೆಟ್ ಭಾಷಣದಲ್ಲಿ, "ತಿದ್ದುಪಡಿಯನ್ನು ತಂದು ನಾವು fiscal deficit ಅನ್ನು ಶೇಕಡ 5 ವರೆಗೂ ತೆಗೆದುಕೊಂಡು ಹೋಗುತ್ತೇವೆ" ಎಂದು ಹೇಳಿರುತ್ತಾರೆ. ಇದರ ಅರ್ಥ ಎಷ್ಟು ಸಾಲವನ್ನು ಈ ಕರ್ನಾಟಕ ಜನತೆಯ ಮೇಲೆ ಹಾಕುತ್ತಾರೆಂದು ಊಹಿಸುವುದಕ್ಕೂ ಸಹ ಸಾಧ್ಯವಿಲ್ಲ. ಆದುದರಿಂದ, ಜಾತಿ, ಧರ್ಮ ಅನ್ನುವುದನ್ನು ಬಿಟ್ಟು; ಒಂದೇ ಜಾತಿ, ಒಂದೇ ಧರ್ಮ ಎಂದು ಬಡವರಿಗೆ 3 ಹೊತ್ತು ಊಟ

ಕೊಡತಕ್ಕಂತಹ ಒಂದು ಕಾರ್ಯಕ್ರಮಕ್ಕೆ ಸರ್ಕಾರ ಒಂದು ಹೆಜ್ಜೆ ಇಡಬೇಕಾಗುತ್ತದೆ. ಆದರೆ, ಈ ಬಜೆಟ್ ಅನ್ನು ಆ ದೃಷ್ಟಿಯಲ್ಲಿ ನೋಡಿದಾಗ, ಬಡವರಿಗೆ ಯಾವುದೇ ರೀತಿಯ ಕಾರ್ಯಕ್ರಮಗಳು ಕಾಣುವುದಿಲ್ಲ.

**ಶ್ರೀ ಎನ್. ರವಿಕುಮಾರ್(ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಹರಿಪ್ರಸಾದ್‌ರವರೇ, ತಾವು ಅವಕಾಶ ಕೊಟ್ಟರೆ ಒಂದು ಪಾಯಿಂಟ್ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ರವಿಕುಮಾರ್‌ರವರೇ, ದಯಮಾಡಿ ಹೇಳಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಹರಿಪ್ರಸಾದ್‌ರವರೇ, ತಮ್ಮ ವೇಗಕ್ಕೆ ಸ್ವಲ್ಪ ತಡೆ ನೀಡಿದೆ ಅದಕ್ಕಾಗಿ ಕ್ಷಮೆ ಇರಲಿ. ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ತಮ್ಮ ಭಾಷಣದಲ್ಲಿ, "ಶ್ರೀ ಬಿ.ಎಸ್. ಯಡಿಯೂರಪ್ಪನವರ ಈ ಬಜೆಟ್‌ನಲ್ಲಿ ಜಾಸ್ತಿ ಸಾಲ ಮಾಡಿಬಿಟ್ಟಿದ್ದಾರೆ. ಆದರೆ, ಶ್ರೀ ಸಿದ್ದರಾಮಯ್ಯನವರ ಕಾಲದಲ್ಲಿ ಸಾಲ ಮಾಡಲಿಲ್ಲ, ಶೇಕಡ 3 ಕ್ಕಿಂತಲೂ ಹೆಚ್ಚು ಮಾಡಲಿಲ್ಲ. ಅಂದರೆ, ಆರ್ಥಿಕ ಶಿಸ್ತಿನ ಒಳಗಡೆ ಸಾಲ ಮಾಡಿದ್ದಾರೆಂದು" ಹೇಳಿದರು.

**(ಮುಂದು)**

**(376) 15.03.2021 12.30 ವೈಎಲ್-ಬಿಎನ್‌ಎಸ್**

**ಶ್ರೀ ಎನ್.ರವಿಕುಮಾರ್(ಮುಂದು):-**

ಅಂದಿನ ಕಾಲದಲ್ಲಿ ಕೋವಿಡ್-19 ಆಗಲಿ, ಪ್ರವಾಹವಾಗಲಿ ಬಂದಿರಲಿಲ್ಲ. ಇವತ್ತು ನಮ್ಮ ದೇಶ ಹಾಗೂ ಕರ್ನಾಟಕ ರಾಜ್ಯ ಯಾವ ಪರಿಸ್ಥಿತಿಯನ್ನು ಎದುರಿಸುತ್ತಿದೆ, ಆ ಪರಿಸ್ಥಿತಿಯನ್ನು ಅಂದಿನ ಕಾಲದಲ್ಲಿ ಎದುರಿಸಿರಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶ ಸಿಕ್ಕಿದಾಗ ಮಾತನಾಡಲಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂತಹ ಪರಿಸ್ಥಿತಿಯಲ್ಲಿಯು ಸಹ ಕರ್ನಾಟಕ ರಾಜ್ಯದಲ್ಲಿ ಮಾತ್ರ ಯಾವುದೇ ಸರ್ಕಾರಿ ನೌಕರನಿಗೆ ಶೇ.1 ರಷ್ಟು ಸಹ ಸಂಬಳವನ್ನು ಕಡಿತಗೊಳಿಸಲಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೋವಿಡ್-19 ವಿಚಾರಕ್ಕೆ ಬಂದಾಗ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರಾಜಸ್ಥಾನ, ಪಂಜಾಬ್, ಮಹಾರಾಷ್ಟ್ರಗಳಲ್ಲಿ ಸರ್ಕಾರಿ ನೌಕರರ ಸಂಬಳವನ್ನು ಕಡಿತಗೊಳಿಸಿದ್ದು, ಮಾನ್ಯ ಸದಸ್ಯರು ಇಂತಹ ಅಂಶಗಳನ್ನು ಸಹ ತೆಗೆದುಕೊಂಡು ಉಲ್ಲೇಖ ಮಾಡಲಿ. ಹಾಗಾಗಿ ಕರ್ನಾಟಕ ರಾಜ್ಯ ಒಂದೇ ರೀತಿಯಲ್ಲಿ balanced Budget ನ್ನು, ಮಾದರಿ ಬಜೆಟ್‌ನ್ನು ಮಾಡಿದ್ದಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಿಂದೆ ಎಲ್ಲಿಯು ಮಾಡಿರದಷ್ಟು ಹೆಚ್ಚು ಸಾಲವನ್ನು ಮಾಡಿದ್ದಾರೆ; ಕಳೆದ 62 ವರ್ಷಗಳಲ್ಲಿ ಸರ್ಕಾರ ಮಾಡಿರುವಷ್ಟು ಸಾಲವನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೇವಲ 5 ವರ್ಷಗಳಲ್ಲಿ ಮಾಡಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು 5 ವರ್ಷಗಳಲ್ಲಿ ಮಾಡಿರುವಷ್ಟು ಸಾಲವನ್ನು ಹಾಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು 2 ವರ್ಷಗಳಲ್ಲಿ ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿ ಹೇಳಬಾರದು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆ ರೀತಿಯಾಗಿ ತಪ್ಪು ಮಾಹಿತಿಯನ್ನು ನೀಡಬಾರದು. ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ಎಷ್ಟು ಸಾಲವಾಗಿದೆ, ಕೇವಲ ಒಂದೂವರೆ ವರ್ಷದ ಅಧಿಕಾರಾವಧಿಯಲ್ಲಿ ಎಷ್ಟು ಸಾಲವಾಗಿದೆ ಎಂಬುದನ್ನು ಹೇಳಲಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರವಿಕುಮಾರ್‌ರವರು ತಪ್ಪು ಮಾಹಿತಿಯನ್ನು ನೀಡಬಾರದು. ಹಾಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು 2 ವರ್ಷಗಳಲ್ಲಿ ಎಷ್ಟು ಸಾಲ ಮಾಡಿದ್ದಾರೆ? ಅದೇ ರೀತಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು 5 ವರ್ಷಗಳ ಅಧಿಕಾರಾವಧಿಯಲ್ಲಿ ಎಷ್ಟು ಸಾಲ ಮಾಡಿದ್ದಾರೆ? ಯಾವ ಕಡೆಯಿಂದ,...

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಮಾತನಾಡುವಾಗ ಮಾನ್ಯ ರವಿಕುಮಾರ್‌ರವರು ಮಧ್ಯೆ ಎದ್ದು ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ ತಮಗೆ ಮಾತನಾಡಲು ಅವಕಾಶ ಸಿಕ್ಕಿದಾಗ ಅದರ ಬಗ್ಗೆ ಮಾತನಾಡಿ. ಮಾನ್ಯ ಹರಿಪ್ರಸಾದ್‌ರವರು yield ಆಗಿರುವುದಕ್ಕೆ ಮಾನ್ಯ ರವಿಕುಮಾರ್‌ರವರು ಮಾತನಾಡಿರುವುದು. ಅದಕ್ಕೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಸಹ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ದಾಖಲೆಯಲ್ಲಿ ತಪ್ಪು ಮಾಹಿತಿ ಹೋಗಬಾರದು ಅಲ್ಲವೇ?

**ಉಪ ಸಭಾಪತಿಯವರು:-** ಅವರು ಮಾತನಾಡುವುದಕ್ಕೆ yield ಆಗಿದ್ದು ಹರಿಪ್ರಸಾದ್‌ರವರು. ಹಾಗಾಗಿ, ಅವರು yield ಆಗಿರುವ ದೆಸೆಯಿಂದಾಗಿ ಶ್ರೀ ರವಿಕುಮಾರ್‌ರವರು ಮಾತನಾಡಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗಿವೆ. ಈ ಎರಡು ವರ್ಷಗಳಲ್ಲಿ ಬಿಜೆಪಿ ಸರ್ಕಾರ ಎಷ್ಟು ಸಾಲ ಮಾಡಿದೆ, ಅದೇ ರೀತಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಐದು ವರ್ಷಗಳ ಕಾಲ 'ನುಡಿದಂತೆ ನಡೆದ ಮುಖ್ಯಮಂತ್ರಿ' ಎಂಬ ಖ್ಯಾತಿಗೆ ಭಾಜನರಾಗಿ ಎಷ್ಟು ಸಾಲ ಮಾಡಿದ್ದಾರೆ ಎಂಬುದನ್ನು ಬಿಜೆಪಿ ಸರ್ಕಾರವೇ ತುಲನಾತ್ಮಕವಾಗಿ ನೋಡಿ, ಯಾವ ಸರ್ಕಾರ ಹೆಚ್ಚು ಸಾಲ ಮಾಡಿದೆ ಎಂಬುದನ್ನು ಹೇಳಲಿ. ಮಾನ್ಯ ರವಿಕುಮಾರ್‌ರವರು ಬಹಳ ಒಳ್ಳೆಯ ಸಂಸದೀಯ ಪಟುಗಳಾಗಿದ್ದು, ಅವರ ಬಗ್ಗೆ ನಮಗೂ ಸಹ ಗೌರವ ಇದೆ. ಅದಕ್ಕೆ ಸಂಬಂಧಿಸಿದಂತೆ ಅಂಕಿ-ಅಂಶಗಳನ್ನು ನೀಡಲಿ. ಅದನ್ನು ಬಿಟ್ಟು ಹೆಚ್ಚು ಸಾಲ ಮಾಡಿದ್ದಾರೆ ಎಂದು ಹೇಳಿದರೆ ಹೇಗೆ?

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, (ಗೊಂದಲ) ನಾನು ಸಹ ಅಂಕಿ-ಅಂಶಗಳನ್ನು ಒದಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನೇನು ಕೋವಿಡ್-19 ಮಹಾಮಾರಿಗೆ ಭಾರತೀಯ ಜನತಾ ಪಾರ್ಟಿ ಸರ್ಕಾರವೇ ಕಾರಣ ಎಂದು ಹೇಳುತ್ತಿಲ್ಲ. ಈಗಾಗಲೇ ಕೋವಿಡ್-19 ಬಂದಿದ್ದು, ನಿಧಾನಗತಿಯಲ್ಲಿ ಹೋಗುತ್ತಿದೆ, ಆಮೇಲೆ ಕೊರೋನಾ ಮಹಾಮಾರಿ ಹೋಗಿದೆ ಎಂದು ಭಾರತೀಯ ಜನತಾ ಪಾರ್ಟಿಯವರು ಸಹ ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗುವುದು ಬೇಡ. ಕೊರೋನಾ ಮಹಾಮಾರಿ ಬಂದಾಗ ಬಿ.ಜೆ.ಪಿ. ಸರ್ಕಾರವು ಎಷ್ಟು ಹಣವನ್ನು ಈಗಾಗಲೇ ಖರ್ಚು ಮಾಡಿದ್ದಾರೆ ಎಂಬ ವಿಚಾರದ ಕುರಿತು ಈ ಸದನದಲ್ಲಿಯೇ ಚರ್ಚೆಯಾಗಿದೆ. ಕೊರೋನಾ ಮಹಾಮಾರಿ ಬಂದಂತಹ ಸಂದರ್ಭದಲ್ಲಿಯು ಅವರೆಲ್ಲರೂ ಸಹ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎಂದು ಏನು ಹೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ 'The Hindu' ಪ್ರತಿಷ್ಠಿತ ಪತ್ರಿಕೆಯಲ್ಲಿ ಈ ರೀತಿ ವರದಿಯಾಗಿದೆ; "Starvation cause of four deaths in Shimoga." ಒಡಿಶಾದಲ್ಲಿ KBK (Kalahandi, Balangir, Koraput) ಎಂದು ಕರೆಯಲ್ಪಡುವ ಆ 3 ಜಿಲ್ಲೆಗಳಲ್ಲಿ ಹೊಟ್ಟೆಗೆ ಊಟವಿಲ್ಲದೇ ಸಾಯುತ್ತಿದ್ದಾರೆ. ಮುಖ್ಯಮಂತ್ರಿಗಳಿರುವಂಥ ಶಿವಮೊಗ್ಗ ಜಿಲ್ಲೆಯಲ್ಲಿಯೇ ಇಂತಹ ಪರಿಸ್ಥಿತಿ ಇದೆ. ಹಾಗಾಗಿ ಕೊರೋನಾ ವಿಚಾರಕ್ಕೆ ಸಂಬಂಧಿಸಿದಂತೆ, ಬೇರೆ ಸದಸ್ಯರು ಮಾತನಾಡುತ್ತಾರೆ. ಕೊರೋನಾ ರೋಗವನ್ನು ಹೋಗಲಾಡಿಸುವುದಕೋಸ್ಕರ ಒಂದು unplanned lockdown ನಿಂದ ಎಷ್ಟು ತೊಂದರೆಯಾಗಿದೆಯೆಂದರೆ, ಕಾರ್ಮಿಕರು ಕೆಲಸ ಕಳೆದುಕೊಂಡು, ವಲಸೆ ಕಾರ್ಮಿಕರು, ಬೇರೆ ರಾಜ್ಯದವರನ್ನು ಹೊರತುಪಡಿಸಿ, ಬೆಂಗಳೂರಿನಿಂದ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಿಗೆ ವಾಪಸ್ಸು ಹೋದಂಥ ಜನರು ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ಯಾರು ಸಹ ಯೋಚನೆ ಮಾಡಿಲ್ಲ ಹಾಗೂ ಬಜೆಟ್ ಪುಸ್ತಕದಲ್ಲಿಯು ಸಹ ಅವರಿಗೆ ಸಂಬಂಧಿಸಿದಂತೆ ಸ್ವಲ್ಪವೂ ಸಹ ಸಹಾನುಭೂತಿಯನ್ನು ತೋರಿಸಿಲ್ಲ. ಅದಲ್ಲದೇ ಕೊರೋನಾ ರೋಗವನ್ನು ಹೋಗಲಾಡಿಸಬೇಕೆಂದು ತಟ್ಟೆ, ಜಾಗಟೆ, ದೀಪ, ಕಷಾಯ, ಹಪ್ಪಳ್ಳಿ, ಗೋ-ಮೂತ್ರ, ಜೊತೆಗೆ ರಾಜಸ್ಥಾನದ ಮುಖ್ಯಮಂತ್ರಿಯೊಬ್ಬರು ಪಾಪಡ್ ಎಲ್ಲವನ್ನೂ ತಿನ್ನಿ ಎಂದು ಹೇಳಿದರು. ಆದರೆ ಏನು ಪ್ರಯೋಜನವಾಗದೇ, ಕಡೆಗೆ ಎಲ್ಲರೂ ಸಹ ಶರ್ಟ್ ಎತ್ತಿ vaccination ಗಾಗಿ ಕಾಯುತ್ತಿದ್ದಾರೆ. ಹಾಗಾಗಿ ಕೊರೋನಾ ರೋಗಕ್ಕೆ ಸಂಬಂಧಿಸಿದಂತೆ, ಎಷ್ಟು ಕಡಿಮೆ ಮಾತನಾಡುತ್ತೇವೋ, ಅಷ್ಟು ಎಲ್ಲರಿಗೂ ಒಳ್ಳೆಯದು. ಅದಲ್ಲದೇ ಕೊರೋನಾ ರೋಗ ಬಂದಂತಹ ಸಂದರ್ಭದಲ್ಲಿ ಸಹ ಸರ್ಕಾರದ ಮಂತ್ರಿಯವರು ಆರಾಮವಾಗಿ ಸ್ವಿಮಿಂಗ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂಲ್‌ನಲ್ಲಿರುವುದನ್ನು ಸಹ ನಾವು ನೋಡಿದ್ದೇವೆ. ಅದು ಸಹ ಕೊರೋನಾ ರೋಗ ಹೋಗಲಾಡಿಸುವುದಕ್ಕೆ ಇಟ್ಟಿರುವಂಥ ಹೆಜ್ಜೆ ಎಂದು ಹೇಳಿದರೆ, ನಾನು ಏನು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಅವಕಾಶ ನೀಡಿದರೆ ನಾನು ಮಾತನಾಡುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವುದು ಬೇಡ. ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಲಿ.

**ಉಪ ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೆ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಹುಲ್‌ಗಾಂಧಿಯವರು ಎಲ್ಲಿ ಇದ್ದರು? (ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾನ್ಯ ರಾಹುಲ್‌ಗಾಂಧಿಯವರ ವಿಚಾರವನ್ನು ಮಾತನಾಡಿದರೆ, ನಾನು ಸಹ ಕೇಂದ್ರ ಗೃಹ ಸಚಿವರಾದ ಮಾನ್ಯ ಅಮಿತ್ ಶಾ, ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಸಹ ಏನೇನು ಮಾಡಿದ್ದಾರೆ ಎಂಬುದರ ಬಗ್ಗೆ ಮಾತನಾಡಬೇಕಾಗುತ್ತದೆ. ನನಗೂ ಸಹ ಮಾತನಾಡುವುದಕ್ಕೆ ಬರುತ್ತದೆ. ಆದ್ದರಿಂದ ಅವೆಲ್ಲವನ್ನೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುವುದು ಬೇಡ. ನಾನು ಯಾವ ವಿಚಾರದ ಬಗ್ಗೆ ಮಾತನಾಡುತ್ತಿದ್ದೇನೆ, ಅದಕ್ಕೆ ಅವರು ಉತ್ತರ ನೀಡಲಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ರಾಹುಲ್‌ಗಾಂಧಿಯವರು ವಿದೇಶದಲ್ಲಿ ಇದ್ದರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಜನಸಾಮಾನ್ಯರಿಗೆ ಯಾವ ರೀತಿ ಸಹಾಯ ಮಾಡಬೇಕೆನ್ನುವುದಕ್ಕಾಗಿ ಸರ್ಕಾರ ಇರುವುದು. ಬೆಲೆ ಏರಿಕೆ ವಿಚಾರಕ್ಕೆ ಸಂಬಂಧಿಸಿದಂತೆ;

*"**Price Situation in Urban Areas**:- Every week, retail prices of 20 important commodities are collected from 20 urban centre's in the State in order to construct Urban Retail Price*

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Index (URPI). During 2020-21 the URPI which was 3788 in April 2020 rose to 4362 in November 2020 showing an increase of 15.2%. The rise in index is attributed to the increase in prices of Onion (141.8 %) . . . "*

ಈರುಳ್ಳಿ ಬೆಲೆ ಜಾಸ್ತಿಯಾಗಿದೆ ಎಂದು ಕೇಂದ್ರ ಹಣಕಾಸು ಸಚಿವರನ್ನು ಕೇಳಿದರೆ, 'ನಾನು ಈರುಳ್ಳಿ ತಿನ್ನುವುದಿಲ್ಲ' ಎಂದು ಹೇಳಿದರು. ಅದೇ ರೀತಿ ಪೆಟ್ರೋಲ್ ಬೆಲೆ ಜಾಸ್ತಿಯಾಗಿರುವ ಬಗ್ಗೆ ಕೇಳಿದರೆ, 'ನಾನು ಪೆಟ್ರೋಲ್ ಕುಡಿಯುವುದಿಲ್ಲ' ಎಂದು ಹೇಳಿದರು.

**ಶ್ರೀ ಕೆ.ಸಿ.ಕೊಂಡಯ್ಯ:–** ಎತ್ತಿನಗಾಡಿಯಲ್ಲಿ ಓಡಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಎತ್ತಿನಗಾಡಿಯಲ್ಲಿ ಓಡಾಡುವ ಬಗ್ಗೆ ಹೇಳಲಿಲ್ಲ, ಪೆಟ್ರೋಲ್ ಕುಡಿಯುವುದಿಲ್ಲ ಎಂದು ಹೇಳಿದರು. ಹಾಗಾಗಿ ಈ ಸರ್ಕಾರದ ನಡೆ–ನುಡಿಯ ಬಗ್ಗೆ ಎಲ್ಲರೂ ಪ್ರಶ್ನೆ ಮಾಡುವಂಥ ಪರಿಸ್ಥಿತಿ ಉದ್ಭವಿಸಿದೆ. ಬೆಲೆ ಏರಿಕೆಯನ್ನು ತಡೆಗಟ್ಟುವ ಕುರಿತು ಯಾವುದೇ ರೀತಿಯಲ್ಲಿ ಕ್ರಮಕೈಗೊಳ್ಳಲು ಬಿಜೆಪಿ ಸರ್ಕಾರಕ್ಕೆ ಆಗುತ್ತಿಲ್ಲ. ಅದಲ್ಲದೇ, Social security and welfare including SC/ST, ಈಗಾಗಲೇ ತಮಗೆ ಹೇಳಿದ ಹಾಗೆ, ಶೇ.– 3.92 ರಷ್ಟು ಮಾಡಲಾಗಿದೆ. ಅದಲ್ಲದೇ, major outlay ಕೃಷಿಗೆ ಸಂಬಂಧಿಸಿದಂತೆ ನೋಡಿದಾಗ 2018–19ನೇ ಸಾಲಿನಲ್ಲಿ ಶೇ.–21.67 ರಷ್ಟು ಆಗಿದೆ. 2018–19 ನಲ್ಲಿ 21,748 ಇತ್ತು, 2019–20 ನಲ್ಲಿ 23,679.94 ಇತ್ತು, 2020–21ನೇ ಸಾಲಿನಲ್ಲಿ ರೂ. 18,548.61 ಗಳಾಗಿವೆ. ಶೇ.–27 ರಷ್ಟು ಕೃಷಿಗೆ ಆದ್ಯತೆ ನೀಡಲಾಗಿದೆ. Special Area Programme -37%, science and technology 20.69%, ಬಡವರಿಗೆ ನೀಡುವ ವಸತಿಗೆ ಸಂಬಂಧಿಸಿದಂತೆ -18.78%, welfare of SC/ST, OBC and Minorities -6.49%, social security and welfare, nutrition -2.78%. ಇವೆಲ್ಲವನ್ನೂ ಬಜೆಟ್ ಪುಸ್ತಕದಲ್ಲಿ ಎಲ್ಲಿ ತಿಳಿಸಲಾಗಿದೆ? ಈಗಾಗಲೇ ಬಂಡವಾಳ ವೆಚ್ಚಕ್ಕೆ ಸಂಬಂಧಿಸಿದಂತೆ ತಿಳಿಸಲಾಗಿದ್ದು,

*"**Capital Expenditure**: Since revenue surplus is expected to be under strain, the capital expenditure would have to be met out largely from Capital Receipts include Non-debt Capital*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*Receipts like revenue earned from sale of government assets, recovery of loans and advance and borrowings etc."*

ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಆರ್ಥಿಕ ಮಂದಿ ಇದ್ದಾಗಲೂ ಸಹ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಆರ್ಥಿಕ ಮಂದಿಯನ್ನು ತಡೆಯಲು ಯಾರ್‍ಯಾರು ಏನೇನು ಮಾಡಿದ್ದಾರೆ ಎಂಬುದು ಪ್ರತಿಯೊಬ್ಬರಿಗೂ ತಿಳಿದಿದ್ದು, ಅದಕ್ಕೆ ಮೂಲ ಕಾರಣ ರಾಷ್ಟ್ರೀಕೃತ ಬ್ಯಾಂಕ್‌ಗಳು. ನಮ್ಮ ನೆಚ್ಚಿನ ನಾಯಕಿಯಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರು ಬ್ಯಾಂಕ್‌ಗಳನ್ನು ರಾಷ್ಟ್ರೀಕೃತ ಮಾಡಿದ್ದ ಮೇಲೆ ಆ ಬ್ಯಾಂಕಿನ ಮೂಲಕ ಆರ್ಥಿಕ ಮಂದಿಯನ್ನು ತಡೆಯಲು ಸಾಧ್ಯವಾಗಿತ್ತು. ಮತ್ತೊಂದು ಬಹಳ ಪ್ರಮುಖವಾದ ವಿಚಾರವೇನೆಂದರೆ, ಪ್ರತಿ ಸಂದರ್ಭದಲ್ಲಿ ಸಹ ಆರ್ಥಿಕ ಮಂದಿ ಬಂದರೆ ನಾವು ಯಶಸ್ವಿಯಾಗಿದ್ದೇವೆ ಎಂದು ಸರ್ಕಾರವು ಬೆನ್ನು ತಟ್ಟಿಕೊಳ್ಳುತ್ತದೆ. ಉಳಿತಾಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಮಂದಿ ಯೋಚನೆ ಮಾಡುತ್ತಾರೆ. ಇಡೀ ಪ್ರಪಂಚವನ್ನು ನೋಡಿದಾಗ ಅಮೇರಿಕಾದ ದೇಶದಲ್ಲಿ ಜಿ.ಡಿ.ಪಿ. ಉಳಿತಾಯವು –3%. ಅದೇ ರೀತಿ ಭಾರತ ದೇಶದಲ್ಲಿ ಜಿ.ಡಿ.ಪಿ. ಉಳಿತಾಯವು ಶೇ.25 ರಿಂದ ಶೇ.33 ರಷ್ಟು ಆಗಿತ್ತು. ಈಗ ಶೇ.28 ರಷ್ಟಾಗಿದೆ. ಅದರಲ್ಲಿ ಶೇ.10 ರಷ್ಟು ಕೃಷಿ ಕ್ಷೇತ್ರದಿಂದ ಇರುವುದು ಹಾಗೂ ಶೇ.10 ರಷ್ಟು ಔದ್ಯೋಗಿಕ ಕ್ಷೇತ್ರದ್ದಾಗಿದ್ದು, ಶೇ.80 ರಷ್ಟು ಉಳಿತಾಯವಾಗಿದೆ. ಇದನ್ನು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಮನಮೋಹನ್ ಸಿಂಗ್‌ರವರು ಮಾಡಿ, ಈಗಿನ ಹಣಕಾಸು ಸಚಿವರಾದ ಮಾನ್ಯ ನಿರ್ಮಲಾ ಸೀತಾರಾಮನ್‌ರವರಿಗೆ ಇದರ ಪ್ರಜ್ಞೆಯೇ ಇಲ್ಲದಂತಾಗಿದೆ.

**(ಮುಂದು)**

**(377) 15.03.2021/12.40/ಎಸ್‌ಕೆ-ಜಿಆರ್**

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು) :-**

ಈ ರಾಷ್ಟ್ರದಲ್ಲಿರುವ ಮಹಿಳೆಯರು ಮನೆ ನಡೆಸುವುದಕ್ಕಾಗಿ, ಅವರ ಮನೆಯ ಯಜಮಾನರು ತಿಂಗಳಿಗೆ ಹಣವನ್ನು ಕೊಡುತ್ತಾರೆ. ಅದರಲ್ಲಿ ಉಳಿತಾಯ ಮಾಡಿದಂತಹ ಹಣವನ್ನು ಯಾರ ಕೈಗೂ ಸಿಗದ ಹಾಗೇ ಇರಲಿ ಎಂದು ಕಾಫಿ ಡಬ್ಬ, ಸಕ್ಕರೆ ಡಬ್ಬ, ಮೆಣಸಿನಕಾಯಿ ಡಬ್ಬದಲ್ಲಿ ಇಟ್ಟಿರುತ್ತಾರೆ. ಶೇಕಡ 80 ರಷ್ಟು ಹಣವನ್ನು ಉಳಿತಾಯ ಮಾಡುತ್ತಿದ್ದರು. ಆ ಮನೆಯ ಯಜಮಾನಿ ಶೇಕಡ 80 ರಷ್ಟು ಹಣವನ್ನು ಏಕೆ ಉಳಿತಾಯ ಮಾಡುತ್ತಿದ್ದರು ಎಂದರೆ, ತುರ್ತು ಪರಿಸ್ಥಿತಿಯಲ್ಲಿ ಅಂದರೆ ಮಕ್ಕಳ ಸ್ಕೂಲ್ ಫೀಸ್, ಮಕ್ಕಳ ಆರೋಗ್ಯ ಕೆಟ್ಟಾಗ ಹಾಗೂ ಇನ್ನಿತರ ತುರ್ತು ಸಂದರ್ಭದಲ್ಲಿ ಬೇಕಾಗಬಹುದು ಎಂದು ಹಣವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಳಿತಾಯ ಮಾಡಿಟ್ಟಿದ್ದರು. ಅದನ್ನು ನಮ್ಮ ವಿಶ್ವ ಗುರು demonitisation ಮಾಡಿದಾಗ, ಎಲ್ಲಾ ಹಣವನ್ನು ಬ್ಯಾಂಕಿಗೆ ಹಾಕಬೇಕಾಯಿತು. ಆ ಬ್ಯಾಂಕ್‌ಗೆ ಹೋದ ಮೇಲೆ, ಅದರ ಕಥೆ ಏನಾಯಿತು ಎಂದು ನಾನು ಹೇಳಬೇಕಾದುದು ಇಲ್ಲ. demonitisation ನಿಂದ ಎಷ್ಟು MSME (Micro, Small and Medium Enterprises) ಗಳು ಮುಚ್ಚಿ ಹೋಯಿತು ಎಂಬುದು ತಮಗೆ ಗೊತ್ತಿದೆ. ಇವರು ತೆಗೆದುಕೊಳ್ಳುವಂತಹ ಆರ್ಥಿಕ ನೀತಿಯಿಂದಾಗಿ ಎಷ್ಟು ತೊಂದರೆಯಾಗಿದೆ ಎಂಬುದರ ಬಗ್ಗೆ ನಾವೆಲ್ಲರೂ ಸಹ ನೋಡಿದ್ದೇವೆ. ಇವತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಸ್ಟೇಟ್‌ಮೆಂಟ್‌ನಲ್ಲಿ F.D.I., ಬಹಳ ಬಂದಿದೆ ಮತ್ತು ಕಾರ್ಖಾನೆಗಳನ್ನು ಓಪನ್ ಮಾಡಿದ್ದೇವೆ ಎಂಬ ಬಗ್ಗೆ ಹೇಳಿದ್ದಾರೆ. As per the Economic Survey of Karnataka 2020-21, under the head "Table 4.2: Projects approved by Stte High Level Clearance Committee (SHLCC)" ನಲ್ಲಿ ನೋಡಿದಾಗ, ಅದರಲ್ಲಿ 2018–19 ರ ಸಾಲಿನಲ್ಲಿ Approved Projects-5, Investments- 4,387 ಕೋಟಿ ರೂಪಾಯಿಗಳು, Employment-51,959; 2019–20ನೇ ಸಾಲಿನಲ್ಲಿ Approved Project-1, Investments- 1,085.30 ಕೋಟಿ ರೂಪಾಯಿಗಳು, 2020–21ನೇ ಸಾಲಿನಲ್ಲಿ Approved Projects-Nil, Investments- Nil, Employment- Nil ಆಗಿದೆ. ಇವತ್ತು ರಾಷ್ಟ್ರವನ್ನು ಬಹಳ ಚೆನ್ನಾಗಿ ಮಾಡುತ್ತಿದ್ದೇವೆ ಎಂದು ತಾವು ಯಾರಿಗೆ ಸುಳ್ಳು ಹೇಳುತ್ತಿದ್ದೀರಿ? ಇದು ನಮ್ಮ statement ಅಲ್ಲ, ಇದು ಸರ್ಕಾರದ 'Economic Survey of Karnataka 2020-21' ಹೇಳುತ್ತಿದೆ. ಆದ್ದರಿಂದ ಜನರಿಗೆ ಸುಳ್ಳು ಹೇಳುವುದನ್ನು ನಿಲ್ಲಿಸಿ. ಏಕೆಂದರೆ, ಜನರಿಗೆ ಸುಳ್ಳು ಹೇಳುವುದನ್ನು ನಿಲ್ಲಿಸಿದಾಗ, ಸ್ವಲ್ಪ ಧೈರ್ಯವಾದರೂ ಬರುತ್ತದೆ. ಇಲ್ಲ ಎಂದು ಹೇಳಿದರೆ, ಆತ್ಮ ನಿರ್ಭರ್ ಭಾರತವನ್ನು ಸ್ವಾವಲಂಬಿ ಮಾಡುವುದಕ್ಕೆ ಹೊರಟಿದ್ದರಲ್ಲ, ಅದು ಸರ್ಕಾರದ ಸ್ವಾಮ್ಯದಲ್ಲಿರತಕ್ಕಂತಹ ಸಂಸ್ಥೆಗಳಿದ್ದಾಗ, ನಾವು ಸ್ವಾವಲಂಬಿಗಳು ಎಂದು ಹೇಳಬಹುದು. ಶ್ರೀ ಎಂ.ಎಸ್. ಸ್ವಾಮಿನಾಥನ್ ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು 'Green Revolution' ತಂದಾಗ, ಆಹಾರ ಧಾನ್ಯಗಳಲ್ಲಿ ನಾವು ಸ್ವಾವಲಂಬಿಯಾದೆವು. ಅದೇ ರೀತಿಯಾಗಿ ಇವತ್ತು ಸಹ ಇದು ನನ್ನ ಸ್ಟೇಟ್‌ಮೆಂಟ್ ಅಲ್ಲ, ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರ ಸ್ಟೇಟ್‌ಮೆಂಟ್. ಇಡೀ ಪ್ರಪಂಚದಲ್ಲಿಯೇ ಈ ರಾಷ್ಟ್ರ ಸುಮಾರು ಐದು ವಿಚಾರದಲ್ಲಿ ಅಂದರೆ, ಹಾಲು ಉತ್ಪಾದನೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಅಕ್ಕಿ ಉತ್ಪಾದನೆಯಲ್ಲಿ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊದಲನೇಯ ಸ್ಥಾನದಲ್ಲಿದೆ. ಗೋಧಿ ಉತ್ಪಾದನೆಯಲ್ಲಿ ಎರಡನೇಯ ಸ್ಥಾನದಲ್ಲಿದೆ. ಹಣ್ಣು ಮತ್ತು ತರಕಾರಿ ಉತ್ಪಾದನೆಯಲ್ಲಿ, ಚೈನಾ ಮತ್ತು ಬ್ರೆಸಿಲ್ ದೇಶವನ್ನು ಬಿಟ್ಟರೆ ಈ ದೇಶ ಎರಡನೇ ಸ್ಥಾನದಲ್ಲಿದೆ. Rocket Science ನಲ್ಲಿ ಮೂರನೇ ಸ್ಥಾನದಲ್ಲಿದೆ. Nuclear Power ನಲ್ಲಿ ಆರನೇ ಸ್ಥಾನದಲ್ಲಿದೆ. ಐದು ವಿಚಾರಗಳಲ್ಲಿ ಬಹು ದೊಡ್ಡ ಆರ್ಥಿಕ ಶಕ್ತಿ ಇದೆ ಎಂದು ನಮ್ಮ ವಿಶ್ವ ಗುರು ಹೇಳುತ್ತಿರುತ್ತಾರೆ. ಅದರೂ ಸಹ ನಮ್ಮ ಬಡ ರಾಷ್ಟ್ರ 120, 130ನೇ ಸ್ಥಾನದಲ್ಲಿದೆ. ಆದ್ದರಿಂದ ತಾವು ಹೇಳತಕ್ಕಂತಹದ್ದು ಮತ್ತು ಮಾಡತಕ್ಕಂತಹದ್ದು ಎಷ್ಟು ವ್ಯತ್ಯಾಸವಿದೆ ಎಂಬುದನ್ನು ನೋಡಬೇಕು. ಎಲ್ಲಿಯೂ ಸಹ ದೇಶಿ F.D.I.,ಎಂದು ಹೇಳಿದರೆ, ಬೇರೆ ಕಡೆಯಿಂದ ಹಣ ಬರಬೇಕು. ಎಷ್ಟು ಹಣ ಬಂದಿದೆ ಎಂದು ಎಲ್ಲಿಯೂ ಸಹ ಹೇಳಿಲ್ಲ. ಆತ್ಮ ನಿರ್ಭರ್ ಆಗಬೇಕೆಂದರೆ, ಕೇವಲ ಖಾಸಗಿಯವರಿಂದ ಆಗುವುದಿಲ್ಲ. ಇವತ್ತು ಈ ದೇಶದಲ್ಲಿ ಸುಮಾರು 78 ಭಾಗದಷ್ಟು ಸಂಪತ್ತು ಒಂದು ಪರ್ಸೆಂಟ್ ಜನರ ಹತ್ತಿರ ಮಾತ್ರವಿದೆ. ತಾವು ಸ್ವಾವಲಂಬಿಗಳು ಎಂದು ಹೇಳುವುದಾದರೆ, ಇದನ್ನು ಯಾರು ನಂಬಬೇಕು ಎಂಬುದು ಗೊತ್ತಾಗುತ್ತಿಲ್ಲ. ಕೃಷಿ ಕ್ಷೇತ್ರದಲ್ಲಿ ಖಾಸಗಿಯವರನ್ನು ಪ್ರವೇಶ ಮಾಡುವುದಕ್ಕೆ ಬಿಡುತ್ತಿದ್ದೀರಿ. ಇದರಲ್ಲಿ Land Reforms Act, A.P.M.C. Act ಎಲ್ಲವನ್ನೂ ಮಾಡಿಬಿಟ್ಟಿದ್ದೀರಿ. A.P.M.C., ನಲ್ಲಿ ಏನಾಗುತ್ತಿದೆ ಎಂಬುದು ನಮಗೆ ಗೊತ್ತಾಗುತ್ತಿದೆ. ಅಲ್ಲಿ ತೂಕದ ವಿಚಾರ, Minimum Support Price ನಮ್ಮ ರೈತರಿಗೆ ಎಷ್ಟರ ಮಟ್ಟಿಗೆ ಸಿಗುತ್ತಿದೆ ಎಂಬುದನ್ನು ಈಗ ನೋಡಿದಾಗ ಮಾತ್ರ ಗೊತ್ತಾಗುತ್ತಿದೆ. ಆದ್ದರಿಂದ ವಿಶ್ವ ಗುರು ನಮ್ಮ leader retire ಆಗುವಾಗ ಕಣ್ಣೀರು ಹಾಕಿದರು. ಅದೇ ಕಣ್ಣೀರಿನಲ್ಲಿ ಸುಮಾರು 200 ಜನ ರೈತರು ಸತ್ತಿದ್ದಾರೆ. ಅವರ ಬಗ್ಗೆ ಬರಲಿಲ್ಲ. ಆದ್ದರಿಂದ ಈ ಮೊಸಳೆ ಕಣ್ಣೀರು ನಿಲ್ಲಿಸಿ. ಬಡವರ ಬಗ್ಗೆ ಕಾಳಜಿ ವಹಿಸಬೇಕೆಂದು ಹೇಳಿ, ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇವರ ಬಗ್ಗೆ ಈ ಸರ್ಕಾರಕ್ಕೆ ಸಂಪುಟದ ಗಾತ್ರ ಎಷ್ಟು ದೊಡ್ಡದಿದೆ ಎಂಬುದು ಗೊತ್ತಿಲ್ಲ. ಕಾರ್ಮಿಕರು ಮತ್ತು ಗ್ರಾಮೀಣ ನಿವಾಸಿಗಳಿಗೆ ಈ ಬಜೆಟ್‌ನ ಹಂಚಿಕೆಯಲ್ಲಿ ಗಮನಾರ್ಹ ಇಳಿಕೆಯನ್ನು ತೋರಿಸಿದೆ. ಕಾರ್ಮಿಕರು, ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿಗಳಿಗೆ ಮೀಸಲಿಟ್ಟ ಹಣ ಕಳೆದ ವರ್ಷ 61.3 ಕೋಟಿ ರೂಪಾಯಿಗಳಿಂದ ಈ ವರ್ಷಕ್ಕೆ 59.5 ಕೋಟಿ ರೂಪಾಯಿಗಳಿಗೆ ಇಳಿಸಿದ್ದಾರೆ. ನಾನು ಗ್ರಾಮೀಣಾಭಿವೃದ್ಧಿ ವಿಶೇಷ ಕಾರ್ಯಕ್ರಮಗಳ ಈಗಾಗಲೇ ಬಗ್ಗೆ ಹೇಳಿದ್ದೇನೆ. ಆದ್ದರಿಂದ ಈ ಬಜೆಟ್ ಏತಕ್ಕೋಸ್ಕರ ಮಾಡಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಶ್ರೀ ಎಸ್.ಎಲ್. ಭೈರಪ್ಪನವರ 'ಪರ್ವ' ನಾಟಕದ ಪ್ರದರ್ಶನವನ್ನು ರಂಗಾಯಣಗಳ ಮೂಲಕ ರಾಜ್ಯಾದ್ಯಂತ ಏರ್ಪಡಿಸುವುದಕ್ಕೋಸ್ಕರ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಏತಕ್ಕೆ ಕೊಟ್ಟಿದ್ದೀರಿ? ಅದರ ಬಗ್ಗೆ ಡಾ॥ ತೇಜಸ್ವಿನಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಗೌಡರವರು ಹೇಳಬೇಕು. ಒಂದು ಕಡೆ ಆಯೋಧ್ಯೆಯಲ್ಲಿ ರಾಮ ಮಂದಿರಕ್ಕೆ ಹಣವನ್ನು ಕೊಟ್ಟಿಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ 'ರಾಮ ಕೃಷ್ಣಾ ಇತಿಹಾಸ ಪುರುಷರಷ್ಟೆ' ಎಂದು ಶ್ರೀ ಎಸ್.ಎಲ್ ಭೈರಪ್ಪನವರು 'ಪ್ರಜಾವಾಣಿ' ಪತ್ರಿಕೆಯಲ್ಲಿ ಹೇಳಿದ್ದಾರೆ. ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ಕೊಟ್ಟಿದ್ದೀರಿ. ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ.

**ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**ಕಳೆದ ವರ್ಷ ಮಂಜೂರಾದ 5 ಕೋಟಿ ರೂಪಾಯಿಗಳನ್ನು ಇನ್ನೂ ಬಳಸಿಕೊಂಡಿರುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಹೌದು ಮಾಡಿಲ್ಲ. ರಾಮನನ್ನು ಇತಿಹಾಸ ಪುರುಷ ಎನ್ನುವಂತಹ ಮನುಷ್ಯನಿಗೆ ರಾಮ ದೇವರೆ ಅಥವಾ ಇಲ್ಲವೇ ಎನ್ನುವ ಬಗ್ಗೆ ಸಂಶೋಧನೆ ಮಾಡುವುದಕ್ಕೆ 1 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅವರು ರಾಜ ಮಾತ್ರ ಎಂದು ಹೇಳಿರುವಂತಹದ್ದು. ಅದೇ ಪ್ರೋ. ಭಗವಾನ್ ಈ ತರಹ ಹೇಳಿದ್ದರೆ, ಅವರ ಮುಖಕ್ಕೆ ಹೋಗಿ ಮಸಿ ಬಳಿಯುತ್ತಿದ್ದೀರಿ. ಹಾಗಾದರೆ ಇವರಿಗೆ ಮಾತ್ರ ಏನೂ ಮಾಡುವುದಿಲ್ಲ. ತಮ್ಮ ದ್ವಂಧ್ವ ನೀತಿ ಏನಿದೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಈ ಸದನದ ವ್ಯಾಪ್ತಿಯೊಳಗೆ ಅವರ ವಿವೇಚನೆಯೊಳಗೆ ಅವರು ಮಾತನಾಡಿರುತ್ತಾರೆ. ರಾಮನ ಬಗ್ಗೆ ಏನು ಹೇಳಿದ್ದೀರಿ? ಕೃಷ್ಣನ ಬಗ್ಗೆ ಹೇಳಿದ್ದೀರಿ ಎಂದು ಅವರ ಹತ್ತಿರ ಹೋಗಿ ನಾವು ಏನು ಕೇಳಲಿಲ್ಲ. ಶ್ರೀ ಭೈರಪ್ಪನವರ ಬಗ್ಗೆ ನಮಗೂ ಮತ್ತು ತಮಗೂ ಗೊತ್ತಿದೆ. ಅವರು ಯಾವ ವಿಚಾರಗಳನ್ನು ಎಷ್ಟು ಸಮರ್ಥವಾಗಿ ಮಂಡಿಸುತ್ತಾರೆ. ಯಾವ ಕಾದಂಬರಿಗಳಲ್ಲಿ ಜನಸಾಮಾನ್ಯರ ಭಾವನೆಗಳನ್ನು ಹೇಗೆ ಬಿಂಬಿಸುತ್ತಾರೆ. ಪೌರಾಣಿಕ ಮತ್ತು ಜಾನಪದಕ್ಕೆ ಸಂಬಂಧಿಸಿದಂತೆ ಯಾವ ವಿಚಾರಗಳನ್ನು ಉಲ್ಲೇಖಿಸುತ್ತಾರೆ ಎಂಬುದು ತಮಗೆ ಗೊತ್ತಿದೆ. ಯಾವುದೋ ಒಂದು ಶಬ್ಧವನ್ನು ಹಿಡಿದುಕೊಂಡು ಅವರು ಏನೋ ತಪ್ಪು ಮಾಡಿದ್ದಾರೆ ಮತ್ತು ಅವರು ಬರೆದಿರುವ ಕಾದಂಬರಿ 'ಪರ್ವ' ಸರಿಯಿಲ್ಲ. ಅವರು ನಾಟಕವನ್ನು ಮಾಡಬಾರದು ಎಂದು ಹೇಳುವ ಹಕ್ಕು ತಮಗೆ ಇಲ್ಲ. ಒಂದು ವಿಚಾರವನ್ನು ಮಾತ್ರ ಹೇಳಿ. ಅನೇಕ ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ ಪಡೆದಂತಹ ಸಾಹಿತಿಗಳು ಕರ್ನಾಟಕದಲ್ಲಿದ್ದಾರೆ. ಅವರು ಬರೆದಂತಹ ಒಳ್ಳೆಯ ಗ್ರಂಥಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವುದು ಮತ್ತು ಉತ್ತೇಜನ ಕೊಡುವುದು ಸರ್ಕಾರದ ಜವಾಬ್ದಾರಿ. ಈ ಬಾರಿ 'ಪರ್ವ' ಕಾದಂಬರಿಗೆ ಕೊಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಭಾನಾಯಕರು ಹೇಳಿದಂತೆ, ಯಾವುದೋ ಒಂದು ಶಬ್ಧದಿಂದ ಈ ರೀತಿಯಾಗಿದೆ. ದ್ರೌಪದಿ ಮಾತೆಯನ್ನು ಕುಲ ದೇವರು ಎಂದು ಸ್ವೀಕಾರ ಮಾಡುತ್ತಾರೆ. ಅವರ ಬಗ್ಗೆ ಈ ರೀತಿ ಅವಹೇಳನಕಾರಿ ಮಾತನಾಡಿದಾಗ, ಅಂತಹವರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಿದ್ದೆವು. ತಾವು ಅಂತಹವರಿಗೆ 1 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ ಎನ್ನುವುದಾದರೆ, ಅದು ಯಾವ ರೀತಿ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ಶ್ರೀ ಎಸ್. ಎಲ್. ಭೈರಪ್ಪನವರು ಬರೆದ ಕಾದಂಬರಿ...

**ಶ್ರೀ ಎಂ. ನಾರಾಯಣಸ್ವಾಮಿ:–** ಅಂದರೆ ಸರ್ಕಾರದ ಹಣವನ್ನು ಸಾರ್ವಜನಿಕರ ತೆರಿಗೆ ಹಣವನ್ನು ಯಾರೋಬ್ಬ ದೇವತೆಯ ಬಗ್ಗೆ ಹೀನಾಯವಾಗಿ ಮಾತನಾಡುತ್ತಾರೋ, ಅವರಿಗೆ 1 ಕೋಟಿ ರೂಪಾಯಿ ಕೊಡುತ್ತೀರಾ ಎಂದು ಹೇಳುವುದಾದರೆ, ಇದು ಯಾವ ರೀತಿ?

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ ತಾವು ಮಾತನಾಡುವುದನ್ನು ಮುಂದುವರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ :–** ದೇವರ ಬಗ್ಗೆ ಭಾವನೆ ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರು yield ಆದರೆ, ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ವಿಶ್ವ ಮಾನವ ಸಂದೇಶವನ್ನು ಕೊಟ್ಟಂತಹ ಯುಗದ ಕವಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ನಾಟಕವಾಯಿತು. ಆಗ ಯಾವ ಸರ್ಕಾರವೂ ಕೂಡ ನೆರವಿಗೆ ಬರಲಿಲ್ಲ. ಯುಗದ ಕವಿ, ಮನುಜ ಮಥ, ವಿಶ್ವ ಪಥ ಎಂದಂತಹವರು. ಇವತ್ತು ಶ್ರೀ ಎಸ್.ಎಲ್. ಭೈರಪ್ಪನವರ ಬರೆದಿರುವ 'ಪರ್ವ' ಕಾದಂಬರಿಯನ್ನು ನಾಟಕ ಮಾಡಿಸುವುದಕ್ಕೆ 1 ಕೋಟಿ ರೂಪಾಯಿಗಳನ್ನು ಏತಕ್ಕೆ ಕೊಟ್ಟಿದ್ದೀರಿ? ಇದು ಏಕೆ ತಾರತಮ್ಯ? ಈ ರಾಜ್ಯದಲ್ಲಿ ವಿಚಾರವಂತರು, ಬರಹಗಾರರು, ನಾಟಕಕಾರರು ಮತ್ತು ಎಷ್ಟೆಲ್ಲಾ ಸಾಹಿತಿಗಳಿದ್ದಾರೆ ಹಾಗೂ ಎಂತೆಂಥ ಕಾದಂಬರಿಗಳು ಬಂದಿದೆ. ಯಾರೋ ಒಬ್ಬರಿಗೆ ಸಹಾಯ ಮಾಡುವುದು ಇದೆಯೆಲ್ಲಾ, ಅದು ನಾಗರೀಕ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(378) 15.03.2021, 12.50, ಟಿಸಿಹೆಚ್-ಜಿಆರ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಈ ಹಿಂದೆ ಅತ್ಯಂತ ಶ್ರೇಷ್ಠ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟಂಥವರಲ್ಲಿ ಮೊದಲಿಗರೆಂದರೆ, ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು. ಅವರ ಯಾವುದೇ ಕಾದಂಬರಿಗೆ ಇಲ್ಲದಂತಹ ಸಹಾಯ ಇವರಿಗೆ ಏಕೆ ಕೊಟ್ಟಿದ್ದೀರಿ? ಏಕೆ ಈ ತಾರತಮ್ಯ, ಏಕೆ ಈ ವ್ಯತ್ಯಾಸ. ಸಾಹಿತ್ಯದಲ್ಲೂ ಏಕೆ ರಾಜಕಾರಣ ಮಾಡುತ್ತೀರಿ? Not good. ಇವತ್ತಿನ ದಿವಸ ಸರ್ಕಾರ ಹೊಸ ಶೈಕ್ಷಣಿಕ ನೀತಿಯನ್ನು ಜಾರಿಗೆ ತರಬೇಕೆಂದು ಬರೀ ಒಂದು ಕೋಟಿ ರೂಪಾಯಿಯನ್ನು ಮೀಸಲಿಟ್ಟಿದ್ದೀರಿ, ಶ್ರೀ ಎಸ್.ಎಲ್.ಭೈರಪ್ಪನವರ ಕಾದಂಬರಿ ನಾಟಕ ಮಾಡುವುದಕ್ಕೂ ಒಂದು ಕೋಟಿ ಮೀಸಲಿಟ್ಟಿದ್ದೀರಿ. ಇದು ನನಗೆ ಅರ್ಥವೇ ಆಗುತ್ತಿಲ್ಲ. ಇವರು ಇಡೀ ಶೈಕ್ಷಣಿಕ ಹೊಸ ನೀತಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ . . .

**ಉಪ ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ನಿಮಗೆ ಅವಕಾಶ ಸಿಕ್ಕಾಗ ಮಾತನಾಡಿ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ತಾವು ಮಾತನಾಡಲು ಪ್ರಾರಂಭ ಮಾಡಿ 45 ನಿಮಿಷ ಆಯಿತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಚರ್ಚೆಯಾಗಲಿ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಒಂದಷ್ಟು ಕಾಳಜಿಯನ್ನು ಎತ್ತಿದ್ದಾರೆ. ಈ ಸದನದಲ್ಲಿ ಎಲ್ಲಾ ವಿಚಾರಗಳ ಬಗ್ಗೆ ಮುಕ್ತವಾಗಿ ಮಾತನಾಡುವ ಅಭಿವ್ಯಕ್ತಿ ಸ್ವಾತಂತ್ರ್ಯ ಇರುವುದಕ್ಕಾಗಿ ಇದನ್ನು ಮೇಲ್ಮನೆಯೆಂದು ಕರೆಯುತ್ತೇವೆ. ಖಂಡಿತವಾಗಿಯು ನಾವು ಒಂದು ಪದವನ್ನು ಹೇಳುವಾಗ ಒಬ್ಬ ಸಾಹಿತಿ ಅಥವಾ ಒಬ್ಬ ಕವಿಯವರು ಯಾವ ದೃಷ್ಟಿಕೋನದಲ್ಲಿ ಯಾವ ವೈಚಾರಿಕ ವಿಚಾರವನ್ನು ಮಂಡನೆ ಮಾಡುವಾಗ ಯಾವ ಭಾವದಲ್ಲಿ ಹೇಳುತ್ತಾರೆಂಬುದು ಮೊದಲನೆಯ ಅಂಶ. ದ್ರೌಪದಿಯ ವಿಚಾರವೇ ಭಾರತೀಯ ಸಾಹಿತ್ಯ ಲೋಕದಲ್ಲಿ ಐವರು ಪತಿಯವರಿಗೆ ಹೆಂಡತಿಯಾಗಿದ್ದ ಸನ್ನಿವೇಶಕ್ಕೆ ನಾವು ದ್ರೌಪದಿಯನ್ನು ಡಿಫೆಂಡ್ ಮಾಡುವುದು ಇದೆಯಲ್ಲ, that

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

itself is greatest. ನೀವು ಅದನ್ನು mythological ಎಂದಾದರೂ ಕರೆಯಿರಿ ಅಥವಾ literary ಎಂದಾದರೂ ಕರೆಯಿರಿ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅದಕ್ಕಿಂತ ದೊಡ್ಡ ಉದಾಹರಣೆ ಕಾಣುವುದಿಲ್ಲ. ನಮ್ಮ ಭಾರತೀಯ ಪರಂಪರೆ ಮತ್ತು ಭಾರತೀಯ ಸಾಹಿತ್ಯವನ್ನು ಭಾರತೀಯ ಜನತೆ ಗೌರವಿಸಿದೆ. ಈಗ ಮಾನ್ಯ ಸದಸ್ಯರಾದ ಎಂ.ನಾರಾಯಣ ಸ್ವಾಮಿಯವರು ದ್ರೌಪದಿಯನ್ನು ಗೌರವಿಸಿ, ದೇವತೆ ಎನ್ನತಕ್ಕಂಥ ಪದವನ್ನು ಬಳಸಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರ ಹೆಣ್ಣುತನವನ್ನು ಮತ್ತು ಅವರ ವ್ಯಕ್ತಿತ್ವವನ್ನು ಡಿಫೆಂಡ್ ಮಾಡಿರುವುದು. ದುಶ್ಯಾಸನ ದ್ರೌಪದಿಯನ್ನು ಎಳೆದುಕೊಂಡು ಹೋಗುತ್ತಾನೆ. ಅವಳು ಅತ್ಯಂತ ಸುಂದರಿಯಾದ ಹೆಣ್ಣುಮಗಳು. ಅವರು ಕಾಡಿನಲ್ಲಿ ವಾಸ ಮಾಡುತ್ತಿದ್ದರು. ಅವರ ರಕ್ಷಣೆಯ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು ಕವಿ, ಸಾಹಿತಿ ಹೇಳಿರುವುದು. ದ್ರೌಪದಿಯವರು ಕಾಡಿನಲ್ಲಿ ಇದ್ದರು ಎನ್ನುವುದನ್ನು ನಾವು ಮರೆಯಬಾರದು. ಎರಡನೆಯದಾಗಿ, ಬೇರೆಯವರಿಗೆ ಕೊಡಬಾರದು ಎಂದು ಹೇಳುವುದು ಸರಿಯಾಗಿದೆ. ನಿಮ್ಮ ಸರ್ಕಾರವೇ ಅಧಿಕಾರದಲ್ಲಿತ್ತು. ಆಗ ನೀವೇ ಅವರಿಗೆ ಕೊಟ್ಟಿದ್ದರೆ, ನಾವು ಇನ್ನೂ ಹೆಚ್ಚಿಗೆ ಆನಂದಪಡುತ್ತಿದ್ದೆವು. ಎಲ್ಲಾ ಉತ್ತಮ . . .

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಸ್ವತ್ತು. Don't brand it. Don't brand it. No, it's not good.

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, ನೀವು 12.05 ಗಂಟೆಗೆ ಮಾತನಾಡಲು ಪ್ರಾರಂಭ ಮಾಡಿದ್ದೀರಿ. ಒಂದು ವೇಳೆ, ನೀವು ಯೀಲ್ಡ್ ಆದಲ್ಲಿ, ಬೇರೆ ಮಾನ್ಯ ಸದಸ್ಯರು ಮಾತನಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಐದು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಸಭಾನಾಯಕರೇ, ನೀವು ಅದಕ್ಕೆ ದುಡ್ಡು ಕೊಟ್ಟಿರುವುದು ತಪ್ಪೆಂದು ಹೇಳುತ್ತಿಲ್ಲ. ನೀವು ಬೇರೆಯವರಿಗೆ ತಪ್ಪು ಎಂದು ಹೇಳಿ, ಮುಖಮೂತಿಗೆ ಮಸಿ ಬಳಿಯುವುದಕ್ಕೆ ಹೋಗಬೇಡಿ ಎಂದು ಹೇಳುತ್ತಿರುವುದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅವರು ಸಾಹಿತ್ಯದ ಬಗ್ಗೆ ನಾಟಕ ಮಾಡುತ್ತಿದ್ದಾರೆ, ಒಂದು ಪದದಲ್ಲಿ ಅಲ್ಲಗಳೆಯುವುದು ಬಹಳ ಅನ್ಯಾಯವಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಿಮ್ಮ ಸಂಘ–ಪರಿವಾರದವರು ಶ್ರೀರಾಮನ ಮೇಲೆ ಏನು ಬೇಕಾದರೂ ಮಾತನಾಡಿದರೆ, ಅದು ನಡೆಯುತ್ತದೆ. ಬೇರೆಯವರು ಏನಾದರೂ ಮಾತನಾಡಿದರೆ ತಪ್ಪು ಎಂದು ತಿಳಿದುಕೊಂಡಿದ್ದೀರಲ್ಲ, ಅದನ್ನು ಬಿಡಿ ಎಂದು ಹೇಳುತ್ತಿರುವುದು. ಹಣವನ್ನು ಕೊಡುವುದು ಮತ್ತು ಬಿಡುವುದೆಲ್ಲಾ ಸರ್ಕಾರಕ್ಕೆ ಬಿಟ್ಟಿದ್ದು. ಅದನ್ನು ಜನ ತೀರ್ಮಾನ ಮಾಡುತ್ತಾರೆ. ಈಗ ಅದನ್ನು ಬಿಟ್ಟುಬಿಡಲಿ. ಅದರ ಬಗ್ಗೆ ನಾನೇನು ತಲೆಕೆಡಿಸಿಕೊಳ್ಳುವುದಿಲ್ಲ. ಮತ್ತೆ Fiscal Management ಎಂದು ಏನಿದೆ, . . . ಏಕೆಂದರೆ, ನಾವು 25 ಜನ ಸಂಸತ್ತಿನ ಸದಸ್ಯರನ್ನು ಆ ಪಕ್ಷದಿಂದಲೇ ಕಳುಹಿಸಿದ್ದೇವೆ. ನಿಮ್ಮ ರಿಪೋರ್ಟ್ ಪ್ರಕಾರವೇ, according to the Medium-Term Fiscal Plan, the Fiscal Deficit is Rs.58,321 Crores. The revenue deficit is Rs.19,486 Crores. ಆ Budget Speech ಅನ್ನು ತಾವು ನೋಡಿದಾಗ, 19,000 ಕೋಟಿ ರೂಪಾಯಿಗಳ deficit ಇದ್ದುದು, 2021–22ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ 104 ರಲ್ಲಿ '15,000 ಕೋಟಿ ರೂಪಾಯಿಗಳು' ಎಂದು ಆಗಿದೆ. 4000 ಕೋಟಿ ರೂಪಾಯಿಗಳ deficit ಇದೆ. ನೀವು ಅದನ್ನು ಎಲ್ಲಿಂದ ತರುತ್ತೀರಿ ಎಂದು ಕೂಡ ನಾವು ಹೇಳಲಿಲ್ಲ. Medium Term Fiscal Plan 2020-21 ನ ಪುಟ ಸಂಖ್ಯೆ.43ರಲ್ಲಿ "Based on the 15th Finance Commission recommendations for the period 2021-2026, Karnataka will have a 1.50% of share in the divisible pool of central taxes. This implies that out of every Rs.100 of revenue in the divisible pool during the 2021-2026 period, Karnataka will receive Rs.1.50. This 24.5% lower than Rs.1.98 share by the 14th Commission for 2015-20 period." ಎಂದು ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಇದು ರಾಜ್ಯ ಸರ್ಕಾರದ ಪರ ಕೇಂದ್ರ ಸರ್ಕಾರ ಮಾಡುತ್ತಿರುವಂಥ ಮಲತಾಯಿ ಧೋರಣೆ. ಇದಕ್ಕೆ ಯಾರೂ ಕೂಡ ಚಕಾರ ಎತ್ತುವುದಿಲ್ಲ. ಈ ಮಲತಾಯಿ ಧೋರಣೆಯಿಂದ ಈ ರಾಜ್ಯಕ್ಕೆ ಎಷ್ಟು ತೊಂದರೆಯಾಗುತ್ತದೆಂದು ತಾವ್ಯಾರೂ ಸಹ ಗಮನದಲ್ಲಿಟ್ಟುಕೊಳ್ಳಲಿಲ್ಲ. 2021–22ನೇ ಸಾಲಿನ ಆಯವ್ಯಯವನ್ನು ಗಮನಿಸಿದಾಗ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನೆ ಕೆಲಸ ಮಾಡಿ ಕೂಲಿ ಮಾಡಿ ಬದುಕುವ ಮಹಿಳೆಯರು ಕೋವಿಡ್‌ನಿಂದಾಗಿ ವರ್ಷದಿಂದ ಕೆಲಸವಿಲ್ಲದೇ ಸಂಕಷ್ಟಕ್ಕೆ ಸಿಲುಕಿದ್ದಾರೆ, ಅಂತಹ ಮಹಿಳೆಯವರಿಗೆ ಸಹಾಯವಾಗಲು ಉಚಿತ ಆರೋಗ್ಯ ಮತ್ತು ಉದ್ಯೋಗ ಖಾತರಿಪಡಿಸುವ ಯಾವುದೇ ಅಂಶವಿಲ್ಲ. ಅದೂ ಅಲ್ಲದೇ, ನಾವು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೆಲಸವನ್ನು 200 ರೂಪಾಯಿಗಳಿಂದ 700 ರೂಪಾಯಿಗಳಿಗೆ ಹೆಚ್ಚಿಸಿ ದಿನಗೂಲಿ ನಿಗದಿಪಡಿಸಿ, ಅದನ್ನು ನಗರ ಪ್ರದೇಶಗಳಿಗೆ ವಿತರಿಸಬೇಕೆಂದು ವಿರೋಧಪಕ್ಷದ ಸದಸ್ಯರೆಲ್ಲರೂ ಡಿಮಾಂಡ್‌ನ್ನು ಇಟ್ಟಿದ್ದೆವು. ಆದರೆ, ರಾಜ್ಯ ಬಿ.ಜೆ.ಪಿ ಸರ್ಕಾರವು ಯಾವುದರ ಬಗ್ಗೆಯೂ ಕಿಂಚಿತ್ತು ಗಮನಹರಿಸದೇ ಆರ್ಥಿಕ ಪುನಶ್ಚೇತನಕ್ಕೆ ಇದ್ದ ಅವಕಾಶವನ್ನು ಸಹ ಕಳೆದುಕೊಂಡಿದೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಸನ್ಮಾನ್ಯ ಪ್ರಧಾನ ಮಂತ್ರಿಗಳು ಮೊಟ್ಟಮೊದಲನೆಯ ಭಾಷಣ MNREGA ಬಗ್ಗೆ ಹೇಳಿದ್ದರು. ಇದನ್ನು ನಾನು ಜ್ಞಾಪಕಾರ್ಥವಾಗಿ ಇಟ್ಟಿರುತ್ತೇನೆ. ಯು.ಪಿ.ಎ., ಸರ್ಕಾರ ಮಾಡಿದ ಅನಾಹುತವೆಂದು ಹೇಳುತ್ತಿದ್ದೇನೆ. ಆ ಅನಾಹುತ ಇದ್ದುದರಿಂದಲೇ ಇವತ್ತು ಯಾರೂ ಸಹ ಹೆಚ್ಚಿನ ಜನ ಹಸಿವಿನಿಂದ ಸಾಯಲಿಲ್ಲ. ಎಲ್ಲರಿಗೂ ಸಹ ಕೋವಿಡ್‌ನ ಈ ಒಂದು ಮಹಾಮಾರಿ ಬಂದಂತಹ ಸಂದರ್ಭದಲ್ಲಿ ಸಹಾಯಕವಾಗಿ ಬಂದಿದ್ದು MNREGA. ಇದನ್ನು ಅವರು ಸಹ ಅರ್ಥ ಮಾಡಿಕೊಂಡಿದ್ದಾರೆ. ಆತ್ಮನಿರ್ಭರ್ ಇದೆ. ಮೊದಲು 'ಸ್ಕಿಲ್ ಇಂಡಿಯಾ' ಇತ್ತು. 'Make in India' ಆಯಿತು. ಈಗ ಸಿಂಹವನ್ನು ನಿಲ್ಲಿಸಿದ್ದಾರೆ. ಬೇರೆ ರಾಜ್ಯದಲ್ಲಿ ನಟ್ಟು ಮತ್ತು ಬೋಲ್ಟ್‌ನ್ನು ಹಾಕಿ ಸಿಂಹವನ್ನು ನಿಲ್ಲಿಸಿದ್ದಾರೆ. ನಮ್ಮಲ್ಲಿ ಕಂಟೋನ್ಮೆಂಟ್‌ನ ಗುಜರಿಯಿಂದ ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಮನೆಯ ಮುಂಭಾಗದಲ್ಲಿ ವಿಂಡ್ಸರ್‌ಮ್ಯಾನರ್ ಎದುರಿಗೆ ಈಗ ಅದನ್ನು ಸ್ಮಾರಕವಾಗಿ ಇಟ್ಟಿದ್ದಾರೆ. ಅದು ಕೇವಲ ಸ್ಮಾರಕವಾಗಿ ಉಳಿದುಕೊಳ್ಳುತ್ತದೆಯೇ ವಿನಃ ಅದರಿಂದ ಜನಕ್ಕೆ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ. ಆದ್ದರಿಂದ ಇದು ಬಡವರ ವಿರೋಧಿ ಸರ್ಕಾರ. ರೈತ ವಿರೋಧಿ ಸರ್ಕಾರ. ಮಹಿಳಾ ವಿರೋಧಿ ಸರ್ಕಾರ. ವಿದ್ಯಾರ್ಥಿಗಳ ವಿರೋಧಿ ಸರ್ಕಾರ. ಕೇಂದ್ರ ಸರ್ಕಾರ ಹೀಗಿದ್ದರೂ ಕೂಡ ಬಹಳ ಹೆಸರುವಾಸಿಯಾಗಿದೆ. ಸೂಟು-ಬೂಟಿನ ಸರ್ಕಾರವಾಗಿದೆ. ನಮ್ಮ ರಾಜ್ಯದ ಸರ್ಕಾರ ಸಫಾರಿ ಸೂಟಿನ ಸರ್ಕಾರವೆಂದು ಹೇಳಿದರೆ ಏನೂ ತಪ್ಪಾಗಲಾರದು. ಈ ಬಜೆಟ್‌ನಿಂದ ಬಡವರಿಗಾಗಲೀ ಅಥವಾ ಮಧ್ಯಮ ವರ್ಗದವರಿಗೆ ಯಾವುದೇ ರೀತಿಯಲ್ಲಿ ಸಹಾಯವಾಗುವುದಿಲ್ಲ. ಇದನ್ನು ನಾವು ಬಹಳ ಸಂಪೂರ್ಣವಾಗಿ ಖಂಡಿಸುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗ Discussion on Budget Speech ಇದೆ. ನಾವು ಪದೇ ಪದೇ ಅಧಿಕಾರಿಗಳು ಸದನದಲ್ಲಿ ಇರಬೇಕೆಂದು ಹೇಳುತ್ತಿದ್ದೇವೆ. ಯಾರಾದರೂ ಇಲಾಖೆಯ ಹಿರಿಯ ಅಧಿಕಾರಿಗಳು ಇದ್ದಾರೆಯೇ? ಆರ್ಥಿಕ ಇಲಾಖೆಯವರು ಕೂಡ ಯಾರು ಇಲ್ಲ. ನಾವೆಲ್ಲಾ ಸುಮ್ಮನೆ ಇದ್ದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಿ.ಎಂ.ಇಬ್ರಾಹಿಂರವರೇ ಖಂಡಿತವಾಗಿ ಪುನಃ ಬರುತ್ತಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಒಳ್ಳೆಯ ಕಥೆ ಆಯಿತಲ್ಲಾ, ಅವರು ಯಾವಾಗ ಬರುತ್ತಾರೆಂದು ಹೇಳಬೇಕು.

**ಉಪ ಸಭಾಪತಿಯವರು:–** ಶ್ರೀ ಕೆ.ಎ.ತಿಪ್ಪೇಸ್ವಾಮಿಯವರೇ ತಾವು ಮಾತನಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಮಧ್ಯಾಹ್ನ ಮಾತನಾಡುತ್ತೇನೆ. ದಯಮಾಡಿ ಅವಕಾಶ ಮಾಡಿಕೊಡಬೇಕು.

**ಉಪ ಸಭಾಪತಿಯವರು:–** ಆಯಿತು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇವತ್ತು ಯಾವ್ಯಾವ ಅಧಿಕಾರಿಗಳು ಇರಬೇಕೆಂಬುದನ್ನು ಖಚಿತಪಡಿಸಿಕೊಂಡು ಅವರು ತಮ್ಮ ಮಾತನ್ನು ಮುಂದುವರೆಸಲಿ.

**ಉಪ ಸಭಾಪತಿಯವರು:–** ಡಾ: ತಳವಾರ್ ಸಾಬಣ್ಣ ತಾವು ಮಾತನಾಡಿ.

**ಡಾ: ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ . . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಉಪ ಸಭಾಪತಿಯವರು:–** ಆಯಿತು, ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮೀಸಲಾತಿಯ ಬಗ್ಗೆ ಬಹಳ ಗೊಂದಲವಾದ ವಿಚಾರವಿದೆ. ಸಂವಿಧಾನದ ಅನುಚ್ಛೇದ 14ರಲ್ಲಿ ಸಮಾನತೆ ಬಗ್ಗೆ ಎತ್ತಿಹಿಡಿಯುತ್ತದೆ. ಅದರಲ್ಲಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗದವರಿಗೆ ಮೀಸಲಾತಿಯನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕೆಂದು ಇದೆ. ಆದರೆ, ನಾವು ಇತ್ತೀಚಿನ ಬೆಳವಣಿಗೆಯನ್ನು ಗಮನಿಸಿದಾಗ, ಉಳ್ಳವರಿಗೂ ಕೂಡ ಮೀಸಲಾತಿ ಕೊಡತಕ್ಕಂಥದ್ದನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತಿದೆ. ಈ ಮೀಸಲಾತಿ ಎನ್ನುವುದು Employment Exchange ಅಲ್ಲ ಅಥವಾ ಒಂದು ಬಡತನ ನಿರ್ಮೂಲನ ಕಾರ್ಯಕ್ರಮವೂ ಅಲ್ಲ. ಸಮಾಜದಲ್ಲಿ ಐತಿಹಾಸಿಕವಾಗಿ ಸಾಮಾಜಿಕವಾಗಿ ಅವಕಾಶಗಳನ್ನು ಕಳೆದುಕೊಂಡಂಥವರಿಗೆ ಅವಕಾಶವನ್ನು ಮಾಡಿಕೊಡತಕ್ಕಂಥ ಈ ಒಂದು ಪ್ರಾಧಾನ್ಯ ಸಂವಿಧಾನದಲ್ಲಿದೆ. ಅದರ ಪ್ರಕಾರ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ಕೇವಲ ಈಗಾಗಲೇ *Indira Sawhney case* ನಲ್ಲಿ 1993ನೇ ಇಸವಿಯಲ್ಲಿ 9 ಜಡ್ಜ್ ಬೆಂಚ್ ಬಹಳ ಸ್ಪಷ್ಟವಾಗಿ ಸಂಪೂರ್ಣವಾದ ತೀರ್ಪನ್ನು ಕೊಟ್ಟಿದೆ. ಅಂದರೆ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದಿಳಿದವರಿಗೆ ಮೀಸಲಾತಿ ಕೊಡಬೇಕೆಂದು ಸ್ಪಷ್ಟವಾಗಿ ಹೇಳಿದೆ. ಆದರೆ, ಈಗ ಅದರಲ್ಲೂ ಕೂಡ 'creamy layer' ಎನ್ನತಕ್ಕಂಥ ವಿಚಾರ ಪ್ರಸ್ತಾಪವಾಯಿತು. ಮಾನ್ಯ ಸದಸ್ಯರಾದ ಅಡಗೂರ್ ಹೆಚ್.ವಿಶ್ವನಾಥ್‌ರವರು ಕ್ರಿಮಿಲೇಯರ್ ತರಬೇಕೆಂದು ಹೇಳಿದ್ದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಗನಿಗೂ creamy layer ಬೇಕೇ ಅಥವಾ ಶ್ರೀ ಕೆ.ಎಸ್.ಈಶ್ವರಪ್ಪನವರ ಮಗನಿಗೂ creamy layer ಬೇಕೇ ಎಂದು ಹೇಳಿದರು. ನಾನು ಮೀಸಲಾತಿಗೋಸ್ಕರ ಹೇಳುತ್ತಿದ್ದೇನೆ. ಸರಿಸಮಾನತೆಗೆ ನಮಗೆ ಮೀಸಲಾತಿ ಬೇಕೇ ವಿನಃ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಗ ಸಚಿವರು ಅಥವಾ ಮುಖ್ಯಮಂತ್ರಿಯಾದರೂ ಕೂಡ ಅವರು ದೇವಸ್ಥಾನದ ಒಳಗಡೆ ಹೋಗುವುದಕ್ಕೆ ಆಗುತ್ತದೆಯೇ? ಇನ್ನೂ ಸಾಮಾಜಿಕವಾಗಿ ಸಮಾನತೆ ಬಂದಿಲ್ಲ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಈಗ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಇರಬಹುದು ಮತ್ತು ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿರಬಹುದು. ಅವರು ಯಾವುದಾದರೂ ದೇವಸ್ಥಾನದ ಒಳಗಡೆಗೆ ಹೋಗುವುದಕ್ಕೆ ಆಗುತ್ತದೆಯೇ? ಎಲ್ಲೂ ಸಮಾನತೆ ಇಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ, ನಿನ್ನೆಗೆ 100 ವರ್ಷ ತುಂಬುತ್ತದೆ.

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಯಾವ ದೇವಸ್ಥಾನದಲ್ಲಿ ಪ್ರವೇಶ ನೀಡುತ್ತಿಲ್ಲವೆಂದು ಹೇಳಬೇಕು.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(379)15.3.2021/1.00/ಎಂ.ಎಂ-ಎಂ.ಡಿ**

**ಶ್ರೀ ಬಿ.ಕೆ. ಹರಿಪ್ರಸಾದ್:-** ನಾಗ್ಪುರ ದೇವಸ್ಥಾನದಲ್ಲಿ ಪ್ರವೇಶ ಇಲ್ಲ, ಬಾಕಿ ದೇವಸ್ಥಾನದಲ್ಲೆಲ್ಲಾ ಪ್ರವೇಶ ಇದೆ. ದಯವಿಟ್ಟು ನೀವೀಗ ಕುಳಿತುಕೊಳ್ಳಿ, ನಿಮಗೆ ಅವಕಾಶ ಸಿಕ್ಕಿದಾಗ ಮಾತನಾಡಿ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಹರಿಪ್ರಸಾದ್‌ರವರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಗನಿಗೆ ಯಾವ ದೇವಸ್ಥಾನದಲ್ಲಿ ಪ್ರವೇಶವಿಲ್ಲ ಎಂಬುದನ್ನು ತಿಳಿಸಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ದಯವಿಟ್ಟು ನಿಮಗೆ ಅವಕಾಶ ಸಿಕ್ಕಿದಾಗ ಮಾತನಾಡಿ.

**ಉಪಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಮ್ಮ ಮಾತನ್ನು ಮುಗಿಸಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಿನ್ನೆಯ ಪತ್ರಿಕೆಯಲ್ಲಿದೆ, ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿರುವ ದೇವಸ್ಥಾನಕ್ಕೆ ಅವರಿಗೆ ಪ್ರವೇಶ ಕೊಡಲಿಲ್ಲ. ಈ ವಿಚಾರ ನಿನ್ನೆಯ ಪತ್ರಿಕೆಯಲ್ಲಿ ಬಂದಿದೆ ಅದನ್ನು ಓದಿ. ಮಾನ್ಯ ರವಿಕುಮಾರ್‌ರವರು ಯಾವ ದೇವಸ್ಥಾನದಲ್ಲಿ ಪ್ರವೇಶ ಕೊಡಲಿಲ್ಲ ಎಂದು ಕೇಳಿದರು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ರಾಷ್ಟ್ರಪತಿಗಳು ಈ ರಾಷ್ಟ್ರದ ಸರ್ವೋಚ್ಛ ಸಂವಿಧಾನವನ್ನು ಕಾಪಾಡುವಂತಹ ಮನುಷ್ಯರಲ್ಲವೇ, ಅವರು ಮೊನ್ನೆ ಹೋದಾಗ 'ಪುರಿ' ದೇವಸ್ಥಾನದಲ್ಲಿ ಅವರನ್ನು ಬಿಟ್ಟರೇ? ನೀವು ಕೂಡ ಏನು ಮಾತನಾಡುತ್ತೀರಿ? ಸ್ವಲ್ಪ ತಿಳಿದುಕೊಳ್ಳಿ. ನನ್ನ ಜೊತೆಗೆ ಬನ್ನಿ, ನಾನು ತೋರಿಸುತ್ತೇನೆ. ಯಾವ ದೇವಸ್ಥಾನದಲ್ಲಿ ಒಳಗೆ; ನೀವು ಶೂದ್ರರಿಗೆ ಕೀಳರಿಮೆ ಬರಲಿ ಎಂದು 'ಮಡೆ ಸ್ನಾನ' ಮಾಡಿಸುತ್ತೀರಿ. ಅದರ ಬಗ್ಗೆ ನಿಮ್ಮಲ್ಲಿ ಏನಾದರೂ ಇದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಹರಿಪ್ರಸಾದ್‌ರವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ದಯವಿಟ್ಟು ನೀವು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ನೀವು ಹೇಳಿದ ರೀತಿ ಸಾಮಾಜಿಕ ನ್ಯಾಯ ತರಬೇಕಾದರೆ ಎಲ್ಲಾ ಕಡೆಯೂ ಕೂಡ ಸಂವಿಧಾನ ಕೊಟ್ಟಂತಹ ಆಶಯದಲ್ಲಿ ಎಲ್ಲರೂ ಒಟ್ಟಾಗಿ ದುಡಿಯಬೇಕು. ಅದರಲ್ಲಿ ವಾದ ಇಲ್ಲ. ಇಲ್ಲಿಯವರೆಗೆ ನೀವೂ ಸರ್ಕಾರ ನಡೆಸಿದ್ದೀರಿ, ನಾವೂ ಸರ್ಕಾರ ನಡೆಸಿದ್ದೇವೆ. ಬಹಳ ಹೆಚ್ಚು ಸಮಯ ನಡೆಸಿದವರು ನೀವೇ. ಏನೇ ತಪ್ಪುಗಳಾದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಶಕ್ತಿ ಹಾಕಬೇಕಾದಂತಹ ಜವಾಬ್ದಾರಿ ನಿಮಗೂ ಇತ್ತು, ಈಗ ನಮಗೂ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

'ಮಡೆ ಸ್ನಾನ'ದ ಬಗ್ಗೆ ನೀವು ಹೇಳಿದಿರಲ್ಲಾ ನಮ್ಮದೇ ಸರ್ಕಾರ ಇರುವಾಗ ಮಡೆ ಸ್ನಾನವನ್ನು ಪರಿವರ್ತನೆ ಮಾಡಿರುವುದನ್ನು ಕೂಡ ತಾವು ಗಮನಿಸಿದ್ದೀರಿ. ಮಡೆ ಸ್ನಾನದ ಬಗ್ಗೆ ಚರ್ಚೆ ಬಂದಂತಹ ಸಂದರ್ಭದಲ್ಲಿ ನೀವೇನು ಹೇಳಿದ್ದೀರಿ, ನಾವೇನು ಹೇಳಿದ್ದೇವೆ ಎನ್ನುವುದು ಇವತ್ತು ದಾಖಲೆಗಳಲ್ಲಿದೆ. ತಾವು ಒಂದು ಸಲ ನೆನಪು ಮಾಡಿಕೊಳ್ಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರು ಸಭಾನಾಯಕರಾಗಿ ಈ ರೀತಿ ಮಾತನಾಡುವುದು . . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಪ್ಪುಗಳಿಗೆಲ್ಲಾ ಈ ಆಡಳಿತ ನಡೆಸುವವರೇ ಕಾರಣ ಎಂದು ಹೇಳಬಾರದು. ವಾಸ್ತವಿಕವಾಗಿ ಏನಾಗಿದೆ ಎಂದು ಹೇಳಿ, ಅದನ್ನು ಸರಿಪಡಿಸೋಣ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ವಾಸ್ತವಿಕವಾಗಿ ಹೇಳುತ್ತೇನೆ ಕೇಳಿ. ಮೀಸಲಾತಿ ವಿರುದ್ಧ ಎಲ್ಲರೂ ಸಹ ಏತಕ್ಕೆ ಎದ್ದಿದ್ದಾರೆ ಎಂದು ಹೇಳಿದರೆ, 2015ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಚಾಲಕರು ಮೀಸಲಾತಿಯನ್ನು ತೆಗೆಯಬೇಕೆಂದು ಬಿಹಾರದಲ್ಲಿ ಒಂದು statement ಮಾಡಿದರು. ಶ್ರೀ ಲಾಲು ಪ್ರಸಾದ್‌ರವರೊಬ್ಬರೇ ಸಂಪೂರ್ಣವಾದ;

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ರವಿಕುಮಾರ್‌ರವರೇ, Please, please ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎನ್. ರವಿಕುಮಾರ್:-** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಚಾಲಕರು ಆ ರೀತಿ ಎಲ್ಲಿಯೂ ಹೇಳಿಲ್ಲ. ಅದರ ಸ್ಪಷ್ಟೀಕರಣಕ್ಕೆ ದಾಖಲೆ ಕೊಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದಕ್ಕೆ ದಾಖಲೆ ಕೊಡುತ್ತೇನೆ.

**ಶ್ರೀ ಎನ್. ರವಿಕುಮಾರ್:-** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಚಾಲಕರು ಮೀಸಲಾತಿಯನ್ನು ತೆಗೆಯಬೇಕೆಂದು ಎಲ್ಲಿಯೂ ಹೇಳಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ದಾಖಲೆ ಕೊಡದಿದ್ದರೆ ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ, ನೀವು ಈ ಸದನದ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೀರಾ? It is my challenge.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್. ರವಿಕುಮಾರ್:-** ಮೀಸಲಾತಿಯನ್ನು ಮುಂದುವರೆಸಬೇಕೆಂದು ಹೇಳುತ್ತಾರೆ, ಮೀಸಲಾತಿಯನ್ನು ನಿಲ್ಲಿಸಬೇಕೆಂದು ಎಲ್ಲಿಯೂ ಹೇಳಿಲ್ಲ.

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ಕುಳಿತುಕೊಳ್ಳಿ (ಗೊಂದಲ) ಮಾನ್ಯ ಹರಿಪ್ರಸಾದ್‌ರವರೇ ನಿಮಗೆ ಎರಡನೇ ಬಾರಿ ಅವಕಾಶ ಕೊಟ್ಟಿದ್ದೇನೆ. ಅದು ನಿಮ್ಮ ಸಮಯದ . . . ನೀವು ನೇರವಾಗಿ ಪೀಠಕ್ಕೆ ಮಾತನಾಡಿ ಏತಕ್ಕೆ ಅವರಿಗೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅನಂತರ . . . **(ಗೊಂದಲ)** ಬಿಹಾರ ಜನತೆ....

**ಉಪಸಭಾಪತಿಯವರು:-** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ತದನಂತರ ಬಿಹಾರದ ಜನತೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಹರಿಪ್ರಸಾದ್‌ರವರೇ, ಇಲ್ಲಿ ಕೇಳಿ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಒಂದು ಕಡೆ 'ನನ್ನ ಕೆಲಸವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ವ್ಯವಸ್ಥಿತವಾಗಿ ಈ ರಾಜ್ಯದಲ್ಲಿ ಮಾಡುತ್ತಿದೆ, ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಟ್ಟಿದೆ, ಸಮಾನತೆ ತಂದಿದೆ, ಮೀಸಲಾತಿಯನ್ನು ಪ್ರತಿಪಾದನೆ ಮಾಡಿದೆ' ಎಂದು ಹೇಳಿದ್ದಾರೆ. ಅವರ ಹೇಳಿಕೆಯನ್ನು ಉಲ್ಲೇಖ ಮಾಡಲಾಗಿದೆ

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ಅದು Nagpur University book. WhatsApp University book ಅದು. ಸ್ವಲ್ಪ ಕುಳಿತುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:- (ಗೊಂದಲ)** ಸಾಮಾಜಿಕ ನ್ಯಾಯ ಕೇಳುವವರು ನೀವು. ಸಮರ್ಥನೆ ಮಾಡಬೇಕಾಗಿತ್ತು, ನೀವು . . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಚಾಲಕರೇ ಮೀಸಲಾತಿ ತೆಗೆಯಬೇಕೆಂದಾಗ ಬಿಹಾರದ ಜನತೆ ತಕ್ಕ ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸ್ವಯಂ ಸೇವಕ ಸಂಘವನ್ನು ನೀವು ಹುಟ್ಟುಹಾಕುತ್ತಿದ್ದೀರಿ.

**ಶ್ರೀ ಎನ್. ರವಿಕುಮಾರ್:-** ನೀವು ಹೇಳುತ್ತಿರುವುದು ತಪ್ಪು. ಸಂಘದ ಸರ ಸಂಚಾಲಕರು ಮೀಸಲಾತಿಯನ್ನು ರದ್ದು ಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ. ಹೇಳಿದ್ದರೆ ಆ statement ನ್ನು ತೆಗೆದುಕೊಂಡು ಬನ್ನಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬಿಹಾರದಲ್ಲಿ ಆ ಹೇಳಿಕೆ ಕೊಟ್ಟ ನಂತರ, ಅದನ್ನು ಶ್ರೀ ಲಾಲು ಪ್ರಸಾದ್‌ರವರು ವಿರೋಧ ಮಾಡಿದ್ದಾರೆ, ಬಿಹಾರದ ಜನತೆ ತಕ್ಕ ಶಾಸ್ತಿಯನ್ನು ಮಾಡಿ ಶ್ರೀ ಲಾಲು ಪ್ರಸಾದ್‌ರವರನ್ನು ಬಿಹಾರದಲ್ಲಿ ಗೆಲ್ಲಿಸಿದ್ದರು.

**ಶ್ರೀ ಎನ್. ರವಿಕುಮಾರ್:-** ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬೇಡಿ. ಆರ್.ಎಸ್.ಎಸ್. ಮೀಸಲಾತಿ ಪರವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ತದನಂತರ 'ಬೈಯಾ ಜೋಷಿ' ಎಂದು ಹೇಳಿ 2020ರಲ್ಲೂ ಸಹ ಈ ಹೇಳಿಕೆ ಕೊಟ್ಟು ಅಲ್ಲೂ ಸಹ ಆ ಹೇಳಿಕೆಯನ್ನು ತೆಗೆಯಬೇಕಾಯಿತು.

**ಶ್ರೀ ಎನ್. ರವಿಕುಮಾರ್:-** ಅಂಬೇಡ್ಕರ್ ವಿರೋಧಿಗಳು ನೀವು. ಆರ್.ಎಸ್.ಎಸ್. ಮೀಸಲಾತಿಯ ಪರವಾಗಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಮಾತನಾಡುವುದಕ್ಕೆ ಬಿಡಿ.

**ಉಪಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ದಯವಿಟ್ಟು ಕುಳಿತುಕೊಳ್ಳಿ, ಅವರು ಮಾತನಾಡಲಿ. ನಿಮ್ಮ ಸಮಯ ಬಂದಾಗ ನೀವು ಮಾತನಾಡಿ, ಆಗ ಇದಕ್ಕೆ ಉತ್ತರ ಕೊಡಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಹರಿಪ್ರಸಾದ್‌ರವರೇ, ನೀವು ರಾಜ್ಯಸಭೆಯಲ್ಲಿದ್ದವರು. ಈ ರೀತಿ ವಿನಾಕಾರಣ . . .

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾನು yield ಆಗುತ್ತಿಲ್ಲ. ದಯವಿಟ್ಟು ಮಾನ್ಯ ಸಭಾನಾಯಕರು ಕುಳಿತುಕೊಳ್ಳಲಿ.

**(ಗೊಂದಲ)**

**ಉಪಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಅವರು ಮಾತನಾಡಿದ್ದನ್ನು ನೋಟ್ ಮಾಡಿಕೊಂಡು ಆ ಸಂದರ್ಭದಲ್ಲಿ ನೀವು ಉತ್ತರ ಕೊಡಿ. ಅವರೇನು ಮಾತನಾಡುತ್ತಿದ್ದಾರೆ ಅದನ್ನು ನೋಟ್ ಮಾಡಿಕೊಳ್ಳಿ, ನಿಮಗೆ ಅವಕಾಶ ಸಿಕ್ಕಿದಾಗ ಅದಕ್ಕೆ ಉತ್ತರ ಕೊಡಿ. ಈಗ ಮಾನ್ಯ ಹರಿಪ್ರಸಾದ್‌ರವರು ಮಾತನಾಡಲಿ. ನೀವು ಬೇಗ ಮಾತನಾಡಿ ಮುಗಿಸಿ. ನೀವು ಒಂದು ಸಲ ಮಾತನಾಡಿ ಮುಗಿಸಿದ್ದಿರಿ, ಮತ್ತೆ ಅವಕಾಶ ಕೊಡಲಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮೀಸಲಾತಿಯ ವಿರುದ್ಧ ಕೂಗು ಎತ್ತಿದ್ದಕ್ಕೆ ಬಿಹಾರದಲ್ಲಿ ಇವರನ್ನು ಸೋಲಿಸಿ ಕಳುಹಿಸಿದರು. ಈ ಬಾರಿಯೂ ಸಹ ಸೋಲಿಸಿ ಕಳುಹಿಸಿದ್ದಾರೆ. ಆದ್ದರಿಂದ ಜನಸಾಮಾನ್ಯರ ಮುಂದೆ ಹೋಗಿ ಮೀಸಲಾತಿಯನ್ನು ತೆಗೆಯಲು ಹೇಳುವುದಕ್ಕಾಗುವುದಿಲ್ಲವೆಂದು ಹೇಳಿ, ಈ ಎಲ್ಲಾ ವರ್ಗದವರನ್ನೂ ಸಹ ನಮಗೂ ಮೀಸಲಾತಿ ಬೇಕೆಂದು ಎತ್ತಿ ಕಟ್ಟಿರುವುದು. ಎಲ್ಲಾ ವರ್ಗದವರಿಗೂ ಮೀಸಲಾತಿ ಕೊಡಲಿ. ಅವರವರ ಜನಸಂಖ್ಯೆ ಎಷ್ಟಿದೆ ಅದಕ್ಕನುಗುಣವಾಗಿ ಮೀಸಲಾತಿ ಕೊಡಲಿ, ನಮಗೇನೂ ಅಭ್ಯಂತರವಿಲ್ಲ. ಆದರೆ ಈ ಮೀಸಲಾತಿ ಷಡ್ಯಂತರವು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಷಡ್ಯಂತರ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ರೆಕಾರ್ಡ್‌ಗೆ ಹೋಗುವಾಗಲೂ ನೀವು ಅದನ್ನೇ ಹೇಳಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:–** ರೆಕಾರ್ಡ್ ಅಲ್ಲ . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರೇ, ಈಗ ಮಾತನಾಡಿ.

**ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, . .

**ಶ್ರೀ ಎನ್. ರವಿಕುಮಾರ್:-** ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ವಿರೋಧಿಗಳು ನೀವು. ಮೀಸಲಾತಿ ತಂದ ಅಂಬೇಡ್ಕರ್‌ರವರನ್ನು ಸೋಲಿಸಿದವರು ಕಾಂಗ್ರೆಸ್‌ನವರು.

**ಶ್ರೀ ಯು.ಬಿ.ವೆಂಕಟೇಶ್:-** ನಿಮಗೇನೂ ಗೊತ್ತಿಲ್ಲ, ಚರಿತ್ರೆ ಓದಿ.

**ಉಪಸಭಾಪತಿಯವರು:-** ಮಾನ್ಯ ತಳವಾರ್ ಸಾಬಣ್ಣನವರೇ, ನೀವು ಮಾತನಾಡಲು ಪ್ರಾರಂಭ ಮಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್‌ರವರನ್ನು ಮಂತ್ರಿ ಮಾಡಿದ್ದು ಕಾಂಗ್ರೆಸ್. . . . **(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ನಿಮ್ಮ ಸಮಯ ಮುಗಿದಿದೆ, ಈಗ ಶ್ರೀ ತಳವಾರ್ ಸಾಬಣ್ಣನವರಿಗೆ ಸಮಯ ಕೊಟ್ಟಿದ್ದೇನೆ. ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ಹರಿಪ್ರಸಾದ್‌ರವರೇ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ತಳವಾರ್ ಸಾಬಣ್ಣನವರೇ, ತಾವು ಮಾತನಾಡಲು ಪ್ರಾರಂಭ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಚುನಾವಣೆಯಲ್ಲಿ ಸೋಲುವುದಕ್ಕೆ ಯಾರು ಕಾರಣ?

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇತಿಹಾಸದ ಪುಟವನ್ನು ತೆಗೆದು ನೋಡಿ, ಅಂಬೇಡ್ಕರ್‌ರವರಿಗೆ ಅವಕಾಶ ಕೊಟ್ಟಿದ್ದು ಈ ರಾಷ್ಟ್ರದ . . .

**ಉಪಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ಕುಳಿತುಕೊಳ್ಳಿ. ನೀವು ಹೀಗೆ ಸಮಯವನ್ನು ಹಾಳು ಮಾಡಿದರೆ ನಿಮ್ಮಲ್ಲಿರುವ ಒಬ್ಬರಿಗೆ ಅವಕಾಶವನ್ನು ಕಡಿತ ಮಾಡಲಾಗುತ್ತದೆ.

**ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಳೆದ ವಾರ ಹಿರಿಯ ಸದಸ್ಯರಾದ ಮಾನ್ಯ ವಿಶ್ವನಾಥ್‌ರವರು ಅರ್ಥಶಾಸ್ತ್ರವನ್ನು ಸಾಹಿತ್ಯಿಕವಾಗಿ, ಪರಿಣಾಮಕಾರಿಯಾಗಿ ತಮ್ಮ ವಿಷಯವನ್ನು ಮಂಡನೆ ಮಾಡಿ ಬಜೆಟ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇಲೆ ಚರ್ಚೆ ಮಾಡಿದರು. ಇನ್ನೊಬ್ಬರು ಹಿರಿಯ ಸದಸ್ಯರಾದ ಮಾನ್ಯ ಹರಿಪ್ರಸಾದ್‌ಜೀಯವರು ಸಹ ರಾಜಕೀಯಪ್ರೇರಿತವಾಗಿರುವಂತಹ ಭಾಷಣವನ್ನು ಮಂಡನೆ ಮಾಡಿದರು. ಮಾನ್ಯ ವಿಶ್ವನಾಥ್‌ರವರು ಮಾತನಾಡುವಾಗ ಮೇಲಿಂದ ಮೇಲೆ ಹೇಳುತ್ತಿದ್ದರು, ಈ ವಿಷಯವನ್ನು ಮಾತನಾಡುವುದಕ್ಕೆ ಆರ್ಥಿಕ ತಜ್ಞರು ಮಾತ್ರ ಹೆಚ್ಚಿನ ಅರ್ಹತೆ ಹೊಂದಿರುತ್ತಾರೆ ಅಥವಾ ಅವರು ಮಾತನಾಡಬೇಕು ಎಂದು ಹೇಳಿದರು. ಈ ಇಬ್ಬರು ಹಿರಿಯ ಸದಸ್ಯರಿಗೆ ಗೌರವವನ್ನು ಕೊಡುತ್ತಾ, ನಾನು ಒಬ್ಬ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ, ಅರ್ಥಶಾಸ್ತ್ರದ ಪ್ರಾಧ್ಯಾಪಕನಾಗಿ, ಅರ್ಥಶಾಸ್ತ್ರದ ಸಂಶೋಧಕನಾಗಿ ನಾನು ಆರ್ಥಿಕ ತಜ್ಞನೆಂದು ಇಲ್ಲಿ claim ಮಾಡುತ್ತಿಲ್ಲ. ಆದರೆ 35 ವರ್ಷಗಳಿಂದ ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ನಾನು ಇವತ್ತು ಬಜೆಟ್ ಮೇಲೆ ಮಾತನಾಡುತ್ತಿದ್ದೇನೆ. ಮೊದಲನೆಯದಾಗಿ ನಾವು ಬಜೆಟ್ ಮೇಲೆ ಮಾತನಾಡಬೇಕಾದಾಗ ಅರ್ಥಶಾಸ್ತ್ರವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ. ಯಾವ ಸಂದರ್ಭದಲ್ಲಿ ನಾವು ಈ ಬಜೆಟನ್ನು ಮಂಡನೆ ಮಾಡುತ್ತೇವೆ ಮತ್ತು ಯಾವ ಉದ್ದೇಶಕ್ಕಾಗಿ ನಾವು ಬಜೆಟನ್ನು ಮಂಡನೆ ಮಾಡುತ್ತೇವೆ, ಮುಂದಿನ ದಿನಗಳಲ್ಲಿ ಅದನ್ನು ಯಾವ ರೀತಿ ತೆಗೆದುಕೊಂಡು ಹೋಗುತ್ತೇವೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಬೇಕಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಸಧ್ಯದಲ್ಲಿ ಈ ಆರ್ಥಿಕ ವರ್ಷದ ಅಂದರೆ, 2021–22ನೇ ಸಾಲಿನ ಬಜೆಟನ್ನು ಮಂಡನೆ ಮಾಡಿರುವ ಮುಖ್ಯಮಂತ್ರಿಯವರಾದ ಮಾನ್ಯ ಯಡಿಯೂರಪ್ಪನವರು ಒಂದು ಸಮತೋಲಿತವಾಗಿರುವಂತಹ ಬಜೆಟನ್ನು ಮಂಡನೆ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾರಣವಿಷ್ಟೇ, ಇಡೀ ಜಗತ್ತಿಗೇ ಗೊತ್ತಿದೆ. ಕೋವಿಡ್ ಸಂದರ್ಭದಲ್ಲಿ ಎಲ್ಲಾ ರಾಷ್ಟ್ರಗಳೂ ಆರ್ಥಿಕವಾಗಿ ಕುಗ್ಗಿರುವುದನ್ನು ಕಾಣುತ್ತೇವೆ. ಇದಕ್ಕೆ “Economic Contraction” ಎಂದು ಕರೆಯುತ್ತೇವೆ. “Economic Contraction” ಎಂದರೆ, ಅದು ನೆಗೆಟಿವ್ ಆಗಿರುವಂತಹ ಒಂದು ಸಂದರ್ಭವೆಂದು ಕಾಣುತ್ತೇವೆ. ಆರ್ಥಿಕ ಪ್ರಗತಿ ಬದಲಾಗಿ “Economic Contraction” ಕಾಣುತ್ತೇವೆ. ಸುದೈವದಿಂದ ಭಾರತವು ಆ ಸ್ಥಿತಿಗೆ ಮುಟ್ಟಿಲ್ಲ. ಕರ್ನಾಟಕ ರಾಜ್ಯವೂ ಸಹ ಆ ಸ್ಥಿತಿಗೆ ಮುಟ್ಟಿಲ್ಲವೆಂಬುದೇ ಒಂದು ಸಮಾಧಾನಕರವಾದಂತಹ ವಿಷಯ. ಈ ಸಂದರ್ಭದಲ್ಲಿ ಸಂಪನ್ಮೂಲಗಳ ಸಂಗ್ರಹಣೆ ಇಲ್ಲದೇ ಯಾವುದೇ ಬಜೆಟನ್ನು ಮಂಡನೆ ಮಾಡಲು ಸಾಧ್ಯವಿಲ್ಲ. Resource mobilization ಎಂದು ಕರೆಯುತ್ತೇವೆ. Resource mobilization ಅನ್ನು ಮಾಡುವುದೇ ಒಂದು ದೊಡ್ಡ challenge ಆಗಿದೆ. ಈ challenge ಇರುವಂತಹ ಸಂದರ್ಭದಲ್ಲಿ ಎರಡು ಲಕ್ಷದ 40 ಸಾವಿರ ಕೋಟಿಯಷ್ಟು ಬಜೆಟನ್ನು ಮಂಡನೆ ಮಾಡಿದ್ದಾರೆ ಎಂಬುದನ್ನು ಒಪ್ಪುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅದರಲ್ಲಿ ಸಾಲದ ಬಗ್ಗೆ ಒಂದು ಪ್ರಸ್ತಾವನೆ ಇದೆ. ಬೇರೆ ಮೂಲಗಳನ್ನು ತೆಗೆದುಕೊಂಡಾಗ ಇದ್ದಂತಹ ಮೂಲಗಳಲ್ಲಿ ಸದ್ಬಳಕೆ ಮಾಡಿ ವಿವಿಧ ಕ್ಷೇತ್ರಗಳಿಗೆ ಹಣವನ್ನು ಹಂಚಿಕೆ ಮಾಡಬೇಕಾಗುತ್ತದೆ. ಏಕೆಂದರೆ, ಬಜೆಟ್ ಎಂದರೆ ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಬೇರೆ ಬೇರೆ ಕ್ಷೇತ್ರಗಳಿಗೆ ಹಣವನ್ನು ಹಂಚಿಕೆ ಮಾಡಿ ಸಮತೋಲಿತವಾದಂತಹ ಬಜೆಟನ್ನು ಮಂಡನೆ ಮಾಡಬೇಕಾಗುತ್ತದೆ.

**(ಮುಂದು)**

**(380) 15–03–2021/ 01–10/ ಕೆಹೆಚ್–ಎಂಡಿ**

**ಡಾ॥ ತಳವಾರ್ ಸಾಬಣ್ಣ (ಮುಂದು):–**

ಆ ಒಂದು ಪ್ರಯತ್ನದ ಬಗ್ಗೆ ನಾನು ಹೇಳುತ್ತಿದ್ದೇನೆ. ಆ ಒಂದು ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ. ಏಕೆಂದರೆ, ಅವರು ಹಂಚಿಕೆ ಮಾಡಿರುವಂತಹ ಹಣವನ್ನು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ, ಕೃಷಿ ಕ್ಷೇತ್ರದ ಹೊಸ ದಿಕ್ಕಿನೆಡೆಗೆ ತೆಗೆದುಕೊಂಡು ಹೋಗುವುದಕ್ಕಾಗಿ, ಶಿಕ್ಷಣ ಕ್ಷೇತ್ರಕ್ಕೆ ಉತ್ತೇಜನ ಕೊಡುವುದಕ್ಕಾಗಿ, ಸೇವಾ ಕ್ಷೇತ್ರದ ವಿಸ್ತರಣೆಗಾಗಿ, ವಿವಿಧ ಸಮಾಜಗಳಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಮತ್ತು ಎಲ್ಲಾ ಜಿಲ್ಲೆಗಳಿಗೆ ಒಂದಿಲ್ಲ ಒಂದು ಯೋಜನೆಯನ್ನು ಕೊಡುವುದಕ್ಕೆ ಪ್ರಸ್ತಾವನೆಯನ್ನು ಮಾಡಿದ್ದಾರೆ. ಇದೊಂದು ಆರ್ಥಿಕ ಪ್ರಗತಿಗೆ ಪುನರ್ ಉತ್ಪಾದನೆಗೆ ಮತ್ತು ಪುನ:ಶ್ಚೇತನಕ್ಕೆ ಒಂದು ಪ್ರಯತ್ನ ಎಂದು ಹೇಳಬಹುದು.

ಮೊದಲನೆಯದಾಗಿ, ನೀರಾವರಿ ವಿಷಯವನ್ನು ತೆಗೆದುಕೊಂಡಾಗ ಇವತ್ತಿನವರೆಗೆ ಹಲವಾರು ಸರ್ಕಾರಗಳು ಬಂದಿವೆ, ಹೋಗಿವೆ. ಆದರೆ, ನೀರಾವರಿ ವಿಷಯ ಬಂದಾಗ ತೃಪ್ತಿಕರವಾಗಿರುವಂತಹ ಪ್ರಗತಿಯನ್ನು ಇಲ್ಲಿ ನಾವು ಕಾಣುವುದಿಲ್ಲ. ಏಕೆಂದರೆ, ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಇಂದಿಗೂ ಸಹ ಕರ್ನಾಟಕವು ಇಟ್ಟಿರುವಂತಹ ನೀರನ್ನು ಸದ್ಬಳಕೆ ಮಾಡಿಕೊಳ್ಳುವಂತಹ ರಾಜ್ಯ ಯಾವುದೆಂದರೆ, ಅದು ಕರ್ನಾಟಕ ರಾಜ್ಯ ಎಂದು ಹೇಳಬಹುದು. ಏಕೆಂದರೆ, ನೀರು ಸಾಕಷ್ಟು ಪ್ರಮಾಣದಲ್ಲಿ ಹರಿದು ಹೋಗುವಂತಹ ಪರಿಸ್ಥಿತಿ ನಮ್ಮಲ್ಲಿ ಇದೆ. ಆ ಒಂದು ನಿಟ್ಟಿನಲ್ಲಿ ಸರ್ಕಾರವು ಆಯವ್ಯಯದಲ್ಲಿ ತಮ್ಮ ಪ್ರಯತ್ನವನ್ನು ಮಾಡಿದೆ. ಅದೇನೆಂದರೆ, ಕೃಷ್ಣಾ ನ್ಯಾಯಾಧೀಕರಣ ಆಗಿರಬಹುದು, ಯು.ಕೆ.ಪಿ 3ನೇ ಹಂತದ ಯೋಜನೆಗೆ ಸಂಬಂಧಪಟ್ಟಿರುವಂತಹ ಒಂದು ಸರ್ವೇ ಆಗಿರಬಹುದು, ಇದರ ಬಗ್ಗೆ ಸರ್ಕಾರ ಪ್ರಯತ್ನ ಮಾಡಿದೆ. ಅದಕ್ಕಾಗಿ 31 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದ್ದಾರೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಾಗ 2 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಇಲ್ಲಿ ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ. ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಯಲ್ಲಿ ನೀರನ್ನು ಬಹಳ ಸದ್ಬಳಕೆ ಮಾಡಿದ್ದಾರೆ ಎಂಬ ವಿಷಯದ ಬಗ್ಗೆ ಮಾನ್ಯ ಸದಸ್ಯರು ಇನ್ನು ಹೆಚ್ಚಿನ ಬೆಳಕನ್ನು ಚೆಲ್ಲಿದರೆ ಎಲ್ಲಾ ಮಾನ್ಯ ಸದಸ್ಯರಿಗೂ ಅನುಕೂಲವಾಗುತ್ತದೆ. ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಗೆ 130 ಟಿ.ಎಂ.ಸಿ., ನೀರು ಕರ್ನಾಟಕ ರಾಜ್ಯಕ್ಕೆ allocation ಆಗಿದೆ. ಅದರಲ್ಲಿ ಎಷ್ಟು ಹನಿ ನೀರು ಉಪಯೋಗವಾಗಿದೆ. ಆ ಯೋಜನೆ ಕುರಿತು ತಾವು ಸ್ವಲ್ಪ ಬೆಳಕನ್ನು ಚೆಲ್ಲಿದರೆ ನಮಗೂ ಸಹಾಯವಾಗುತ್ತದೆ.

**ಡಾ॥ ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ಬೇಕಾದರೆ ಪ್ರತ್ಯೇಕವಾಗಿ ಒಂದು ಚರ್ಚೆಯನ್ನು ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀರನ್ನು ಸದ್ಬಳಕೆಯ ಬಗ್ಗೆ ಹೇಳಿದರಲ್ಲವೇ, ಅದಕ್ಕೆ ನಾನು ಹೇಳುತ್ತಿದ್ದೇನೆ.

**ಡಾ॥ ತಳವಾರ್ ಸಾಬಣ್ಣ:-** ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಮಾತ್ರ ನಾನು ಹೇಳುತ್ತಿದ್ದೇನೆ. ಇದಕ್ಕೆ ಪ್ರತ್ಯೇಕವಾಗಿ ಒಂದು ಚರ್ಚೆ ಇಟ್ಟುಕೊಂಡರೆ ಪರಿಣಾಮಕಾರಿಯಾಗಿ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ, ಹಿಂದಿನ ಸರ್ಕಾರವು ಇದಕ್ಕೆ ಯಾರು ಕೂಡ ಪ್ರಯತ್ನ ಮಾಡಿಲ್ಲ. ಈ ಸರ್ಕಾರವು ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಗೆ ಪ್ರಯತ್ನ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಇದರ ಬಗ್ಗೆ ನಾವು ತೃಪ್ತಿ ಪಟ್ಟುಕೊಳ್ಳೋಣ. ಮುಂದೆ ಇದರ ಬಗ್ಗೆ ಯೋಚನೆ ಮಾಡೋಣ. ಇಷ್ಟು ಮಾತನ್ನು ಹೇಳುತ್ತಾ, ಇದಕ್ಕೆ 31 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಹಂಚಿಕೆ ಮಾಡಲಾಗಿದೆ. ಮುಂದುವರೆದು, ಇನ್ನೊಂದು ಸಾವಯವ ಕೃಷಿಗೆ 500 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಇದೊಂದು ಒಳ್ಳೆಯ ಪ್ರಯತ್ನವಾಗಿದೆ. ಆದರೆ, ಇಲ್ಲಿ ಸರ್ಕಾರವು ಒಂದು ವಿಷಯವನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಏಕೆಂದರೆ, ಅಲ್ಲಿ ಇರುವಂತಹ ನೀರನ್ನು ಈಗಾಗಲೇ ಬಳಕೆ ಮಾಡುತ್ತಿದ್ದೇವೆ ಮತ್ತು ನಾವು saturation stage ಮುಟ್ಟಿದ್ದೇವೆ. ಮುಂದಿನ ದಿನಗಳಲ್ಲಿ ಕೃಷಿ ಕ್ಷೇತ್ರವನ್ನು ನಾವು ಮುನ್ನೆಡೆಸಿಕೊಂಡು ಹೋಗಬೇಕಾದರೆ ನಾವು ಮೂಲಭೂತವಾಗಿ ಅವಲಂಬಿಸಬೇಕಾಗಿರುವುದು drought prone area ಎಂದು ಕರೆಯುತ್ತೇವೆ. ಒಣ ಬೇಸಾಯದ ಮೇಲೆ ಹೆಚ್ಚಿನ ಅವಲಂಬನೆ ಪಡಬೇಕಾಗಿದೆ. ಆ ಒಣ ಬೇಸಾಯದ ಬಗ್ಗೆ ಈ ಒಂದು ಆಯವ್ಯಯದಲ್ಲಿ ಉಲ್ಲೇಖ ಇಲ್ಲದೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇರುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ನೀರಾವರಿಗೆ ಸಂಬಂಧಪ್ಪಂತೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಹೇಳಲು ಬಯಸುತ್ತೇನೆ.

ಮುಂದುವರೆದು, ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ನಾನು ಕೆಲವು ವಿಷಯಗಳನ್ನು ಹೇಳುತ್ತೇನೆ. ಉತ್ತರ ಕರ್ನಾಟಕ ಎಂದರೆ, ಮುಂಬೈ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಎಂದು ಬರುತ್ತದೆ. ಆದರೆ, ಇವತ್ತಿನವರೆಗೂ ಉತ್ತರ ಕರ್ನಾಟಕ ಎಂದರೆ, ಕೇವಲ ಮುಂಬೈ ಕರ್ನಾಟಕ ಮಾತ್ರ ಎನ್ನುವುದು ಎಲ್ಲರ ಗಮನದಲ್ಲಿ ಇದೆ. ಏಕೆಂದರೆ, ನಾನು ಕಲ್ಯಾಣ ಕರ್ನಾಟಕದಲ್ಲಿ ಹುಟ್ಟಿ ಬೆಳೆದು, ಮುಂಬೈ ಕರ್ನಾಟಕದಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಎರಡೂ ಏರಿಯಾಗಳು ಸಂಬಂಧಪಟ್ಟಿರುವುದರಿಂದ ವಿಶೇಷವಾಗಿ ಪ್ರಾದೇಶಿಕ ಅಸಮತೋಲನದ ಕುರಿತು ಗಮನಹರಿಸಲು ಪ್ರಯತ್ನ ಮಾಡುತ್ತೇನೆ. ಇವತ್ತಿನವರೆಗೂ ಪ್ರಾದೇಶಿಕ ಅಸಮತೋಲನ ಅದೇ ರೀತಿಯಾಗಿ ಇರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಅದು ಹೇಗೆಂದರೆ, ಹಿಂದುಳಿದ ತಾಲ್ಲೂಕುಗಳು ಇವತ್ತಿನವರೆಗೂ ಹಿಂದುಳಿದ ತಾಲ್ಲೂಕುಗಳಾಗಿಯೇ ಉಳಿದಿವೆ. ನಾವು ಈ ಎರಡು ಪ್ರದೇಶದಲ್ಲಿ ಡಾ॥ ಡಿ.ಎಂ. ನಂಜುಂಡಪ್ಪನವರ ವರದಿಯನ್ನು ತೆಗೆದುಕೊಂಡು ಗಮನಹರಿಸಬೇಕಾದರೆ, ಇದು 2000 ದಲ್ಲಿ ಡಾ॥ ಡಿ.ಎಂ. ನಂಜುಂಡಪ್ಪನವರು ಕೊಟ್ಟಿರುವಂತಹ ವರದಿ, ನಂತರ 2015ರಲ್ಲಿ ಅಧ್ಯಯನ ಮಾಡಿದ್ದಾರೆ. ಅದರ ಮೇಲ್ಭಾಗವನ್ನು ತೆಗೆದುಕೊಂಡಾಗ ಈಗ ಕಲ್ಯಾಣ ಕರ್ನಾಟಕದ ಸುತ್ತಲೂ ಇರುವಂತಹ ತಾಲ್ಲೂಕುಗಳು ಇವತ್ತಿನವರೆಗೂ ಅತೀ ಹಿಂದುಳಿದ ತಾಲ್ಲೂಕುಗಳಾಗಿ ಉಳಿದಿವೆ. ಇದರ ಬಗ್ಗೆ ಎಲ್ಲರೂ ಗಮನಹರಿಸಬೇಕಾಗಿರುವಂತಹ ವಿಷಯವಾಗಿದೆ. ಏಕೆಂದರೆ, ಕೆಳಗೆ ದಕ್ಷಿಣ ಕರ್ನಾಟಕಕ್ಕೆ ಬಂದಾಗ ಅತೀ ಹಿಂದುಳಿದ ತಾಲ್ಲೂಕುಗಳು ಮುಂದುವರೆದ ತಾಲ್ಲೂಕುಗಳು ಅಥವಾ ಅದರಲ್ಲಿ ಸ್ವಲ್ಪ ಬದಲಾವಣೆಯನ್ನು ಕಾಣುತ್ತೇವೆ. ಇದರ ಬಗ್ಗೆ ಗಮನಹರಿಸಬೇಕೆಂದು ನಾವು ಹೇಳುತ್ತೇವೆ. ಇವತ್ತಿನ ಪತ್ರಿಕೆಯಲ್ಲಿ ‘ತಲಾ ಆದಾಯದಲ್ಲೂ ಕಾಣದ ಕಲ್ಯಾಣ’ ಎನ್ನುವ ವಿಷಯ ಬಂದಿದೆ. ಈ ರೀತಿ ಎಂದರೆ, per capita income ಸಹ ಕಲ್ಯಾಣ ಕರ್ನಾಟಕದ ಬಗ್ಗೆ ಉಲ್ಲೇಖ ಇಲ್ಲ. ಏಕೆಂದರೆ, ಇಲ್ಲಿ ಅತಿ ಹೆಚ್ಚು ತಾಲ್ಲೂಕುಗಳು ಎಂದರೆ, ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಕಲ್ಯಾಣ ಕರ್ನಾಟಕದಲ್ಲಿ ಎದ್ದು ಕಾಣುತ್ತವೆ. ನಾವು ಹೈದರಾಬಾದ್-ಕರ್ನಾಟಕ ಹೆಸರು ಬೇಡ ಎಂದು ಕಲ್ಯಾಣ ಕರ್ನಾಟಕ ಎಂದು ಹೆಸರು ಕೊಟ್ಟಿದ್ದೇವೆ. ಆದರೆ, ಆ ಭಾಗದ ಕಲ್ಯಾಣ ಯಾವಾಗ ಆಗುತ್ತದೆ ಎನ್ನುವುದು ಎಲ್ಲಾ ಸರ್ಕಾರಗಳು, ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು, ನಾವು ಸಹ ಯೋಚನೆ ಮಾಡಬೇಕೆನ್ನುವಂತಹ ಸ್ಥಿತಿ ಇದೆ ಎಂದು ಉಲ್ಲೇಖ ಮಾಡಲು ಇಷ್ಟಪಡುತ್ತೇನೆ. ಏಕೆಂದರೆ, ನಾನು ಆ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಭಾಗದ ಪ್ರವಾಸಕ್ಕೆ ಹೋದಾಗ ಅಲ್ಲಿ ಕಾಮಗಾರಿಗಳ ಗುಣಮಟ್ಟ ಕಳಪೆ ಮಟ್ಟದಲ್ಲಿ ಇದೆ. ಅಲ್ಲಿರುವ ಅಧಿಕಾರಿಗಳಿಗೆ ಕಲ್ಯಾಣ ಕರ್ನಾಟಕ ಎಂದರೆ ಒಂದು ಮೃಷ್ಟಾನ್ನ ಇದ್ದಂತಾಗುತ್ತದೆ. ಏಕೆಂದರೆ, ಅಲ್ಲಿ ಭ್ರಷ್ಟಚಾರ ಅಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ. ಸರ್ಕಾರವು ಕೊಡುವಂತಹ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ದುರ್ಬಳಕೆ ಮಾಡಿಕೊಳ್ಳುವಂತಹದ್ದು ಇದೆ. ಈ ಸಂದರ್ಭದಲ್ಲಿ ಇದನ್ನು ನಾವು ತಡೆಗಟ್ಟಬೇಕೆನ್ನುವ ವಿಚಾರವನ್ನು ನಾನು ಉಲ್ಲೇಖ ಮಾಡುತ್ತಿರ್ದ್ದೇನೆ.

ಶೌಚಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗಿದೆ ಮತ್ತು ಆರೋಗ್ಯ ಸಮಸ್ಯೆಗಳು ಹೆಚ್ಚಿನ ಪ್ರಮಾಣದಲ್ಲಿ ಇದೆ. ಆ ವಿಷಯಕ್ಕೆ ಸಂಬಂಧಪಟ್ಟಂತೆ ನಾವು ಗಮನಹರಿಸಬೇಕೆಂದು ಹಾಗೂ ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ.

ಮುಂದುವರೆದು, ಮಹಿಳಾ ಸಬಲೀಕರಣ ವಿಷಯಕ್ಕೆ ಸಂಬಂಧಪಟ್ಟಂತೆ ಈ ಒಂದು ಆಯವ್ಯಯದಲ್ಲಿ ಒಂದು ಉತ್ತಮವಾದ ಬೆಳವಣಿಗೆಯನ್ನು ನಾನು ಇಲ್ಲಿ ಕಾಣುತ್ತೇನೆ. ಮಹಿಳೆಯರು ನಮ್ಮ ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಇದ್ದಾರೆ. ಆದರೆ, ಇವತ್ತಿನವರೆಗೂ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶ ಇಲ್ಲದೇ ಇರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಆದರೆ, ಈ ಒಂದು ಆಯವ್ಯಯದಲ್ಲಿ 37 ಸಾವಿರ ಕೋಟಿ ರೂಪಾಯಿಗಳನ್ನು ಇಲ್ಲಿ ಹಂಚಲ್ಪಟ್ಟಿದೆ. ಇದರಲ್ಲಿ ಒಂದು ವಿಶೇಷವೆಂದರೆ, ಮಹಿಳೆಯನ್ನು Entrepreneurs ಆಗಿ ಅವರನ್ನು ಉತ್ಪಾದಕರಾಗಿ, women entrepreneurship ಗೆ ಅವಕಾಶ ಕೊಡಲಾಗಿದೆ. "Elevate Women" ಎನ್ನುವಂತಹ ಹೊಸ ಯೋಜನೆಯನ್ನು ಅಲ್ಲಿ ಪರಿಚಯ ಮಾಡಲಾಗಿದೆ. "Elevate Women" ಯೋಜನೆಯಲ್ಲಿ ಅವರಿಗೆ ಶೇಕಡಾ 4 ರಷ್ಟು ಬಡ್ಡಿ ದರದಲ್ಲಿ ಸುಮಾರು 2 ಕೋಟಿ ರೂಪಾಯಿಗಳವರೆಗೆ ಸಾಲವನ್ನು ಕೊಡಲು ಒಂದು ಉತ್ತಮವಾದ ಯೋಜನೆಯನ್ನು ಪರಿಚಯ ಮಾಡಲಾಗಿದೆ. ಈ ಸಂದರ್ಭದಲ್ಲಿ ನಾವು ಈ ಒಂದು ಬೆಳವಣಿಗೆಯನ್ನು ತೆಗೆದುಕೊಂಡು ಪ್ರೋತ್ಸಾಹವನ್ನು ಕೊಟ್ಟಾಗ ಆತ್ಮ ನಿರ್ಭರ್ ಆಗಿರಬಹುದು, ಮಹಿಳಾ ಉತ್ಪಾದಕರಾಗಿರಬಹುದು. ಇವರಿಂದ ಆರ್ಥಿಕ ಪ್ರಗತಿಗೆ ಹೆಚ್ಚಿನ ಸಹಾಯವಾಗುತ್ತದೆ ಎಂದು ನಾನು ಇಲ್ಲಿ ಉಲ್ಲೇಖ ಮಾಡುತ್ತೇನೆ. ಇದರ ಜೊತೆಗೆ ಇನ್ನೊಂದು ವಿಚಾರದ ಬಗ್ಗೆ ಏನು ಯೋಜನೆ ಮಾಡಬೇಕಾಗಿದೆ ಎಂದರೆ, ಮಹಿಳಾ ಉದ್ದಿಮೆದಾರರಿಗೆ ಯಾವ ರೀತಿ ತರಬೇತಿ ಕೊಡಬೇಕು. ಅವರಿಗೆ ತರಬೇತಿ ಕೊಡಬೇಕಾದಾಗ ಕೌಶಲ್ಯಾಭಿವೃದ್ಧಿಯನ್ನು ನಾವು ಯಾವ ರೀತಿಯಲ್ಲಿ ಮಾಡಬೇಕೆನ್ನುವುದರ ಬಗ್ಗೆ ನಾವು ಗಮನ ಹರಿಸಬೇಕಾಗಿರುವುದು ಉತ್ತಮ ಎಂದು ನಾನು ಉಲ್ಲೇಖ ಮಾಡಲು ಇಷ್ಟಪಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದುವರೆದು, ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ, ಬಡವರಿಗೆ, ಹಿಂದುಳಿದವರಿಗೆ ಮತ್ತು ಶೋಷಿತ ವರ್ಗದವರಿಗೆ ಎಲ್ಲಾ ಸರ್ಕಾರವು ಸಾಲ ಧನ, ಹಲವಾರು ನಿಗಮಗಳನ್ನು ಸ್ಥಾಪನೆ ಮಾಡಿದೆ. ಈ ನಿಗಮಗಳಿಗೆ ಹಣವನ್ನು ಕೊಡುತ್ತಾ ಹೋಗುತ್ತಾರೆ. ಈ ಹಣವನ್ನು ಕೊಡಬೇಕಾದಾಗ ಆ ಸಮುದಾಯಗಳ ಜನಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡು ಇಲ್ಲಿ ಅನುದಾನವನ್ನು ಕೊಡಬೇಕಾಗಿತ್ತು. ದುರಾದೃಷ್ಟಾವಶಾತ್ ಎಂದರೆ, ಇಲ್ಲಿ ಎಲ್ಲಾ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳನ್ನು ತೆಗೆದುಕೊಂಡು ಕೇವಲ 500 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಬೇರೆ ವರ್ಗಗಳಿಗೆ ಎಷ್ಟು ಅನುದಾನವನ್ನು ಕೊಟ್ಟಿದ್ದಾರೆ ಎನ್ನುವುದನ್ನು ನಾನು ಉಲ್ಲೇಖ ಮಾಡುವುದಿಲ್ಲ. ಆದರೆ, ನಾನು ಹಿಂದುಳಿದ ವರ್ಗಗಳ ಬಗ್ಗೆ ಮಾತ್ರ ಉಲ್ಲೇಖ ಮಾಡುತ್ತೇನೆ. ಏಕೆಂದರೆ, ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡಾಗ ಶೇಕಡಾ 50 ರಷ್ಟು ಹಿಂದುಳಿದ ವರ್ಗಗಳ ಜನಸಂಖ್ಯೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವನ್ನು ಜನಸಂಖ್ಯೆಯನ್ನು ತೆಗೆದುಕೊಂಡಾಗ ಶೇಕಡಾ 20 ರಷ್ಟು ಇದೆ. ಆದರೆ, ಇವರಿಗೆ 500 ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಈ ವಿಷಯದ ಬಗ್ಗೆ ಸರ್ಕಾರವು ಮರು ಪರಿಶೀಲನೆ ಮಾಡಬೇಕೆಂದು ತಿಳಿಸಲು ಇಷ್ಟಪಡುತ್ತೇನೆ.

**(ಮುಂದು)**

**(381) 15/03/2021/ಎಸ್‌ಪಿಆರ್/ಎಕೆ/1:20**

**ಡಾ॥ ತಳವಾರ್ ಸಾಬಣ್ಣ(ಮುಂದು):-**

ಏಕೆಂದರೆ, ಕಳೆದ ವರ್ಷ ಅಂಬಿಗರ ಚೌಡಯ್ಯ ನಿಗಮಕ್ಕೆ 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು; ಪ್ರಸಕ್ತ ವರ್ಷದಲ್ಲಿ ಕೇವಲ 10 ಕೋಟಿ ರೂಪಾಯಿಗಳನ್ನು ಮಾತ್ರವೇ ಮೀಸಲಿಟ್ಟಿದ್ದಾರೆ. ಇದೇ ರೀತಿಯಾಗಿ ಬೇರೆ ಬೇರೆ ವರ್ಗಗಳ ನಿಗಮಗಳನ್ನು ತೆಗೆದುಕೊಂಡಾಗ ಅನುದಾನಗಳ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದೆ. ಸರ್ಕಾರವು ದಯಮಾಡಿ ಈ ವಿಷಯವನ್ನು ಮರು ಪರಿಶೀಲಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶಿಕ್ಷಣ ಕ್ಷೇತ್ರದ ಬಗ್ಗೆ ಹೇಳುವುದಾದರೆ, ಕೋವಿಡ್-19 ಸಂದರ್ಭದಲ್ಲಿ ಡಿಜಿಟಲ್ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಡಿಜಿಟಲ್ ಮುಖಾಂತರ ಯಾವ ರೀತಿಯಾಗಿ ಶಿಕ್ಷಣವನ್ನು ನೀಡಬಹುದು ಎನ್ನುವುದರ ಬಗ್ಗೆ ಪ್ರಸ್ತಾವನೆಯಾಗಿದ್ದು, ಇದರ ಬಗ್ಗೆ ನಮಗೆ ಅನುಭವವೂ ಸಹ ಇದೆ. ಈ ನಿಟ್ಟಿನಲ್ಲಿ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ದೃಷ್ಟಿಯಿಂದ ಸರ್ಕಾರವು ಪ್ರಸಕ್ತ ಸಾಲಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಯವ್ಯಯದಲ್ಲಿ ಉಲ್ಲೇಖಿಸಿದೆ. ಡಿಜಿಟಲ್ ತಂತ್ರಜ್ಞಾನ ಬಳಕೆ ಮತ್ತು ಅದರ ಅಭಿವೃದ್ಧಿಗಾಗಿ ಅಂದರೆ ಯಾವುದೇ ಪ್ರೌಢಶಾಲೆಗಳು, ಪಾಲಿಟೆಕ್ನಿಕ್, ಪದವಿ ಕಾಲೇಜು ಅಥವಾ ವಿಶ್ವವಿದ್ಯಾನಿಲಯಗಳಾಗಿರಬಹುದು ಇವುಗಳಲ್ಲಿ ಲ್ಯಾಪ್‌ಟಾಪ್ ಮತ್ತಿತರೆ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ.

ಆಯವ್ಯಯಲ್ಲಿ ಶೈಕ್ಷಣಿಕ ನಾಯಕತ್ವ ಅಂದರೆ 'Education Leadership' ಎಂಬುದರ ಬಗ್ಗೆಯೂ ಸಹ ಉಲ್ಲೇಖಿಸಲಾಗಿದ್ದು, ಇದೂ ಸಹ ಒಂದು ಉತ್ತಮವಾದ ವಿಷಯವಾಗಿದೆ. ಎಲ್ಲಿಯವರೆಗೆ ಶೈಕ್ಷಣಿಕ ನಾಯಕತ್ವ ಬರುವುದಿಲ್ಲವೋ ಅಲ್ಲಿಯವರೆಗೆ ನಾವು ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಭಾರತ ದೇಶವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಇದು ಉತ್ತಮವಾದ ಪ್ರಯೋಗವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ, ನಾವು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ವಿಷಯಕ್ಕೆ ಬಂದಾಗ ಅಲ್ಲಿ ಆಡಳಿತ, ಶೈಕ್ಷಣಿಕ ಮತ್ತು ಸಂಶೋಧನೆ ವಿಷಯಗಳು ಬೇರೆಯಾಗಿರುತ್ತವೆ. ಆಡಳಿತದವರು ಅಂದರೆ ರಿಜಿಸ್ಟ್ರಾರ್ ಅಥವಾ ಉಪ ಕುಲಪತಿಗಳಾಗಿರಬಹುದು ಇವರುಗಳು ಶೈಕ್ಷಣಿಕ ವಿಷಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುವುದಿಲ್ಲ; ಸಂಶೋಧನೆಗಳಿಗೆ ಹೆಚ್ಚಿನ ಪ್ರೋತ್ಸಾಹಗಳನ್ನು ನೀಡುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಹೆಚ್ಚಿನ ಗಮನ ವಹಿಸಬೇಕೆಂದು ನಾನು ಹೇಳಲಿಚ್ಛಿಸುತ್ತೇನೆ. ಏಕೆಂದರೆ, ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಅಂದರೆ ಎಲ್ಲಿಯವರೆಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದಿಲ್ಲವೋ ಅಲ್ಲಿಯವರೆಗೆ ಶೈಕ್ಷಣಿಕ ನಾಯಕತ್ವವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ರಾಷ್ಟ್ರೀಯ ಶಿಕ್ಷಣ ನೀತಿ–2020 ರಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾವು ಯಾವ ರೀತಿಯ ಪ್ರಯತ್ನಗಳನ್ನು ಮಾಡಬಹುದು ಮತ್ತು ಅಂತಹ ಪ್ರಯತ್ನಗಳಿಗೆ ಸರ್ಕಾರವು ಯಾವ ರೀತಿಯ ಪ್ರೋತ್ಸಾಹಗಳನ್ನು ಕೊಡಲು ಸಾಧ್ಯವಿದೆ ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆಯನ್ನು ಮಾಡಬೇಕಾಗಿದೆ ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಆರೋಗ್ಯ ಕ್ಷೇತ್ರದ ಕುರಿತಾಗಿಯೂ ಸಹ ನಾನು ಉಲ್ಲೇಖಿಸಬಯಸುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಸಹ ಸರ್ಕಾರಿ ವ್ಯವಸ್ಥೆಯಲ್ಲಿನ ಆರೋಗ್ಯದ ಕ್ಷೇತ್ರ ಅಂದರೆ 'Health System', ಇದನ್ನು ನಾವು ಇಲ್ಲಿಯವರೆಗೆ ಅನುಭವಿಸಿಕೊಂಡು ಬರುತ್ತಿದ್ದೇವೆ. ಇಂತಹ ಆರೋಗ್ಯ ವ್ಯವಸ್ಥೆಯು ಎಷ್ಟು ದುಸ್ಥಿತಿಯಲ್ಲಿದೆ ಎನ್ನುವುದು ಕೋವಿಡ್–19 ರ ಸಂದರ್ಭದಲ್ಲಿ ನಮಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವಕ್ಕೆ ಬಂದಿದೆ. ಆದರೆ, ಅದೃಷ್ಟವಶಾತ್ ನಮ್ಮ ರಾಜ್ಯವು ಆ ಸಂದರ್ಭದಲ್ಲಿ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಬಳಸಿಕೊಂಡು ಕೋವಿಡ್–19ನ್ನು ಪರಿಣಾಮಕಾರಿಯಾಗಿ ಎದುರಿಸಿದೆ. ಮುಂಗಡ ಪತ್ರದಲ್ಲಿ ಆರೋಗ್ಯ ಕ್ಷೇತ್ರದ ಆಧುನೀಕರಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಆರೋಗ್ಯ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಗಮನ ಹರಿಸುವುದು ಸೂಕ್ತವೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ಇಂದಿನವರೆಗೆ ಕಲ್ಯಾಣ ಕರ್ನಾಟಕ ಭಾಗಗಳಿಗೆ ಹೋದಾಗ, ಪೌಷ್ಠಿಕಾಂಶದ ಬಗ್ಗೆ ಬಹಳ ಗಣನೀಯ ಮತ್ತು ಗಂಭೀರವಾದ ಸ್ಥಿತಿಗಳಿವೆ. ಅದು ದೇವದುರ್ಗ, ಚಿಂಚೋಳಿ ಅಥವಾ ಆ ಭಾಗದ ಇನ್ನಿತರೆ ಹಲವಾರು ತಾಲ್ಲೂಕುಗಳಾಗಿರಬಹುದು. ಇವುಗಳನ್ನು ಪೌಷ್ಠಿಕತೆಯ ದೃಷ್ಠಿಯಿಂದ ಪರಿಗಣಿಸಿದಾಗ, ಇಲ್ಲಿ ಬಹಳ ಗಂಭೀರವಾದ ಸ್ಥಿತಿ ಇದೆ. ಹೀಗಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಹಿಂದುಳಿದ ಭಾಗಗಳಲ್ಲಿ ಪೌಷ್ಠಿಕತೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಆರೋಗ್ಯ ವ್ಯವಸ್ಥೆಗಳ ಸುಧಾರಣೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಕೋವಿಡ್–19 ಸಂದರ್ಭದಲ್ಲಿಯೂ ಸಹ ರಾಜ್ಯದ ಮುಖ್ಯಮಂತ್ರಿಗಳು ಬಹಳ ಉತ್ತಮವಾದ ಪ್ರಯತ್ನವನ್ನು ಮಾಡಿದ್ದಾರೆ.

ಮುಖ್ಯಮಂತ್ರಿಗಳು ಪ್ರಸಕ್ತ ಸಾಲಿನಲ್ಲಿ 2,40,000 ಕೋಟಿ ರೂಪಾಯಿಗಳ ಗಾತ್ರದ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಇದು ಉತ್ತಮವಾದ ಪ್ರಯತ್ನವಾಗುತ್ತದೆ ಮತ್ತು ಪ್ರಗತಿಯತ್ತ ನಮ್ಮ ರಾಜ್ಯವು ಸಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತಾ, ಪ್ರಸಕ್ತ ಸಾಲಿನ ಆಯವ್ಯಯಕ್ಕೆ ನಾನು ಬೆಂಬಲಿಸುತ್ತೇನೆ. ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, 2020–21ನೇ ಸಾಲಿನ ಆಯವ್ಯಯ ಮುಂಗಡ ಪತ್ರದ ಮೇಲೆ ಮಾತನಾಡಲಿಕ್ಕೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಜನರನ್ನು ಸುಲಭವಾಗಿ ದಾರಿ ತಪ್ಪಿಸುವ ಮಾರ್ಗವೆಂದರೆ, ಅಂಕಿ–ಅಂಶಗಳನ್ನು ಜೋಡಿಸಿ, ಯೋಜನೆಗಳನ್ನು ಆಕರ್ಷಕ ಶಬ್ದಗಳಲ್ಲಿ ಪ್ರಸ್ತುತಪಡಿಸುವುದು. ಅದನ್ನೇ ಇಲ್ಲಿ ಮಾಡಲಾಗಿದೆ. ಆದರೆ, ಅಂಕಿ–ಅಂಶಗಳ ಮೂಲ ಏನೆಂದು ಬಡಪಾಯಿ ಜನರಿಗೆ ತಿಳಿಯಲಾರದು. ಮಾತು ಎತ್ತಿದರೆ, ಸಾವಿರಾರು ಕೋಟಿ ರೂಪಾಯಿಗಳನ್ನು ಕೊರತೆ ರೂಪದಲ್ಲಿ ತೋರಿಸಿ, ಜನರಿಗೆ ಬಂಗಾರದ ಕನಸನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೃಷ್ಟಿಸುವುದು, ಚುನಾವಣಾ ಗಲ್ಲಾ–ಪೆಟ್ಟಿಗೆಯನ್ನು ಒಂದು ಅಥವಾ ಎರಡು ಬಾರಿ ತುಂಬಿಸುವಂತಾಗಿದೆ. ಈ ಮಾರ್ಗ ಯಾವಾಗಲೂ ಯಶಸನ್ನು ತಂದು ಕೊಡುವುದಿಲ್ಲ. ಜನ ರಾಜಕಾರಣಿಗಳಿಗಿಂತ ಅದರಲ್ಲೂ ಅಧಿಕಾರಸ್ಥ ರಾಜಕಾರಣಿಗಳಿಗಿಂತ ಬುದ್ಧಿವಂತರು ಎಂದು ಹೇಳಿದರೆ, ತಪ್ಪಾಗಲಾರದು. ಎಂಟು ಬಾರಿ ರಾಜ್ಯದ ಮುಂಗಡ ಪತ್ರವನ್ನು ಮಂಡಿಸಿ, ಮತ್ತೊಂದು ಬಾರಿ ಮುಂಗಡ ಪತ್ರವನ್ನು ಮಂಡಿಸಲು ಕನಸು ಕಾಣುತ್ತಿರುವ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಂಡಿಸಿರುವ ಪ್ರಸಕ್ತ ಸಾಲಿನ ಮುಂಗಡ ಪತ್ರವು ನಿಜವಾದ ಅರ್ಥದಲ್ಲಿ 'ಬಂಡವಾಳವಿಲ್ಲದ ಬಡಾಯಿ'ಯಂತಾಗಿದೆ.

2,46,000 ಕೋಟಿ ರೂಪಾಯಿಗಳ ಗಾತ್ರದ ಪ್ರಸ್ತುತ ಆಯವ್ಯಯವನ್ನು ನೋಡಿದರೆ, ಇಷ್ಟು ದೊಡ್ಡ ಮೊತ್ತದ ಹಣ ಕಂಡು 'ಅಬ್ಬಬ್ಬಾ' ಎಂದೆನಿಸುತ್ತದೆ. ಆದರೆ, ಸ್ವಲ್ಪ ತಲೆ ಕರೆದುಕೊಂಡು ಆಯವ್ಯಯ ಪುಸ್ತಕದ ಪುಟಗಳನ್ನು ತಿರುವಿ ಹಾಕಿದರೆ, ಅಸಲಿ ಬಂಡವಾಳವು ಬಯಲಾಗುತ್ತದೆ. ಸಾಲ ಮಾಡಿ ತುಪ್ಪದ ಹೋಳಿಗೆಯನ್ನು ತಿನ್ನುವುದು ಅಥವಾ ತಿನ್ನಿಸುವುದು ಈ ಸರ್ಕಾರದ ಧೋರಣೆಯಾಗಿದೆ. ಏಕೆಂದರೆ, ಇವರ ಬಳಿ ಹಣವಿಲ್ಲ. ಎಷ್ಟು ಕಮಿಟೆಡ್ ವೆಚ್ಚವಿದೆಯೋ ಅಷ್ಟೇ ಪ್ರಮಾಣದ ಆದಾಯವಿದೆ. 22,000 ಕೋಟಿ ರೂಪಾಯಿಗಳಷ್ಟು ಹಣವನ್ನು ಕೇಂದ್ರದ ಸಹಾಯದಿಂದ ಮತ್ತು 52,000 ಕೋಟಿ ರೂಪಾಯಿಗಳನ್ನು ಸಾಲದ ಮೂಲದಿಂದ ಪಡೆಯಬೇಕು. ಸಾಲವನ್ನು ಎಲ್ಲಿಂದ ಪಡೆಯುತ್ತಾರೆ ಅಥವಾ ಸಾಲ ಪಡೆಯಲು ಏನನ್ನು ಅಡ ಇಡುತ್ತಾರೆ ಎಂದು ಸರ್ಕಾರವು ಎಲ್ಲಿಯೂ ಸಹ ಉಲ್ಲೇಖಿಸಿಲ್ಲ. ಇಲ್ಲಿ ಕೇವಲ 'ಸಾಲ' ಎಂಬುದಾಗಿ ಮಾತ್ರವೇ ತಿಳಿಸಲಾಗಿದೆ. ಈ ಮೊದಲು ನಾನು ಬಿ.ಬಿ.ಎಂ.ಪಿ. ಯಲ್ಲಿ ನೋಡಿದ್ದೇನೆ. ಆಗ ಬಿ.ಜೆ.ಪಿ. ಪಕ್ಷವು ಅಧಿಕಾರದಲ್ಲಿತ್ತು. ಆ ಸಂದರ್ಭದಲ್ಲಿ ಬಸ್ ನಿಲ್ದಾಣಗಳಿಂದ ಮೊದಲುಗೊಂಡು ಪಾಲಿಕೆಯ ಎಲ್ಲಾ ಆಸ್ತಿಗಳನ್ನು ಅಡ ಇಡಲಾಗಿತ್ತು. ನಮ್ಮ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದಾಗ, ಅವುಗಳೆಲ್ಲವನ್ನೂ ಬಿಡಿಸಿಕೊಳ್ಳಲಾಗಿತ್ತು. ಈಗಿನ ಸರ್ಕಾರವು 50–60 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವನ್ನು ಪಡೆದುಕೊಳ್ಳುತ್ತಿದೆ. ಎಲ್ಲಿಂದ ಸಾಲ ಪಡೆದುಕೊಳ್ಳುತ್ತಾರೆ ಮತ್ತು ಯಾವ ಆಸ್ತಿಯನ್ನು ಅಡ ಇಡುತ್ತಾರೆ ಎನ್ನುವುದನ್ನು ಉಲ್ಲೇಖಿಸಿಲ್ಲ. ಸದಸ್ಯರಾದ ಶ್ರೀ ಅಡಗೂರ್ ಹೆಚ್.ವಿಶ್ವನಾಥ್‌ನವರು ಬಹಳ ಚೆನ್ನಾಗಿ ಆಯವ್ಯಯದ ಮೇಲಿನ ಭಾಷಣವನ್ನು ಮಂಡಿಸಿದ್ದು, ಎಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪಿಸಿದರು. ಅವರು ಹೇಳಿರುವ ಅಂಶಗಳು ಸರಿಯಾಗಿವೆ. ಅದೇ ರೀತಿಯಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರೂ ಸಹ ಮಂಡನೆಯಾಗಿರುವ ಆಯವ್ಯಯದ ಬಗ್ಗೆ ಬಹಳ ಚೆನ್ನಾಗಿ ವಿವರಿಸಿದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ ನಂಜುಂಡಪ್ಪ ವರದಿಯ ಬಗ್ಗೆ ದಶಕಗಳಿಂದಲೂ ಪ್ರಸ್ತಾಪಿಸಲಾಗುತ್ತಿದೆ. ಯಾವ ಯಾವ ಕ್ಷೇತ್ರಗಳು ಅಭಿವೃದ್ಧಿಯಾಗಬೇಕಾಗಿತ್ತೋ, ಅವುಗಳು ಏಕೆ ಅಭಿವೃದ್ಧಿಯಾಗಿಲ್ಲವೆಂದು ಯಾವುದೇ ಪಕ್ಷದ ಸರ್ಕಾರಗಳು ತಲೆಕೆಡಿಸಿಕೊಳ್ಳುತ್ತಿಲ್ಲ. ಎಲ್ಲಿ ಹಿಂದುಳಿದವರು ಇದ್ದರೋ ಅವರು ಈಗಲೂ ಸಹ ಅಲ್ಲೇ ಇದ್ದಾರೆ. ಈ ಬಾರಿಯೂ ಸಹ ಇದರ ಬಗೆಗಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುದಾನ ನೀಡಲಾಗಿದೆ. ಇದು ಒಳ್ಳೆಯ ವಿಚಾರವಾಗಿದೆ. ಆದರೆ, ಸರ್ಕಾರವು ಈ ರೀತಿಯ ಸಾಮರಸ್ಯವನ್ನು ಮುರಿಯುವುದಕ್ಕೆ ಈ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಬಗ್ಗೆ ಸಮೀಕ್ಷೆಯೊಂದನ್ನು ಮಾಡಿಸಬೇಕಾಗಿತ್ತು. ಅದರ ಬದಲಾಗಿ ಜಾತಿ ಮತ್ತಿತರೆ ವಿಷಯಗಳ ಬಗ್ಗೆ ಬೇರೆ ಬೇರೆ ರೀತಿಯ ಸಮೀಕ್ಷೆಗಳನ್ನು ಮಾಡಿಸಲಾಗುತ್ತಿದೆ. ನಮ್ಮ ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳ ಪೈಕಿ ಯಾವ ಯಾವ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿದೆ ಮತ್ತು ಯಾವ್ಯಾವ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗಿಲ್ಲ ಎನ್ನುವ ವಿಚಾರದಲ್ಲಿ ಸಮೀಕ್ಷೆಯನ್ನು ಸರ್ಕಾರ ಮಾಡಿಸಿದ್ದರೆ, 'ಇಂತಹ ಕ್ಷೇತ್ರಗಳು ಚೆನ್ನಾಗಿವೆ; ಇಂತಹ ಕ್ಷೇತ್ರಗಳು ಚೆನ್ನಾಗಿಲ್ಲ; ಇಂತಹ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಅವಶ್ಯಕತೆ ಇದೆ' ಎನ್ನುವ ಅಂಶಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಜನರಿಗೆ ಬೆಳಕನ್ನು ಚೆಲ್ಲಬಹುದಾಗಿತ್ತು. ಸರ್ವೇ ಸಾಮಾನ್ಯವಾಗಿ ಆಯವ್ಯಯವನ್ನು ಮಂಡಿಸಿದರೆ, ಅದು ಇಲಾಖಾವಾರು ಆಯವ್ಯಯವಾಗಿರುತ್ತದೆ. ಆದರೆ, ಈ ಬಾರಿಯ ಮುಂಗಡ ಪತ್ರದ ಮಂಡನೆಯಲ್ಲಿ ಸರ್ಕಾರವು ಆ ಎಲ್ಲಾ ಇಲಾಖೆಗಳನ್ನು ತೆಗೆದುಕೊಂಡಿದೆ. ಈ ಬಾರಿ ವಲಯವಾರು ಆಯವ್ಯಯವನ್ನು ಮಂಡಿಸಲಾಗಿದೆ. ಈ ವಲಯವಾರು ಮಂಡನೆಯು ಸರ್ಕಾರಕ್ಕೆ ಮಾತ್ರವೇ ಅರ್ಥವಾಗಬೇಕು ವಿನಾ ಅದನ್ನು ಓದುವವರಿಗೆ ಅರ್ಥವಾಗುವುದಿಲ್ಲ. ಇದರರ್ಥ ಮಂಡಿಸಿರುವ ಆಯವ್ಯಯವನ್ನು ಯಾರೂ ಸಹ ಪೂರ್ತಿಯಾಗಿ ತಿಳಿದುಕೊಳ್ಳಬಾರದು ಎಂಬುದಾಗಿದೆ. ಏಕೆಂದರೆ ನಾನು ಕಳೆದ ಸಾಲುಗಳ ಅಂದರೆ, 2019-20 ಮತ್ತು 2020-21 ಆಯವ್ಯಯಗಳ ಬಗ್ಗೆ ಹೇಳುತ್ತೇನೆ. ಅಲ್ಲಿ ಘೋಷಿಸಿರುವ ಯೋಜನೆಗಳ ಪೈಕಿ ಶೇಕಡಾ 50 ರಷ್ಟೂ ಅನುಷ್ಠಾನಗೊಂಡಿಲ್ಲ. ಅವಶ್ಯವಿದಲ್ಲಿ ನಾನು ಪ್ರತ್ಯೇಕವಾಗಿ ಒಂದೊಂದನ್ನೇ ಪ್ರಸ್ತಾಪಿಸುತ್ತೇನೆ. ಏಕೆಂದರೆ, ನಾನು ಎಲ್ಲವನ್ನೂ ಗುರ್ತಿಸಿದ್ದೇನೆ. ಘೋಷಿಸಿದ ಯೋಜನೆಗಳ ಪೈಕಿ ಶೇಕಡಾ 50 ರಷ್ಟು ಯಾವುದೂ ಸಹ ಅನುಷ್ಠಾನಗೊಂಡಿಲ್ಲ. ಸರ್ಕಾರವು ಸುಮ್ಮನೆ ಆಯವ್ಯಯವೆಂದು ಹೇಳಿ, ಅದನ್ನು ಮುದ್ರಿಸಿಕೊಡುತ್ತದೆ. ಅದೇ ರೀತಿಯಾಗಿ ರಾಜ್ಯದ ರಾಜ್ಯಪಾಲರಿಂದ ಸುಳ್ಳು ಭಾಷಣವನ್ನು ಮಾಡಿಸುತ್ತಾರೆ; ಆದರೆ ಆ ಅಂಶಗಳು ಆಯವ್ಯಯದಲ್ಲಿ ಪ್ರಸ್ತಾಪವಾಗುವುದಿಲ್ಲ. ಇತ್ತೀಚೆಗೆ ಮಾನ್ಯ ರಾಜ್ಯಪಾಲರು ಮಾಡಿರುವ ಭಾಷಣದಲ್ಲಿ ತಿಳಿಸಿದ ಅಂಶಗಳು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪವಾಗಿರುವುದಿಲ್ಲ. ಸರ್ಕಾರವು ಹೇಳುವುದು ಒಂದು; ಮಾಡುವುದು ಮತ್ತೊಂದು ಆಗಿರುತ್ತದೆ. ಈ ರೀತಿಯ ಕ್ರಮಗಳು ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತಂದುಕೊಡುವುದಿಲ್ಲ. ಡಾ॥

ನಂಜುಂಡಪ್ಪರವರು ನೀಡಿರುವ ವರದಿಯು ಒಂದು ರೀತಿಯಾದರೆ, ನಮ್ಮ ರಾಜ್ಯದಿಂದ 25 ಸಂಸದರನ್ನು ನಾವು ಆಯ್ಕೆ ಮಾಡಿ ಕಳುಹಿಸಿದ್ದೇವೆ.

**(ಮುಂದು)**

**(382)/15–3–2021/1–30/ಎಲ್ಎಂ/ಎಕೆ**

**ಶ್ರೀ ಯು.ಬಿ.ವೆಂಕಟೇಶ್**(ಮುಂದು):–

ಸಂಸದರ ಚುನಾವಣೆ ಸಮಯದಲ್ಲಿ 'ಒಂದು ಓಟು ಎರಡು ಸರ್ಕಾರ' ಎಂದು ಬಿಜೆಪಿ ಯವರು ಹೇಳಿದರು. ಒಂದು ಉದಾಹರಣೆಯನ್ನು ಹೇಳುತ್ತೇನೆ, ಕಲಬುರ್ಗಿಗೆ ಒಂದು ರೇಲ್ವೆ ಡಿವಿಜನ್ ಮಂಜೂರಾಗಿತ್ತು. ಬಂದಿತ್ತು. ಅದಕ್ಕೆ ಹಣವನ್ನು ಮೀಸಲಿಟ್ಟಿದರು. ಅದನ್ನು ಇವತ್ತಿನವರೆಗೂ ಇಂಪ್ಲಿಮೆಂಟ್ ಮಾಡಲು ಆಗಿರುವುದಿಲ್ಲ. ಹೋದ ವಾರದ ಪತ್ರಿಕೆಯಲ್ಲಿ ಕೇಂದ್ರ ರೇಲ್ವೆ ಸಚಿವರಾದ ಶ್ರೀ ಪಿಯುಶ್ ಗೋಯಲ್‌ರವರು ಉತ್ತರ ಭಾರತದಲ್ಲಿ ರೇಲ್ವೆ ಡಿವಿಜನ್ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಿಂತ ನಾಲ್ಕು ಪಟ್ಟು ರೈಲುಗಳು ಕಲಬುರ್ಗಿ ನಿಲ್ದಾಣದಿಂದ ಹೋಗುತ್ತವೆ. ಎಲ್ಲಾ ಮೂಲಭೂತ ಸೌಕರ್ಯಗಳು ಅಲ್ಲಿ ಇವೆ. ಇದಕ್ಕೆ ಕರ್ನಾಟಕ ಸರ್ಕಾರದವರು ಹಣ ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಇದಕ್ಕಾಗಿ ಬಜೆಟ್‌ನಲ್ಲಿ ಹಣ ತೆಗೆದು ಇಟ್ಟಿದೆ. ಯಾಕೆ ಇದನ್ನು ಇಂಪ್ಲಿಮೆಂಟ್ ಮಾಡಲು ಕೇಳುತ್ತಿಲ್ಲ? ಏನಾದರೂ ಹೇಳಿದರೆ ನಾವು ಡಬಲ್ ಇಂಜಿನ್ ಸರ್ಕಾರ ಎಂದು ಹೇಳುತ್ತೀರಿ. ಆದರೆ ಒಂದು project implement ಮಾಡಲು ಆಗುತ್ತಿಲ್ಲ. ಇರುವ project ಗಳು ಬೇರೆ ಕಡೆಗೆ ಹೋಗುತ್ತಿವೆ. ಇದರ ಬಗ್ಗೆ ನಿಮ್ಮಿಂದ ಒಂದು ವಿಶ್ಲೇಷಣೆಯು ಇಲ್ಲ. ಯಾವ ಕೆಲಸವನ್ನು ಪೂರ್ಣವಾಗಿ ಮಾಡಿರುವುದಿಲ್ಲ. ಟಾರ್ ಹಾಕುವುದು, ಗುಂಡಿ ತುಂಬುವುದು. ಬಿಲ್ಡಿಂಗ್ ಕಟ್ಟುವುದು ಇಷ್ಟೆ ಇವರ ಕೆಲಸಗಳು. ಬೆಂಗಳೂರು ನಗರಕ್ಕೆ 8000 ಕೋಟಿ ರೂ.ಗಳ ಅನುದಾನವನ್ನು ಕೊಟ್ಟಿದ್ದಾರೆ. 8000 ಕೋಟಿ ರೂಪಾಯಿಗಳಲ್ಲಿ 5000 ಕೋಟಿ ರೂಪಾಯಿಗಳನ್ನು ಕೇವಕ ಹೂಳು ಎತ್ತುವುದಕ್ಕೆ, ಚರಂಡಿ ತೆಗೆಯುವುದಕ್ಕೆ, ಫುಟ್‌ಪಾತ್ ನಿರ್ಮಿಸಲು ಉಪಯೋಗಿಸಿಬಿಡುತ್ತಾರೆ. ಸಾರ್ವಜನಿಕರ ಹಿತಕ್ಕಾಗಿ ಒಂದೇ ಒಂದು ಕೆಲಸವನ್ನು ಮಾಡಿರುವುದಿಲ್ಲ. ಏಕೆ ಕೆಲಸ ಸಹ ಮಾಡಿರುವುದಿಲ್ಲ ಎನ್ನುವುದಕ್ಕೆ ಇವರ ಹತ್ತಿರ ಉತ್ತರವಿಲ್ಲ.

ಕೆಎಸ್‌ಟಿಡಿಸಿ ಬಗ್ಗೆ ಹೇಳಿದ್ದಾರೆ. ಈಗತಾನೆ ಪ್ರವಾಸೋದ್ಯಮ ಮಂತ್ರಿಗಳು ಇದ್ದರು. 3 ಖಣಚಿಡಿ ಹೋಟೆಲ್‌ಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿದ್ದಾರೆ. ಸರ್ಕಾರ ಏಕೆ ಕಟ್ಟುತ್ತಿದೆ ಸ್ಟಾರ್ ಹೋಟೆಲ್? ಅದನ್ನು ನಡೆಸಲು ನಿಮ್ಮ ಕೈಯಿಂದ ಆಗುವುದಿಲ್ಲ. ಬೇರೆ ಯಾರಿಗಾದರೂ ಕೊಡಿ. ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಾಜಪೇಯಿಯವರು ಇದ್ದಾಗ, ಮಾನ್ಯ ಅನಂತಕುಮಾರ್‌ರವರ ಕಾಲದಲ್ಲಿ ಸರ್ಕಾರಿ ಆಸ್ತಿಗಳೆಲ್ಲವನ್ನು ಮಾರಿಬಿಟ್ಟರು. ಮಾರಿದರೂ, ಲೀಸ್ ಕೊಟ್ಟರೂ ಏನೋ ಒಂದು ಆಗಿದೆ. ಆದರೆ ಮತ್ತೆ ಈಗ ಏಕೆ ಕಟ್ಟಲು ಪ್ರಯತ್ನಿಸುತ್ತಿದ್ದೀರಿ. ಖಾಸಗಿಯವರಿಗೆ ಏನು ಬೇಕು ಆ ಸೌಲಭ್ಯವನ್ನು ಕೊಟ್ಟು ಅವರಿಗೆ encourage ಮಾಡಿ, ಅವರಿಗೆ benefit ಕೊಡಿ, ಸಬ್ಸಿಡಿ ಕೊಡಿ. ಅವರಿಗೆ ಕೊಡಿ, ಅವರು ಮಾಡುತ್ತಾರೆ. ನಿಮ್ಮ ಕೈಯಿಂದ ನಡೆಸಲು ಆಗುವುದಿಲ್ಲ. ಬರೀ ಹಣ ಹೊಡೆಯಲು ಟೆಂಡರ್ ಕರೆಯಬೇಕು, ಬಿಲ್ಡಿಂಗ್ ಕಟ್ಟಬೇಕು ಎಂದು ಹೇಳುವುದು ಯಾವ ನ್ಯಾಯ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಸಾವಿರಾರು ಕೋಟಿ ರೂಪಾಯಿಗಳ ಜಿಎಸ್‌ಟಿ ಹಣ ಕೇಂದ್ರದಿಂದ ಬರಬೇಕು. ಏಕೆ ಬರುತ್ತಿಲ್ಲ? ಇಲ್ಲಿ ನಮ್ಮ ರಾಜ್ಯಕ್ಕೆ ಹಣ ಇಲ್ಲ, ಸಾಲ ಮಾಡಬೇಕಾಗಿದೆ. ಅವರು ಸಾಲ ಮಾಡಿ ಎಂದು ಹೇಳುತ್ತಾರೆ, ನೀವು ಸಾಲ ಮಾಡುವುದು; ಇದೇ ಆಗಿದೆ. ಬರುವ ಹಣವನ್ನು ತೆಗೆದುಕೊಳ್ಳಲು ಆಗುತ್ತಿಲ್ಲ ನಿಮಗೆ.

ಈ ವರ್ಷದ ಬಜೆಟ್‌ನಲ್ಲಿ ಒಂದು ರೂಪಾಯಿಯ ತೆರಿಗೆಯನ್ನು ಹಾಕಿರುವುದಿಲ್ಲ ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಕೆಲಸ. ಆದರೆ ಆಸ್ತಿ ತೆರಿಗೆಯನ್ನು ಹೆಚ್ಚು ಮಾಡಿ ಎಷ್ಟು ದಿನವಾಯಿತು? 20% ಆಸ್ತಿ ತೆರಿಗೆಯನ್ನು ಹೆಚ್ಚು ಮಾಡಲು ನೀವು ಅನುಮತಿಯನ್ನು ತೆಗೆದುಕೊಂಡಿದ್ದೀರಿ. ಲೈಟ್ ಬಿಲ್, ನೀರಿನ ಬಿಲ್ ಜಾಸ್ತಿ ಮಾಡುತ್ತೀರಿ. ಪ್ರತಿ ತಿಂಗಳು ಒಂದೊಂದು ಬಿಲ್ ಜಾಸ್ತಿ ಮಾಡಿಕೊಂಡು ಹೋಗುತ್ತಿದ್ದೀರಿ. ಹಿಂದಿನ ಸರ್ಕಾರ ಪೆಟ್ರೋಲ್, ಡಿಸೇಲ್, ಗ್ಯಾಸ್ ಬೆಲೆ 5 ಅಥವಾ 10 ರೂಪಾಯಿ ಜಾಸ್ತಿ ಮಾಡಿದರೆ, ಇವತ್ತಿನ ಆಡಳಿತ ಪಕ್ಷದವರು ಆಗ ರೋಡ್‌ಗೆ ಹೋಗಿ ಕೂಡುತ್ತಿದ್ದರು. ಈಗ 100 ರೂಪಾಯಿ ಜಾಸ್ತಿಯಾಗುತ್ತಿದೆ. ಈ 6 ತಿಂಗಳಲ್ಲಿ 30 ರೂಪಾಯಿಗಳಷ್ಟು ಪೆಟ್ರೋಲ್, ಡಿಸೇಲ್ ಬೆಲೆ ಜಾಸ್ತಿಯಾಗಿದೆ. ಕೇಂದ್ರ ಸರ್ಕಾರ ಜಾಸ್ತಿ ಮಾಡುತ್ತಿದೆ ನಿಜ, ಆದರೆ ತೆರಿಗೆಯಲ್ಲಿ ಸ್ವಲ್ಪ ಕಡಿಮೆ ಮಾಡಲು ರಾಜ್ಯ ಸರ್ಕಾರಕ್ಕೆ ಏನು ಸಮಸ್ಯೆ? 2,3 ಅಥವಾ 5 ರೂಪಾಯಿಗಳಷ್ಟು ತೆರಿಗೆ ಕಡಿಮೆ ಮಾಡಿ. ಬಜೆಟ್‌ನಲ್ಲಿ ತೆರಿಗೆ ಹಾಕಿಲ್ಲ ಎಂದು ಹೇಳುತ್ತಾರೆ. ಆದರೆ ಈ ರೀತಿ ದಿನಾ ಕೊಳ್ಳೆ ಹೊಡೆಯುತ್ತಿದ್ದಾರೆ. ಇದನ್ನು ಕೇಳುವವರು ಯಾರು ಇಲ್ಲವೆ ನಿಮಗೆ?

ಉತ್ತರ ಕರ್ನಾಟಕದ ಮಕ್ಕಳಲ್ಲಿ ಪೌಷ್ಠಿಕಾಂಶದ ಕೊರತೆ ಇದೆ ಎನ್ನುವ ವಿಚಾರವನ್ನು ನಾನು ಹಲವು ಬಾರಿ ಸದನದಲ್ಲಿ ಪ್ರಸ್ತಾಪಿಸಿದ್ದೇನೆ. ಅದನ್ನು ಯಾರು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಿಗೆ ಒಂದು ಸಾರಿ ಹೇಳಿದೆ. ಅವರು ನಿಮ್ಮನ್ನೆಲ್ಲಾ ಒಂದು ಸಾರಿ ಮೀಟಿಂಗ್ ಕರೆದು ಇದರ ಬಗ್ಗೆ ಸಮಾಲೋಚನೆ ಮಾಡುತ್ತೇನೆ ಎಂದು ಹೇಳಿದರು. ಆದರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದಕ್ಕೂ ಸರ್ಕಾರದಿಂದ ಉತ್ತರ ಬರುತ್ತಿಲ್ಲ. ಎಲ್ಲಿ ಅನ್ಯಾಯವಾಗುತ್ತಿದೆ ಅದಕ್ಕೆ ಸರ್ಕಾರ ಸ್ಪಂಧನೆ ಮಾಡದೆ ಹೋದರೆ ಮಕ್ಕಳು ಹೇಗೆ ಬದುಕುತ್ತಾರೆ, ಆ ತಾಯಂದಿರು ಹೇಗೆ ಬದುಕುತ್ತಾರೆ?

ಕೌಶಲ್ಯಾಭಿವೃದ್ಧಿ ಬಗ್ಗೆ ಹೇಳಿದ್ದಾರೆ, ಏನು ಮಾಡಿದ್ದಾರೆ ಕೌಶಲ್ಯಾಭಿವೃದ್ಧಿ? ಹೋದ ಬಜೆಟ್ 185ನೇ ಐಟಂ ನಲ್ಲಿ ಖಚಿತವಾದ ಉದ್ಯೋಗಕ್ಕಾಗಿ ಕೌಶಲ್ಯ ತರಬೇತಿಗಳನ್ನು ನೀಡಲು ಮತ್ತು ಕೌಶಲ್ಯಗಳನ್ನು ಉತ್ತೇಜಿಸಲು ಮುಂದಿನ ಎರಡು ವರ್ಷಗಳಲ್ಲಿ 1000 ಪದವೀಧರರಿಗೆ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ Talent Acceleration Programme ನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ಉಲ್ಲೇಖಿಸಲಾಗಿದೆ. ಏನು ಮಾಡಿದ್ದೀರಿ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಹೇಳಿ ನೋಡೋಣ. ಬರಿ ಪ್ರಿಂಟ್ ಹಾಕುವುದು, ಕೊಡುವುದು ಇದೇ ಆಗಿದೆ. ಹೋದ ವರ್ಷದ ಬುಕ್‌ನ್ನು ಯಾರು ನೋಡುವುದಿಲ್ಲ. ಎಲ್ಲರೂ ಈ ವರ್ಷದ ಬುಕ್‌ನ್ನೆ ನೋಡುತ್ತಾರೆ, ಇದರ ಮೇಲೆಯೇ ಮಾತನಾಡುತ್ತಾರೆ. ಹೋದ ವರ್ಷ ನಾವು 317 ಐಟಂ ಕೊಟ್ಟಿದ್ದೇವೆ ಎಂದು ಒಂದು Performance Report ಕೊಡಬೇಕಾಗಿತ್ತು ಅಥವಾ Utilization Certificate ಕೊಡಬೇಕಾಗಿತ್ತು. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಅನೇಕ ಕಾರ್ಯಕ್ರಮಗಳಿಗಾಗಿ ಡಿಸಿ ಯವರಿಗೆ ಹಣವನ್ನು ಕೊಡುತ್ತಾರೆ. ಅದು ಮಾರ್ಚ್ 31ಕ್ಕೆ ಮುಗಿದು ಹೋಗುತ್ತದೆ. ಆದರೆ ಯಾವ ಕಾರ್ಯಕ್ರಮವನ್ನು ಮಾಡಿರುವುದಿಲ್ಲ, ಯಾವ ಕೆಲಸವು ಇಂಪ್ಲಿಮೆಂಟ್ ಆಗುವುದಿಲ್ಲ ಅದಕ್ಕೆ ಕೊಟ್ಟಿರುವ ಹಣ ಸರ್ಕಾರಕ್ಕೆ ವಾಪಸ್ ಬರುತ್ತದೆ. ಸಂಬಳ ಬಿಟ್ಟು ಬೇರೆ ಯಾವ ಕೆಲಸವು ಆಗಿರುವುದಿಲ್ಲ. ಬೇಕಾದರೆ ಒಂದು ಸದನ ಸಮಿತಿ ರಚನೆ ಮಾಡಿ ನೋಡಿಕೊಂಡು ಬರಬಹುದು. ಇದರ ಬಗ್ಗೆ ಉದಾಹರಣೆ ಕೊಡುವಾಗ ಬೆಳಗಾವಿಯಲ್ಲಿ ಹೆಣ್ಣು ಮಕ್ಕಳ ಪರಿಸ್ಥಿತಿ ಹೇಗೆ ಇದೆ ಎಂದು ಹೇಳಿದೆ. 1 ಲಕ್ಷ ಕೋಟಿ ರೂಪಾಯಿಗಳನ್ನು ನಾವು ಅಂದಾಜು ಮಾಡಿದ್ದೆವು, ನಂತರ ಸರ್ಕಾರ 35,000 ಕೋಟಿಗಳನ್ನು ನಂತರ 32,000 ಕೋಟಿ ರೂಪಾಯಿಗಳನ್ನು ಕೊಡಲಾಗುತ್ತದೆ ಎಂದು ಹೇಳಿದರು. ಕೊನೆಗೆ ಕೊಟ್ಟಿರುವುದು 1800 ಕೋಟಿ ರೂಪಾಯಿಗಳನ್ನು ಮಾತ್ರ. ಆ ಜನರು ನಾವು ಹೇಗೆ ಬದುಕು ನಡೆಸುವುದು ಎಂದು ಕೇಳುತ್ತಿದ್ದಾರೆ. ಸರ್ಕಾರ ಏನು ಮಾಡುತ್ತಿದೆ? ಈ ಬಜೆಟ್‌ನಲ್ಲಾದರೂ ನೆರೆ, ಬರ, ಅತಿವೃಷ್ಟಿ, ಅನಾವೃಷ್ಟಿಗೆ ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಇನ್ನು ಇಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎನ್ನುವ ಒಂದು ಮಾತು ಕೂಡಾ ಸರ್ಕಾರದಿಂದ ಬಂದಿಲ್ಲ. ಮೊನ್ನೆ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ 6 ತಿಂಗಳು ಬೇರೆ ಎಲ್ಲ ಕೆಲಸಗಳನ್ನು ನಿಲ್ಲಿಸಿಬಿಡಿ, ಬರೀ ಉತ್ತರ ಕರ್ನಾಟಕದ ಬಗ್ಗೆ ಒಂದು supplementary budget ಮಾಡಿ, ಅಲ್ಲಿ ಏನೇನು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ಯಾಯವಾಗಿದೆ ಅದನ್ನಾದರೂ ಸರಿ ಮಾಡಿ ಎಂದು ಹೇಳಿದ್ದೇವೆ. ಅದನ್ನು ಮಾಡಲಿಲ್ಲ. ನಾವು ಕೇಳಿದಾಗ 'ಪರಿಶೀಲನೆ ಮಾಡುತ್ತೇವೆ, ನಿಮ್ಮನ್ನು ಕರೆದು ಮಾತನಾಡುತ್ತೇವೆ' ಎನ್ನುವ ಉತ್ತರವನ್ನು ಕೊಟ್ಟುಬಿಡುತ್ತಾರೆ. ಆದರೆ ಜವಾಬ್ದಾರಿಯುತವಾದ ಕೆಲಸವೇ ಆಗುತ್ತಿಲ್ಲ. ಎಸ್‌ಸಿ/ಎಸ್‌ಟಿ ಯವರಿಗೆ ಸ್ವಾತಂತ್ರ್ಯ ಬಂದಾಗಿನಿಂದ ಹಣ ಕಡಿಮೆ ಮಾಡಿರುವುದು ಇದೊಂದೆ ಬಜೆಟ್‌ನಲ್ಲಿ. ಯಾವಾಗಲೂ ಹಿಂದಿನಷ್ಟೆ ಇರುತ್ತಿತ್ತು ಅಥವಾ 5 ರಿಂದ 10% ಜಾಸ್ತಿ ಮಾಡುತ್ತಿದ್ದರು. ಈ ಸಾರಿ ಕಡಿಮೆ ಮಾಡಿರುವುದಕ್ಕೆ ಈ ಸರ್ಕಾರಕ್ಕೆ ಒಂದು prize ಕೊಡಬೇಕು. ಈಗ ಮಾನ್ಯ ಸಾಬಣ್ಣ ತಳವಾರರವರು ಮಾತನಾಡುತ್ತಾ, 16 ನಿಗಮಗಳಿಗೆ 500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಆಯಿತು ಇನ್ನು ಸ್ವಲ್ಪ ಜಾಸ್ತಿ ಕೊಡಿ. ಬ್ರಾಹ್ಮಣರಿಗೂ 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಸಂತೋಷ. ಹೋದ ವರ್ಷ ಒಂದು ರೂಪಾಯಿಯು ಕೊಟ್ಟಿರಲಿಲ್ಲ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ 25,000 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು, ಈಗ ಇವರು ಕೊಟ್ಟಿದ್ದಾರೆ. 16 ನಿಗಮಗಳಿಗೆ 500 ಕೋಟಿ ರೂಪಾಯಿಗಳೆಂದರೆ ಬಹಳ ಅನ್ಯಾಯ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇನ್ನು 200 ಕೋಟಿ ರೂಪಾಯಿಗಳನ್ನು ಕೊಡಿ. ಇವರಿಗೆ ಅಧಿಕಾರ ಕೊಟ್ಟಿರುವುದು ಜನಪರ ನೀತಿ ಮಾಡಿ ಎಂದು. ಆದರೆ ಇವರು ಜಾತಿಪರ ನೀತಿ ಮಾಡಲು ಹೋಗುತ್ತಿದ್ದಾರೆ. ಜೇನುಗೂಡಿಗೆ ಕಲ್ಲು ಹೊಡೆದಿದ್ದಾರೆ. ಅದರ ಪರಿಣಾಮವನ್ನು ಅವರೇ ಅನಭವಿಸುತ್ತಾರೆ. ಜೇನು ನೊಣಗಳು ಕಚ್ಚುವುದು ಅವರಿಗೆ. ಯಾವುದೇ ಜಾತಿ ಇರಲಿ, ಯಾರು ಬಡವರಿದ್ದಾರೆ ಅವರಿಗೆ ಏನು ಸೌಲಭ್ಯಗಳನ್ನು ಕೊಡಬೇಕು ಕೊಡಿ. ಅದನ್ನು ತಮಗೆ ಇಷ್ಟವಾದವರಿಗೆ ಕೊಡುವುದು ಸರಿಯಲ್ಲ, ಇದು ಸರ್ಕಾರದ ತಪ್ಪು ಧೋರಣೆ. ಇದರ ಬಗ್ಗೆ ಹೇಳಿದರೆ ಅರ್ಥವಾಗುವುದಿಲ್ಲ. ಇವರೆ ಅನುಭವಿಸುತ್ತಾರೆ.

ಹುಬ್ಬಳಿ ಹತ್ತಿರ ಅಪಘಾತವಾಗಿ ದಾವಣಗೆರೆಯ ಡಾಕ್ಟರ್ ಮತ್ತು ಅವರ ಗೆಳೆಯರು ಎಷ್ಟು ಜನ ಸತ್ತರು ಎನ್ನುವುದನ್ನು ಎಲ್ಲರೂ ಪತ್ರಿಕೆಯಲ್ಲಿ ಓದಿದ್ದೇವೆ. ಆ ರಸ್ತೆ ರಿಪೇರಿಗೆ ಸರ್ಕಾರ ಮುಂದಾಗಿರುವುದಿಲ್ಲ. ನಾವೇನಾದರೂ ಕೇಳಿದರೆ, 'ಅದಕ್ಕೆ ಟೆಂಡರ್ ಹಾಕಿದ್ದೇವೆ, ಅದು-ಇದು' ಎಂದು ಹೇಳುತ್ತಾರೆ. ಅಲ್ಲಿ ಪ್ರತಿದಿನ ಸುಮಾರು 15-20 ಜನರು ಸಾಯುತ್ತಿದ್ದಾರೆ. ಆ ರಸ್ತೆಯಲ್ಲಿ 12 ವರ್ಷಗಳಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಜನರು ಅಪಘಾತವಾಗಿ ಸತ್ತಿದ್ದಾರೆ. ಬೇಕು ಎಂದರೆ ಯಾವ ದಿನಾಂಕಗಳಲ್ಲಿ ಅಪಘಾತವಾಗಿವೆ ಎನ್ನುವ ವಿವರವನ್ನು ತಂದು ಕೊಡುತ್ತೇನೆ. ಅದನ್ನು ಸರಿ ಮಾಡಲು ನಿಮಗೆ ಏನು ಆಗಿದೆ? ಕೇಳಿದರೆ 'ಕೋರ್ಟ್‌ನಲ್ಲಿ ಇದೆ' ಎಂದು ಹೇಳುತ್ತಾರೆ. ಕೋರ್ಟ್‌ನಲ್ಲಿರುವವರು ಮನುಷ್ಯರೆ ಅಲ್ಲವೆ, ಅವರನ್ನು ಕರೆದು ಜನ ಸಾಯುತ್ತಿದ್ದಾರೆ ಅದೇನು ಇದೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರ ನಿಷ್ಕರ್ಷೆ ಮಾಡಿ ಎಂದು ಹೇಳುವುದಲ್ಲವೆ? ಆ ಕೆಲಸವನ್ನು ನಾವು ಮಾಡಲಿಲ್ಲ, ನೀವು ಮಾಡಲು ಏನು ತೊಂದರೆ, ಮಾತೆತ್ತಿದರೆ ಹಿಂದಿನ ಸರ್ಕಾರದ ಬಗ್ಗೆ ಹೇಳುತ್ತಾರೆ. ನಾವು ಮಾಡಲಿಲ್ಲ; ನಾವು ಮಾಡಿದ ತಪ್ಪನು ನೀವು ಮಾಡುತ್ತೀರಾ? ಈಗ ನಾವು ಇಲ್ಲಿ ಕುಳಿತಿದ್ದೇವೆ. ಮುಂದೆ ನೀವು ಇಲ್ಲಿ ಕೂಡಬೇಕು ಎಂದುಕೊಂಡಿದ್ದೀರಾ?

ಕೈಗಾರಿಕಾ ಟೌನ್‌ಶಿಪ್‌ಗಳನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಇರುವ ಕೈಗಾರಿಕಾ ಟೌನ್‌ಶಿಪ್‌ಗಳಲ್ಲಿ ವ್ಯವಸ್ಥಿತವಾದ infrastructure ಇಲ್ಲ. ಹಾರೋಹಳ್ಳಿ ಕೈಗಾರಿಕಾ ಪ್ರದೇಶದ ಬಗ್ಗೆ ಹೋದ ಸಾರಿ ನಾನು ಪ್ರಶ್ನೆಯನ್ನು ಕೇಳಿದಾಗ ಹೇಳಿದೆ, ಅಲ್ಲಿ 600 ಕೈಗಾರಿಕೆಗಳು ಇವೆ. ಒಂದು ಲಕ್ಷ ಜನ ಕೆಲಸ ಮಾಡುತ್ತಿದ್ದಾರೆ. ಆದರೆ ಅಲ್ಲಿ ಒಂದು Fire Station ಇಲ್ಲ. ನಾವು ಮೊನ್ನೆ ಗಲಾಟೆ ಮಾಡಿದಾಗ, ಮಾಡುತ್ತೇವೆ ಅದಕ್ಕಾಗಿ ಎರಡು ಎಕರೆ ಜಾಗವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಎರಡು ಎಕರೆ ಜಾಗ ಮೊದಲೇ ಇತ್ತು. ಅದಕ್ಕೆ ಒಂದು ಪ್ಲ್ಯಾನ್ ಹಾಕಿರಲಿಲ್ಲ. ಇವತ್ತಿವರೆಗೆ ಒಂದು Fire Station ಇಲ್ಲ. ಇರುವಂತಹ ಕೈಗಾರಿಕಾ ಪ್ರದೇಶಗಳಲ್ಲಿ ಬೇಕಾದ ಸೌಲಭ್ಯಗಳನ್ನು ಕೊಡಬೇಕು. ನೀವು ಯೋಜನೆ ಮಾಡುವಾಗ ಬಂಡವಾಳ ಹೂಡುವವರು ಮುಂದೆ ಬಂದಾಗ ಅವರಿಗೆ ಎ, ಬಿ, ಸಿ, ಡಿ ಈ ರೀತಿ ಎಲ್ಲ ಮೂಲಸೌಕರ್ಯಗಳು ಇರುತ್ತವೆ ಎಂದು ಹೇಳುತ್ತೀರಿ. ಅದನ್ನು ಪೂರ್ತಿ ಮಾಡದೆ, ಮತ್ತೆ ಹೊಸ ಕೈಗಾರಿಕೆಗಳನ್ನು, ಟೌನ್‌ಶಿಪ್‌ಗಳನ್ನು ಮಾಡುತ್ತೇವೆ ಎಂದರೆ ಹೇಗೆ?

ಗಣಿ ಬಗ್ಗೆ ಹೇಳಬೇಕಾದರೆ, ಒಂದು ಸಮಗ್ರವಾದ ಗಣಿ ನೀತಿಯೇ ಇಲ್ಲ. ಜಿಲೆಟಿನ್ ಸ್ಫೋಟದಿಂದ ಚಿಕ್ಕಬಳ್ಳಾಪುರದಲ್ಲಿಯು ಸಾಯುತ್ತಾರೆ, ಶಿವಮೊಗ್ಗದಲ್ಲಿಯು ಸಾಯುತ್ತಾರೆ. ಶಿವಮೊಗ್ಗದ ಬಗ್ಗೆ ಕೇಳಿದರೆ ಮುಖ್ಯಮಂತ್ರಿಯವರ, ಮಾನ್ಯ ಈಶ್ವರಪ್ಪನವರ ಕಡೆಯವರು ಎಂದು ಹೇಳುತ್ತಾರೆ. ಚಿಕ್ಕಬಳ್ಳಾಪುರದ ಬಗ್ಗೆ ಕೇಳಿದರೆ ಶ್ರೀ ಸುಧಾಕರ್‌ರವರ ಪೈಕಿ ಎಂದು ಹೇಳುತ್ತಾರೆ. ಇದಕ್ಕೆ ಒಂದು ಸ್ಪಷ್ಟವಾದ ನೀತಿಯನ್ನು ಕೊಡಿ. ಮುಂದೆ ಈ ರೀತಿ ಯಾರು ಮಾಡಬಾರದು, ಆ ರೀತಿ ಕೆಲವು ಜನರಿಗೆ ಘೋರವಾದ ಶಿಕ್ಷೆಯನ್ನು ಕೊಡಿ. ಇಲ್ಲದಿದ್ದರೆ ಈ ಕೈಗಾರಿಕೆಗಳನ್ನು ನಿಲ್ಲಿಸಿ. ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲವೆ? ಅಧಿಕಾರಿಗಳಲ್ಲಿ ಏನಾಗಿದೆ ಎಂದರೆ, ಎಲ್ಲರೂ ಹಣ ಕೊಟ್ಟು ಬರುತ್ತಾರೆ, ಹೇಳಿದ ಮಾತನ್ನು ಕೇಳುವುದೇ ಇಲ್ಲ. ರಾಜಕಾರಣಿಗಳು ಎಂದರೆ ಅವರಿಗೆ ತಾತ್ಸಾರವಾಗಿದೆ. ಮಂತ್ರಿಗಳು ಎಂದರೆ, 'ಬಿಡಿ, ಇವರೆಷ್ಟು ದಿನ ಇರುತ್ತಾರೆ, ಬದಲಾಗುತ್ತಾರೆ' ಎಂದು ಹೇಳುವ ಮಟ್ಟಕ್ಕೆ ಅಧಿಕಾರಿಗಳು ಇವತ್ತು ಬಂದಿದ್ದಾರೆ. ನಿಮ್ಮ ಸರ್ಕಾರ ಅಧಿಕಾರಿಗಳ ಕಿವಿ ಹಿಂಡದೆ ಹೋದರೆ ಮುಂದೆ ನಿಮಗೆ ಕಷ್ಟ ಕಾದಿದೆ. ನಿಮ್ಮ ಗಮನಕ್ಕಾಗಿ ಈ ವಿಷಯವನ್ನು ಹೇಳುತ್ತಿದ್ದೇನೆ. ಅವರನ್ನು ಆ ಮಟ್ಟಕೆ ಬಿಡಬಾರದು. ಅವರು ಹೇಳಿದ ಮಾತನ್ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳದಷ್ಟು ಬೆಳೆದಿದ್ದಾರೆ. 'ಇವನು ಎಷ್ಟು ದಿನ ಇರ್ತಾನೆ ಬಿಡ್ರಿ' ಅನ್ನುತ್ತಾರೆ. ನಾನು ಕಿಯೋನಿಕ್ಸ್ ಸಂಸ್ಥೆಗೆ ಅಧ್ಯಕ್ಷನಾಗಿದ್ದೆ. ಆಗ ಒಂದು ಭೂಮಿ ಬೇರೆಯವರ ವಶದಲ್ಲಿತ್ತು. ಅದನ್ನು ವಶಪಡಿಸಿಕೊಳ್ಳಬೇಕು ಎಂದು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡೆವು. ಅಲ್ಲಿ ಇರುವ ಅಧಿಕಾರಿಗಳು ಆ ಬಿಲ್ಡಿಂಗ್ ಮಾಲೀಕನನ್ನು ಕರೆಯಿಸಿಕೊಂಡು 'ಆರು ತಿಂಗಳು ಮುಂದಕ್ಕೆ ಹಾಕಿ, ಈ ಅಧ್ಯಕ್ಷರು ಇರುವುದು ಆರು ತಿಂಗಳು ಅಥವಾ ಒಂದು ವರ್ಷ' ಎಂದು ಹೇಳುತ್ತಾರೆ. ಈ ಮಟ್ಟಿಗೆ ಅಧಿಕಾರಿಗಳು ಬಂದಿದ್ದಾರೆ. ಇಂತಹವರು ಇದ್ದರೆ ಸರ್ಕಾರದ ಸ್ವತ್ತು ಉಳಿಯುವುದಿಲ್ಲ, ಸರ್ಕಾರವೂ ಉಳಿಯುವುದಿಲ್ಲ. ನೀವು ಯಾರಿಗೂ ಒಳ್ಳೆಯದನ್ನು ಮಾಡಲು ಆಗುವುದಿಲ್ಲ.

(ಮುಂದು)

**(383)15-03-2021(01-40)ಬಿಎಸ್‌ಡಿ-ಆರ್‌ಎನ್**

**ಶ್ರೀ ಯು.ಬಿ. ವೆಂಕಟೇಶ್ (ಮುಂದು):-**

ಏನಾದರೂ ಸ್ವಲ್ಪ ಭದ್ರ ಮಾಡಿ ಕಿವಿ ಹಿಂಡಬೇಕು, ಅವರು ಜಾರಿಗೆ ತರಲು ಉದ್ದೇಶಿಸಿರುವ ನೀತಿಗಳನ್ನು ಅನುಷ್ಠಾನಕ್ಕೆ ತರಬೇಕು. ನಾವು ನೀತಿಗಳನ್ನು ಮಾಡಿ ಅನುಷ್ಠಾನಕ್ಕೆ ತರದಿದ್ದರೆ ಪ್ರಯೋಜನ ಏನು? ನಾವು ಹೇಳುವುದೇ ಒಂದಾದರೆ ಅವರು ಮಾಡುವುದೇ ಒಂದಾಗಿದ್ದು, ಅವರಿಗೆ ಬೇಕಾಗಿರುವುದನ್ನು ಮಾಡುವುದಾದರೆ ನಾವು ಏಕೆ ಇರಬೇಕು? ಅವರು ಹೇಳಿದಂತೆ ರಾಜ್ಯಭಾರ ಮಾಡಲಿ. ಮಾನ್ಯ ರವಿಕುಮಾರ್ ಎಲ್ಲೋ ಹೊರಗೆ ಹೋದರು, ಆಗಲೇ ಜೋರಾಗಿ ಕೂಗಾಡುತ್ತಿದ್ದರು. ಪಾರ್ಲಿಮೆಂಟ್ ಚುನಾವಣೆ ಸಮಯದಲ್ಲಿ ಕೋಲಿ ಸಮಾಜವನ್ನು ಎಸ್.ಟಿ ಗೆ ಸೇರಿಸುತ್ತೇವೆ ಎಂದು ಎಲ್ಲಾ ಕಡೆ ಹೇಳಿ, ಗಲಾಟೆ ಮಾಡಿ, ಚುನಾವಣೆಯನ್ನು ಗೆದ್ದರು. ಆದರೆ ಎಲ್ಲಿ ಸೇರಿಸಿದ್ದಾರೆ? ಅವರು ಹೇಳಿದ್ದನ್ನು ಒಂದನ್ನಾದರೂ ಮಾಡಬೇಕು. ಮೊನ್ನೆ ನಮ್ಮ ಪಕ್ಷದಲ್ಲಿದ್ದ ಒಬ್ಬರು ಈಗ ಅವರ ಕಡೆ ಇದ್ದು, ಅವರು ಎಲ್ಲೋ ಒಂದು ಕಡೆ ಯಾದಗಿರಿಯಲ್ಲಿ ಭಾಷಣ ಮಾಡುತ್ತಾ " ಇಂತಹ ಕೆಲಸ ಕೇವಲ ಮಾನ್ಯ ಮಲ್ಲಿಕಾರ್ಜುನ ಖರ್ಗೆಯಂತಹವರಿಂದ ಮಾತ್ರ ಮಾಡಲು ಸಾಧ್ಯ" ಎಂದು ಹೇಳುತ್ತಾರೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಇದು RGI (Registrar General of India) ಗೆ ಹೋಗಿದೆ. ನಾನು ಕೋಲಿ ಸಮಾಜದವನಾಗಿದ್ದು, ಈಗ ಕೇಂದ್ರ ಸರ್ಕಾರದಲ್ಲಿದ್ದು, RGI ನಿಂದ ಆಗಬೇಕು.

**ಶ್ರೀ ಯು.ಬಿ. ವೆಂಕಟೇಶ್:-** ಕೇಂದ್ರ ಸರ್ಕಾರ ಯಾರ ಕೈಲಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತಳವಾರ್ ಸಾಬಣ್ಣ:–** ಅದು RGI ನಿಂದ ಆಗಬೇಕು.

**ಶ್ರೀ ಯು.ಬಿ. ವೆಂಕಟೇಶ್:–** ಅದು ಎಷ್ಟು ದಿವಸದಿಂದ ಆಗಬೇಕು.

**ಡಾ: ತಳವಾರ್ ಸಾಬಣ್ಣ:–** ನಾವು 25 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ.

**ಶ್ರೀ ಯು.ಬಿ. ವೆಂಕಟೇಶ್:–** ಇದು individual ವಿಚಾರವಾಗಿರುವುದರಿಂದ ನಾನು ಮಾನ್ಯ ಸದಸ್ಯರ ಜೊತೆ ನಂತರ ಮಾತನಾಡುತ್ತೇನೆ. ಕೇಂದ್ರ ಸರ್ಕಾರ ನಮ್ಮಲ್ಲಿದೆಯೋ, ಅವರಲ್ಲಿದೆಯೋ? ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಮಾಡಿಸಬೇಕಾದವರು ಯಾರು? ಒಂದು ವಿಷಯವನ್ನು ಹೇಳಿದರೆ ಅದರಂತೆ ನಡೆದುಕೊಳ್ಳಬೇಕು. ಮಾನ್ಯ ಸದಸ್ಯರು ಹೇಳಿದ್ದು ತಪ್ಪು ಎಂದು ಹೇಳುವುದಿಲ್ಲ, ಆ ಸಮಾಜಕ್ಕೆ ಸಿಕ್ಕಿದರೆ ನಾನು ಸಂತೋಷ ಪಡುತ್ತೇನೆ. ಆದರೆ ಅವರ ಪ್ರಯತ್ನ ಎಲ್ಲಿದೆ? ಇಲ್ಲಿಂದ ಅಲ್ಲಿಗೆ ಕಳುಹಿಸಿ ಅಲ್ಲಿ ಬಿದ್ದಿದೆ. ಅಲ್ಲಿ ಬೇರೆ ಸರ್ಕಾರ ಇದೆಯೇ? ಅವರ ಸರ್ಕಾರ ಇಲ್ಲವೇ? ಅವರ ಪಕ್ಷದ 25 ಜನ ಎಂ.ಪಿ ಗಳು ಇಲ್ಲವೇ?

**ಡಾ: ತಳವಾರ್ ಸಾಬಣ್ಣ:–** ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

**ಶ್ರೀ ಯು.ಬಿ. ವೆಂಕಟೇಶ್:–** ನಾನು yield ಆಗಿಲ್ಲ, ನಾನು ಅವರ ಜೊತೆ ನಂತರ ಮಾತನಾಡುತ್ತೇನೆ. ಅವರು ಬಹಳ ವಿದ್ಯಾವಂತರು. ನಾನು ಮಾತನಾಡಬೇಕೆಂದರೆ ವಿಷಯ out of mind ಆಗಿಬಿಡುತ್ತದೆ. Smart City ಯೋಜನೆಗಳ ಬಗ್ಗೆ ಹೇಳಬೇಕೆಂದರೆ, ಇವತ್ತು ಬೆಂಗಳೂರಲ್ಲಿ ಬಹಳ ಚೆನ್ನಾಗಿ ನಡೆಯುತ್ತಿದೆ. ಯಾರಾದರೂ ಸದಸ್ಯರ ಜೊತೆ ಒಂದು round walking ಹೋಗಬಹುದು. ಆಗ ಅವರ ಪರಿಸ್ಥಿತಿ ಏನಾಗುತ್ತದೆ ಎಂದು ಗೊತ್ತಾಗುತ್ತದೆ. ನಾನು ಹೋದ ವರ್ಷ ಈ ವಿಷಯವನ್ನು ಹೇಳಿದ್ದು, ಬೆಂಗಳೂರನ್ನು ನೋಡುವುದಕ್ಕೆ ಬೆಂಗಳೂರು ಅಭಿವೃದ್ಧಿ ಮಂತ್ರಿಯನ್ನು ನೇಮಿಸಿ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳಿದ್ದೆನು. ಆಗ ಮಾನ್ಯ ಸಿ.ಟಿ. ರವಿರವರೂ ಇದ್ದರು. ಆಗ ಮಾನ್ಯ ಮುಖ್ಯಮಂತ್ರಿಯವರೇ ನೋಡಿಕೊಳ್ಳುತ್ತಾರೆ ಎಂದು ಹೇಳಿದರು. ಮಾನ್ಯ ಅಡಗೂರು ಹೆಚ್ ವಿಶ್ವನಾಥ್‌ರವರು ಮಾನ್ಯ ಮುಖ್ಯಮಂತ್ರಿಯವರು ಎಷ್ಟು ಖಾತೆಗಳನ್ನು ನೋಡಿಕೊಳ್ಳೋದು ಎಂದು ಹೇಳಿದರು. ಅವರು ಹಣಕಾಸು, ಡಿಪಿಎಆರ್, Intelligence ಇವುಗಳೆಲ್ಲವನ್ನು ನೋಡಿಕೊಳ್ಳೋದು ಅಥವಾ ಈ ಮಹಾನುಭಾವ ಮಂತ್ರಿಗಳನ್ನು ನೋಡಿಕೊಳ್ಳೋದೇ? ಪವರ್ ನೋಡೋದಾ ಅಥವಾ ಮಂತ್ರಿಗಳನ್ನು ಸುಧಾರಿಸುವುದೇ? ಬೆಂಗಳೂರು ನೋಡುವುದಕ್ಕೆ ಅವರ ಹತ್ತಿರ ಸಮಯ ಎಲ್ಲಿದೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಉದಾಹರಣೆ ಹೇಳುವುದಾದರೆ ಕೋರಮಂಗಲದಲ್ಲಿ ಒಂದು flyover ಕೆಲಸವು ಸುಮಾರು 5 ವರ್ಷಗಳಿಂದ ನಡೆಯುತ್ತಿದ್ದರೂ, ಇವತ್ತಿಗೂ ಮುಗಿದಿಲ್ಲ. ರೇಸ್‌ಕೋರ್ಸ್ ರಸ್ತೆಯ ಶಿವಾನಂದ ಸರ್ಕಲ್ ಕೆಲಸ ಕಣ್ಮುಂದೆ ಇದ್ದು ಒಂದು ಸಾರಿ ಹೋಗಿ ನೋಡಬೇಕು. ಕೆಲಸವೇ ಆಗುತ್ತಿಲ್ಲ. ಬೆಂಗಳೂರು ಅಭಿವೃದ್ಧಿ ಬಗ್ಗೆ ಯಾರನ್ನು ಕೇಳುವುದು? ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಮಯ ಎಲ್ಲಿದೆ? ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ. ಆದರೆ ಅಲ್ಲಿ ಹೋಗಿ ನೋಡಿ ಮಾಡುವವರು ಯಾರು? ಬಿಬಿಎಂಪಿಯ ಅಧಿಕಾರಿಗಳ ಬಗ್ಗೆ ಮಾನ್ಯ ಲಿಂಬಾವಳಿಯವರಿಗೆ ಚೆನ್ನಾಗಿ ತಿಳಿದಿದ್ದು, ಅಲ್ಲಿ ಏನು ನಡೆಯುತ್ತದೆ ಎಂಬುದು ಗೊತ್ತು. ಯಾವ ಕೆಲಸ ವೇಗವಾಗಿ ನಡೆಯದಿದ್ದರೂ, ಶರವೇಗದಲ್ಲಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಮಾನ್ಯ ಮಂಜುನಾಥ್‌ರವರು ಮಾತನಾಡುವಾಗ ಈ ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಬಹುದು. ಆದರೆ ಅವರ ವೇಗ ಎಲ್ಲಿ? ಒಂದಾದರೂ ಯೋಜನೆಯಲ್ಲಿ ತೋರಿಸಲಿ. ಈಗ ಬೆಂಗಳೂರಿಗೆ ಹತ್ತತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದು, ನೋಡುವಂತಹ ಒಂದು ಯೋಜನೆಯನ್ನು ತೋರಿಸಲಿ. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಮಾಡಿದ ಕೆಲಸದಿಂದ ಇವತ್ತು ಐಟಿಬಿಟಿ ಜನ ಬೆಂಗಳೂರಿನಲ್ಲಿ ಜೀವನ ಮಾಡುತ್ತಿದ್ದಾರೆ. ರೂ.1 ಲಕ್ಷಕ್ಕಿಂತ ಹೆಚ್ಚು ಸಂಬಳ ತೆಗೆದುಕೊಳ್ಳುವ 40 ಲಕ್ಷ ಜನ ಇವತ್ತು ಬೆಂಗಳೂರಿನಲ್ಲಿ ಜೀವಿಸುತ್ತಿದ್ದಾರೆ. ಈ ಭಾರತ ದೇಶದಲ್ಲಿರುವ ಎಲ್ಲಾ ಜನರು ಬೆಂಗಳೂರಿನಲ್ಲಿದ್ದಾರೆ. ಪ್ರಪಂಚದಲ್ಲಿ ಬೆಂಗಳೂರಿನಂತರ ಒಂದೇ ನಗರದಲ್ಲಿ 500 Research and Development Centre ಗಳು ಮತ್ತು 500 MNC Company ಗಳು ಇವೆ. British Rail ಗೆ ಫೋನ್ ಮಾಡಿದರೆ ಉತ್ತರವು ಬನ್ನೇರುಘಟ್ಟ ರೋಡ್‌ನಿಂದ ಹೋಗುತ್ತದೆ. ನೀವು City Bank Card balance ಕೇಳಿದರೆ ಬನ್ನೇರುಘಟ್ಟ ರಸ್ತೆಯಿಂದ ಉತ್ತರ ಹೋಗುತ್ತದೆ. ಇಂತಹ ನಗರವನ್ನು ಅವರು ಹೇಗೆ ಇಟ್ಟಿದ್ದಾರೆ? ನಾವು ಬೆಂಗಳೂರು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಾರೆ, ಆದರೆ ಎಲ್ಲಿ ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ತೋರಿಸಲಿ. ಬಜೆಟ್‌ನಲ್ಲಿ ಏಕೆ ಹಣ ಕೊಟ್ಟಿದ್ದಾರೆ. Vision-2022 ಗೆ ಹಣ ಕೊಟ್ಟಿದ್ದಾರೆ. Mission-2022 or Vision-2022 ಎಂಬುದನ್ನು ಅನಾವರಣ ಮಾಡಿ ಅದರಲ್ಲಿ ಏನಿದೆ? ಬ್ರಿಟಿಷರು ಸ್ಥಾಪನೆ ಮಾಡಿದ Bowring, Minto ಆಸ್ಪತ್ರೆಗಳಿವೆ, ಜಯದೇವ ಆಸ್ಪತ್ರೆ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಗಳು ಇವೆ. 28 ಕ್ಷೇತ್ರಗಳಿಗೆ ಅಂದರೆ ರಾಜ್ಯಕ್ಕೆ ಅರ್ಧ ಹಣವನ್ನು ಬೆಂಗಳೂರು ಕೊಡುತ್ತದೆ. ಎರಡು-ಮೂರು ಕ್ಷೇತ್ರಗಳಿಗೆ ಇನ್ನು ಹತ್ತತ್ತು ಆಸ್ಪತ್ರೆ ಮಾಡುವುದಕ್ಕೆ ಏನು ತೊಂದರೆ? ಸರ್ಕಾರಿ ಶಾಲೆಗಳ ಸ್ಥಿತಿಗತಿ ಹಳ್ಳಿಗಾಡಿನಲ್ಲಿ ಬೇಡ. ನಮ್ಮ ಜೊತೆ ಬನ್ನಿ,

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೆಂಗಳೂರಿನಲ್ಲಿರುವ ಪರಿಸ್ಥಿತಿಯನ್ನೇ ನೋಡಿ, ಇಲ್ಲಿ ಓದುವುದಕ್ಕೆ ಏನು ಪಾಪ ಮಾಡಿದ್ದೇವೋ ಎಂದು ಹುಡುಗರು ಹೇಳುತ್ತಾರೆ. ಇದನ್ನು ಕೇಳುವವರು ಯಾರು? ಇದಕ್ಕೆ ಒಬ್ಬ ಮಂತ್ರಿ ಬೇಕು. ಮಾನ್ಯ ಲಿಂಬಾವಳಿಯಂತಹ ಒಬ್ಬ ಮಂತ್ರಿ ಇದ್ದರೆ ಅವರನ್ನು ಕೈಹಿಡಿದುಕೊಂಡು ಹೋಗಿ ಇಲ್ಲಿ ಅನ್ಯಾಯ ಆಗುತ್ತಿದೆ ಎಂದು ತೋರಿಸಬಹುದು. ಆದರೆ ಮಾನ್ಯ ಮುಖ್ಯಮಂತ್ರಿಯವರನ್ನು ಕರೆದುಕೊಂಡು ಹೋಗುವುದಕ್ಕೆ ಆಗುತ್ತದೆಯೇ? ಅವರ ಹತ್ತಿರ ಸಮಯ ಇಲ್ಲ. ಯಾವಾಗಲೋ ಮೂರು ಅಥವಾ ಆರು ತಿಂಗಳಲ್ಲಿ ಬಸ್‌ನಲ್ಲಿ ಒಂದು ರೌಂಡ್ ಹೋಗುತ್ತಾರೆ.

**ಶ್ರೀ ಅರವಿಂದ ಲಿಂಬಾವಳಿಃ–** ಮಾನ್ಯ ಸದಸ್ಯರಿಗೆ ನನ್ನ ಮೇಲೆ ಜಾಸ್ತಿ ಪ್ರೀತಿ ಬಂದಿದೆ.

**ಶ್ರೀ ಯು.ಬಿ. ವೆಂಕಟೇಶ್ಃ–** ಇಲ್ಲ, ಅವರ ಮೇಲೆ ಬಹಳ ಕೋಪ ಇದೆ. ಇನ್ನು ಮಹದೇವಪುರಕ್ಕೆ ಬಂದಿಲ್ಲ, ಅಲ್ಲಿಗೂ ಬರುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿಃ–** ನಾನು ದಾರಿ ತಪ್ಪಿಸುವುದಿಲ್ಲ. ಆಕಸ್ಮಾತ್ ಸಿ.ಎಂ. ಆ ಖಾತೆಯನ್ನು ನನಗೆ ಕೊಡಬೇಕೆಂದು ಇದ್ದರೆ ಮಾನ್ಯ ಸದಸ್ಯರ ಮಾತಿನಿಂದ ಕೊಡುವುದು ತಪ್ಪುತ್ತದೆ.

**ಶ್ರೀ ಯು.ಬಿ. ವೆಂಕಟೇಶ್ಃ–** ಬಿಜೆಪಿ ಯವರು ಬಹಳ ಜಾಣರು. ನಮ್ಮನ್ನು ಮಾತನಾಡುವುದಕ್ಕೆ ಬಿಡದೇ ಏನೋ ಒಂದು obstruct ಮಾಡಿಬಿಡುತ್ತಾರೆ.

**ಶ್ರೀ ಎಂ. ನಾರಾಯಣಸ್ವಾಮಿಃ–** ಮಾನ್ಯ ಅರವಿಂದ ಲಿಂಬಾವಳಿಯವರ ಮೇಲೆ ಏಕೆ ಪ್ರೀತಿ ಎಂದರೆ ಮಾನ್ಯ ಮುಖ್ಯಮಂತ್ರಿಯವರು ನೋಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರಿಗೆ ಯಾವುದೋ ಒಂದು ಅರಣ್ಯ ಇಲಾಖೆಯನ್ನು ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಅವರ ಮಹದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ highest tax paying ಕ್ಷೇತ್ರವಾಗಿದೆ. ನಿಮಗೆ ಈ ಒಂದು ಖಾತೆ ಸಿಗಲಿ ಎಂದು ಬಾರಿ ಆಸೆಯಿಂದ ಹೇಳುತ್ತಿದ್ದಾರೆ.

**ಶ್ರೀ ಅರವಿಂದ ಲಿಂಬಾವಳಿಃ–** ನನ್ನ ಬಳಿ ಸಂಸ್ಕೃತಿ ಮತ್ತು ಪ್ರಕೃತಿಯ ಎರಡೂ ಖಾತೆಗಳಿವೆ. ನನಗೆ ತೊಂದರೆ ಎಂದು ತಿಳಿದುಕೊಳ್ಳಬಾರದು.

**ಶ್ರೀ ಎಂ. ನಾರಾಯಣಸ್ವಾಮಿ:–** ಇದಕ್ಕಿಂತ ದೊಡ್ಡ ಖಾತೆ ಸಿಗಲಿ ಎಂದು ಹೇಳುತ್ತಿದ್ದೇವೆ.

**ಡಾ: ತೇಜಸ್ವಿನಿಗೌಡಃ–** ಕಾಡು ಇದ್ದರೆ ನಾಡು ಚೆನ್ನಾಗಿ ಇರುವುದು. ಕಾಡನ್ನು ಬಹಳ ಸಂರಕ್ಷಣೆ ಮಾಡಬೇಕಾಗಿದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲೆಹರ್ ಸಿಂಗ್ ಸಿರೋಯಾ:-** ಮಾನ್ಯ ಅರವಿಂದ ಲಿಂಬಾವಳಿಯವರ ಆತಂಕ ಸರಿಯಾಗಿದೆ. ಏಕೆಂದರೆ ಮೊನ್ನೆ ಉತ್ತರಾಖಂಡದಲ್ಲಿ ಸಿ.ಎಂ ಚೇಂಜ್ ಆಗಿ 6 ಜನರ ಹೆಸರು ಪತ್ರಿಕೆಗಳಲ್ಲಿ ಬಂದಿತು. ಈ 6 ಜನರಲ್ಲಿ ಯಾರೂ ಆಗದೇ 7ನೆಯವರು ಆದರು. ಅದಕ್ಕೆ ಹೆಸರು ಬಂದರೆ ಕಷ್ಟ ಎಂದು ಹೇಳಿದ್ದಾರೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಮಗೆ ಹೇಳುವುದಲ್ಲ, ಅವರ ಪಕ್ಷದವರು ಒಬ್ಬರು ಮಂತ್ರಿಯು ಇದ್ದರೆ Bangalore Development ಆಗುತ್ತದೆ. Bangalore Development ಆದರೆ ರಾಜ್ಯ ಅಭಿವೃದ್ಧಿಯಾಗುತ್ತದೆ. We will get 50% of the resources from Bangalore. ರಾಜ್ಯದ ಉಳಿದ ಕಡೆ ಹಣ ಹಂಚಬಹುದು. ಅವರು ಇಲ್ಲಿ ಏನೂ ಮಾಡದಿದ್ದರೆ ಹಣ ಎಲ್ಲಿಂದ ಬರುತ್ತದೆ? ಹೆಚ್ಚಿಗೆ ಏನೂ ಕೇಳುತ್ತಿಲ್ಲ. ಮೊನ್ನೆ ಚಾಲುಕ್ಯ ಸರ್ಕಲ್‌ನಿಂದ ಏರ್‌ಪೋರ್ಟ್‌ನ ಹತ್ತಿರ ರೀಚ್ ಆಗುವ ಸರ್ಕಲ್‌ಗೆ flyover ಮಾಡುವ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಅದು ಕೋರ್ಟ್‌ನಲ್ಲಿದೆ ಎಂದು ಹೇಳಿದ್ದು, ಕೋರ್ಟ್‌ನ ವಿಚಾರ ಬಿಟ್ಟುಬಿಡಲಿ. ಇವತ್ತಿನ technology ಯಲ್ಲಿ ನೂರೆಂಟು ದಾರಿಗಳಿದ್ದು, ಯಾವುದೋ ಒಂದು flyover ಮಾಡುವುದೋ ಅಥವಾ ಮೇಲೆ ಮಾಡುವುದೋ, ಏನೋ ಒಂದು ಮಾಡಬೇಕು. ಜನಸಂಪರ್ಕ ಕಲ್ಪಿಸುವುದಕ್ಕೆ ಅವರಿಗೆ ಏನಾಗಿದೆ? ಏನಾದರೂ ಹೇಳಿದರೆ ಅವರು ಅಭಿವೃದ್ಧಿ ಪಥದಲ್ಲಿ ಇದ್ದು, ಮುಂದೆ ಹೋಗಿದ್ದೇವೆ ಎಂದು ಹೇಳುತ್ತಾರೆ.

ಇನ್ನು 57 ವಾರ್ಡ್‌ಗಳಲ್ಲಿ ರೂ.10 ಕೋಟಿಗಳಲ್ಲಿ ಜನಾರೋಗ್ಯ ಸ್ಥಾಪನೆ ಎಂದು ಹೇಳಿದ್ದು, 57 ವಾರ್ಡ್‌ಗಳು ಮಾತ್ರ ಏಕೆ? 247 ವಾರ್ಡ್‌ಗಳು ಆಗಬೇಕಲ್ಲವೇ? ಪ್ರಸ್ತುತ ಇರುವ 198 ವಾರ್ಡ್‌ಗಳಲ್ಲಾದರೂ ಆಗಬೇಕಲ್ಲವೇ? ಇದರಲ್ಲಿ ಏಕೆ ತಾರತಮ್ಯ ಮಾಡುವುದು. ಒಂದು ವಾರ್ಡ್‌ಗೆ ಎಷ್ಟು ಹಣ ಬರುತ್ತದೆ? ಒಂದೊಂದು ವಾರ್ಡ್‌ಗೆ ರೂ.15 ಲಕ್ಷ ಬರುವುದಿಲ್ಲ ಎಂದಾಗ ರೂ.15 ಲಕ್ಷದಲ್ಲಿ ಏನಾಗುತ್ತದೆ? ಏನಾದರೂ ಮಾಡಿದರೆ ಅದರ ಬಗ್ಗೆ ಸರಿಯಾಗಿ research ಮಾಡಿಕೊಂಡು ಏನು ಮಾಡಬೇಕು ಎಂದು ಮಾಡುವುದಿಲ್ಲ. ಒಂದು constituency ಗೆ ಮಾಡುವುದೇ ಅಥವಾ 29 constituency ಗಳಲ್ಲಿ ಮಾಡುವುದೇ ಅಥವಾ ಒಂದು constituency ನಲ್ಲಿ ಎರಡು ಕಡೆ ಮಾಡುವುದೇ ಎಂದು ನೋಡುವುದಿಲ್ಲ. ಅವರಿಗೆ ಎಲ್ಲಿ ಬೇಕೋ ಅಂತಹ 50 ವಾರ್ಡ್‌ಗಳಲ್ಲಿ ಮಾಡಿಕೊಂಡು ಬಿಡುವುದು. ರೂ.33 ಕೋಟಿಗಳಲ್ಲಿ ಬಿಬಿಎಂಪಿ ಸಾಲಗಳ ನವೀಕರಣ ಎಂದು ಹೇಳಿದ್ದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಬಿಬಿಎಂಪಿ ಸಾಲ? ರೂ.33 ಕೋಟಿಯಾಗಿದೆ ಎಂಬುದಕ್ಕೆ ಅಂದಾಜು ಏನಿದೆ? ರೂ.33 ಕೋಟಿಗಳಲ್ಲಿ ಏನಾಗುತ್ತದೆ? ಕಂಪನಿಯವರು ಸರಿಯಾಗಿ ಎಲ್ಲವನ್ನು ಮಾಡಿಕೊಂಡು ಶಾಲೆ ನಡೆಸುತ್ತಾರೆ. ಬೆಂಗಳೂರಿನಲ್ಲಿ infrastructure ವ್ಯವಸ್ಥೆ ಮಾಡಿಕೊಡುವವರಿದ್ದಾರೆ. ಅವರಿಗೂ CRF Funds ಖರ್ಚಾಗಬೇಕು. ಸರ್ಕಾರವು ಒಂದು ನೀಲಿ ನಕ್ಷೆಯನ್ನು ಮಾಡಿಕೊಂಡು ಇದೇ ರೀತಿ ಮಾಡಬೇಕು ಎಂದು ಮಾಡಬೇಕು. ಬೆಂಗಳೂರಿನಲ್ಲಿ ಒಂದು ರವೀಂದ್ರ ಕಲಾಕ್ಷೇತ್ರ ಹಾಗೂ ನಮ್ಮ ಭಾಗದ ಜೆ.ಪಿ. ನಗರದಲ್ಲಿ ಒಂದು ರಂಗಮಂದಿರವನ್ನು ಬಿಟ್ಟರೆ ಸಾಂಸ್ಕೃತಿಕ ಕೇಂದ್ರಗಳು ಎಲ್ಲಿವೆ? ಇದರ ಬಗ್ಗೆ ಸಾಂಸ್ಕೃತಿಕ ಸಚಿವರು ಹೇಳಬೇಕು. ಅವರು ಸದನದಲ್ಲಿಯೇ ಇದ್ದಾರೆ. ಕೇವಲ ಎರಡು ಮಾತ್ರ ಇದ್ದು, ಇದರಲ್ಲಿ ಒಂದು ಸರ್ಕಾರದ್ದು ಹಾಗೂ ಇನ್ನೊಂದು ಖಾಸಗಿಯವರದ್ದಾಗಿದೆ. ಕನಿಷ್ಠಪಕ್ಷ ಎಂಟತ್ತು ಕೇಂದ್ರಗಳಾದರೂ ಆಗಬೇಕಲ್ಲವೇ?

**(ಮುಂದು)**

**(384)/15.03.2021/1.50/ಹೆಚ್‌ವಿಃಆರ್‌ಎನ್**

**ಶ್ರೀ ಯು.ಬಿ.ವೆಂಕಟೇಶ್(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಈ ದಿನದ ದಿನಪತ್ರಿಕೆಯೊಂದರಲ್ಲಿ ಒಂದು ವರದಿ ಪ್ರಕಟವಾಗಿದೆ. ಅದರಲ್ಲಿ; 'ಆಯವ್ಯಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 2 ಕೋಟಿ ರೂಪಾಯಿಗಳು, ಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರೂಪಾಯಿಗಳು ಮತ್ತು ಮರಾಠ ಅಭಿವೃದ್ಧಿ ನಿಗಮಕ್ಕೆ 50 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದೆ' ಎನ್ನುವುದನ್ನು ಉಲ್ಲೇಖ ಮಾಡಲಾಗಿದೆ. ನಾನು ಹೇಳುತ್ತಿರುವುದರಲ್ಲಿ ತಪ್ಪಿದೆಯೇ ಅಥವಾ ಇದು ಸರಿ ಮಾಡಬೇಕಾಗಿರುವ ವಿಷಯವೇ, ಅಲ್ಲವೇ ಎನ್ನುವುದನ್ನು ಮಾನ್ಯ ಸಚಿವರೇ ಹೇಳಬೇಕಾಗಿದೆ. ಈ ಸರ್ಕಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 2 ಕೋಟಿ ರೂಪಾಯಿಗಳ ಅನುದಾನ ಕೊಡುವುದಕ್ಕೆ ಬದಲಾಗಿ ಕನ್ನಡಿಗರಿಗೆ ಸ್ವಲ್ಪ ವಿಷ ಕೊಡಲಿ ಅಥವಾ ಆರೂವರೆ ಕೋಟಿ ಕನ್ನಡಿಗರಿಂದ ಒಂದೊಂದು ರೂಪಾಯಿಯನ್ನು ಭಿಕ್ಷೆ ಎತ್ತಿದರೆ, ಆರೂವರೆ ಕೋಟಿ ರೂಪಾಯಿ ಬರುತ್ತದೆ. ಈ ರೀತಿ ಮಾಡುವುದಕ್ಕೆ ಸರ್ಕಾರಕ್ಕೆ ಏನಾಗಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾವೇನಾದರು ಮಾತನಾಡಿದರೆ, ಇವರು ವಿರೋಧ ಪಕ್ಷದಲ್ಲಿದ್ದಾರೆ, ಅದಕ್ಕಾಗಿ ಸುಳ್ಳು ಹೇಳುತ್ತಾರೆ, ತಪ್ಪು ಅಂಕಿಅಂಶಗಳನ್ನು ಕೊಡುತ್ತಾರೆಂದು ಸರ್ಕಾರದವರು ಹೇಳುತ್ತಾರೆ. ಇದು ನಾವು ಹೇಳುತ್ತಿರುವ ಅಂಕಿಅಂಶಗಳಲ್ಲ, ಆಯವ್ಯಯದಲ್ಲಿ ಸರ್ಕಾರ ಘೋಷಣೆ ಮಾಡಿರುವ ಮೊತ್ತವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮರಾಠ ಅಭಿವೃದ್ಧಿ ನಿಗಮಕ್ಕೆ 50 ಕೋಟಿ ರೂಪಾಯಿಗಳನ್ನು ಕೊಡಲಿ, 100 ಕೋಟಿ ರೂಪಾಯಿಗಳನ್ನಾದರೂ ಕೊಡಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಮರಾಠ ಅಭಿವೃದ್ಧಿ ನಿಗಮಕ್ಕೆ 50 ಕೋಟಿ ರೂಪಾಯಿಗಳ ಅನುದಾನ ಕೊಟ್ಟ ಮೇಲೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಅದರ ಎರಡರಷ್ಟಾದರೂ ಅಂದರೆ, 100 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕಾಗಿತ್ತು. ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಹರಡಿರುವುದು ಸರ್ಕಾರಕ್ಕೆ ವರವಾಗಿ ಪರಿಣಮಿಸಿದೆ, ಜನರಿಗೆ ಶಾಪವಾಗಿ ಪರಿಣಮಿಸಿದೆ. ನಾವು ಏನೇ ಕೇಳಿದರು 'ಕೋವಿಡ್‌ನಿಂದಾಗಿ ಆರ್ಥಿಕ ಪರಿಸ್ಥಿತಿ ಸರಿ ಇಲ್ಲ' ಎನ್ನುವ ಉತ್ತರವನ್ನು ಹೇಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಮಾನ್ಯ ಸದಸ್ಯರಾದ ಶ್ರೀ ಶಶಿಲ್ ಜಿ.ನಮೋಶಿಯವರು ಮಾತನಾಡುತ್ತಾ, 'ಕೋವಿಡ್-19 ಪರಿಸ್ಥಿತಿ ಇರಲಿ ಅಥವಾ ಬೇರೆ ಯಾವುದೋ ಪರಿಸ್ಥಿತಿ ಬಂದರೂ 371(ಜೆ) ಅಡಿಯಲ್ಲಿ ಮಾಡಿಕೊಳ್ಳಬೇಕಾಗಿರುವ ನೇಮಕಾತಿಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವೇ ಇಲ್ಲ, ತಡೆಹಿಡಿಯಬಾರದು' ಎನ್ನುವ ಮಾತುಗಳನ್ನು ಹೇಳಿದರು. ಆದರೆ ಆರ್ಥಿಕ ಇಲಾಖೆಯವರು ಇದನ್ನು ತಡೆಹಿಡಿದಿದ್ದಾರೆ. ಅವರಿಗೆ ಯಾರು ಈ ಅಧಿಕಾರವನ್ನು ನೀಡಿದ್ದಾರೆ? ಆರ್ಥಿಕ ಇಲಾಖೆಯವರು ಸರ್ಕಾರವನ್ನು ನಡೆಸುತ್ತಿದ್ದಾರೆಯೇ ಅಥವಾ ಮುಖ್ಯಮಂತ್ರಿಗಳು ನಡೆಸುತ್ತಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆದು ಕೇಳಬೇಕಾಗಿದೆ. 371(ಜೆ) ಅಡಿಯಲ್ಲಿ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗಿತ್ತೋ ಅವುಗಳನ್ನು ನೀಡುವುದಕ್ಕೆ ಸರ್ಕಾರಕ್ಕಿರುವ ತೊಂದರೆಯೇನು? ಇದಕ್ಕೆ ಸಂಬಂಧಪಟ್ಟಂತೆ ಮೊನ್ನೆ ತಾನೇ ಒಂದು ನೋಟಿಫಿಕೇಶನ್ ಅನ್ನು ಹೊರಡಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2013-14ನೇ ಸಾಲಿನಲ್ಲಿ ಸಂವಿಧಾನದ ಅನುಚ್ಛೇಧ 371(ಜೆ) ಅಡಿಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯಗಳ ರಚನೆಯಾಯಿತು. 2020ನೇ ಇಸವಿಯಲ್ಲಿ ಅದನ್ನು ನಾವು ಅಭಿವೃದ್ಧಿಪಡಿಸುತ್ತೇವೆಂದು ಹೇಳಿಕೊಂಡು ಅದರ ಹೆಸರನ್ನು 'ಕಲ್ಯಾಣ ಕರ್ನಾಟಕ' ಎಂದು ಬದಲಾವಣೆ ಮಾಡಿದರೇ ಹೊರತು ಬೇರೆ ಯಾವುದೇ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಲಿಲ್ಲ. 2013-14ನೇ ಇಸವಿಯಿಂದ ಹಿಡಿದು 2021ನೇ ಇಸವಿಯವರೆಗೆ ಒಟ್ಟು 2300 ಕೋಟಿ ಅನುದಾನವನ್ನು ನೀಡಲಾಗಿದೆ. ಅದರಲ್ಲಿ 6 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ, ಕೇವಲ 5 ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಪ್ರತಿ ಸರ್ಕಾರ ಅಧಿಕಾರಕ್ಕೆ ಬಂದಾಗಲೂ ಹೈದ್ರಾಬಾದ್-ಕರ್ನಾಟಕ ಭಾಗಕ್ಕೆ 1500 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತೇವೆಂದು ಹೇಳುತ್ತವೆಯೇ ಹೊರತು ಕೊಡುವುದಿಲ್ಲ. ಕಳೆದ ವರ್ಷದ ಆಯವ್ಯಯದಲ್ಲಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರೇ 1500 ಕೋಟಿ ರೂಪಾಯಿಗಳ ಅನುದಾನ ಕೊಡುತ್ತೇವೆಂದು ಹೇಳಿದ್ದರು ಆದರೆ, ಕೇವಲ 1125 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಡಿಸೆಂಬರ್, ಜನವರಿಗೆ ಕ್ಲಿಯರೆನ್ಸ್ ಕೊಡುತ್ತಿದ್ದಾರೆ. ಮಾರ್ಚ್ ತಿಂಗಳಿನೊಳಗೆ ಖರ್ಚು ಮಾಡದಿದ್ದರೆ ಅದು ಸಹ ಲ್ಯಾಪ್ಸ್ ಆಗುತ್ತದೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಾನ್ಯ ಕೆ.ಸಿ.ಕೊಂಡಯ್ಯನವರ ನೇತ್ರತ್ವದಲ್ಲಿ ನಾವೆಲ್ಲರೂ ಅವರನ್ನು ಭೇಟಿ ಮಾಡಿ, 'ಯಾವುದೇ ಕಾರಣಕ್ಕೂ ಕೊಟ್ಟಿರುವ ಈ ಅನುದಾನವನ್ನು ಲ್ಯಾಪ್ಸ್ ಮಾಡಬಾರದು, ಬಿಡುಗಡೆ ಮಾಡಿರುವ ಹಣವನ್ನು ಕ್ಯಾರಿಓವರ್ ಮಾಡಬೇಕು' ಎನ್ನುವ ಮನವಿಯನ್ನು ಸಲ್ಲಿಸಿದ್ದೆವು. ಆದರೆ, ಅದನ್ನು ಮಾಡಲೇ ಇಲ್ಲ. ಈ ರೀತಿ ಆದರೆ, ಆ ಭಾಗ ಅಭಿವೃದ್ಧಿ ಹೊಂದುವುದು ಹೇಗೆ? ಡಾ॥ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಾರಂಭಿಸಿ 20 ವರ್ಷಗಳಾಗಿವೆ, ಇನ್ನೂ 50 ವರ್ಷಗಳ ಕಾಲ ಅದನ್ನೇ ಮುಂದುವರಿಸುವ ಯೋಜನೆಯೇನಾದರೂ ಈ ಸರ್ಕಾರಕ್ಕೆ ಇದೆಯೇ? ಯಾರಾದರು ಈ ಬಗ್ಗೆ ಪ್ರಶ್ನೆ ಮಾಡಿದರೆ, ನಾವು ಅಭಿವೃದ್ಧಿ ಯೋಜನೆಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ, ಎಲ್ಲಿ ಅಭಿವೃದ್ಧಿಪಡಿಸಿದ್ದಾರೆ?

ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತಿದ್ದೇನೆ. ಮೊದಲು ಆಯವ್ಯಯವನ್ನು ಇಲಾಖೆವಾರು ವಿಂಗಡಣೆ ಮಾಡಲಾಗುತ್ತಿತ್ತು ಅದನ್ನು ತೆಗೆದು ಹಾಕಿ ವಲಯವಾರು ಮಾಡಲಾಗುತ್ತಿದೆ. ಈಗ ಅದನ್ನೂ ತೆಗೆದು ಹಾಕಿ ಆಯವ್ಯಯವನ್ನು ಕ್ಷೇತ್ರವಾರು ವಿಂಗಡಣೆ ಮಾಡಿಸಲಿ. ಇರುವಂತಹ 224 ಕ್ಷೇತ್ರಗಳ ಸಮೀಕ್ಷೆ ಮಾಡಿದರೆ, ಎಲ್ಲಿ ನೀರಿಲ್ಲ, ಎಲ್ಲಿ ತಿನ್ನುವುದಕ್ಕೆ ಆಹಾರವಿಲ್ಲ, ಎಲ್ಲಿ ಮಕ್ಕಳು ಸಾಯುತ್ತಿದ್ದಾರೆ, ಎಲ್ಲಿ ಆಸ್ಪತ್ರೆ ಇಲ್ಲ, ಎಲ್ಲಿ ಆಸ್ಪತ್ರೆ ಇದ್ದರೂ ಡಾಕ್ಟರ್ ಇಲ್ಲ, ಎಲ್ಲಿ ಶಾಲೆ ಇದೆ, ಎಲ್ಲಿ ಶಾಲೆ ಇದ್ದರೂ ಶಿಕ್ಷಕರಿಲ್ಲ, ರಸ್ತೆಗಳಿವೆ ಅದರಲ್ಲಿ ಓಡಾಡುವುದಕ್ಕೆ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ಇದೆ. ಈ ಸರ್ಕಾರ ಏನು ಮಾಡುತ್ತಿದೆ? ವಿರೋಧ ಪಕ್ಷದಲ್ಲಿದ್ದು ನಾವು ಏನು ಮಾತನಾಡಿದರೂ ಅದಕ್ಕೆ ಅಡೆತಡೆ ಬರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದಲ್ಲಿ ಘೋಷಣೆ ಮಾಡಿದ ಯಾವುದೇ ಅನುದಾನ ಸಂಪೂರ್ಣವಾಗಿ ಖರ್ಚಾಗುವುದೇ ಇಲ್ಲ. ವಾಪಸ್ಸು ಬರುತ್ತದೆ. ಇದಕ್ಕೆ ಅಧಿಕಾರಿಗಳು ತಾಂತ್ರಿಕವಾಗಿ ಯಾವುದೋ ಒಂದು ಕಾರಣವನ್ನು ಕೊಡುತ್ತಾರೆ. ಬೆಂಗಳೂರಿನ ಯಡಿಯೂರು ವಾರ್ಡ್‌ನಲ್ಲಿ ಒಬ್ಬನೇ ಗುತ್ತಿಗೆದಾರರ ಸುಮಾರು 64 ಗುತ್ತಿಗೆಗಳನ್ನು ಪಡೆದುಕೊಂಡಿರುವ ಬಗ್ಗೆ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರದಿಯಾಗಿದೆ. ಇದು ಧರ್ಮವೇ? ಅವರ ಅಧಿಕಾರ ನಡೆಯುತ್ತಿದೆಯೆಂದು ಈ ರೀತಿ ಮಾಡಿಕೊಳ್ಳುವುದೇ?

ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದಲ್ಲಿ ಘೋಷಣೆ ಮಾಡಿರುವಂತಹ ಯಾವುದೇ ಕಾರ್ಯಕ್ರಮಗಳು ರಾಜ್ಯದ ಕಟ್ಟಕಡೆಯ ಜನರಿಗೆ ತಲುಪುತ್ತಿಲ್ಲ. ಇದಕ್ಕಾಗಿ ನಾನು ಒಂದು ಸಲಹೆ ಕೊಡುವುದಕ್ಕೆ ಬಯಸುತ್ತಿದ್ದೇನೆ. ಈ ವರ್ಷ ಆಯವ್ಯಯ ಮಂಡನೆ ಮಾಡುವುದಕ್ಕೂ ಮೊದಲು ಒಂದು ಸಮಯ ನಿಗದಿ ಮಾಡಿ ಹಿಂದಿನ ವರ್ಷದ ಆಯವ್ಯಯದಲ್ಲಿ ಘೋಷಣೆ ಮಾಡಿರುವಂತಹ ಕಾರ್ಯಕ್ರಮಗಳಲ್ಲಿ ಎಷ್ಟು ಅನುಷ್ಠಾನಗೊಂಡಿವೆ, ಯಾಕೆ ಅನುಷ್ಠಾನಗೊಂಡಿಲ್ಲ ಎನ್ನುವುದರ ಬಗ್ಗೆ ಚರ್ಚೆ ಮಾಡಿದರೆ, ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಪ್ರತಿವರ್ಷ ಆಯವ್ಯಯ ಮಂಡನೆ ಮಾಡುವುದು, ಅದರ ಮೇಲೆ ನಾವು ಚರ್ಚೆ ಮಾಡುವ ಕೆಲಸವನ್ನು ಮಾಡುತ್ತೇವೆ. ಆದರೆ, ಅದರಲ್ಲಿರುವ ಅಂಶಗಳು ಅನುಷ್ಠಾನಗೊಳ್ಳದೇ ಹೋದರೆ, ಇದನ್ನು ಆಯವ್ಯಯವೆಂದು ಏತಕ್ಕೋಸ್ಕರ ಹೇಳಬೇಕು? ಆಯವ್ಯಯ ಮಂಡನೆಗೂ ಮೊದಲು ಘನತೆವೆತ್ತ ರಾಜ್ಯಪಾಲರನ್ನು ಕರೆಯಿಸಿ ಎರಡೂ ಸದನಗಳನ್ನುದ್ದೇಶಿಸಿ ಭಾಷಣ ಮಾಡಿಸಿ, ಅವರಿಂದ ಸುಳ್ಳು ಸಂಗತಿಗಳನ್ನು ಹೇಳಿಸಿ, ಅವರಿಗೆ ಕಪ್ಪು ಚುಕ್ಕೆ ತರುವಂತಹ ಕೆಲಸ ಮಾಡಬಾರದು.

ಸನ್ಮಾನ್ಯ ಸಭಾಪತಿಯವರೇ, ಈ ಬಾರಿಯ ಆಯವ್ಯಯವನ್ನು ಇಲಾಖಾವಾರು ವಿಂಗಡಣೆ ಮಾಡದೇ ವಲಯವಾರು ವಿಂಗಡಣೆ ಮಾಡಲಾಗಿದೆ. ಕೆಲವು ಜಿಲ್ಲೆಗಳಿಗೆ ಇದರ ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ. ಅವರು ತೆರಿಗೆ ಕೊಡುವುದು ಬೇಡವೇ? ಆ ಜಿಲ್ಲೆಯವರು ದುಡ್ಡು ಕೊಡುವುದು ಬೇಡವೇ? ಈ ಬಾರಿಯ ಆಯವ್ಯಯ ಪುಸ್ತಕವನ್ನು ತೆಗೆದು ನೋಡಿದರೆ, ಹಲವಾರು ಜಿಲ್ಲೆಗಳಿಗೆ ಯಾವುದೇ ಅನುದಾನವನ್ನು ನೀಡಿಲ್ಲ. ಆ ಜಿಲ್ಲೆಯವರು ಏನು ಅನ್ಯಾಯ ಮಾಡಿದ್ದಾರೆ? ಇವರಿಗೆ ಓಟು ಹಾಕಲಿಲ್ಲವೇ? ಇವರ ಕಣ್ಣಿಗೆ ಆ ಜಿಲ್ಲೆಯವರು ಕಾಣಲಿಲ್ಲವೇ? ಅಥವಾ ಆ ಜಿಲ್ಲೆಗಳನ್ನು ಬಿಟ್ಟುಬಿಡಬೇಕೆಂದು ಇದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಒಂದು ಕಡೆ ಮಹಾರಾಷ್ಟ್ರದವರು ಬೆಳಗಾವಿಯಲ್ಲಿ ನಾವು ಒಂದು ಸಭೆ ಮಾಡಬೇಕೆಂದು ಹೇಳುತ್ತಿದ್ದಾರೆ. ಸಭೆ ಮಾಡುವುದನ್ನು ಹೇಗೆ ತಡೆಯುವುದು, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 2 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಇದು ಅಧಿಕಾರಿಗಳ ಸಂಬಳ ಮತ್ತು ಕಛೇರಿ ಖರ್ಚಿಗೆ ಎಷ್ಟು ಬೇಕು ಅಷ್ಟನ್ನು ಮಾತ್ರ ಕೊಟ್ಟಿದ್ದಾರೆ. ಈ ಅನುದಾನದಲ್ಲಿ ಅವರು ಬೇರೆ ಏನನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಷ್ಟೊಂದು ತಾರತಮ್ಯವೇಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಮರಾಠರ ಅಭಿವೃದ್ಧಿ ನಿಗಮಕ್ಕೆ 50 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 2 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾರೆ. ಅವರು ನಮ್ಮೆಲ್ಲರನ್ನು ಒಳಗೊಂಡಂತೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಲಿ ಅಥವಾ ನಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 100 ಕೋಟಿ ರೂಪಾಯಿಗಳ ಅನುದಾನವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರು ಮನಸ್ಸು ಮಾಡಿದರೆ, ಅವರಿಂದ ಆ ಕೆಲಸವಾಗುತ್ತದೆ, ಅದನ್ನು ಅವರು ಮಾಡಬೇಕು.

**ಉಪ ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ 40 ನಿಮಿಷಗಳು ಕಳೆದಿದೆ. ತಮ್ಮ ಮಾತುಗಳನ್ನು ಮುಗಿಸುವುದಕ್ಕೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ?

**ಶ್ರೀ ಯು.ಬಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ಇನ್ನೂ 20 ನಿಮಿಷಗಳ ಕಾಲಾವಕಾಶ ಬೇಕಾಗುತ್ತದೆ. ಭೋಜನ ವಿರಾಮಕ್ಕೆ ಮುಕ್ತಾಯಗೊಳಿಸುವುದಾದರೆ, ಸಭೆಯನ್ನು ಮುಕ್ತಾಯಗೊಳಿಸಿ ಭೋಜನ ವಿರಾಮದ ನಂತರ ನಾನು ಮಾತನಾಡುತ್ತೇನೆ.

**ಉಪ ಸಭಾಪತಿಯವರು:–** ತಮ್ಮ ಮಾತುಗಳನ್ನು ಮುಂದುವರಿಸಿ.

**ಶ್ರೀ ಯು.ಬಿ.ವೆಂಕಟೇಶ್:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ರೈತರ ಪರವಾಗಿದೆಯೆಂದು ಹೇಳುತ್ತಾರೆ, ಹಸಿರು ಶಾಲು ಹಾಕಿಕೊಂಡು ಆಯವ್ಯಯ ಮಂಡನೆ ಮಾಡುವುದು ಮತ್ತು ಹಸಿರು ಶಾಲು ಹಾಕಿಕೊಂಡು ಮಾತನಾಡುತ್ತಾರೆ. ಈ ಆಯವ್ಯಯದಲ್ಲಿ ಇವರು ರೈತರಿಗೆ ಏನು ಕೊಡುಗೆ ಕೊಟ್ಟಿದ್ದಾರೆ? ರೈತರಿಗೆ ಏನು ಅನುಕೂಲವಾಗುತ್ತಿದೆ? ಗಡಿಗಳಲ್ಲಿ ರೈತರು ಸಾಯುತ್ತಿದ್ದಾರೆ. ಅವರು ಬದುಕುವುದಕ್ಕಾಗಿ ಹೋರಾಡುತ್ತಿದ್ದಾರೆ. ನಾವು ಕನಿಷ್ಠ ಬೆಂಬಲ ಬೆಲೆ(ಎಂ.ಎಸ್.ಪಿ) ಕೊಡುತ್ತಿದ್ದೇವೆ. ಕನಿಷ್ಠ ಬೆಂಬಲ ಬೆಲೆ(ಎಂ.ಎಸ್.ಪಿ) ಬಗ್ಗೆ ಒಂದು ಕಾನೂನು ಮಾಡಿ ಕೊಡಲಿ; ಆದರೆ, ಆ ಕೆಲಸವನ್ನು ಮಾಡುತ್ತಿಲ್ಲ ಅದಕ್ಕೆ ಅವರ ಸ್ವಪ್ರತಿಷ್ಠೆ ಅಡ್ಡ ಬರುತ್ತಿದೆ. ನೂರಾರು ಜನ ರೈತರು ಪ್ರಾಣತ್ಯಾಗ ಮಾಡಿದ್ದಾರೆ. ಅದರ ಬಗ್ಗೆ ಇವರು ಮಾತನಾಡುವುದಿಲ್ಲ. ನಮ್ಮ ಸದನದಲ್ಲಿ ಒಂದು ದೇಶ ಒಂದು ಚುನಾವಣೆಯ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತಾರೆ. ಅದನ್ನು ಬಿಟ್ಟು ಒಬ್ಬ ಲೀಡರ್ ಒಂದೇ ಪಾರ್ಟಿ ಎಂದು ಮಾಡಿದರೆ ಏಕ ಚಕ್ರಾಧಿಪತ್ಯವಾಗುತ್ತದೆ. ಆಗ ನಾವು ಯಾರೂ ಏನೂ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡುವ ಕೆಲಸವೇ ಇರುವುದಿಲ್ಲ. ಏಕೆಂದರೆ ಅವರಿಗೆ ಬಹುಮತವಿದೆ. ಅವರು ಏನು ಬೇಕಾದರೂ ಮಾಡಬಹುದು. ಇದಕ್ಕೂ ಮೊದಲು ಪೌರತ್ವ ತಿದ್ದುಪಡಿ ಕಾಯಿದೆ ಮತ್ತು ಎನ್.ಆರ್.ಸಿ., ಕಾಯಿದೆಗಳನ್ನು ತಂದ ಪರಿಣಾಮವಾಗಿ ಬೇಡದಿರುವಂತಹ ಗಲಾಟೆಗಳು ನಡೆದವು. ಸರ್ಕಾರಗಳು ಜನರಿಗೆ ಅನುಕೂಲವಾಗಿರುವಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ದಿವಂಗತ ರಾಜೀವ್‌ಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ ಮಹಿಳಾ ಮೀಸಲಾತಿಯನ್ನು ಶೇಕಡಾ 50ಕ್ಕೆ ಹೆಚ್ಚಿಸಿ ಒಂದು ತಿದ್ದುಪಡಿಯನ್ನು ತಂದಿದ್ದರು. ಸ್ಥಳೀಯ ಸಂಸ್ಥೆಗಳಲ್ಲಿ ಇದನ್ನು ಜಾರಿಗೊಳಿಸಲಾಯಿತು. ಆದರೆ, ಎಂ.ಪಿ., ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಸ್ಥಾನಗಳಿಗೆ ಈ ನಿಯಮವನ್ನು ಅನ್ವಯಿಸಲಿಲ್ಲ. ಈಗ ಇವರಿಗೆ ಬಹುಮತವಿದೆ. ಅದನ್ನು ಜಾರಿಗೊಳಿಸಬಹುದಾಗಿದೆ. ಇವರಿಗೆ ಹೆಣ್ಣುಮಕ್ಕಳ ಓಟು ಬೇಕು, ಹೆಣ್ಣುಮಕ್ಕಳ ಬಗ್ಗೆ ಇವರಿಗೆ ಕನಿಕರವಿದೆ. ಮಾನ್ಯ ಮುಖ್ಯಮಂತ್ರಿಗಳು ಮಹಿಳಾ ದಿನಾಚರಣೆಯ ದಿನ ಆಯವ್ಯಯ ಮಂಡನೆಯ ಮೂಲಕ ಮಹಿಳೆಯರಿಗೆ ಕೊಡುಗೆಗಳನ್ನು ಕೊಡುತ್ತಾರೆ. ಇಷ್ಟಾದರೂ ಸಹ ಶೇಕಡಾ 50ರಷ್ಟು ಅವರಿಗೆ ಮೀಸಲಾತಿಯನ್ನು ನೀಡುತ್ತಿಲ್ಲ. ನಮ್ಮ ಪಕ್ಷದಲ್ಲಿ ಒಬ್ಬರು ಮಹಿಳೆ ಇದ್ದಾರೆ, ಅವರ ಪಕ್ಷದಲ್ಲಿ ಇಬ್ಬರು ಮಹಿಳೆಯರಿದ್ದಾರೆ. ಜನಪರವಾಗಿರುವ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಇವರಿಗೆ ಸಮಯವಿಲ್ಲ. ಆ ಕೆಲಸಗಳನ್ನು ಇವರು ಮಾಡುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮಧ್ಯಾಹ್ನದ ಮೇಲೆ ತಮ್ಮ ಮಾತುಗಳನ್ನು ಮುಂದುವರಿಸುವುದಕ್ಕೆ ತಮಗೆ ಅವಕಾಶವನ್ನು ನೀಡುತ್ತೇನೆ. ಸದನವನ್ನು 3.00 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

(385) 15–03–2021/3–20/ಬಿಕೆಪಿ–ಬಿಎನ್‌ಎಸ್

**(ಮಧ್ಯಾಹ್ನ 1 ಗಂಟೆ 59 ನಿಮಿಷಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.)**

**(ಉಪ ಸಭಾಪತಿಯವರಾದ ಶ್ರೀ ಕೆ. ಪ್ರಣೇಶ್‌ರವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಈ ಆರ್ಥಿಕ ವರ್ಷದ ಅಂದರೆ 2021–22ನೇ ಸಾಲಿನ ಆಯವ್ಯಯ. ಈ ಕುರುಡ ಆನೆ ಬಣ್ಣಿಸಿದ ಹಾಗೆ ಇದೆ. ಅವನಿಗೆ ಕಣ್ಣು ಕಾಣುವುದಿಲ್ಲ. ಆದರೆ, ಆನೆ ಹೇಗಿದೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವನು ಹೇಳುವ ರೀತಿಯಂತಿದೆ ಎಂದರೆ ತಪ್ಪಾಗಲಾರದು. ಏಕೆಂದರೆ, ಅವನಿಗೆ ಏನೂ ಕಾಣದಿದ್ದರೂ ಸಹಿತ ಆನೆಯನ್ನು ಎಷ್ಟು ದೊಡ್ಡದಾಗಿದೆ ಎಂದು ವರ್ಣನೆ ಮಾಡುತ್ತಾನೆ, ಆನೆಯ ಬಾಲ ಹೀಗಿದೆ, ಇದರ ಕಣ್ಣು ಹೀಗಿದೆ, ಇದರ ಕಿವಿ ಹೀಗಿದೆ ಎಂದು ವರ್ಣನೆ ಮಾಡುತ್ತಾನೆ. ಈ ವರ್ಷದ ಮುಂಗಡ ಪತ್ರ ಒಂದು ಬಂಗಾರದ ಕನಸಾಗಿದೆ. ಇದರ ಘೋಷಣೆಗಳಿಗೆ ಮಾನ್ಯತೆ ಸಿಗುವುದು ಏನಿದ್ದರೂ ಅದು ಕಾರ್ಯರೂಪಕ್ಕೆ ಬಂದ ಮೇಲೆಯೇ. ದುಡ್ಡೇ ಇಲ್ಲವೆಂದ ಮೇಲೆ ಯೋಜನೆಗಳ ಜಾರಿಯ ಹಣೆಬರಹ ಹೇಗಿರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹಾಗೂ ಮಾನ್ಯ ಪ್ರಧಾನ ಮಂತ್ರಿಗಳು 'ಅಚ್ಛೇ ದಿನ್' ಎಂದು ಉಪ್ಪರಿಗೆಯ ಮೇಲಿಂದ ಜನರನ್ನು ಯಾಮಾರಿಸಿ 'ಕೊಚ್ಚೇ ದಿನ್' ತರಿಸದೇ ಹೋದರೆ ಒಳ್ಳೆಯದು ಎಂಬುದು ನಮ್ಮೆಲ್ಲರ ಆಶಯವಾಗಿದೆ. ನಮಗೆ 'ಅಚ್ಛೇ ದಿನ್' ಬರದೇ ಹೋದರೂ ಪರವಾಗಿಲ್ಲ, 'ಕೊಚ್ಚೇ ದಿನ್' ಬರುವುದು ಬೇಡ ಎಂಬುದು ನಮ್ಮೆಲ್ಲರ ಆಶಯವಾಗಿದೆ. ಎಂದು ನಾನು ಬಗ್ಗೆ ಹೇಳುತ್ತಿದ್ದೆ.

ಮಾನ್ಯ ಸಭಾಪತಿಗಳೇ, ಈಗ 19 ನಿಗಮಗಳಾಗಿವೆ. '2ಎ' ನಲ್ಲಿ 303 ಜಾತಿಗಳಿವೆ. ಪ್ರವರ್ಗ–1ರಲ್ಲಿಯೇ 93–94 ಜಾತಿಗಳಿವೆ. 197 ಜಾತಿಗಳಿಗೆ ಕೇವಲ 19 ನಿಗಮಗಳು ಏಕೆ? ಎಲ್ಲರಿಗೂ ಏಕೆ ಕೊಡಬಾರದು? ಅವರಿಗೆಲ್ಲಾ ಧ್ವನಿಯಿಲ್ಲವೇ? ಪಾಪ, ಅವರನ್ನು ಯಾರೂ ಕೂಡ ಕೇಳುವವರು ಇಲ್ಲವೇ? ನಿಮ್ಮ ಚಿಂತನೆ ಅವರ ಕಡೆಗೆ ಏಕೆ ಹೋಗುತ್ತಿಲ್ಲ? ನೇಕಾರರು ಆಗಬಹುದು, ಅವರುಗಳೆಲ್ಲರೂ ಕೂಡ ಬಹಳ ದುಸ್ಥಿತಿಯಲ್ಲಿದ್ದಾರೆ. ಅಂತಹವರಿಗೆಲ್ಲಾ ನಿಗಮವನ್ನು ಏಕೆ ಮಾಡಿ ಕೊಡುವುದಿಲ್ಲ? ಈ ನಿಗಮದ ಮೂಲಕ ಜಾತಿ ಆಧಾರಿತ ದುರ್ಬಲರಿಗೆ ನೆರವು ನೀಡುವುದು ತಾತ್ಪೂರ್ತಿಕ ವ್ಯವಸ್ಥೆಯಾಗಿದೆ. ಸರ್ಕಾರಗಳು ಇದಕ್ಕೆ ಶಾಶ್ವತ ವ್ಯವಸ್ಥೆ ಮಾಡಬೇಕಾಗುತ್ತದೆ. ಈಗಿನ ಜಾತಿ ನಿಗಮಗಳ ಸ್ಥಾಪನೆಯಿಂದ ಜಾತಿಗಳಲ್ಲಿರುವ ಉಪ ಜಾತಿಗಳ ನಡುವೆ ಪೈಪೋಟಿ ನಡೆದು ಸಂಘರ್ಷಕ್ಕೆ ತಿರುಗಿದರೂ ಯಾರೂ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇಂತಹ ಅಪಾಯದ ಸ್ಥಿತಿಯನ್ನು ಸರ್ಕಾರ ತಂದುಕೊಳ್ಳಬಾರದು. ಇದರ ಬದಲು ಎಲ್ಲಾ ಜಾತಿಯಲ್ಲಿರುವ ಬಡವರು, ನೊಂದವರು, ಅನಾನುಕೂಲವಾಗಿರುವವರಿಗೆ ಉದ್ಯೋಗ, ಶಿಕ್ಷಣ ಸೌಲಭ್ಯದ ಜೊತೆಗೆ ಸ್ವಯಂ ಉದ್ಯೋಗ ಕಂಡುಕೊಳ್ಳುವಂತಹ ಒಂದು ವ್ಯವಸ್ಥೆ ಕಲ್ಪಿಸಿದರೆ ಈ ಸರ್ಕಾರವನ್ನು ಎಲ್ಲರೂ ಅಭಿನಂದಿಸುತ್ತಿದ್ದರು. ಜಾತ್ಯಾತೀತವಾಗಿ ಶಾಶ್ವತ ರೀತಿಯಲ್ಲಿ ಆಗುವ ವ್ಯವಸ್ಥೆಯಾಗುತ್ತಿತ್ತು. ಕೇಂದ್ರ ಸರ್ಕಾರ ಒಂದು EWS (Economically Weaker Section) ಎಂದು ತಂದಿದೆ. ಅದರಲ್ಲಿ ಜಾತಿಯಿಲ್ಲ. ಯಾರು ಆರ್ಥಿಕವಾಗಿ ದುರ್ಬಲರಾಗಿದ್ದಾರೋ ಅವರಿಗೆ ನೀವು ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ಇದೆ. ನೀವು ಆ ರೀತಿ ಮಾಡಬಹುದಾಗಿತ್ತು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲವೇ ಮಾಡಿದರೆ ಎಲ್ಲಾ ಜಾತಿಗೂ ಮಾಡಬೇಕಾಗಿತ್ತು. ಕೆಲವು ಜಾತಿಗೆ ಏಕೆ ಮಾಡಿದ್ದೀರಿ ಎಂಬುದು ನಮ್ಮ ಪ್ರಶ್ನೆಯಾಗಿದೆ. ಮಾಡಿ ಅದನ್ನು ಮಾಡಿದ್ದು ಒಳ್ಳೆಯದು. ನಾವು ಅದನ್ನು ಸ್ವಾಗತಿಸುತ್ತೇವೆ. ಆದರೆ, ಒಂದು ಕಡೆ 103 ಜಾತಿಗಳು, ಒಂದು ಕಡೆಯಲ್ಲಿ 94 ಜಾತಿಗಳು, ಒಟ್ಟು ಸುಮಾರು 195 ಜಾತಿಗಳು ಇರುವಾಗ ಕೇವಲ 19 ನಿಗಮಗಳು ಏಕೆ? ಬಾಕಿಯವರೆಲ್ಲಾ ಏನು ಪಾಪ ಮಾಡಿದ್ದಾರೆ? ಅಥವಾ ಅವರು ಆ ಜಾತಿಯಲ್ಲೇನಾದರೂ ಏನಾದರೂ ತಪ್ಪು ಮಾಡುವುದಕ್ಕೆ ಲೈಸೆನ್ಸ್ ಹಾಕಿಕೊಂಡು ಬಿಟ್ಟಿದ್ದಾರಾ? ಈ ಸರ್ಕಾರ ಹಿಂದುಳಿದವರು, ಮುಂದುವರಿದವರು, ಉಳಿದವರು ಎಂದು ತಾರತಮ್ಯ ಮಾಡದೇ ಎಲ್ಲರಿಗೂ ಒಂದೇ ರೀತಿಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯನಿರತವಾಗಬೇಕು. ಈ ನಿಗಮಕ್ಕೆ ಎಷ್ಟು ದುಡ್ಡು ಕೊಡುತ್ತೀರಿ? ಅದಕ್ಕೆ ಒಬ್ಬರು ಛೇರ್ಮನ್‌ರು, ಅವರಿಗೆ ಕ್ಯಾಬಿನೆಟ್ ರ್‍ಯಾಂಕಿಂಗ್ ಸ್ಥಾನಮಾನ ಅದಕ್ಕೆ ಸಿಬ್ಬಂದಿ, ಕಚೇರಿ, ಹಾಗೂ ಓಡಾಡುವುದಕ್ಕೆ ಕಾರು. ಅಷ್ಟಕ್ಕೇ ಆ ದುಡ್ಡು ಸಾಕಾಗುತ್ತದೆ. ಅಕಸ್ಮಾತ್ ಚೂರು ಪಾರು ಉಳಿದರೆ ಅಲ್ಲಿ ಯಾರಿಗಾದರೂ ಕೊಡಬಹುದು. ಆದರೆ, ಅಲ್ಲಿರುವ ಜಾತಿ ಜನಸಂಖ್ಯೆ ಎಷ್ಟು? ಆರೂವರೆ ಕೋಟಿ ಜನಸಂಖ್ಯೆ ಎಂದು ಈಗಾಗಲೇ ಮಾನ್ಯ ಡಾ: ತಳವಾರ್ ಸಾಬಣ್ಣ ರವರು ಹೇಳುತ್ತಿದ್ದರು. 50% ನಾವು ಹಿಂದುಳಿದ ವರ್ಗದವರಿದ್ದೇವೆ ಎಂದು ಹೇಳುತ್ತಿದ್ದರು. 50% ನಷ್ಟು ದುಡ್ಡನ್ನು ನೀವು ಅವರಿಗೆ ತೆಗೆದಿಡಬೇಕಲ್ಲವೇ? ಕೇವಲ ರೂ.20 ಕೋಟಿಗಳು ಕೊಡುವುದು, ರೂ.10 ಕೋಟಿಗಳನ್ನು ಕೊಡುವುದು, ರೂ.5 ಕೋಟಿಗಳನ್ನು ಕೊಡುವುದು, 16 ಮಂಡಳಿಗಳಿಗೆ ರೂ.500 ಕೋಟಿಗಳನ್ನು ಕೊಟ್ಟರೆ ತಾವು ಜನರಿಗೆ ಯಾವ ರೀತಿ ಸಹಾಯ ಮಾಡುವುದಕ್ಕೆ ಆಗುತ್ತದೆ? ಇದನ್ನು ಸರ್ಕಾರ ಇನ್ನೊಂದು ಬಾರಿ ಯೋಚನೆ ಮಾಡಬೇಕು. ಆಡಳಿತ ವ್ಯವಸ್ಥೆ ಹೇಗಾಗಿದೆ ಎಂದರೆ, ಈ ಸರ್ಕಾರಿ ಅಧಿಕಾರಿಗಳ ಬಗ್ಗೆ ಮೊನ್ನೆ ನಮ್ಮ ಮಾನ್ಯ ನಾರಾಯಣಸ್ವಾಮಿಯವರು ಮಾತನಾಡುವಾಗ ಹೇಳುತ್ತಿದ್ದರು. ಸರ್ಕಾರಿ ಸಚಿವಾಲಯದಲ್ಲಿಯೇ ಹಣ ಕೊಡದೇ ಹೋದರೆ ಯಾವುದೇ ಕೆಲಸವಾಗುವುದಿಲ್ಲವೆಂದು ಆಡಳಿತ ಪಕ್ಷದ ಸದಸ್ಯರು ಈ ರೀತಿ ಹೇಳಬೇಕಾದರೆ ನಿಮ್ಮ administration ಎಲ್ಲಿಗೆ ಬಂದು ನಿಂತಿದೆ?

ಮಾನ್ಯ ಸಭಾಪತಿಗಳೇ, ಯಾರೋ ಒಬ್ಬರು ಬಡ ಜನತೆ ಕಡೆಯಿಂದ ನಿಮ್ಮ ಊರಿನಿಂದ A.C.ಗೆ ಅಥವಾ D.C.ಗೆ ಒಂದು ಅರ್ಜಿ ಹಾಕಿಸಿ. ಅದು ಎಷ್ಟು ತಿಂಗಳುಗಳು ತೆಗೆದುಕೊಳ್ಳುತ್ತದೆ ಎಂದು ನೋಡಿ. ಸರ್ಕಾರದಲ್ಲಿ ಒಂದು ಕೆಲಸವಾಗಬೇಕಾದರೆ ಇಂತಿಷ್ಟು ದಿನಗಳಲ್ಲಿ ಆಗಬೇಕೆಂಬ ಒಂದು ನಿಯಮಾವಳಿ ಇರಬೇಕಾಗುತ್ತದೆ. ನೀವು ದುಡ್ಡು ಕೊಡುವವರೆಗೆ ಆ ಫೈಲ್ ಹೋಗುವುದಿಲ್ಲ. ಅಕಸ್ಮಾತ್ ಹೋಯಿತು ಎಂದರೆ for some technical reason ಎಂದು ಒಂದು reason ಹಾಕುತ್ತಾರೆ. ಏಕೆಂದರೆ, ಅವನಿಗೆ ಧನ ಸೇರಿಲ್ಲವೆಂದು ಆ ರೀತಿ ಒಂದು ಕಾರಣವನ್ನು ಹಾಕುತ್ತಾರೆ. ಒಬ್ಬೊಬ್ಬರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

raid ಮಾಡಿದರೆ ಕೋಟ್ಯಾಂತರ ರೂಪಾಯಿಗಳ ಹಣ ಸಿಗುತ್ತದೆ. ಆದರೂ ಮತ್ತೆ ಈ ಸರ್ಕಾರದಲ್ಲಿ ಅವರಿಗೆ ಪೋಸ್ಟಿಂಗ್ಸ್ ಸಿಗುತ್ತದೆ. ಇಷ್ಟೊಂದು ಒಳ್ಳೆಯ ಕೆಲಸ ಮಾಡುತ್ತಾರೆ ಎಂದರೆ, ಯಾರ್‍ಯಾರು raid ಆಗುತ್ತಾರೆ, ಯಾರ್‍ಯಾರಿಗೆ ಹಣ ಸಿಗುತ್ತದೆ, ಸಸ್ಪೆಂಡ್ ಆಗುತ್ತಾರೆ, ಮತ್ತೆ reinstate ಆಗಿ ಬರುತ್ತಾರೆ. ಒಳ್ಳೆಯ ಪೋಸ್ಟ್‌ಗಳಲ್ಲೇ ಇರುತ್ತಾರೆ. ಬೇಕಾದರೆ ಕೆಲವು ಉದಾಹರಣೆಗಳನ್ನು ನಾವು ಕೊಡಬಹುದು. ಈ ಅಧಿಕಾರಿಗಳನ್ನೇನಾದರೂ ಸ್ವಲ್ಪ ನಿಯಂತ್ರಣದಲ್ಲಿ ಇಡುವುದಕ್ಕೆ ಈ ಸರ್ಕಾರ ಹೆಜ್ಜೆ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮೊನ್ನೆ ಚಿತ್ರದುರ್ಗದಲ್ಲಿ ಭಾರತೀಯ ಜನತಾ ಪಕ್ಷದ ಲೋಕಸಭಾ ಸದಸ್ಯರು ಒಂದು statement ಕೊಡುತ್ತಾರೆ. "ಈ ಬಜೆಟ್ ಒಂದು ಕಪ್ಪು ಚುಕ್ಕೆ" ಎಂದು statement ಕೊಡುತ್ತಾರೆ. ನಮ್ಮ ಪಕ್ಷದವರಲ್ಲ ಅವರು, ನಿಮ್ಮ ಪಕ್ಷದವರೇ ಕೊಡುತ್ತಾರೆ. ಏನಿದರ ಅರ್ಥ? 'ಕಪ್ಪು ಚುಕ್ಕೆ' ಎಂದು ಏಕೆ ಹೇಳಿದರು? ನೀವು ಬೇಕಾದರೆ ಅದನ್ನು ತರಿಸಿಕೊಳ್ಳಿ. ನಾನು ಪತ್ರಿಕೆಯನ್ನು ಓದಿಯೇ ಹೇಳುತ್ತಿದ್ದೇನೆ. ಇಂತಹ ಗತಿ, ಇಂತಹ ಸ್ಥಿತಿ ನಿಮ್ಮ ಪಕ್ಷಕ್ಕೆ ಬರಬಾರದು. ನಿಮ್ಮ ಪಕ್ಷದವರೇ ನಿಮ್ಮ ಬಜೆಟ್ ಸರಿಯಿಲ್ಲವೆಂದು ಹೇಳಿದಾಗ ನಾವು ವಿರೋಧ ಪಕ್ಷದವರಾಗಿ ಬಜೆಟ್ ಸರಿಯಿಲ್ಲವೆಂದು ಹೇಳುವುದರಲ್ಲಿ ಏನೂ ತಪ್ಪಿಲ್ಲ. ಆದರೆ, ನೀವು ಸರಿಮಾಡಿ, ಜನರಿಗೆ ಒಳ್ಳೆಯದು ಮಾಡಿ ಎಂದು ಹೇಳುವುದು ನಮ್ಮ ಅಭಿಪ್ರಾಯವಾಗಿದೆ. ನಾವು ಏನೂ ನಿಮಗೆ ಘೋಷಣೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಏನು ಮಾಡಬೇಕಾದರೂ ನಿಮ್ಮ ಬಳಿ ದುಡ್ಡು ಇಲ್ಲ. ಸಾಲ ಮಾಡಿದರೆ ಅಷ್ಟೆ ಸಾಧ್ಯ. ಈಗ ಬೆಂಗಳೂರಿಗೆ ರೂ.7000 ಕೋಟಿ ಎಂದು ಹೇಳಿದರು. ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿಟ್ಟಂತಹ ಹಣ ಅದು. ಅದು ಆದಮೇಲೆ ಹೋದ ವರ್ಷ ಇವರು ಒಂದು ಸಾವಿರ ಕೋಟಿಗಳನ್ನು ಕೊಟ್ಟಿದ್ದರು. ಅದೇ ಕೆಲಸಗಳು ಇನ್ನೂ ಮುಗಿದಿಲ್ಲ. ನಾನು ನಿಮಗೆ ಉದಾಹರಣೆ ಕೊಟ್ಟೆ. ಈಗ ಮತ್ತೆ ಅದೇ ದುಡ್ಡು ಉಳಿದಿದೆ. ಬೆಂಗಳೂರು peripheral ರಸ್ತೆ ಬಗ್ಗೆ ಹೇಳುವುದಾದರೆ ನೀವು ಕಳೆದ ಸುಮಾರು 10-15 ವರ್ಷಗಳ ಆಯವ್ಯಯವನ್ನು ತೆಗೆದುನೋಡಿ. ಆ peripheral ರಸ್ತೆ ಇದ್ದೇ ಇದೆ, ಅದಕ್ಕೆ ರೂ.10 ಕೋಟಿಗಳು ಇದ್ದೇ ಇದೆ. ಆ ದುಡ್ಡು ಒಂದು ರೂಪಾಯಿ ಸಹ ಖರ್ಚಾಗಿಲ್ಲ, ಆ peripheral ರಸ್ತೆ ಸಹ ಆಗಿಲ್ಲ. ಅದಕ್ಕೆ ನಾವು ಕಾರಣರು, ನೀವು ಕಾರಣರು ಎಂಬುದಲ್ಲ. ಆದರೆ, ನಾವು ತಪ್ಪು ಮಾಡಿದ್ದೇವೆ, ಸರ್ಕಾರದಲ್ಲಿರುವವರು ನೀವು ಸರಿ ಮಾಡಿ. ಒಂದು ರಸ್ತೆ ಕೆಲಸ ಶುರು ಮಾಡಿ, ಒಂದು ಕೆಲಸ ಮಾಡಿ. ಕೇಳಿದರೆ ಇಲ್ಲ ಎಲ್ಲ ಸರಿಯಗಿದೆ, ಅದು ಹೋಗುತ್ತದೆ, ಇದು ಹೋಗುತ್ತದೆ ಎಂದು ಹೇಳುತ್ತೀರಿ. ಈ 2018-19, 2019-20ನೇ ಸಾಲಿನಲ್ಲಿ ಜರುಗಿದಂತಹ ಅತಿವೃಷ್ಟಿ ಹಾಗೂ ಅನಾವೃಷ್ಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ನಾನು ಈಗಾಗಲೇ ಬೆಳಕು ಚೆಲ್ಲಿದ್ದೇನೆ. ಕೇಂದ್ರ ಸರ್ಕಾರದಿಂದ ಹಣ ಎಷ್ಟು ಬಂತು, ರಾಜ್ಯ ಸರ್ಕಾರ ಎಷ್ಟು ಹಣ ಕೊಟ್ಟಿತು? ಅದರ ಬಗ್ಗೆ 'Performance Report' ಕೊಡಿ. ಇಲ್ಲವೇ ಬಜೆಟ್ ಮೇಲಾದರೂ ಸಹಿತ ಒಂದು 'Performance Report' ಕೊಡಿ. ಕಳೆದ ವರ್ಷದ ಆಯವ್ಯದಲ್ಲಿ ನಾವು ರೂ. 2 ಲಕ್ಷ 34 ಸಾವಿರ ಕೋಟಿಗಳನ್ನು ಮಂಡಿಸಿದ್ದೆವು, ಇಂತಿಷ್ಟು ಖರ್ಚು ಮಾಡಿದ್ದೇವೆ, ಇಂತಿಷ್ಟು ವಿದ್ಯಾರ್ಥಿಗಳಿಗೆ ವಿಧ್ಯಾಭ್ಯಾಸ ಸಿಕ್ಕಿದೆ, ಇಂತಿಷ್ಟು ಶಾಲೆಗಳು ಚೆನ್ನಾಗಿ ಆಗಿವೆ, ಇಂತಿಷ್ಟು ವಿದ್ಯಾರ್ಥಿಗಳಿಗೆ ಕೆಲಸ ಕೊಟ್ಟಿದ್ದೇವೆ, ಕೌಶಲ್ಯಾಭಿವೃದ್ಧಿ ಹೊಂದಿದ್ದಾರೆ. ಇದರ details ಕೊಡಿ. ಇದನ್ನು ಏನೂ ಹೇಳುವುದಿಲ್ಲ. ಮಾತು ಎತ್ತಿದರೆ ಅದು ಇಲ್ಲ, ಇದು ಇಲ್ಲ ಎಂದು ಹೇಳುವುದು. ಒಂದು ಹುಲಿ ಒಡೆಯುವುದಕ್ಕೆ ಹೋಗಿದ್ದೇವೆ, ಮತ್ತೊಂದು ಒಡೆಯುವುದಕ್ಕೆ ಹೋಗಿದ್ದೇವೆ ಎಂದು ಹೇಳುವುದು; ಹೇಗೆ ಎಂದರೆ, 'ಆನೆ ಆಗಿ ಹುಲ್ಲು ತಿನ್ನುವ ಬದಲು ಇರುವೆ ಆಗಿ ಸಕ್ಕರೆ ತಿನ್ನೋಣ'ವೆಂಬುದು ನಮ್ಮ ಅಭಿಲಾಷೆಯಾಗಿದೆ, ಬೇರೆ ಏನೂ ಇಲ್ಲ. ಬೇಕಾದಷ್ಟು ಇಲಾಖೆಗಳಲ್ಲಿ ಉಪ ಇಲಾಖೆಗಳಿವೆ, ಒಂದಕ್ಕೆ ಐದೈದು ಉಪ ಇಲಾಖೆಗಳಿವೆ. ಅವುಗಳನ್ನೆಲ್ಲಾ ವಿಲೀನ ಮಾಡಿ ಸರ್ಕಾರಿ ಖರ್ಚುಗಳನ್ನು ಕಡಿಮೆ ಮಾಡಿ ಅದಕ್ಕೆ ಒಬ್ಬರಿಗೇ responsibility fix ಮಾಡಿ ಅವರಿಗೆ performance ಇಲ್ಲವೇ ಅವರಿಗೆ duty ಇಂತಿಷ್ಟು ಮಾಡಲೇಬೇಕೆಂದು ಕೊಟ್ಟರೆ ಆಗುತ್ತದೆದೀಗ ಒಂದೊಂದಕ್ಕೆ ಒಬ್ಬೊಬ್ಬ ಅಧಿಕಾರಿ ಇರುವುದರಿಂದಒಂದು ಕೆಲಸಕ್ಕೆ ಹೋಗಬೇಕೆಂದರೆ, ಒಂದಕ್ಕೆ apply ಮಾಡಬೇಕೆಂದರೆ ನಾಲ್ಕು ಜನರ ಬಳಿಗೆ ಹೋಗಬೇಕಾಗುತ್ತದೆ. ಅದಕ್ಕೆ ನಾಲ್ಕು ಜನರು clearance ಕೊಡಬೇಕಾಗುತ್ತದೆ. ಆ ನಾಲ್ಕು ಜನರನ್ನು ನೋಡಿಕೊಳ್ಳುವಷ್ಟರಲ್ಲಿ ಇವನು ಸತ್ತೇ ಹೋಗಿಬಿಡುತ್ತಾನೆ. ಇದಕ್ಕೆ ಸರ್ಕಾರ ಏನಾದರೂ ಒಂದು ಸಂಕಲ್ಪ ಮಾಡಬೇಕಾಗುತ್ತದೆ. ಎಲ್ಲದಕ್ಕೂ ಸರ್ಕಾರ ಒಂದು single window ವ್ಯವಸ್ಥೆ ಮಾಡುವುದು ಒಳ್ಳೆಯದು. ಎಲ್ಲದಕ್ಕೂ ಬೆಂಗಳೂರಿನಲ್ಲಿಯೇ ಆಗಲಿ ಏನಾದರೂ ಒಂದು permission ತೆಗೆದುಕೊಳ್ಳಬೇಕೆಂದರೆ, KEB ಗೆ ಒಂದು ಕಡೆ, Water Supply Board ಗೆ ಒಂದು ಕಡೆ, Pollution Control Board ಗೆ ಒಂದು ಕಡೆ, ಈ ರೀತಿಯ ನಾನಾ ಇಲಾಖೆಗಳಿಗೆ ಓಡಾಡಬೇಕಾಗುತ್ತದೆ. ಎಲ್ಲಾ ಇಲಾಖೆಗಳು ಇವತ್ತು computerized ಆಗಿವೆ. ಯಾರೂ ಏನೂ ಮಾಡಬೇಕಾಗಿಲ್ಲ. ನೀವು ಒಳ್ಳೆಯ ಕಂಪ್ಯೂಟರ್ ಕಂಪನಿಯ ಜೊತೆಗೆ ಮಾತನಾಡಿ ಒಂದೇ ಸೂರಿನಡಿ ಎಲ್ಲ ಕ್ಲಿಯರೆನ್ಸ್‌ಗಳು ಸಿಗುವಂತಹ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರೆ ಒಂದೇ ಕಡೆಯಲ್ಲಿ ಎಲ್ಲಾ ಸೌಲಭ್ಯಗಳು ಸಿಗುತ್ತದೆ. ನಾವು apply

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದ ಮೇಲೆ ಅವನು ಬೇಕಾದರೆ ಒಂದು ವಾರ ಸಮಯಾವಕಾಶ ತೆಗೆದುಕೊಳ್ಳಲಿ, ಇದು ಸರಿಯಿದೆ ಅಥವಾ ಸರಿಯಿಲ್ಲವೆಂದು ನೋಡುವುದಕ್ಕೆ ಅಧಿಕಾರಿಗಳು ಸಮಯಾವಕಾಶ ತೆಗೆದುಕೊಳ್ಳಲಿ. ಅದು ಕ್ಲಿಯರ್ ಆದಾಗ ಏನಾದರೂ ಘೋಷಣೆ ಮಾಡಬೇಕು. ನಾವು I.T.-B.T. city, silicon city ಎಂದು ಹೇಳಿಕೊಂಡು ನಮ್ಮ ಕೆಲಸಗಳೇ ಆಗುವುದಿಲ್ಲ. ಇದು ನಮ್ಮ ಸರ್ಕಾರದಲ್ಲಿ ಬಹಳ ದುರ್ದೈವದ ಸಂಗತಿಯಾಗಿದೆ. ಬೇರೆ ರಾಜ್ಯಗಳಾದರೆ ಪರವಾಗಿಲ್ಲ. ಏಕೆಂದರೆ, ನೀವು ಮಾತು ಎತ್ತಿದರೆ ನಮ್ಮದು double engine ಸರ್ಕಾರವೆಂದು ಹೇಳುತ್ತೀರಿ. ಸರ್ ನಿಮಗೆ ಒಂದು ಮಾತು ಹೇಳುತ್ತೇನೆ, ಎಲ್ಲೆಲ್ಲಿ ಬಿ.ಜೆ.ಪಿ. ಸರ್ಕಾರವಿದೆ; ಅಂದರೆ ಗುಜರಾತ್ ಆಗಬಹುದು, ಮಧ್ಯಪ್ರದೇಶವಾಗಬಹುದು, ಎಲ್ಲೆಲ್ಲಿ ಬಿ.ಜೆ.ಪಿ. ಸರ್ಕಾರವಿದೆ, ನೀವು ಬೇಕಾದರೆ ದಾಖಲೆಗಳನ್ನು ತೆಗೆದು ನೋಡಿ ಅಲ್ಲೆಲ್ಲಾ ಕೇಂದ್ರ ಸರ್ಕಾರ AIIMS ಕೊಡುತ್ತದೆ. ಆದರೆ, ಕರ್ನಾಟಕಕ್ಕೆ ಮಾತ್ರ ಕೊಡುವುದಿಲ್ಲ. ಏಕೆಂದರೆ, ನಾವು ನಮ್ಮ ರಾಜ್ಯದಿಂದ 25 ಸಂಸದರನ್ನು ಕಳುಹಿಸಿದ್ದಕ್ಕೋ ಅಥವಾ ಬಿ.ಜೆ.ಪಿ. ಸರ್ಕಾರ ಇರುವವರೆವಿಗೂ ಏನೂ ಕೊಡುವುದಿಲ್ಲವೋ? ಏಕೆಂದರೆ, ಮಾತು ಎತ್ತಿದರೆ ಮಾನ್ಯ ಮುಖ್ಯಮಂತ್ರಿಗಳ ಬದಲಾವಣೆಯಿದೆ. ಅಧಿಕಾರಿಗಳಿಗೆಲ್ಲಾ ಭಯವಿದೆ.

**(ಮುಂದು)**

**(386) 15.03.2021 03.30 ಎಸ್‌ವಿ-ಬಿಎಸ್‌ಎಸ್**

**ಶ್ರೀ ಯು.ಬಿ.ವೆಂಕಟೇಶ್ (ಮುಂದು):-**

ಈ ಸರ್ಕಾರವೇ ಹೋಗುತ್ತದೆ. ಏನು ಮಾಡಬೇಕೆಂಬುದನ್ನು ನಾಳೆ ನೋಡೋಣ ಎಂಬ ಭಾವನೆಯನ್ನು ಅಧಿಕಾರಿಗಳು ಹೊಂದಿದ್ದಾರೆ. ಇಂತಹ ಪರಿಸ್ಥಿತಿಯನ್ನು ಏಕೆ ತಂದುಕೊಳ್ಳುತ್ತಿದೆ? ಏಮ್ಸ್ ಅನ್ನು ಕರ್ನಾಟಕಕ್ಕೆ ತರುವುದಕ್ಕೆ ಸರ್ಕಾರಕ್ಕೆ ಏನಾಗಿದೆ? ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಇಲ್ಲಿಯೇ ಇದ್ದಾರೆ. ಕಲಬುರಗಿಯಲ್ಲಿ ಒಂದೇ ಯೂನಿಟ್‌ನಲ್ಲಿ ಏಮ್ಸ್ ಅನ್ನು ಪ್ರಾರಂಭಿಸಬಹುದಾದಂತಹ ಕಟ್ಟಡವಿದೆ. ಕೇಂದ್ರ ಸರ್ಕಾರದಿಂದ ಶೇ.87ರಷ್ಟು ಅನುದಾನ ಬರುತ್ತದೆ. ರಾಜ್ಯ ಸರ್ಕಾರ ಕೊಡುವುದು ಕೇವಲ ಶೇ.13 ಮಾತ್ರ. ನಾನು ಕಳೆದ ಬಾರಿಯೂ ಮಾನ್ಯ ಮಂತ್ರಿಗಳ ಬಳಿ ಕೇಳಿಕೊಂಡಿದ್ದೆನು. ಅದಕ್ಕೆ ಅಧಿಕಾರಿಗಳೂ ಇಲ್ಲ, ಸಿಬ್ಬಂದಿಗಳೂ ಇಲ್ಲ.

ನಮ್ಮ ನಾಯಕರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅದನ್ನು ಮಾಡಿದ್ದು, ಏಷಿಯಾದಲ್ಲಿಯೇ ನಂ.1 ಸ್ಥಾನದಲ್ಲಿದೆ. ಈ ರಾಷ್ಟ್ರದಲ್ಲಿ ಸುಮಾರು 20 ಆಸ್ಪತ್ರೆಗಳನ್ನು ಕಟ್ಟಲಾಗಿದ್ದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದರಲ್ಲಿ ಇದು ಒಂದು. ಕೋಟ್ಯಂತರ ರೂಪಾಯಿ ಮೌಲ್ಯದ ಮೆಷಿನರಿಗಳಿದ್ದು, ಎಲ್ಲಾ ತರಹದ ಸೌಲಭ್ಯಗಳನ್ನೊಳಗೊಂಡಿದೆ. ಅದು ಬಡವರಿಗೆ ಸಹಕಾರಿಯಾಗುವುದಿಲ್ಲ ಎನ್ನುವುದಾದರೆ ಅಂತಹದ್ದನ್ನು ಏಕೆ ಮಾಡಬೇಕು? ಸರ್ಕಾರದಿಂದ ಖರ್ಚಾಗುವುದು ಕೇವಲ 13 ಪೈಸೆ ಮಾತ್ರ, if I am correct. ಏನಾದರೂ ತಪ್ಪಿದ್ದರೆ ಸರಿಪಡಿಸಿ. 87 ಪೈಸೆ ಕೇಂದ್ರ ಸರ್ಕಾರ ಕೊಡುತ್ತದೆ.

ಸರ್ಕಾರದಲ್ಲಿ ಸುಮಾರು 2 ಲಕ್ಷ ಹುದ್ದೆಗಳು ಖಾಲಿ ಇವೆ. ಸಾಕಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ. ಸರ್ಕಾರ ಯಾವಾಗಲೂ ಆರ್ಥಿಕ ಇಲಾಖೆಯ ಕಡೆಗೆ ಬೆರಳು ಮಾಡಿ ತೋರಿಸುತ್ತದೆ. ನಾನು ಮೊನ್ನೆಯೂ ಹೇಳಿದ್ದೇನೆ. ಒಬ್ಬ ಮನುಷ್ಯ ನಿವೃತ್ತಿ ಹೊಂದಿದ್ದಾಗ ಆ ಹುದ್ದೆಗೆ ಹೊಸದಾಗಿ ಮತ್ತೊಬ್ಬರನ್ನು ತೆಗೆದುಕೊಂಡರೆ ಶೇ.50 ರಷ್ಟು ಕೂಡ ಖರ್ಚಾಗುವುದಿಲ್ಲ. ನಿವೃತ್ತಿ ಹೊಂದಿದವರ ಕೊನೆಯ ಸಂಬಳ ರೂ. 1 ಲಕ್ಷ ಸಂಬಳವಿದ್ದರೆ, ಹೊಸದಾಗಿ ತೆಗೆದುಕೊಂಡವರಿಗೆ ರೂ.30–35,000/- ಇರುತ್ತದೆ. ಅವನ ಪಿಂಚಣಿ ರೂ.35,000 ತೆಗೆದರೂ ಇನ್ನೂ ರೂ.30,000/- ಉಳಿಯುತ್ತದೆ. ಆರ್ಥಿಕ ಇಲಾಖೆಯ ಅನುಮತಿ ಅತ್ಯಗತ್ಯ. ಆದರೆ ಆರ್ಥಿಕ ಇಲಾಖೆಯು ಅನುಮತಿಯನ್ನು ಕೊಡುವುದಿಲ್ಲ. ಆರ್ಥಿಕ ಇಲಾಖೆಯನ್ನು abolish ಮಾಡಿ ಅಥವಾ ಬೇರೇನಾದರೂ ಮಾಡಬೇಕು. ಆರ್ಥಿಕ ಇಲಾಖೆಯ ಹೆಸರು ಹೇಳಿಕೊಂಡು ರಾಜ್ಯ ಮುಂದೆ ಹೋಗದಂತೆ ಮಾಡುತ್ತಿರುವುದು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆರ್ಥಿಕ ಇಲಾಖೆಯಲ್ಲಿ ಬಹಳ ವರ್ಷಗಳಿಂದ ಕೆಲವು ಅಧಿಕಾರಿಗಳು/ಸಿಬ್ಬಂದಿ ಅಲ್ಲಿಯೇ ಇದ್ದಾರೆ. ಮೊದಲು ಅವರನ್ನು ಆ ಸ್ಥಾನಗಳಿಂದ ತೆಗೆಯಿರಿ. ಅವರು ಬೇಕೆಂದೇ ಮಾಡುತ್ತಾರೆಯೋ ಅಥವಾ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕಾಗಿ ಮಾಡುತ್ತಾರೆಯೋ ಅದು ನನಗೆ ಗೊತ್ತಿಲ್ಲ. ಆದರೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿದ್ದರೆ ಹೇಗೆ? ಎರಡು ಲಕ್ಷ ಹುದ್ದೆಗಳು ಖಾಲಿಯಿದ್ದು, ಎರಡು ಲಕ್ಷ ಜನಕ್ಕೆ ಉದ್ಯೋಗಾವಕಾಶವನ್ನು ಕೊಟ್ಟರೆ ಅವರ ಬದುಕು ಚೆನ್ನಾಗಿ ಆಗುತ್ತದೆ. ಸರ್ಕಾರವೇ ಹುದ್ದೆಗಳನ್ನು ತುಂಬದಿದ್ದರೆ, ಇನ್ನು ಖಾಸಗಿಯವರು ಏನು ಮಾಡುತ್ತಾರೆ?

ಬೇಡದಿರುವ ಯೋಜನೆಗಳನ್ನು ಮಾಡಲು ಸರ್ಕಾರ ಹೊರಟಿದೆ. ಹೋಟೆಲ್‌ಗಳ ನಿರ್ಮಾಣ ಮಾಡುತ್ತೇವೆಂದು ಹೇಳುತ್ತಾರೆ. ಹೋಟೆಲ್‌ಗಳನ್ನು ಖಾಸಗಿಯವರಿಗೆ ಕೊಡಿ, ಕಟ್ಟಿಕೊಳ್ಳುತ್ತಾರೆ. ಸರ್ಕಾರ ಹೋಟೆಲ್‌ಗಳನ್ನು ಕಟ್ಟಿದರೆ 10 ವರ್ಷಗಳಲ್ಲಿ ಅರ್ಧ ದರಕ್ಕೆ ಮಾರಾಟ ಮಾಡುತ್ತದೆ. ಉದಾಹರಣೆಗೆ ಬೆಂಗಳೂರಿನ ಹೋಟೆಲ್ ಅಶೋಕ, ಹಾಸನದ ಹೋಟೆಲ್ ಅಶೋಕ. ಈ ರೀತಿ ಭಾರತದಾದ್ಯಂತ ಆಗಿದೆ. ಈಗ ಪುನಃ ಅಂತಹುದೇ ಕೆಲಸಕ್ಕೆ ಏಕೆ ಸರ್ಕಾರ ಕೈ ಹಾಕುತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಯಲ್ಲಿ ಆಡಳಿತ ಹಾಗೂ ಯೋಜನೆಗಳ ಜಾರಿಯನ್ನು ಫಲಾನುಭವಿಗಳ ದೃಷ್ಟಿಕೋನದಿಂದ ಸರ್ಕಾರ ನೋಡಬೇಕು. ಸ್ವಾತಂತ್ರ್ಯ ಬಂದು 74 ವರ್ಷಗಳು ಉರುಳಿದರೂ ಇನ್ನೂ ಸಂಸತ್ ಭವನ ಅಥವಾ ವಿಧಾನ ಸೌಧದ ಕಣ್ಣುಗಳಿಂದಲೇ ಫಲಾನುಭವಿಗಳನ್ನು ಗುರುತಿಸುವ ದೃಷ್ಟಿಕೋನ ಬದಲಾಗಿ ಕಾಲಮಾನಕ್ಕೆ ತಕ್ಕಂತೆ ಅಧಿಕಾರ ವಿಕೇಂದ್ರಿಕರಣ ಹೊಸ ಸುಧಾರಿತ ರೂಪವಾಗಿ ಫಲಾನುಭವಿಗಳ ಕಣ್ಣಿನಲ್ಲಿ ಆಡಳಿತ ಯೋಜನೆ ಜಾರಿ ಪ್ರಕ್ರಿಯೆಯನ್ನು ಮಾಡುವುದು ಕ್ರಾಂತಿಕಾರಿ ಕ್ರಮವಾದೀತು. ಇದರಿಂದಾಗಿ ಸರ್ಕಾರದ ಆಡಳಿತದಲ್ಲಿ ಬೇರು ಬಿಟ್ಟಿರುವ ದಲ್ಲಾಳಿಗಳ ಅವಾಂತರ ನಿರ್ಮೂಲನೆಗೆ ಅವಕಾಶವಾಗುತ್ತದೆ.

ನಾನು ಆಗಲೇ ಹೇಳಿದೆ. ಬೆಂಗಳೂರು ಅಂದದ ಊರು. ಇಲ್ಲಿ ಬಂದವರೆಲ್ಲಾ ಇದರ ವ್ಯಾಮೋಹಕ್ಕೆ ಒಳಗಾಗುತ್ತಾರೆ. ಇದು cosmopolitan city. ಆದರೆ ಕನ್ನಡಕ್ಕಾಗಿ ಸರ್ಕಾರ ಏನಾದರೂ ಮಾಡಬೇಕು. ವಿಮಾನ ನಿಲ್ದಾಣಕ್ಕೆ ಹೋದರೆ ಕನ್ನಡವಂತೂ ಕಾಣುವುದೇ ಇಲ್ಲ. ಜೈಪುರ, ಮುಂಬೈ, ದೆಹಲಿ ಇಲ್ಲಿನ ವಿಮಾನ ನಿಲ್ದಾಣಗಳ ಪರಿಸ್ಥಿತಿ ಬೇರೆಯದೇ ಆಗಿದೆ. ಆದರೆ ನಮ್ಮ ಬೆಂಗಳೂರಿನಲ್ಲಿ ಕನ್ನಡಕ್ಕೆ ಏಕೆ ಪ್ರಾಶಸ್ತ್ಯವಿಲ್ಲ? ಕನ್ನಡದ ಹಲವಾರು ಸಾಹಿತಿಗಳಿದ್ದಾರೆ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿದ್ದಾರೆ. ಅವರ ಬಗ್ಗೆ ಮಾಹಿತಿಯನ್ನು ಹಾಕಬೇಕು. ಕೇವಲ ಆಂಗ್ಲ ಭಾಷೆಯಲ್ಲಿ ಮಾತ್ರ ಏಕೆ ವ್ಯವಹರಿಸುವುದು? ಸರ್ಕಾರಕ್ಕೆ ಕನ್ನಡ ಇಷ್ಟವಿಲ್ಲವೇ? ವಿರೋಧಪಕ್ಷದಲ್ಲಿರುವ ನಾವು ಏನು ಹೇಳಿದರೂ ಅದು ಸರ್ಕಾರಕ್ಕೆ ತಪ್ಪಾಗಿ ಕೇಳುತ್ತದೆ. ನಮ್ಮ ನೆರೆಯ ರಾಜ್ಯವಾದ ತಮಿಳುನಾಡಿಗೆ ಹೋದರೆ, ಅಲ್ಲಿ ಕನ್ನಡ ಅಥವಾ ಆಂಗ್ಲ ಭಾಷೆ ತಿಳಿದಿದ್ದರೂ ಅವರು ತಮಿಳು ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಮಾತನಾಡುವುದಿಲ್ಲ. ನಮ್ಮ ರಾಜ್ಯದಲ್ಲಿ ಹಿಂದಿ ಮಾತನಾಡುವವರಿಗೆ ಹಿಂದಿಯಲ್ಲಿ, ಉರ್ದು ಮಾತನಾಡುವವರಿಗೆ ಉರ್ದುವಿನಲ್ಲಿ, ತೆಲುಗು ಮಾತನಾಡುವವರಿಗೆ ತೆಲುಗುವಿನಲ್ಲಿ ವ್ಯವಹರಿಸಲಾಗುತ್ತದೆ. ಮಾತನಾಡಲಿ, ನಾವು ಬೇಡ ಎಂದು ಹೇಳುವುದಿಲ್ಲ. ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ನಮಗೆ ಸಂಪರ್ಕ ಸೇತುವಾಗಿದ್ದು, ಪ್ರಪಂಚದ ಎಲ್ಲಾ ಜನರು ಇಲ್ಲಿಗೆ ಬರುತ್ತಾರೆ. ನಮ್ಮ ಭಾಷೆಯ ಬಗ್ಗೆ ವಿಮಾನ ನಿಲ್ದಾಣದಲ್ಲಿ ಸ್ವಲ್ಪ ಮಾಹಿತಿಯನ್ನು display ಮಾಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಎಂದು ಕೇಳಬಯಸುತ್ತೇನೆ.

ಆಯವ್ಯಯ ಎಂದರೆ ಕೇವಲ ಸರ್ಕಾರದ ಕಾರ್ಯಕ್ರಮಗಳನ್ನು ಘೋಷಿಸಿದರೆ ಸಾಲದು. ಪ್ರಕಟಿಸಲಾದ ಯೋಜನೆಗಳು ಎಷ್ಟು ಜಾರಿಯಾಗಿದೆ? ಅದರಿಂದ ಎಷ್ಟು ಜನರು ಪ್ರಯೋಜನ ಪಡೆದಿದ್ದಾರೆ ಎಂಬುದನ್ನು ಪ್ರಸ್ತಾಪಿಸಬೇಕು. ಆಯವ್ಯಯವನ್ನು ಸಿದ್ಧಪಡಿಸುವವರು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಐ.ಎ.ಎಸ್.ಅಧಿಕಾರಿಗಳು. ತಾಲ್ಲೂಕು ಕಛೇರಿಯ ತಹಶೀಲ್ದಾರ್, ಪಿ.ಡಿ.ಓ, ಜಿಲ್ಲಾಧಿಕಾರಿಗಳು ಈ ರೀತಿ ಸ್ಥಳೀಯರನ್ನು ತೆಗೆದುಕೊಳ್ಳಬೇಕು. ಇಲ್ಲಿ ಎ.ಸಿ.ಕೊಠಡಿಯಲ್ಲಿ ಕುಳಿತು ಮಾತನಾಡುವವರು ಕೋಲಾರ ಜಿಲ್ಲೆಗೆ ರೂ.100 ಕೋಟಿ ಎಂದು ಹೇಳುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಎಲ್ಲಿ, ಯಾವುದಕ್ಕೆ ಹಣ ನೀಡಲಾಗಿದೆ ಎಂಬುದು ಅವರಿಗೆ ತಿಳಿದೇ ಇರುವುದಿಲ್ಲ. ಆದ್ದರಿಂದ ಕೆಳಮಟ್ಟದ ಅಧಿಕಾರಿ/ಸಿಬ್ಬಂದಿಯನ್ನು ನಂಬಿಕೆಗೆ ತೆಗೆದುಕೊಳ್ಳಬೇಕು. ಇಲ್ಲಿ ಕುಳಿತುಕೊಂಡವರ ಮಾತು ಕೇಳಿ ಆಯವ್ಯಯ ಮಾಡಿ ಅದು ಜನಕ್ಕೆ ಮುಟ್ಟದ ರೀತಿಯಲ್ಲಿ ಮಾಡಬಾರದು.

ಸರ್ಕಾರದ ಹೆಸರಿನಲ್ಲಿ ಅಭಿವೃದ್ಧಿ ಎಂದರೇನು? ಕೇವಲ ಧಾರ್ಮಿಕ ಕಟ್ಟಡಗಳನ್ನು ಕಟ್ಟುವುದು, ಪ್ರತಿಮೆಗಳನ್ನು ಸ್ಥಾಪಿಸುವುದು, ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವುದೇ? ಅಭಿವೃದ್ಧಿ ಎಂದರೆ ಕೇವಲ ಮಸೂದೆ ಮಂಡಿಸುವುದು, ವಿರೋಧಪಕ್ಷದವರು ಲೆಕ್ಕಕ್ಕಿಲ್ಲವೆಂದು ಸರ್ಕಾರ ಪಾಸ್ ಮಾಡಿಕೊಳ್ಳುವುದೇ? ಅಭಿವೃದ್ಧಿ ಎಂದರೆ ರ್‍ಯಾಲಿ ಮಾಡುವುದು, ಭಾಷಣ ಮಾಡುವುದು, ವಿರೋಧಪಕ್ಷದವರನ್ನು ದೇಶದ್ರೋಹಿಗಳೆಂದು ಹೇಳುವುದೇ? ಇವುಗಳೆಲ್ಲವನ್ನು ಬಿಟ್ಟು ಜನಪರವಾಗಿ ಏನಾದರೂ ಕೆಲಸ ಮಾಡಬೇಕು. ಅಭಿವೃದ್ಧಿ ನಿಗಮದ ಬಗ್ಗೆ ನಾನಾಗಲೇ ಹೇಳಿದ್ದೇನೆ. ಈಗ ಇನ್ನೊಮ್ಮೆ, ಮತ್ತೊಮ್ಮೆ ಹೇಳುತ್ತೇನೆ. ಸರ್ಕಾರ ಜಾತಿ ಪರ ಯೋಜನೆಗಳನ್ನು ಮಾಡುವುದನ್ನು ಬಿಟ್ಟು ಜನಪರವಾದಂತಹ ಯೋಜನೆಗಳನ್ನು ಮಾಡಬೇಕು. ನಮ್ಮ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳನ್ನು ಸಮೀಕ್ಷೆ ಮಾಡಿಸಬೇಕು. ಇಲ್ಲಿರುವ ಬೇಡಿಕೆಗಳೇನು ಎಂಬುದನ್ನು ಸರ್ಕಾರ ತಿಳಿದು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

ಆಯವ್ಯಯ ಎನ್ನುವುದನ್ನು ಪುಸ್ತಕ ರೂಪದಲ್ಲಿ ಮುದ್ರಿಸಿರುವುದು ಚೆನ್ನಾಗಿದೆ. ಹಿಂದೆ ನಾನು ಭಾಷಣ ಮಾಡುವಾಗಲೂ ಗೌರವಾನ್ವಿತ ರಾಜ್ಯಪಾಲರಿಂದ ಸರ್ಕಾರ ಸುಳ್ಳು ಹೇಳಿಸಿದೆ ಎಂಬುದನ್ನು ನಾನು ಹೇಳಿದ್ದೆನು. ಈಗ ಅದು ಅನುಮೋದನೆಗೊಂಡಿದೆ. ಅದರಲ್ಲಿರುವುದಕ್ಕೂ ಆಯವ್ಯಯದಲ್ಲಿರುವುದಕ್ಕೂ ಒಂದಕ್ಕೊಂದು ಏನೂ ಸಂಬಂಧವೇ ಇರುವುದಿಲ್ಲ. ಆದ್ದರಿಂದ ಮುಂಬರುವ ದಿನಗಳಲ್ಲಿ supplementary Budget ಅಥವಾ ಯಾವ ರೂಪವನ್ನು ಕೊಡಬೇಕೋ ಅದನ್ನು ಕೊಟ್ಟು ಇವುಗಳಿಗೆ ಚಾಲನೆಯನ್ನು ನೀಡಬೇಕು. ನಾವು ಹೇಳಿರುವ ವಿಷಯಗಳಿಂದ ಸರ್ಕಾರಕ್ಕೆ ಬೇಜಾರಾಗಿರಬಹುದು. ನಾನು ಬೇಡದಿರುವ ವಿಚಾರವನ್ನು ಯಾವುದನ್ನೂ ಪ್ರಸ್ತಾಪ ಮಾಡಿರುವುದಿಲ್ಲ. ಸರ್ಕಾರಕ್ಕೆ ಒಳ್ಳೆಯ ಹೆಸರು ಬರಲಿ ಎಂದು ಹೇಳಿದ್ದೇವೆ. ಅದನ್ನು ಉಳಿಸಿಕೊಳ್ಳುವುದು, ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಅನುತ್ಪಾದಕ ವೆಚ್ಚಗಳನ್ನು ಕಡಿತಗೊಳಿಸಿ, ಉತ್ಪಾದನೆಗೆ ಹೆಚ್ಚಿನ ಒತ್ತನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕು. ಸಾಮಾಜಿಕ ನ್ಯಾಯವನ್ನು ಸರಿಪಡಿಸುವ ಸಲುವಾಗಿ ಸಮರ್ಥವಾದ ಕಾನೂನು ಬೇಕು. Corruption, ಸಿ.ಡಿ.ಗಳು ಎಲ್ಲವನ್ನೂ ನಿಲ್ಲುವಂತೆ ಮಾಡಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವಂತೆ ಎಲ್ಲಾ ಸಚಿವರು ಮಾಡಬೇಕು.

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಏನಾದರೂ ವಿಶೇಷ ಯೋಜನೆಯನ್ನು ಕೊಡಬೇಕು. 2013–14ರಲ್ಲಿಯೂ ರೂ.1500 ಕೋಟಿ. ಇಂದು ಕೂಡ ರೂ.1500 ಕೋಟಿ. ಅಂದಿನ ರೂ.1500 ಕೋಟಿಗೆ ಇದ್ದ ಮೌಲ್ಯವೇನು? ಇಂದಿನ ರೂ.1500 ಕೋಟಿಗೆ ಇರುವ ಮೌಲ್ಯವೇನು? ಆ ಭಾಗದವರು ಯಾರೂ ಕೇಳುವುದಿಲ್ಲ. ಅದು ಒಂದು ರೀತಿಯಲ್ಲಿ ಸರ್ಕಾರಕ್ಕೆ ಅನುಕೂಲವಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ವೆಂಕಟೇಶ್ ಅವರೇ, ಮುಕ್ತಾಯಗೊಳಿಸಿಬಿಡಿ. ಎಲ್ಲಾ ವಿಚಾರಗಳನ್ನು ಮಾತನಾಡಿದ್ದೀರಿ. ಇನ್ನೇನು ಬಾಕಿ ಉಳಿದಿಲ್ಲ.

**ಶ್ರೀ ಯು.ಬಿ.ವೆಂಕಟೇಶ್:–** ಆಗಲಿ ಮಾನ್ಯ ಸಭಾಪತಿಯವರೇ, ತಮ್ಮ ಮಾತಿನಂತೆ ಮುಗಿಸಿಬಿಡುತ್ತೇನೆ. ಬೆಂಗಳೂರು ಅಭಿವೃದ್ಧಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ಮುಗಿಸುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿ.ಬಿ.ಎಂ.ಪಿ., ಬೆಸ್ಕಾಂ, ಬಿಡಬ್ಲ್ಯೂಎಸ್ಎಸ್‌ಬಿ ಇವುಗಳ ನಡುವೆ ಸಮನ್ವಯತೆಯಿರುವುದಿಲ್ಲ. ನಮ್ಮ ಮನೆಯ ಮುಂದೆ ಒಂದು ಒಳ್ಳೆಯ ರೀತಿಯಲ್ಲಿ ರಸ್ತೆಯನ್ನು ಮಾಡುತ್ತಾರೆ. ಬಿಡಬ್ಲ್ಯೂಎಸ್ಎಸ್‌ಬಿ ಯವರು 15 ದಿನಗಳಲ್ಲಿ ಅಗೆಯುತ್ತಾರೆ. ಅವರು ಸರ್ಕಾರಕ್ಕೆ ರಸ್ತೆಯ ಹಣವನ್ನು ಕಟ್ಟಿದ್ದೇವೆಂದು ಅದನ್ನು ಮುಚ್ಚುವುದಿಲ್ಲ. ಅದು ಮುಗಿದ ಒಂದು ತಿಂಗಳಿಗೆ ಬಿ.ಡಿ.ಎ. ಅವರು pavement ಮಾಡುತ್ತೇವೆಂದು ಬರುತ್ತಾರೆ. ಇದಕ್ಕೆಲ್ಲಾ ಒಂದು ಸಮನ್ವಯ ಸಮಿತಿಯಿರಬೇಕು. ರಸ್ತೆಯನ್ನು ಮಾಡಿದರೆ ಇನ್ನೊಂದು ಐದು ವರ್ಷಗಳ ಕಾಲ ಅದರ ಕಡೆ ಬರಬಾರದು. ಬಿಬಿಎಂಪಿಯ ಬಿಲ್‌ಗಳನ್ನು ಪರಿಶೀಲಿಸಿದರೆ, ಯಾವ ಫುಟ್‌ಪಾತ್‌ಗಳು ನಿರ್ಮಾಣವಾಗಿರುತ್ತದೆಯೋ, ಅದೇ ಫುಟ್‌ಪಾತ್‌ನ ಕಾಮಗಾರಿ 10 ವರ್ಷಗಳಿಂದ ನಡೆಯುತ್ತಿರುತ್ತದೆ. 10 ವರ್ಷದಿಂದ ಒಂದೇ ರಸ್ತೆ, ಒಂದೇ ಫುಟ್‌ಪಾತ್. ಪ್ರತಿವರ್ಷ ಅದೇ ರಸ್ತೆಯ ಕೆಲಸ ನಡೆಯುತ್ತಿರುತ್ತದೆ. ಹೀಗೆ ಸರ್ಕಾರದ ಬೊಕ್ಕಸದ ದುಡ್ಡು ಇಷ್ಟು ಅನ್ಯಾಯವಾದರೆ ಹೇಗೆ? ಯಾವುದಾದರೊಂದು ಶಾಶ್ವತವಾದ ಕೆಲಸವನ್ನು ಮಾಡಬೇಕು. ಕೇವಲ ಗುತ್ತಿಗೆದಾರರು ಹಣ ಮಾಡಿಕೊಳ್ಳುವುದು ಎಂದರೆ ಅದು ಸರಿಯಾಗುವುದಿಲ್ಲ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಕಾಲದಿಂದಲೂ ಇಲ್ಲಿ ಕುಲಕಸುಬನ್ನು ಮಾಡುವವರು ಇದ್ದಾರೆ. ಆಚಾರಿಗಳಾಗಿರಬಹುದು, ಕುಂಬಾರರಾಗಿರಬಹುದು. ಮಡಿಕೆಗಳನ್ನು ಮನೆಯಲ್ಲಿ ಮಾಡುತ್ತಿದ್ದರು. ಬಂಗಾರದ ಕೆಲಸವನ್ನು ಮನೆಗಳಲ್ಲಿ ಮಾಡುತ್ತಿದ್ದರು. ಈ ರೀತಿ ಸಣ್ಣ ಸಣ್ಣ ಕಸುಬುದಾರರಿದ್ದಾರೆ. ಅವರನ್ನು ಯಾರೂ ಕೇಳುವವರಿಲ್ಲ. ಈ ಐ.ಟಿ. ಯುಗದಲ್ಲಿ ನೇಕಾರರು ಮಗ್ಗಗಳನ್ನು ಮಾರಿಕೊಂಡರು. ಬಂಗಾರದ ಅಂಗಡಿಗಳು ಹೋಗಿ ದೊಡ್ಡ ದೊಡ್ಡ ಮಳಿಗೆಗಳು ಪ್ರಾರಂಭವಾದವು. ಈಗ ಅವರಿಗೆ ಯಾರಿಗೂ ನೆಲೆಯಿಲ್ಲ. Vision 2022 ನ ಅಡಿಯಲ್ಲಿ ಬೆಂಗಳೂರಿನಲ್ಲಿ ಬದುಕು ಕಟ್ಟಿಕೊಳ್ಳುವವರಿಗೆ ಸಹಾಯವಾಗಬೇಕೆಂಬುದು ನನ್ನ ಮನವಿ.

ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಮುಂಗಡಪತ್ರವು ಸರ್ಕಾರದ ಅಭಿವೃದ್ಧಿಯ ಮುನ್ನೋಟವನ್ನು ಪ್ರಸ್ತುತ ಪಡಿಸುತ್ತದೆ ಎಂದು ಹೇಳುತ್ತಾರೆ. ಆದರೆ ಅಭಿವೃದ್ಧಿ ಎಲ್ಲಿ ಆಗುತ್ತಿದೆ ಎಂಬುದನ್ನು ಅವರೇ ಹುಡುಕಿ ಹೇಳಬೇಕು. ಹೋದ ವರ್ಷದ ಆಯವ್ಯಯದಲ್ಲಿ ಎಷ್ಟು ಖರ್ಚು ಮಾಡಲಾಯಿತು? ಯಾವ ಯೋಜನೆಗಳು ರೂಪುಗೊಂಡಿವೆ? ಎಷ್ಟು ಜನರ ಬದುಕು ಹಸನಾಯಿತು? ಎಂಬುದನ್ನು ಸ್ವಲ್ಪ ವಿಸ್ತೃತವಾಗಿ ತಿಳಿಸಿಕೊಡಬೇಕು.

ಜಿಲ್ಲೆಗೊಂದರಂತೆ ಗೋಶಾಲೆ – ಒಳ್ಳೆಯ ವಿಧೇಯಕವನ್ನು ತಂದರು. ನಮ್ಮ ಗಲಾಟೆಯ ನಡುವೆ ವಿಧೇಯಕವನ್ನು ಪಾಸ್ ಮಾಡಿಕೊಂಡರು. ಒಳ್ಳೆಯದೇ ಆಯಿತು. ಆದರೆ ಜಿಲ್ಲೆಗೊಂದು ಗೋಶಾಲೆ ಎಂಬುದು ಹೇಗೆ ಸಾಕಾಗುತ್ತದೆ? ತಾಲ್ಲೂಕಿಗೆ ಒಂದು ಗೋಶಾಲೆಯನ್ನಾದರೂ ಮಾಡಬೇಕಲ್ಲವೆ? ಈಗ ಕೋಲಾರ ಜಿಲ್ಲೆಯೊಂದರಲ್ಲಿಯೇ ಎರಡು ಲಕ್ಷ ಗಂಡು ಕರುಗಳು ಇವೆ ಎನ್ನುವ ಮಾಹಿತಿಯಿದೆ. ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಣೆ ಮಾಡಿದರೆ arrest ಮಾಡುತ್ತಾರೆ.

ಧಾರವಾಡ ನಗರದಲ್ಲಿರುವ ಡಿಮ್ಹಾನ್ಸ್‌ಗೆ ರೂ.75 ಕೋಟಿ ಬೇಕು. ರೂ. 10 ಕೋಟಿಗಳನ್ನು ಮಂಜೂರು ಮಾಡಲಾಗಿದೆ.

**(ಮುಂದು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(387) 15.03.2021, 3.40. KG.GR**

**ಶ್ರೀ ಯು.ಬಿ.ವೆಂಕಟೇಶ್(ಮುಂದು):-**

ಅಂದರೆ, ಅದು ಅಭಿವೃದ್ಧಿಯಾಗಬೇಕಾದರೆ ಇನ್ನೂ ಹತ್ತು ವರ್ಷಗಳು ಬೇಕೇ? ಇನ್ನು ಹತ್ತು ವರ್ಷಗಳಿಗೆ ಇದರ rate escalation ಆಗಿ ಮತ್ತೆ 75 ಕೋಟಿ ರೂಪಾಯಿಗಳು ಆಗಿರುತ್ತದೆ. ಯಾವುದಾದರೊಂದು ಯೋಜನೆಯನ್ನು ಮಾಡಿದರೆ ಸುಮಾರು ಒಂದು ವರ್ಷ ಅಥವಾ ಎರಡು ವರ್ಷಗಳಲ್ಲಿ ಮುಗಿಸಬೇಕು. ಇಲ್ಲವೆಂದರೆ, ಅವರ ಸರ್ಕಾರದ ಅವಧಿಯ ಒಳಗಡೆಯಾದರೂ ಸಹ ಮುಗಿಸಿಹೋಗಬೇಕು. ಸುಮ್ಮನೆ ಘೋಷಣೆ ಮಾಡಿಹೋಗುವುದಲ್ಲ. ಚಿತ್ರದುರ್ಗದಲ್ಲಿ ಮೆಡಿಕಲ್ ಕಾಲೇಜು ಘೋಷಣೆಯಾಗಿದೆ. ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಮೆಡಿಕಲ್ ಕಾಲೇಜುಗಳು ಇರಬೇಕು. ಅದು ಆಗಿದ್ದಲ್ಲಿ ಸ್ವಾಗತರ್ಹ. ಆದರೆ, ಇರುವಂತಹ ಮೆಡಿಕಲ್ ಕಾಲೇಜುಗಳಲ್ಲಿ ಏನೇನು ಸೌಲಭ್ಯಗಳಿವೆ, ಏನೇನು ಸೌಲಭ್ಯಗಳಿಲ್ಲ. ಎಷ್ಟು ಜನ ವೈದ್ಯರಿಲ್ಲ ಎನ್ನುವುದರ ಬಗ್ಗೆ ಯಾರು ಚಿಂತನೆ ಮಾಡುತ್ತಿದ್ದಾರೆ? ಬರೀ ಘೋಷಣೆ ಮಾಡಿದರೆ ಆಯಿತಾ? ಸುಮಾರು ಕಡೆಗಳಲ್ಲಿ ವೈದ್ಯರಿಲ್ಲ. I.C.U., ನಲ್ಲಿ ವೈದ್ಯರಿಲ್ಲ. ನಾನು ಈ ವಿಷಯವನ್ನು ಕಳೆದ ಬಾರಿಯೂ ಸಹ ಸದನದಲ್ಲಿ ಹೇಳಿದ್ದೇನೆ. ಒಳ್ಳೆಯ ಗುಣಮಟ್ಟದ ಯಂತ್ರೋಪಕರಣಗಳು ಎಲ್ಲಾ ಆಸ್ಪತ್ರೆಗಳಲ್ಲಿವೆ. ಅವುಗಳನ್ನು operate ಮಾಡುವಂತಹ ಸಿಬ್ಬಂದಿಯೇ ಇಲ್ಲ ಏಕೆ? ಅದಕ್ಕೆ ಆರ್ಥಿಕ ಇಲಾಖೆ ಅಡ್ಡ ಇದೆ. ಈ ಸರ್ಕಾರಕ್ಕೆ ಮತ್ತು ಆರ್ಥಿಕ ಇಲಾಖೆಗೆ ಏನು ಸಂಬಂಧವಿದೆ ಎಂದು ನಮಗೆ ಗೊತ್ತಿಲ್ಲ. ಅವರೇ ಇದನ್ನು ಹೇಳಬೇಕು. ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದ ಜನರ ಆಸೆಯಂತೆ ಬೆಳಗಾವಿಯಲ್ಲಿ ಸುವರ್ಣಸೌಧ ಕಟ್ಟಲಾಗಿದೆ. ಅಷ್ಟೊಂದು ಹಣ ಖರ್ಚು ಮಾಡಿ ಸುವರ್ಣಸೌಧವನ್ನು ಕಟ್ಟಲಾಗಿದೆ. ಆದರೆ, ಆ ಕಟ್ಟಡ ಏತಕ್ಕೆ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮಗೆ ಇಲ್ಲಿಯವರೆಗೆ ಒಂದು ಗಂಟೆಯ ಕಾಲವಕಾಶವನ್ನು ನೀಡಲಾಗಿದೆ. ತಾವು ಬೇಗ ಮಾತನಾಡಿಸಿ ಮುಗಿಸಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇನ್ನು ಐದು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ಇಲ್ಲಿ ಯಾವ ರೀತಿ ವಿಧಾನಸೌಧವನ್ನು ಕಟ್ಟಿಸಿದ್ದಾರೋ, ಅದೇ ಪ್ರತಿರೂಪದಲ್ಲಿ ಅಲ್ಲಿ ಸುವರ್ಣಸೌಧವನ್ನು ಕಟ್ಟಲಾಗಿದೆ. ಸುವರ್ಣಸೌಧವನ್ನು ಏತಕ್ಕೆ ಕಟ್ಟಿದ್ದೇವೆ? ಅಲ್ಲಿ ಅಧಿವೇಶನವನ್ನು ನಡೆಸುವುದಿಲ್ಲ. ಅಲ್ಲಿಗೆ ಹೋದರೆ ಜನರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಡೆಯುತ್ತಾರೆಂದು ಭಯ ಇದೆ. ಇಲ್ಲಿ ಮಾಡುವ ಬದಲು ಸುವರ್ಣಸೌಧದಲ್ಲಿ ಅಧಿವೇಶನವನ್ನು ಮಾಡಿ. ಅರ್ಧ ಅಧಿವೇಶವನ್ನು ಇಲ್ಲಿ ಮಾಡಿ. ಉಳಿದ ಅರ್ಧ ಅಧಿವೇಶನವನ್ನು ಅಲ್ಲಿ ಮಾಡಿ. ಏನಾಗುತ್ತದೆಂದು ನೋಡೋಣ. ಯಾರಾದರೂ ಬಂದರೆ, ನಾವು ಅವರ ಜೊತೆಗೆ ಇರುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಿರಿಯರಿದ್ದಾರೆ. ಯಾವುದಾದರೊಂದು ಸರ್ಕಾರ ಭಯಗೊಂಡು ಒಂದು ಅಧಿವೇಶನವನ್ನು ಬೇರೆ ಕಡೆ ಮಾಡುತ್ತದೆಯೇ? ತಾವೇ ನೋಡಿ. ಅವರ ಮೊದಲಿನ ಮುಖ್ಯಮಂತ್ರಿಯವರು, ಅದರ ಮೊದಲು ಇದ್ದಂತಹವರು, ಎಲ್ಲಾ ಪಕ್ಷಗಳ ಮುಖ್ಯಮಂತ್ರಿಯವರು ಇದ್ದಾಗಲೂ ಸಹ, ಸಾಂದರ್ಭಿಕವಾಗಿ ಅಗತ್ಯವಿದ್ದರೆ ಅಲ್ಲಿ ಮಾಡಿದ್ದಾರೆ. ಒಂದೆರಡು ಬಾರಿ ಅಲ್ಲಿ ಮಾಡುವಂತಹ ಪರಿಪಾಠ ಇದೆ. ಈ ಬಾರಿ ಅಲ್ಲಿ ಕೋವಿಡ್ ಕಾರಣಕ್ಕೆ ಮಾಡಿಲ್ಲ ಎನ್ನುವುದನ್ನು ಬಿಟ್ಟರೆ, ಒಂದು ರಾಜ್ಯ ಸರ್ಕಾರ, ಅದು ಯಾವುದೇ ಸರ್ಕಾರವಾಗಿರಲಿ, ಯಾವುದೇ ಪಕ್ಷವಾಗಿರಲಿ, ಹೆದರಿಕೆಯಿಂದ ಅಲ್ಲಿಗೆ ಅಧಿವೇಶನವನ್ನು ಮಾಡಲು ಹೋಗದಿರುವಂತಹ ಯಾವುದಾದರೂ ನಿರ್ದಶನ ಇದೆಯೇ? ಹಾಗಾಗಿ ಕಾರಣ, ಮಾನ್ಯ ಸದಸ್ಯರು ಅಂತಹ ವಿಷಯಗಳನ್ನು ಸದನದಲ್ಲಿ ಹೇಳಬಾರದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅವರು ಉತ್ತರ ಕೊಡುವಂತಹ ವೇಳೆಯಲ್ಲಿ ಹೇಳಿದ್ದರೆ, ಬಹಳ ಚೆನ್ನಾಗಿತ್ತು. ಆದರೂ ಸಹ, ಅವರಿಗೆ ನಾವು ಗೌರವ ಕೊಡುತ್ತೇವೆ. ಏಕೆಂದರೆ, ಅವರು ಬಹಳ ಹಿರಿಯರು. ಅವರಿಗೆ ಗೊತ್ತಿಲ್ಲದಿರುವಂತಹ ವಿಷಯ ಇಲ್ಲ. ಆದರೆ, ಅವರು ಹೆದರಿಕೊಂಡು ಎರಡು ಬಾರಿಯಿಂದ ಅಲ್ಲಿ ಅಧಿವೇಶನವನ್ನು ಮಾಡಿಲ್ಲ. ಒಂದು ಬಾರಿ ಕೋವಿಡ್ ಆಯಿತು. ಆಮೇಲೆ ಏನಾಯಿತು? ಕೋವಿಡ್ ಆದಮೇಲೆ ಇನ್ನೊಂದು ಬಾರಿ ಏನಾಯಿತು? ಏಕೆ ಅಲ್ಲಿ ಅಧಿವೇಶನವನ್ನು ಮಾಡಲಿಲ್ಲ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, flood ಬಂದಿತ್ತು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೌದು. Flood ಆಯಿತು. ಕೋವಿಡ್ ಆಯಿತು. ಸರ್ಕಾರ ಈಗಲೇ ಮುಂದಿನ ಬಾರಿಗೆ ಏನೆಂದು ಹೇಳಿಬಿಡಲಿ. ಅವರು ಎಲ್ಲಿಯವರೆಗೆ ರೈತರನ್ನು ಎದುರು ಹಾಕಿಕೊಳ್ಳುತ್ತಾರೆಯೋ ಅಲ್ಲಿಯವರೆಗೆ ಅವರಿಗೆ ಒಳ್ಳೆಯದು ಆಗುವುದಿಲ್ಲ. ಅವರು ರೈತರನ್ನು ಎದುರು ಹಾಕಿಕೊಂಡಿದ್ದಾರೆ. ಅಲ್ಲಿ ಅಧಿವೇಶನ ಮಾಡಲಿ ಅವರ ಸಹಾಯಕ್ಕೆ ನಾವು ಇರುತ್ತೇವೆ. ಸರ್ಕಾರ ಎಂದರೆ, ಅವರೊಬ್ಬರೇನಾ? ನಾವು ಅವರ ಜೊತೆಗೆ ಇರುತ್ತೇವೆ. ಕಷ್ಟಸುಖ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಂದಾಗ ನಾವು ಅವರ ಜೊತೆಯಲ್ಲಿ ಇರುತ್ತೇವೆ. ಅಷ್ಟು ದೊಡ್ಡ ಕಟ್ಟಡವನ್ನು ಅಲ್ಲಿ ಕಟ್ಟಿ ಅಧಿವೇಶನ ಮಾಡಲಿಲ್ಲವೆಂದರೆ ಹೇಗೆ? ಮಹಾರಾಷ್ಟ್ರದವರು ಅಲ್ಲಿಗೆ ಬರಬೇಕೆಂದು ಇದ್ದಾರೆ. ಅದರ ಬಗ್ಗೆ ಯಾರಾದರೂ ಯೋಚನೆ ಮಾಡುತ್ತಿದ್ದಾರೆಯೇ? ಇಲ್ಲಿ ಮಾಡುವ ಬದಲು ಅಲ್ಲಿ ಎರಡೆರಡು ಅಧಿವೇಶನಗಳನ್ನು ಮಾಡಿ.

ಮಾನ್ಯ ಸಭಾಪತಿಯವರೇ, 10 ಇಲಾಖೆಗಳನ್ನು ಅಲ್ಲಿಗೆ ವರ್ಗಾವಣೆ ಮಾಡುತ್ತೇವೆ, 20 ಅಧಿಕಾರಿಗಳು ಅಲ್ಲಿಗೆ ಹೋಗುತ್ತಾರೆಂದು ಹೇಳಿದ್ದರು. ಅಲ್ಲಿ ತಾಲ್ಲೂಕ್ ಮಟ್ಟದ ಅಧಿಕಾರಿಗಳು ಇದ್ದಾರೆ. ಇದನ್ನು ಹೇಳುವುದಕ್ಕೆ ಬಹಳ ನಾಚಿಕೆಯಾಗುತ್ತದೆ. ಅಂತಹ ಸುವರ್ಣಸೌಧವನ್ನು ಅಲ್ಲಿ ಕಟ್ಟಿ ಅಲ್ಲಿಗೆ ಒಬ್ಬ ಐ.ಎ.ಎಸ್., ಅಧಿಕಾರಿಯನ್ನು ಹಾಕುವ ಬದಲಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಹಾಕಿದ್ದಾರೆ. ಹಾಗಾದರೆ, ಸುವರ್ಣಸೌಧಕ್ಕೆ ಗೌರವ ಇಲ್ಲವೇ? ಈ ಸರ್ಕಾರಕ್ಕೆ ಏನಾಗಿದೆ? ಮಾನ್ಯ ಮುಖ್ಯ ಮಂತ್ರಿಯವರು ಒಂದು ದಿವಸ ಸುವರ್ಣಸೌಧಕ್ಕೆ 20 ಇಲಾಖೆಗಳನ್ನು ವರ್ಗಾಯಿಸುತ್ತೇವೆಂದು ಹೇಳಿದ್ದರು. ಅದೇರೀತಿ ಮಾನ್ಯ ಸಚಿವರಾದಂತಹ ಕೆ.ಎಸ್.ಈಶ್ವರಪ್ಪನವರು ಇಂತಿಂಥ ಇಲಾಖೆಗಳನ್ನು ವರ್ಗಾಯಿಸುತ್ತೇವೆಂದು ಹೇಳಿದ್ದರು. ಆದರೆ, ಎಲ್ಲಿ ವರ್ಗಾಯಿಸಿದ್ದಾರೆ? ಯಾವುದು ಬದಲಾಗುವುದಿಲ್ಲ. ಅವರಿಗೆ ಯಾವುದು ಬೇಕೋ ಅದನ್ನು ಬದಲಾಯಿಸಿಕೊಂಡಿದ್ದಾರೆ. ರಾಯಚೂರಿಗೆ IIT ಇತ್ತು. ಅದನ್ನು ತೆಗೆದು ಹುಬ್ಬಳ್ಳಿಗೆ ಹಾಕಿಕೊಂಡರು. ಕಲಬುರ್ಗಿಗೆ ಒಂದು ಆಸ್ಪತ್ರೆ ಮತ್ತು ಪಾರ್ಕ್ ಇತ್ತು. ಅದನ್ನು ತೆಗೆದು ಬೇರೆ ಕಡೆಗೆ ಹಾಕಿಕೊಂಡರು. ಅವರಿಗೆ ಏನೋ ಬೇಕೋ ಅದನ್ನು ಹಾಕಿಕೊಳ್ಳುತ್ತಾರೆಯೋ ಹೊರತು, ಜನರಿಗೆ ಬೇಕಾಗಿದ್ದನ್ನು ಮಾಡುವುದಿಲ್ಲ. ಏನಾದರೂ ಕೇಳಿದರೆ, ಕೋವಿಡ್ ಎಂದು ಹೇಳುತ್ತಾರೆ. ಹಾಗಾದರೆ, ಜನರು ಕೋವಿಡ್ ಬಿಟ್ಟು ಬೇರೆ ರೋಗದಿಂದ ಸಾಯುವುದಿಲ್ಲವೇ? ನಾನು ಕಳೆದ ಬಾರಿ ಬಿ.ಬಿ.ಎಂ.ಪಿ., ಯಲ್ಲಿ ಮರಣ ಪ್ರಮಾಣದ ದಾಖಲೆಗಳನ್ನು ಕೇಳಿದ್ದೆ. ಆದರೆ, ಅಲ್ಲಿ ಅದರ ದಾಖಲೆಗಳೆ ಇಲ್ಲ. Between, June and March ಸುಮಾರು 30 ಸಾವಿರ ಜನರು ಸತ್ತಿದ್ದರು. ಆದರೆ, ಅದರ ದಾಖಲೆಗಳು ಇರಲಿಲ್ಲ. ಹಾಗಾದರೆ, ಎಲ್ಲರೂ ಕೋವಿಡ್‌ನಿಂದಲೇ ಸಾಯುತ್ತಿದ್ದಾರೆಯೇ? ಬೇರೆ ಕಾಯಿಲೆಯಿಂದ ಯಾರೂ ಸಾಯುತ್ತಿಲ್ಲವೇ? ಈಗ vaccine ಬಂದಿದೆ. ಅದು ಫೈನ್.

ಮಾನ್ಯ ಸಭಾಪತಿಯವರೇ, ಬೆಳಗಾಂನಲ್ಲಿ ಸುವರ್ಣಸೌಧವನ್ನು ಏತಕ್ಕೆ ಕಟ್ಟಿದ್ದಾರೆ? ನಾವು ಅಲ್ಲಿ ಅಧಿವೇಶನವನ್ನು ನಡೆಸುವುದಿಲ್ಲ, ಅದನ್ನು ಬಾಡಿಗೆಗೆ ಕೊಟ್ಟುಬಿಡೋಣಾ, ಅದು ಒಂದು heritage building ಎಂದು ಹೇಳಿಬಿಡಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಕೇಳಿದ್ದ ಐದು ನಿಮಿಷಗಳ ಸಮಯವು ಇಲ್ಲಿಗೆ ಮುಗಿಯಿತು. ಈಗ ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಕೊನೆಯದಾಗಿ ಒಂದು ವಿಷಯವನ್ನು ಹೇಳಿ ಮುಗಿಸುತ್ತೇನೆ.

**ಸಭಾಪತಿಯವರು:-** ಆಯಿತು. ಇನ್ನೂ ಎರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರೇ, ತಮ್ಮ ಅಧಿಕಾರ ನೋಡಿದರೆ ಕೈಗನ್ನಡಿಯಂತೆ ಇರಬೇಕು. ನೋಡಿದರೆ ಕಾಣುವಂತಿರಬೇಕು. ಆದರೆ, ಮಾನ್ಯ ಸದಸ್ಯರಾದ ಶ್ರೀ ವಿಶ್ವನಾಥ್‌ರವರು ಹೇಳಿದಂತೆ, ಸದಾ ಸುಂದರಿಯರ ಬೇಕಾದಷ್ಟು ಪ್ರೇತಾತ್ಮಗಳು ಇಲ್ಲಿ ಸುತ್ತುತ್ತಿರುವಾಗ, ಅವರು ಇನ್ನಷ್ಟು ಜನರನ್ನು ಸೇರಿಸಿಕೊಳ್ಳಬಾರದು. ಅಂತಹದ ತಪ್ಪುಗಳು ಆಗಬಾರದು. ಇನ್ನು ಮಾತನಾಡುವಂತಹ ಬೇಕಾದಷ್ಟು ವಿಷಯಗಳು ಇದ್ದವು. ಆದರೆ, ಸಮಯದ ಅಭಾವದಿಂದ ಮುಗಿಸುತ್ತಿದ್ದೇನೆ. ಹಾಗಾಗಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇರಲಿ. ತಾವು ತುಂಬ ಚೆನ್ನಾಗಿ ಮಾತನಾಡಿದ್ದೀರಿ. ತಿಪ್ಪೇಸ್ವಾಮಿಯವರೇ, ತಾವೀಗ ಮಾತನಾಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಮಂಡಿಸಿರುವಂತಹ ಕರ್ನಾಟಕ ಸರ್ಕಾರದ 2021-22ನೇ ಸಾಲಿನ ಮುಂಗಡ ಪತ್ರದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದಕ್ಕಾಗಿ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಭಾರತದ ಹಣಕಾಸು ಸಚಿವರು "ಆತ್ಮನಿರ್ಭರ ಭಾರತ ಅಭಿಯಾನ"ದಡಿಯಲ್ಲಿ ಐದು ಹಂತಗಳಲ್ಲಿ ಘೋಷಿಸಿರುವಂತಹ ಉತ್ತೇಜಕ ಮತ್ತು ಪ್ರೇರಕ ಪ್ಯಾಕೇಜುಗಳ ಒಟ್ಟು ಮೌಲ್ಯ ರೂ.20,97,053/- ಕೋಟಿಗಳು. ಆತ್ಮನಿರ್ಭರ ಭಾರತ ಅಭಿಯಾನದಡಿಯಲ್ಲಿ ವಿಶೇಷಿಸಿರುವ ಕಾರ್ಯಕ್ರಮಗಳಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ, ಕೆಲವೊಂದು ಕಾರ್ಯಕ್ರಮಗಳನ್ನು ಜಾರಿಗೊಳಿಸಲು ನಮ್ಮ ರಾಜ್ಯ ಸರ್ಕಾರ ವಿಫಲವಾಗಿದೆ. ಈ ಅಭಿಯಾನದಡಿಯಲ್ಲಿ ಘೋಷಣೆಯಾಗಿರುವ ಕಾರ್ಯಕ್ರಮಗಳಲ್ಲಿ ಲಭ್ಯವಿರುವಂತಹ ಪರಿಹಾರ ಅಥವಾ ಅನುದಾನ ಪಡೆಯಲು ಮತ್ತು ಸುಲಲಲಿತವಾಗಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಟ್ಟದಲ್ಲಿ ರಾಜ್ಯ ಸರ್ಕಾರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಂಬಂಧಿಸಿದ ಇಲಾಖೆಗಳ ಕಾರ್ಯದರ್ಶಿಗಳು ಒಳಗೊಂಡಂತೆ ಮತ್ತು ಇಲಾಖೆಗಳ ಮುಖ್ಯಸ್ಥರು ಅಂದರೆ, Heads of the Department ಒಳಗೊಂಡಂತೆ ಒಂದು ಸಮಿತಿಯನ್ನು ರಚನೆ ಮಾಡಬೇಕಾಗಿತ್ತು. ಆ ರೀತಿಯಾದಂತಹ ಸಮಿತಿಯನ್ನು ರಚನೆ ಮಾಡುವ ಬಗ್ಗೆ ಇದುವರೆಗೂ ಸಹ ಸದನದಲ್ಲಿಯಾಗಲಿ ಅಥವಾ ಮುಖ್ಯಮಂತ್ರಿಯವರ ಹೇಳಿಕೆಯಲ್ಲಿಯಾಗಲಿ ಅಥವಾ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರ ಹೇಳಿಕೆಯಲ್ಲಿಯಾಗಲಿ ಬಂದಿಲ್ಲ.

ಮಾನ್ಯ ಸಭಾಪತಿಯವರೇ, ಇದಲ್ಲದೇ, ಈ ಸಂಬಂಧಿಸಿದ ಹೇಳಿಕೆಗಳಲ್ಲಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಆಯಾಯಾ ಇಲಾಖೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಡಿಯಲ್ಲಿ ಬರುವ ಫಲಾನುಭವಿಗಳಿಗೆ ದೊರಕಬಹುದಾದ ಪರಿಹಾರದ ಬಗ್ಗೆ ಮಾರ್ಗದರ್ಶನ ಮತ್ತು ನೆರವನ್ನು ನೀಡಬೇಕಾಗಿತ್ತು. ಉದಾಹರಣೆಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಮಹಾಮಾರಿ ಕರೋನಾ ಸೋಂಕು ಹರಡುವಿಕೆಯ ಹಿನ್ನೆಲೆಯಲ್ಲಿ ದೇಶದಲ್ಲಿ ವಿಧಿಸಿದಂತಹ ಲಾಕ್‌ಡೌನ್‌ನಿಂದ ಲಕ್ಷಾಂತರ ಕೈಗಾರಿಕೆಗಳು ಮುಚ್ಚಿಹೋಗಿವೆ. ಭಾರತ ಸರ್ಕಾರದ ಒಂದು ಸಮೀಕ್ಷೆಯ ಪ್ರಕಾರ, ದೇಶದಲ್ಲಿ 6.30 ಕೋಟಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿದ್ದು, ಅವುಗಳಲ್ಲಿ ಸುಮಾರು 12 ರಿಂದ 13 ಕೋಟಿ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಈ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳು, ನಮ್ಮ ದೇಶದ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳ ಬೆನ್ನೆಲುಬು ಆಗಿವೆ. ಇವು backbone ಆಗಿವೆ. ಇವುಗಳಿಂದ ಏನೆಲ್ಲಾ ಸರಬರಾಜು ಆಗುತ್ತದೆಯೋ, ಅದರ ಮೇಲೆಯೇ ಈ ಬೃಹತ್ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳು ಅವಲಂಬಿತವಾಗಿವೆ.

ಮಾನ್ಯ ಸಭಾಪತಿಯವರೇ. ಅಲ್ಲದೇ, ದೇಶದ ಜಿ.ಡಿ.ಪಿ., ಯಲ್ಲಿ ಶೇಕಡಾ 30% ರಷ್ಟು M.S.M.E., ನಿಂದ ಬರುತ್ತದೆ. ಕೇಂದ್ರದ M.S.M.E., ಮಾನ್ಯ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರ ಪ್ರಕಾರ ಆತ್ಮನಿರ್ಭರ ಭಾರತದಲ್ಲಿರುವ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ, M.S.M.E., ಗಳಿಂದ ಶೇಕಡಾ 50% ಜಿ.ಡಿ.ಪಿ., ಯು ವೃದ್ಧಿಯಾಗಬಹುದೆಂದು ಹೇಳಿದ್ದಾರೆ. ನಮ್ಮ ರಾಜ್ಯ ದೇಶದಲ್ಲಿಯೇ ಉತ್ತಮ ಕೈಗಾರಿಕಾ ಅಭಿವೃದ್ಧಿ ಹೊಂದಿದ ರಾಜ್ಯವೆಂದು ಹೆಸರುವಾಸಿಯಾಗಿದೆ. ನಮ್ಮ ರಾಜ್ಯದಲ್ಲಿ 7.6 ಲಕ್ಷ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಉದ್ಯಮಿಗಳಿದ್ದು ಇದರಲ್ಲಿ ಬೆಂಗಳೂರು ನಗರದಲ್ಲಿಯೇ 2.6 ಲಕ್ಷ ಉದ್ಯಮಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇವೆ. ಈ ಉದ್ಯಮಗಳಲ್ಲಿ ಸುಮಾರು 2.6 ಕೋಟಿ ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿರುವಂತಹ ಪೀಣ್ಯ ಕೈಗಾರಿಕಾ ವಲಯ, ಕೋಲಾರದ ಮಾಲೂರು ಕೈಗಾರಿಕಾ ವಲಯ, ಅದೇ ರೀತಿ ಬೆಳಗಾವಿ, ಹುಬ್ಬಳ್ಳಿ-ಧಾರವಾಡದಲ್ಲಿರುವಂತಹ ಕೈಗಾರಿಕಾ ವಲಯ, ದಕ್ಷಿಣ ಕನ್ನಡ ಮತ್ತು ಉಡುಪಿ ಕೈಗಾರಿಕಾ ವಲಯ, ಕೊಪ್ಪಳ ಕೈಗಾರಿಕಾ ವಲಯ, ಬಳ್ಳಾರಿ, ರಾಯಚೂರು ಕೈಗಾರಿಕಾ ವಲಯ, ಮೈಸೂರು, ಮಂಡ್ಯ ಕೈಗಾರಿಕಾ ವಲಯ, ಕಲಬುರಗಿ ಮತ್ತು ಬೀದರ್‌ನಲ್ಲಿರುವಂತಹ ಕೈಗಾರಿಕಾ ವಲಯ, ಇವು ನಮ್ಮ ರಾಜ್ಯದಲ್ಲಿ ಪ್ರಮುಖವಾಗಿರುವಂತಹ ಕೈಗಾರಿಕಾ ವಲಯಗಳು. ಇವೆಲ್ಲವು ಸುಮಾರು ದಶಕಗಳ ಹಿಂದೆಯೇ ಸ್ಥಾಪಿತವಾಗಿರುವಂತಹ ಕೈಗಾರಿಕಾ ವಲಯಗಳು. ಲಾಕ್‌ಡೌನ್ ಸಮಯದಲ್ಲಿ ರಾಜ್ಯದಲ್ಲಿ ಶೇಕಡಾ 30 ರಿಂದ 40 ರಷ್ಟು M.S.M.E., ಗಳು ಮುಚ್ಚಿಹೋಗಿವೆ. ಲಾಕ್‌ಡೌನ್ ತೆರವಾದ ನಂತರವು ಮುಚ್ಚಿಹೋದ ಉದ್ಯಮಗಳಲ್ಲಿ ಶೇಕಡಾ 10 ರಷ್ಟು ಪುನಃ ಪ್ರಾರಂಭವಾಗಲಿಲ್ಲ. ಹಾಗೆಯೇ ಮುಚ್ಚಿಹೋಗಿವೆ. ಈ ಸಣ್ಣ ಉದ್ಯಮಗಳಲ್ಲಿ ಬಹುತೇಕ ಚರ್ಮ, lubricant ಎಣ್ಣೆಗಳು, ಗಾಜು, ವಿದ್ಯುತ್ ಉಪಕರಣಗಳು, ಕಬ್ಬಿಣದ ವಸ್ತುಗಳು, ಬಣ್ಣ ತಯಾರಿಕೆ ಮತ್ತು ಸಿದ್ಧಪಡಿಸಿದ ಉಡುಪುಗಳು ಮತ್ತು ಮುಂತಾದವುಗಳನ್ನು ತಯಾರು ಮಾಡುತ್ತಾರೆ.

**(ಮುಂದು)**

**(388)15-03-2021(3-50)ಎಂವಿ-ಜಿಆರ್**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

'ಅತ್ಮನಿರ್ಭರ ಭಾರತ' ಅಭಿಯಾನದ ಅಡಿಯಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಪುನಶ್ಚೇತನಕ್ಕೆ 3,00.800/- ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಮಾನ್ಯ ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಖಾತೆಯನ್ನು ವಹಿಸಿಕೊಂಡ ಮೇಲೆ, ಇವುಗಳಿಗೆ ತುಂಬಾ ಒತ್ತನ್ನು ನೀಡಿದ್ದಾರೆ. ಅಂದರೆ, ಆರ್.ಬಿ.ಐ., ನಿಂದ ಅಥವಾ ಇಂಡಸ್ಟ್ರಿಯಲ್ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಳ್ಳುವುದಕ್ಕೆ. ಅವರು ಎಲ್ಲಾ ಕಡೆಗಳಿಂದ channelise ಮಾಡುತ್ತಿದ್ದಾರೆ. ಅದರಲ್ಲಿ ಪ್ರಮುಖವಾಗಿ collateral security ಸಲುವಾಗಿ 20 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. Subordinate Debt Scheme ಗೆ 200 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. Equity Share ಗೆ ತೊಡಗಿಸಲು, ಅಂದರೆ equity infusion ಗೆ 500 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಈಗ ಭಾರತ ಸರ್ಕಾರದವರು ಯಾವುದಾದರು ಒಂದು ಎಂ.ಎಸ್.ಎಂ.ಇ. ಇದ್ದರೆ, ಅದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ sector ನಲ್ಲಿ ಅಗತ್ಯವಿದೆ; ಅದು ತಯಾರು ಮಾಡುವಂತಹ ಪ್ರಾಡಕ್ಟ್‌ಗಳು ಎಂದರೆ, ಅದಕ್ಕೆ ಸರ್ಕಾರದವರೆ equity ಹಾಕುವಂಥದ್ದು. ಇನ್ನು ಕೆಲವು ಸಂದರ್ಭಗಳಲ್ಲಿ ಎಂ.ಎಸ್.ಎಂ.ಇ., ಗಳನ್ನು ಸ್ಟಾಕ್ ಮಾರ್ಕೆಟ್‌ನಲ್ಲಿ ಪಟ್ಟಿ ಮಾಡುವುದು. ಅದಕ್ಕೂ ಕೂಡ ಸಾಲ ಸೌಲಭ್ಯ ನೀಡಿ ಆರ್ಥಿಕ ನೆರವು ನೀಡುತ್ತಾರೆ. ಒಂದು ಅಂದಾಜಿನ ಪ್ರಕಾರ ರಾಜ್ಯದಲ್ಲಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಪುನಶ್ಚೇತನಕ್ಕೆ ಸುಮಾರು 25 ಸಾವಿರದಿಂದ 30 ಸಾವಿರ ಕೋಟಿ ರೂಪಾಯಿಗಳ ಪರಿಹಾರವನ್ನು ಪಡೆಯಬಹುದು ಎಂದು ಅಂದಾಜು ಮಾಡಲಾಗಿದೆ. ಅದು ನಮ್ಮಲ್ಲಿ ಇರತಕ್ಕಂಥದ್ದು. ಆದರೆ, ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 505ಕ್ಕೆ ದಿನಾಂಕ 05.02.2021ರಂದು ಮಾನ್ಯ ಸಣ್ಣ ಕೈಗಾರಿಕಾ ಸಚಿವರು ನೀಡಿರುವ ಉತ್ತರದಲ್ಲಿ 'ಇಲ್ಲಿಯವರೆಗೆ ಈ ಬಾಬ್ತಿನಲ್ಲಿ ಕೇವಲ ಐದು ಸಾವಿರ ಕೋಟಿ ರೂಪಾಯಿಗಳನ್ನು ಮಾತ್ರ ಪಡೆಯಲಾಗಿದೆ' ಎಂದು ಉತ್ತರಿಸಿದ್ದಾರೆ. ಸರ್ಕಾರ ಈ ವಲಯಕ್ಕೆ ಕನಿಷ್ಠ 10 ರಿಂದ 15 ಸಾವಿರ ಕೋಟಿ ರೂಪಾಯಿಗಳನ್ನು ನೀಡುವುದಕ್ಕೆ ಮುಂದಾಗಬೇಕಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಇಲಾಖೆಯಲ್ಲಿ ನೊಡಲ್ ಏಜೆನ್ಸಿ ಅಥವಾ ಬೇರೆ ಯಾವುದಾದರೂ ಒಂದು ಸಮಿತಿಯನ್ನು ಮಾಡಿ, ಅವರಿಗೆ guidance ಕೊಡುವಂಥದ್ದು, ಬ್ಯಾಂಕ್ ಸಾಲ ತೆಗೆದುಕೊಳ್ಳುವುದು ಅಥವಾ ಈಕ್ವಿಟಿಯನ್ನು ಯಾವ ರೀತಿ ಪಡೆಯಬೇಕು ಎನ್ನುವಂಥದ್ದಕ್ಕೆ guidance ಕೊಡಬೇಕಾಗಿತ್ತು. ಸರ್ಕಾರ ಇದನ್ನು ನೀಡುವುದರಲ್ಲಿ ವಿಫಲವಾಗಿದೆ ಎಂಬುದು ನನ್ನ ಭಾವನೆ.

ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದಲ್ಲಿ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿಯಲ್ಲಿ ಒಟ್ಟು 821 ಕೋಟಿ ರೂಪಾಯಿಗಳನ್ನು ಮತ್ತು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿಯಲ್ಲಿ 300 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷ ಮತ್ತು ಜನತಾದಳ ಪಕ್ಷದ ಮೈತ್ರಿ ಸರ್ಕಾರದ ನೇತೃತ್ವ ವಹಿಸಿದ್ದ ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಅವಧಿಯಲ್ಲಿ, ಸಹಕಾರ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ, ರಾಜ್ಯದ ರೈತರು ಪಡೆದ ಕೃಷಿ ಸಾಲದ ಮೊತ್ತ ಅಂದರೆ, ಸಹಕಾರ ಸಂಘಗಳಿಂದ ಸಾಲ ಮನ್ನಾ 6,859.50 ಕೋಟಿ ರೂಪಾಯಿಗಳು. ವಾಣಿಜ್ಯ ಬ್ಯಾಂಕುಗಳಿಂದ ಪಡೆದ ಸಾಲ ಮನ್ನಾ 2,992.00 ಕೋಟಿ ರೂಪಾಯಿಗಳು; ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ರೈತರ ಸಾಲ ಮನ್ನಾ ಮಾಡುವುದಕ್ಕೆ 2018-19ನೇ ಸಾಲಿನ ಬಜೆಟ್‌ನಲ್ಲೂ ಕೂಡ ಸುಮಾರು 23 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ರೈತರು ಮಾಡಿರುವಂತಹ ಸಹಕಾರ ಸಂಘಗಳ ಸಾಲವಾಗಬಹುದು ಅಥವಾ ವಾಣಿಜ್ಯ ಬ್ಯಾಂಕುಗಳಲ್ಲಿ ಮಾಡಿರುವಂತಹ ಸಾಲವಾಗಿರಬಹುದು. ಅಂದರೆ ಸುಮಾರು ಎರಡು ಲಕ್ಷದವರೆಗೆ ಸಾಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮನ್ನಾ ಮಾಡುವಂಥದ್ದು. ಇದುವರೆಗೆ ಒಟ್ಟು 25.50 ಲಕ್ಷ ರೈತರ ಸಾಲದ ಖಾತೆಯಲ್ಲಿದ್ದ 14,841.05 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಲಾಗಿದೆ. ಆದರೆ, ಈ ವಿಷಯವನ್ನು ಔದಾರ್ಯಕ್ಕಾದರೂ ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿಯಾಗಲಿ ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರುವಂತಹ ಮುಂಗಡ ಪತ್ರದಲ್ಲಾಗಲಿ ಪ್ರಸ್ತಾಪಿಸಿಲ್ಲ.

ಇದಲ್ಲದೆ, ಸುಮಾರು ಹತ್ತಾರು ತಾಂತ್ರಿಕ ಕಾರಣಗಳಿಂದಾಗಿ 1.67 ಲಕ್ಷ ರೈತರಿಗೆ ಇನ್ನೂ ಸಾಲ ಮನ್ನಾ ಸೌಲಭ್ಯ ದೊರೆತಿಲ್ಲ. ಬಹುತೇಕ ಇದಕ್ಕೆ ಕಾರಣಗಳೇನೆಂದರೆ, ರೈತರ ಆಧಾರ ಸಂಖ್ಯೆ ಮತ್ತು ರೇಷನ್ ಕಾರ್ಡ್‌ಗಳ ಲಭ್ಯತೆ ಇಲ್ಲದೆ ಇರುವಂಥದ್ದು ಮತ್ತು ಆರ್.ಟಿ.ಸಿ., ದೃಢೀಕರಣ ಪತ್ರವನ್ನು ನೀಡದೆ ಇರುವಂಥದ್ದು. ಈ ರೀತಿಯಾದ ಹಲವಾರು ಕಾರಣಗಳಿವೆ. ಇತ್ತೀಚೆಗೆ ಸಹಕಾರ ಇಲಾಖೆ ಅಂದಾಜು ಮಾಡಿರುವ ಪ್ರಕಾರ ಹಸಿರು ಪಟ್ಟಿಯಲ್ಲಿರುವಂತಹ ರೈತರು ಎಲ್ಲಾ ರೀತಿಯ ದಾಖಲಾತಿಗಳನ್ನು ನೀಡಿದ್ದಾರೆ. ಅವರು ಸಾಲ ಮನ್ನಾಕ್ಕೆ ಅರ್ಹರಾಗಿದ್ದಾರೆ. ಅವರ ಪೈಕಿ ಇರುವಂತಹ 57,229 ರೈತರಿಗೆ ಸುಮಾರು 295.04 ಕೋಟಿ ರೂಪಾಯಿಗಳು ಮತ್ತು ಇನ್ನುಳಿದಂತಹ, 40,000 ರೈತರಿಗೆ ಪಾವತಿಸಬೇಕಾದ ಸುಮಾರು 232 ಕೋಟಿ ರೂಪಾಯಿಗಳ ಅನುದಾನ, ಒಟ್ಟು ಸುಮಾರು 527.14 ಕೋಟಿ ರೂಪಾಯಿಗಳನ್ನು ಸರ್ಕಾರ ಇನ್ನು ಒದಗಿಸಬೇಕಾಗಿದೆ. ರಾಜ್ಯ ಸರ್ಕಾರ ಈ ವರ್ಷದ ಪೂರಕ ಬಜೆಟ್‌ನಲ್ಲಿ ಅಂದರೆ ಸಪ್ಲಿಮೆಂಟರಿ ಗ್ರಾಂಟ್ಸ್‌ನಲ್ಲಿಯಾಗಲಿ ಅಥವಾ 2021–22ನೇ ಸಾಲಿನಲ್ಲಿ ಮುಂದುವರೆದಂತಹ ಯೋಜನೆಯಾಗಿ ಇದಕ್ಕೆ ಅನುದಾನ ಕೊಡುವುದಕ್ಕೆ ಮುಂದಾಗುತ್ತದೆಯೇ? ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದಂತಹ ಉತ್ತರ ಅಥವಾ ವಿವರಣೆ ಬೇಕಾಗಿದೆ. ದಯಮಾಡಿ ತಾವು ಅದನ್ನು ದೊರಕಿಸಿಕೊಡಬೇಕು. ಅದೇ ರೀತಿ ಸಾಲ ಮನ್ನಾ ಮಾಡಲು ಉಳಿದಿರುವ ಮತ್ತು ಅರ್ಹರಿರುವ ರೈತರನ್ನು ಗುರುತಿಸಿ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿ ಅವರ ಸಾಲ ಮನ್ನಾದ ಬಗ್ಗೆ ಸರ್ಕಾರದ ಕ್ರಮದ ಬಗ್ಗೆ ವಿವರ ಕೊಡಬೇಕಾಗುತ್ತದೆ.

'ಸ್ವಚ್ಛ ಭಾರತ ಅಭಿಯಾನ' ಯೋಜನೆ ಅಡಿಯಲ್ಲಿ 3.15 ಲಕ್ಷ ಪ್ರತ್ಯೇಕ ಗೃಹ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಮತ್ತು 'ಅಮೃತ್ ಯೋಜನೆ' ಅಡಿಯಲ್ಲಿ 1,680/– ಕೋಟಿ ರೂಪಾಯಿ ಮೊತ್ತದ 306 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಲಾಗಿದೆ. ಆದರೆ, ಸ್ವಚ್ಛ ಭಾರತ ನಗರ ಯೋಜನೆಯ ಅನುಷ್ಠಾನದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ತುಂಬಾ ಹಿಂದೆ ಬಿದ್ದಿದೆ. 2019ನೇ ಇಸವಿಯಲ್ಲಿ ಒಂದು independent agency ಬೆಂಗಳೂರು ನಗರದ ಸ್ವಚ್ಛತಾ ಸಮೀಕ್ಷೆ ಮಾಡಿದೆ. ಅಂದರೆ, ಬೆಂಗಳೂರು Urban ನಲ್ಲಿ ಯಾವ ರೀತಿ ಸ್ವಚ್ಛತಾ ಕಾರ್ಯವನ್ನು ನಿರ್ವಹಣೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದೆ ಎಂದು. 2019ನೇ ಇಸವಿಯ ಸಮೀಕ್ಷೆಯಲ್ಲಿ ಬೆಂಗಳೂರು ನಗರ 194ನೇ ಸ್ಥಾನದಲ್ಲಿತ್ತು. 2020ನೇ ಇಸವಿಯ ಸಮೀಕ್ಷೆಯಲ್ಲಿ ಅದು 214ನೇ ಸ್ಥಾನದಲ್ಲಿದೆ. ಬೆಂಗಳೂರು ನಗರಕ್ಕೆ ಪ್ರತಿನಿತ್ಯ ಲಕ್ಷಾಂತರ ಜನರು ಬರುತ್ತಾರೆ. ಆ ರೀತಿ ಬಂದಂತಹ ಜನರಿಗೆ ಇದುವರೆಗೆ ಕೇವಲ 419 ಶೌಚಾಲಯಗಳಿವೆ. ಈ ಶೌಚಾಲಯಗಳನ್ನು 1964 ರಿಂದ 2014ರವರೆಗೆ ನಿರ್ಮಿಸಿರುವಂಥದ್ದು. ಒಂದು ಸಮೀಕ್ಷೆ ಪ್ರಕಾರ ಬೆಂಗಳೂರು ನಗರಕ್ಕೆ ಸುಮಾರು 1100 ಶೌಚಾಲಯಗಳ ಅವಶ್ಯಕತೆ ಇದೆ. ಈ ಬಗ್ಗೆ ನಗರ ಪಾಲಿಕೆಯು ಸಮೀಕ್ಷೆ ನಡೆಸಿ ಸ್ವಚ್ಛ ಭಾರತದ ಮಾರ್ಗದರ್ಶನದಂತೆ ಶೌಚಾಲಯ ನಿರ್ಮಿಸಲು ರಾಜ್ಯ ಹೈಕೋರ್ಟ್ ಆದೇಶ ನೀಡಿದೆ. ಆದುದರಿಂದ ಬೆಂಗಳೂರು ನಗರದಲ್ಲಿ ಸ್ವಚ್ಛತೆಯ ದೃಷ್ಟಿಯಿಂದ ಉಚಿತ ಶೌಚಾಲಯಗಳನ್ನು ನಿರ್ಮಾಣ ಮಾಡಿದಲ್ಲಿ, ನಗರದ ಫುಟ್‌ಪಾತ್ ಮೇಲೆ, ರಸ್ತೆಯ ಮೇಲೆ ಮತ್ತು ಕಾಂಪೌಂಡ್‌ಗಳ ಬಳಿ ಮಲಮೂತ್ರ ವಿಸರ್ಜನೆಯನ್ನು ತಡೆಯಬಹುದು. ಈ ಬಗ್ಗೆ ಸರ್ಕಾರ ಯೋಜನೆ ರೂಪಿಸಿ, ಗುತ್ತಿಗೆಯ ಆಧಾರದ ಮೇಲೆ franchise ಮಾಡಿ, ಅದನ್ನು ಸಂಘ ಸಂಸ್ಥೆಗಳ ಮುಖೇನ ನಿರ್ವಹಿಸಬೇಕೆಂದು ಸಲಹೆ ನೀಡುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮುಂಗಡ ಪತ್ರದ ಪ್ಯಾರಾ 254ರಲ್ಲಿ ಬೆಂಗಳೂರಿನ 58 ಕಿಲೋಮೀಟರ್ ಉದ್ದದ ಹೊರವರ್ತುಲ ರಸ್ತೆಯನ್ನು ಅಂದರೆ, Peripheral Ring Road ಅನ್ನು ಅನುಷ್ಠಾನಗೊಳಿಸಲು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ Swiss Challenge Method ಅನ್ನು ಅಳವಡಿಸಿ, ಟೆಂಡರ್ ಕರೆದು ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಈ ಹಿಂದೆ ಹೊರ ವರ್ತುಲ ರಸ್ತೆಯನ್ನು ನಿರ್ಮಿಸಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಮುಂದೆ ಬಂದಿದ್ದರು. ಅವರು ಹೊರ ವರ್ತುಲ ರಸ್ತೆಯ ಕಾಮಗಾರಿಯನ್ನು ನಮಗೆ ನೀಡಿದರೆ ನಾವೇ ಇದನ್ನು ಮಾಡುತ್ತೇವೆಂದು ಕೇಳಿದ್ದರು. ಮಾನ್ಯ ಕೇಂದ್ರ ಸಾರಿಗೆ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ನಮ್ಮ ರಾಜ್ಯದಲ್ಲಿನ 33 ರಾಷ್ಟ್ರೀಯ ಹೆದ್ದಾರಿಗಳಿಗೆ 1,400/- ಕೋಟಿ ರೂಪಾಯಿಗಳ ಶಂಕು ಸ್ಥಾಪನೆ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಹೆದ್ದಾರಿಯಿಂದ ಅಭಿವೃದ್ಧಿಪಡಿಸಿದಂತಹ ಹಲವಾರು ಹೆದ್ದಾರಿ ಕಾಮಗಾರಿಗಳ ಉದ್ಘಾಟನೆ ಸಮಾರಂಭವನ್ನು ದಿನಾಂಕ 14.12.2020ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನೆರವೇರಿಸಿದರು. ಆ ಸಮಯದಲ್ಲಿ ಬೆಂಗಳೂರು ನಗರ ಪ್ರಾಧಿಕಾರದವರು ನಿರ್ಮಿಸಬೇಕೆಂದಿರುವ ಹೊರ ವರ್ತುಲ ರಸ್ತೆ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ನಿರ್ಮಿಸುವುದಕ್ಕೆ ಸಿದ್ಧವಿರುವುದಾಗಿ ಹಾಗೂ ಭೂಸ್ವಾಧೀನದ ಶೇಕಡಾ 50ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದಾಗಿ ಆಶ್ವಾಸನೆ ನೀಡಿದ್ದಾರೆ. ಇದರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೊತೆಗೆ ಸಂಪೂರ್ಣ ಸಿವಿಲ್ ಕಾಮಗಾರಿಯ ವೆಚ್ಚವನ್ನು ಕೂಡ ನಾವೇ ಭರಿಸುತ್ತೇವೆ. ಇದಕ್ಕೆ ರಾಜ್ಯ ಸರ್ಕಾರದ ಅನಿಸಿಕೆ ಏನೆಂದು ತಿಳಿಸಿ ಎಂದು ವಿಡಿಯೋ ಕಾನ್ಫರೆನ್ಸ್‌ನಲ್ಲಿ ಕೇಳಿದ್ದರು. ಅವತ್ತಿನ ಆ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಪಕ್ಷದ ವರಿಷ್ಠರು ಮತ್ತು ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರು ಸಹ ಇದ್ದರು. ಮಾನ್ಯ ಕೇಂದ್ರ ಸಚಿವರುಗಳಾದಂತಹ ಶ್ರೀ ಸದಾನಂದಗೌಡರು, ಶ್ರೀ ಪ್ರಹ್ಲಾದ್ ಜೋಶಿಯವರು ಮತ್ತು ಶ್ರೀ ವಿ.ಕೆ.ಸಿಂಗ್‌ರವರು ಸಹ ಇದ್ದರು. ಅವರು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಕೇಳಿದರು. ಅಂದರೆ, ಮಾನ್ಯ ಮುಖ್ಯಮಂತ್ರಿಗಳೆ 'please take a call on this matter' ಎಂದು ಹೇಳಿರುವುದನ್ನು ನಾನು ಇಲ್ಲಿ quote ಮಾಡುತ್ತಿದ್ದೇನೆ. ನಾನು ಸಹ ಆ ಸಮಾರಂಭದಲ್ಲಿ ಭಾಗಿಯಾಗಿದ್ದೆ. ನನಗೆ ಲಭ್ಯವಿರುವ ಮಾಹಿತಿ ಪ್ರಕಾರ, ಈ ಯೋಜನೆಯ ಅಂದಾಜು ವೆಚ್ಚ 14,458/- ಕೋಟಿ ರೂಪಾಯಿಗಳು. ಇದರಲ್ಲಿ 8,848/- ಕೋಟಿ ರೂಪಾಯಿಗಳು ಭೂಸ್ವಾಧೀನಕ್ಕೆ ಬೇಕಾಗುತ್ತದೆ. ಉಳಿದ 5,610/- ಕೋಟಿ ರೂಪಾಯಿಗಳು ರಸ್ತೆ ನಿರ್ಮಾಣಕ್ಕೆ ಬೇಕಾಗುತ್ತದೆ.

**(ಮುಂದು...)**

**(389) 04.00 15.03.2021 ಎಲ್‌ಎಲ್/ಎಂಡಿ(ವಿಕೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):-**

ಆ ಬಗ್ಗೆ ನಾನು ಈ ಹಿಂದೆ ಕೇಳಿದಂತಹ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1517ಕ್ಕೆ ದಿನಾಂಕ:19.03.2020ರಂದು ಮಾನ್ಯ ಮುಖ್ಯಮಂತ್ರಿಗಳು ನೀಡಿದ ಉತ್ತರದಲ್ಲಿ, "ಅಗತ್ಯವಿರುವ ಹಣಕಾಸನ್ನು JBIC (Japan Bank for International Cooperation) ಏಜೆನ್ಸಿಯಿಂದ ಸಾಲದ ರೂಪದಲ್ಲಿ ಪಡೆಯಲು ಕ್ರಮ ವಹಿಸಲಾಗಿದೆ" ಎಂದು ತಿಳಿಸಿರುತ್ತಾರೆ. ಇದರ ಮಧ್ಯೆ ತಾವು ಮಾನ್ಯ ಕೇಂದ್ರ ಸಾರಿಗೆ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರ ಪ್ರಸ್ತಾವನೆಯನ್ನು ತಿರಸ್ಕರಿಸಲು ಸರ್ಕಾರಕ್ಕೆ ಇರುವಂತಹ ಬಲವಾದ ಕಾರಣ ಏನು? ಈ ಯೋಜನೆ ನಿರ್ಮಾಣದಲ್ಲಿ ಅಡ್ಡ ಬರುವಂತಹ ಸಮಸ್ಯೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಕಾರವಿಲ್ಲದೇ, ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಏಜೆನ್ಸಿ ಅಂದರೆ, ಈ ಯೋಜನೆಯಲ್ಲಿ ಬರಬಹುದಾದಂತಹ ಸಂಸ್ಥೆ ಆ ಸಮಸ್ಯೆಗಳನ್ನು ನಿಭಾಯಿಸುತ್ತದೆಯೇ? ಇದರ ಬಗ್ಗೆ ಸರ್ಕಾರ ವಿವರಣೆ ನೀಡಬೇಕು. ಒಂದು ವೇಳೆ ಯಾವುದಾದರೂ ಎಜೆನ್ಸಿಗೆ, ಇಂಟರ್‌ನ್ಯಾಷನಲ್ ಏಜೆನ್ಸಿಗೆ ಅಥವಾ ಇಂಟರ್‌ನ್ಯಾಷನಲ್ ಕಾಂಪಿಟೇಟಿವ್ ಬಿಡ್ಡಿಂಗ್‌ನಲ್ಲಿ ಬಂದಂತಹ ಎಜೆನ್ಸಿಗೆ ಏನಾದರೂ ಕೂಡ ನಮ್ಮ ರಾಜ್ಯದಲ್ಲಿ ಬಂದು ಕಾಮಗಾರಿ ಗುತ್ತಿಗೆ ಪಡೆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಹಾಕಿರುವಂತಹ ಕಂಡೀಷನ್ ಪ್ರಕಾರವೇ ಎಲ್ಲಾ ಭೂಸ್ವಾಧೀನ ಪ್ರಕ್ರಿಯೆಗಳು ಮುಗಿದಿರಬೇಕು; ಎಲ್ಲಾ public utilities ಗಳು ಅಲ್ಲಿಗೆ shift ಆಗಿರಬೇಕು; ರಸ್ತೆ ನಿರ್ಮಾಣ ಮಾಡುವುದಕ್ಕಾಗಿ ಭೂಸ್ವಾಧೀನ ಮಾಡಿಕೊಂಡಂತಹ ಜಮೀನುಗಳಲ್ಲಿ ಇರುವಂತಹ ಮರ-ಗಿಡಗಳನ್ನೆಲ್ಲಾ ತೆಗೆದಿರಬೇಕು. ಇವುಗಳನ್ನು ರಾಜ್ಯ ಸರ್ಕಾರ ಸಕಾಲದಲ್ಲಿ ಕೊಡದೇ ಇದ್ದರೆ, ಆಗಿರುವಂತಹ ವಿಳಂಬಕ್ಕಾಗಿ ಕಾಲಕಾಲಕ್ಕೆ ದಂಡ ಕೊಡಬೇಕಾಗುತ್ತದೆ. ಅಲ್ಲದೇ, ಕಾಮಗಾರಿಯಲ್ಲಿ ನಾವು penalty ಹಾಕುವ ಬದಲಾಗಿ, ನಾವೇ ಆ ಸಂಸ್ಥೆಗೆ ಪರಿಹಾರವನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ರಮೇಶ್‌ರವರು ಅಥವಾ ಶ್ರೀ ಯು.ಬಿ. ವೆಂಕಟೇಶ್‌ರವರಿಗೆ ಈ ವಿಷಯ ಚೆನ್ನಾಗಿ ಅರ್ಥವಾಗುತ್ತದೆ. ಪ್ರಸ್ತುತ ರಾಜ್ಯ ಸರ್ಕಾರ ಕೈಗೊಳ್ಳಬೇಕಾಗಿರುವ ಪೆರಿಫೆರಲ್ ರಸ್ತೆ ಕಾಮಗಾರಿ ಏನಿದೆ, ಇದರಲ್ಲಿ ಈಗಾಗಲೇ ಬೆಳವಣಿಗೆಯಾಗಿದ್ದು, ಅಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣ ಆಗಿರುತ್ತವೆ. ಅವುಗಳನ್ನು ತೆರವುಗೊಳಿಸಿ, ಅವರಿಗೆ ಪುನರ್‌ವಸತಿ ಕಲ್ಪಿಸಬೇಕು ಮತ್ತು ಅವರಿಗೆ ಪರಿಹಾರ ಕೊಡುವಂತಹ ಕೆಲಸ ಮಾಡುವುದು ತುಂಬಾ ದೊಡ್ಡ ಕೆಲಸವಾಗಿರುತ್ತದೆ. ಹಾಗಾಗಿ, ಇಂತಹ ಕಾಮಗಾರಿಗಳನ್ನು ಬೇರೆ ಯಾವುದೋ ಖಾಸಗಿ ಸಹಭಾಗಿತ್ವದ ಸಂಸ್ಥೆಗಳಿಗೆ ನೀಡುವ ಬದಲಾಗಿ, ಎನ್.ಹೆಚ್.ಐ.ಎ. ನವರು ಈ ಕಾಮಗಾರಿಯನ್ನು ಮಾಡುತ್ತೇವೆಂದು ಹೇಳಿರುವುದರಿಂದ ಅವರಿಗೆ ಕಾಮಗಾರಿ ಕೊಡುವುದು ಒಳ್ಳೆಯದು. ಅಲ್ಲದೇ, ಇದೊಂದು ಭಾರತ ಸರ್ಕಾರದ ಸಂಸ್ಥೆಯಾಗಿದ್ದು, ಸಣ್ಣ-ಪುಟ್ಟ ಸಮಸ್ಯೆಗಳಿದ್ದರೆ ಅದನ್ನು ನಾವೇ ಬಗೆಹರಿಸಿ ಕೊಡಬಹುದು. ಹಾಗಾಗಿ, ಈ ಸಂಸ್ಥೆಗೆ ಏತಕ್ಕೆ ಒತ್ತು ಕೊಡಬಾರದೆಂಬುದು ನನ್ನ ಸಲಹೆ ಆಗಿರುತ್ತದೆ.

'ಸ್ವಚ್ಛ ಭಾರತ' ಗ್ರಾಮೀಣದ ಬಗ್ಗೆ ಹೇಳುವುದಾದರೆ, ಇದುವರೆವಿಗೆ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 42.82 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳು ಬಹಿರ್ದೆಸೆ ಮುಕ್ತ ಜಿಲ್ಲೆಗಳು ಎಂದು ಘೋಷಣೆ ಮಾಡಬೇಕಾದಂತಹ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಳುಹಿಸಿಕೊಟ್ಟಿದೆ. ಈ ವರದಿಗಳನ್ನು ಆಧರಿಸಿ ಕೇಂದ್ರ ಸರ್ಕಾರ ಇಷ್ಟರೊಳಗೆ ಅಧಿಕೃತವಾಗಿ ಕರ್ನಾಟಕ ರಾಜ್ಯವನ್ನು 'ಸ್ವಚ್ಛ ಭಾರತ ಗ್ರಾಮಾಂತರ ಅಭಿಯಾನ ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ' ಘೋಷಿಸಬೇಕಾಗಿತ್ತು. ಆದರೆ, ಇದುವರೆವಿಗೂ ಅದು ಆಗಿರುವುದಿಲ್ಲ. ಈ ಕಾರ್ಯ ಮೊಟ್ಟಮೊದಲನೆಯದಾಗಿ ಮತ್ತು ಬಹಳ ಮುಖ್ಯವಾಗಿ ಆಗಬೇಕಾಗಿತ್ತು. ಏಕೆಂದರೆ, ಕೇಂದ್ರ ಸರ್ಕಾರದಲ್ಲಿ ಹಲವಾರು ಕಾರ್ಯಕ್ರಮಗಳ ಅಡಿಯಲ್ಲಿ ದೊರೆಯುವಂತಹ ಆರ್ಥಿಕ ನೆರವು ಅನುದಾನ ಏನಿದ್ದರೂ ಇಂತಹ ಕಾರ್ಯಕ್ರಮಗಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜೋಡಣೆಯಾಗಿರುತ್ತವೆ. Tie up ಮಾಡಿರುತ್ತಾರೆ. ಕರ್ನಾಟಕ ರಾಜ್ಯ Open Defecation Free State ಎಂದು ಹೇಳಿದರೆ ಇದಕ್ಕೆ ಸಾಕಷ್ಟು ಹಣ ಬರಬಹುದು. ಅದರಂತೆ, ಕುಡಿಯುವ ನೀರಿನ ಸಮಸ್ಯೆ ಇರಬಹುದು ಮತ್ತು ಅದಕ್ಕೆ ಸಂಬಂಧಪಟ್ಟ water supply schemes ಗಳನ್ನು ಜಾಸ್ತಿ ಮಾಡಿಕೊಡಬಹುದು. ಅಲ್ಲದೇ, ಬೇರೆ ಬೇರೆ ರೀತಿಯಲ್ಲಿಯೂ ಸಹ ಅನುದಾನಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಇಂತಹ ಕೆಲಸ ಆಗಿರುವುದಿಲ್ಲ. ಹಾಗಾಗಿ, ದಯಮಾಡಿ ಇಂತಹ ಪ್ರಮುಖ ವಿಚಾರಗಳನ್ನು ರಾಜ್ಯ ಸರ್ಕಾರ ತಿರಸ್ಕಾರ ಅಥವಾ ಕಡೆಗಣಿಸಬಾರದು. ಅಲ್ಲದೇ, ಗ್ರಾಮ ಪಂಚಾಯಿತಿ ವತಿಯಿಂದ ನಿರ್ಮಿಸಿದಂತಹ ಸಾಮೂಹಿಕ ಗ್ರಾಮ ಪಂಚಾಯಿತಿಗಳ ನಿರ್ವಹಣೆ ಸರಿ ಇರುವುದಿಲ್ಲ. ಪ್ರಥಮವಾಗಿ ಅವುಗಳಲ್ಲಿ ನೀರಿನ ಸೌಲಭ್ಯ ಇರುವುದಿಲ್ಲ. ಆದುದರಿಂದ, ಸಾಮೂಹಿಕ ಶೌಚಾಲಯಗಳ ಯೋಜನೆ ಫಲಪ್ರದವಾಗಿರುವುದಿಲ್ಲ. ಇದಲ್ಲದೇ, ಅಂಗನವಾಡಿ ಮತ್ತು ಶಾಲೆಗಳಲ್ಲಿ ನಿರ್ಮಾಣ ಮಾಡಿದಂತಹ ಶೌಚಾಲಯ ನಿರ್ವಹಣೆ ಸಹ ಸಮರ್ಪಕವಾಗಿರುವುದಿಲ್ಲ. ಕಾಲಕ್ರಮೇಣ ಅವುಗಳು ತುಂಬಿ ಮಲ-ಮೂತ್ರಗಳನ್ನು ಹೊರ ಹಾಕುವುದಕ್ಕೆ ಸಹ ವ್ಯವಸ್ಥೆ ಇರುವುದಿಲ್ಲ.

ಇನ್ನೊಂದು ವಿಚಾರವೆಂದರೆ, ಕೆಲವೊಂದು ಗ್ರಾಮಗಳಲ್ಲಿ ಕೊಳಾಯಿ ನೀರು ಒದಗಿಸಿದ್ದರೂ ಸಹ ಆ ನೀರನ್ನು ಓವರ್‌ಹೆಡ್ ಟ್ಯಾಂಕ್‌ಗಳಿಗೆ ತುಂಬಿಸುವುದಿಲ್ಲ. ಈ ಬಗ್ಗೆ ರಾಜ್ಯ ಸರ್ಕಾರದಲ್ಲಿ ಯೋಜನೆ ಮತ್ತು ಓವರ್‌ಹೆಡ್ ಟ್ಯಾಂಕ್ ಇದ್ದರೂ ಸಹ ನೀರನ್ನು ಅಲ್ಲಿಗೆ ಯಾರು ಕೂಡ ಪಂಪ್ ಮಾಡುವುದಿಲ್ಲ. ಬದಲಾಗಿ, ಕೊಳಾಯಿ ನೀರನ್ನು ನೇರವಾಗಿ ಶುದ್ಧೀಕರಣ ಮಾಡದೇ ಇರುವಂತಹ ನೀರನ್ನು ಪೈಪ್‌ಗಳಲ್ಲಿ ನೀಡುತ್ತಾರೆ. ಅಲ್ಲದೇ, ಸುಮಾರು 5 ವರ್ಷ ಅಥವಾ 10 ವರ್ಷಗಳ ಹಿಂದೆ ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿದ್ದರೂ ಸಹ ಅದಕ್ಕೆ ಸಂಪೂರ್ಣ ನೀರು ತುಂಬಿಸಿ ಅದನ್ನು ಪರೀಕ್ಷೆ ಮಾಡಿರುವುದಿಲ್ಲ. ಅಂದರೆ, ಆ ಟ್ಯಾಂಕ್ ಎಷ್ಟು ಗಟ್ಟಿಮುಟ್ಟಾಗಿದೆ ಅಥವಾ ಎಷ್ಟು ನೀರು ಸಾಮರ್ಥ್ಯ ಇದೆ ಅಥವಾ ಅದನ್ನು ಗ್ರಾವಿಟೇಷನ್‌ಗೆ ಸರಿ ಹೊಂದುವಂತೆ ನಿರ್ಮಾಣ ಮಾಡದೇ ಇದ್ದರೆ ಅದು ಬಿದ್ದು ಹೋಗುವ ಬಗ್ಗೆ ಸಹ ಪರೀಕ್ಷೆ ಮಾಡಿರುವುದಿಲ್ಲ. ಈ ರೀತಿಯ ಓವರ್‌ಹೆಡ್ ಟ್ಯಾಂಕ್‌ಗಳು ಬೇರೆ ಕಡೆಯಲ್ಲಿ ಹೇಗೆ ಇದೆಯೆಂಬ ಬಗ್ಗೆ ಗೊತ್ತಿರುವುದಿಲ್ಲ. ಆದರೆ, ತುಮಕೂರು ಜಿಲ್ಲೆಯ ಶಿರಾದಲ್ಲಿ ನಾನು ಪ್ರತಿ ಬಾರಿ ಕೆ.ಡಿ.ಪಿ. ಸಭೆಯಲ್ಲಿ ಭಾಗವಹಿಸಿದಾಗ ಈ ಬಗ್ಗೆ ಪ್ರಶ್ನೆ ಮಾಡುತ್ತಿರುತ್ತೇನೆ. ಆ ಸಮಯದಲ್ಲಿ ಅಧಿಕಾರಿಗಳು ಸರ್ವೇ ಸಾಧಾರಣವಾಗಿ 'ಹೌದು ಆಗಿರುವುದಿಲ್ಲ' ಎಂದು ಹೇಳುತ್ತಾರೆ. ಹಾಗಾಗಿ, ಇದಕ್ಕೆ ಅಲ್ಲಿರುವಂತಹ ಗ್ರಾಮಸ್ಥರ ಸಹಕಾರ ಮತ್ತು ಅಲ್ಲಿರತಕ್ಕಂತಹ ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಸಹ ಬೇಕಾಗಿರುತ್ತದೆ. ಆದುದರಿಂದ, ದಯಮಾಡಿ ಸರ್ಕಾರ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ಮಹತ್ವವಾದಂತಹ ಕಾರ್ಯಕ್ರಮಗಳು ಕೇಂದ್ರ ವಲಯದ ಯೋಜನೆಗಳು ಅಂದರೆ, Central Sector Schemes ಮತ್ತು ಕೇಂದ್ರ ಪುರಸ್ಕೃತ ಅಥವಾ ಪ್ರಾಯೋಜಿತ ಯೋಜನೆಗಳು Central Sponsored Schemes ನಲ್ಲಿ ಬರುತ್ತವೆ. ಇದರಿಂದಾಗಿ, ಸಾಕಷ್ಟು ಹಣ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಅದರಂತೆ, ರಾಜ್ಯ ಸರ್ಕಾರದ ಒಂದು ಅಥವಾ ಮೂರನೆ ಒಂದು ಭಾಗದಷ್ಟು ಹಣವನ್ನು ಇಂತಹ ಯೋಜನೆಗಳಿಂದಲೇ ಸರ್ಕಾರಕ್ಕೆ ಬರುತ್ತದೆ. ಇಂತಹ ಹಣವನ್ನು ಆರ್ಥಿಕ ಇಲಾಖೆಯವರು ಬಜೆಟ್‌ನಲ್ಲಿ ಪ್ರತಿಬಿಂಬಿಸುತ್ತಾರೆ. ಕೇಂದ್ರ ವಲಯದಲ್ಲಿರುವಂತಹ Central Sector ನಲ್ಲಿರುವಂತಹ ಕೃಷಿ ಬೆಳೆ ವಿಮೆ ಇರಬಹುದು, ಕಾರ್ಮಿಕರ ಕಲ್ಯಾಣ ಇರಬಹುದು, ಹೆಣ್ಣುಮಗುವಿನ ವಿದ್ಯಾಭ್ಯಾಸ ಯೋಜನೆ ಹಾಗೂ ಮುಂತಾದ ಯೋಜನೆಗಳ ಅನುಷ್ಠಾನ ಸರಿಯಾದ ರೀತಿಯಲ್ಲಿ ಆಗುತ್ತಿರುವುದಿಲ್ಲ. ಈ ಯೋಜನೆಗಳ ಅಡಿಯಲ್ಲಿ ಕೇಂದ್ರ ಸರ್ಕಾರ ನೂರಕ್ಕೆ ನೂರರಷ್ಟು ಅನುದಾನ ಕೊಡುತ್ತಿದೆ. ಅಲ್ಲದೇ, ಇಂತಹ ಯೋಜನೆಗಳಲ್ಲಿ ಪ್ರಥಮವಾಗಿ ಶೇಕಡ 50 ರಷ್ಟು ಅನುದಾನ ಕೊಡುತ್ತದೆ ಮತ್ತು ಈ ಯೋಜನೆ ಯಾವ ರೀತಿ ಅನುಷ್ಠಾನವಾಗಿದೆ ಎಂಬ ಬಗ್ಗೆ ರಾಜ್ಯ ಸರ್ಕಾರ Utilisation Certificate ಕಳುಹಿಸಿದ ನಂತರ ಕಾಲಾನುಕಾಲಕ್ಕೆ ಉಳಿದ ಅನುದಾನವನ್ನು ಬಿಡುಗಡೆ ಮಾಡುತ್ತಾ ಹೋಗುತ್ತದೆ. ಅದೇ ರೀತಿ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಗಳು ಅಂದರೆ, Central Sponsored Schemes ನಲ್ಲಿ ಪ್ರಮುಖವಾಗಿ ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ, ನೀಲಿ ಕ್ರಾಂತಿ, ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಅಭಿಯಾನ ಮತ್ತು ಪೊಲೀಸ್ ಇಲಾಖೆ ಆಧುನೀಕರಣ ಮುಂತಾದ ಯೋಜನೆಗಳಡಿಯಲ್ಲಿ ಕೇಂದ್ರ ಸರ್ಕಾರದಿಂದ 50:50 ರ ಅನುಪಾತದಿಂದ 80:20 ಅನುಪಾತದವರೆಗೆ ಅನುದಾನ ದೊರೆಯುತ್ತಿದೆ. ಆದುದರಿಂದ, ರಾಜ್ಯ ಸರ್ಕಾರ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಬರಬೇಕಾಗಿರುವ ಖರ್ಚು ಮಾಡಿರುವ ಹಣವನ್ನು ಮರುಪಾವತಿ ಪಡೆಯುವ ಒಂದು ವ್ಯವಸ್ಥೆ ಮಾಡಲೇಬೇಕು. ಇದಲ್ಲದೇ, ಕರ್ನಾಟಕ ರಾಜ್ಯ ಈ ಕೆಳಕಂಡ ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಮತ್ತೊಂದು ವಿಚಾರವೇನೆಂದರೆ, ಮಹಿಳೆಯರ ಸುರಕ್ಷತೆ ಸಲುವಾಗಿ ನಿರ್ಭಯಾ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಗೃಹ ಇಲಾಖೆ ಮತ್ತು ಸಾರಿಗೆ ಇಲಾಖೆಗೆ ಈ ರೀತಿ ಹಣ ಹಂಚಿಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುತ್ತದೆ. ಅದರಂತೆ, Safe City Project ಗೆ 667/- ಕೋಟಿ ರೂಪಾಯಿಗಳು; ಪೊಲೀಸ್ ಠಾಣೆಗಳಲ್ಲಿ ಸಹಾಯ ಕೇಂದ್ರಗಳ ಸ್ಥಾಪನೆಗಾಗಿ 56/-ಲಕ್ಷ ರೂಪಾಯಿಗಳು; ರಸ್ತೆ ಸಾರಿಗೆ ಇಲಾಖೆ 33.64/- ಕೋಟಿ ರೂಪಾಯಿಗಳು; One Stop Centre ಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಹಿಳಾ ವಾಣಿ ರೀತಿಯಲ್ಲಿ ಕೆಲಸ ಮಾಡುವಂಥದ್ದಕ್ಕೆ 12.56/- ಕೋಟಿ ರೂಪಾಯಿಗಳು ಒಟ್ಟಾರೆಯಾಗಿ 713 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ನಿರ್ಭಯಾ ಯೋಜನೆ ಯಾವ ರೀತಿ ಜಾರಿಗೆ ಬಂದಿದೆ ಎಂದು ತಮಗೆಲ್ಲಾ ಗೊತ್ತಿರಬಹುದು. ಸುಮಾರು ಒಂದು ದಶಕದ ಹಿಂದೆ ದೆಹಲಿಯಲ್ಲಿ ಒಬ್ಬ ಯುವತಿ ಮೇಲೆ ನಡೆದಂತಹ ಅತ್ಯಾಚಾರದಲ್ಲಿ ಮತ್ತು ಆ ಯುವತಿ ಮರಣ ಹೊಂದಿದ ವಿಷಯದಲ್ಲಿ ದೊಡ್ಡ ಆಂದೋಲನ ಶುರುವಾಯಿತು. ತದನಂತರ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರವಾಗಿ ಮಹಿಳೆಯರಿಗೆ ಸುರಕ್ಷತೆ ಒದಗಿಸುವುದಕ್ಕಾಗಿ 1 ಸಾವಿರ ಕೋಟಿ ರೂಪಾಯಿಗಳ ಅನುದಾನ ಮೀಸಲಿಡುವುದಕ್ಕೆ ಪ್ರಾರಂಭವಾಗಿ ಇವೊತ್ತಿನ ದಿವಸ 3 ಸಾವಿರ ಕೋಟಿ ರೂಪಾಯಿ ಕೇಂದ್ರ ಸರ್ಕಾರದಲ್ಲಿ ಉಳಿದುಕೊಂಡಿರುತ್ತದೆ. ಈ ಯೋಜನೆಯಡಿಯಲ್ಲಿ ಅನುದಾನವನ್ನು ಉಪಯೋಗ ಮಾಡುವುದರಲ್ಲಿ ನಮ್ಮ ರಾಜ್ಯ ಸೇರಿದಂತೆ ಹಲವಾರು ರಾಜ್ಯಗಳು ಹಿಂದೆ ಬಿದ್ದಿರುತ್ತವೆ.

ಇದಲ್ಲದೇ, ಬೆಂಗಳೂರು ಸೇಫ್ ಸಿಟಿ ಪ್ರಾಜೆಕ್ಟ್‌ನಡಿಯಲ್ಲಿ ಸುಮಾರು 7500 ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸುವ ಯೋಜನೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ನಡುವಿನ ಭಿನ್ನಾಭಿಪ್ರಾಯದಲ್ಲಿ ಅದು ಅಲ್ಲಿಗೆ ನಿಂತಿರುತ್ತದೆ. ಅಂದರೆ, ಆ ಕಾಮಗಾರಿಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯುವ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದಿದ್ದರಿಂದ ಅದು ಅರ್ಧಕ್ಕೆ ನಿಂತಿರುತ್ತದೆ. ಆದರೆ, ಮೊನ್ನೆಯ ದಿವಸ ಇದೇ ಸದನದಲ್ಲಿ ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ, "ಸದರಿ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದು, ಈ ಯೋಜನೆ ಚಾಲನೆಯಲ್ಲಿದೆ" ಎಂದು ಉತ್ತರ ನೀಡಿರುತ್ತಾರೆ. ಇದಲ್ಲದೇ, FAME (Faster Adoption and Manufacturing of (Hybrid &) Electric) India Scheme. ಅದು ಹೈಬ್ರಿಡ್ ಆಗಬಹುದು ಅಥವಾ ನಾರ್ಮಲ್ ಆಗಿರಬಹುದು, ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಮಾಲಿನ್ಯ ತಡೆಗಟ್ಟುವ ಸಲುವಾಗಿ 300 ಎಲೆಕ್ಟ್ರಿಕ್ ಬಸ್ಸುಗಳನ್ನು ಮತ್ತು 2021-22ನೇ ಸಾಲಿನಲ್ಲಿ ರಾಜ್ಯದಲ್ಲಿರುವ 4 ಸಾರಿಗೆ ಸಂಸ್ಥೆಗಳಿಗೆ GCC (Gross Cost Contract) model ನ ಆಧಾರದಲ್ಲಿ 400 ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿಸಲು ಕೇಂದ್ರ ಸರ್ಕಾರದ ಭಾರೀ ಕೈಗಾರಿಕೆ ಸಚಿವಾಲಯ ಪ್ರತಿ ಎಲೆಕ್ಟ್ರಿಕ್

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಸ್ಸಿಗೆ ಗರಿಷ್ಠ ಬೇಡಿಕೆ ಪ್ರೋತ್ಸಾಹ ಧನವನ್ನಾಗಿ 55 ಲಕ್ಷ ರೂಪಾಯಿಗಳನ್ನು ನೀಡುತ್ತದೆ. ಅಂದರೆ, 700 ಬಸ್ಸುಗಳನ್ನು ಖರೀದಿಸಬೇಕು ಅಥವಾ ಎಲೆಕ್ಟ್ರಿಕ್ ಬಸ್ ತಯಾರಿಕರು ಈ ಯೋಜನೆಗೆ ಚಾಲನೆ ಮಾಡಬೇಕು.

(ಮುಂದು)

**(390) 15.03.2021 4.10 ವೈಎಲ್-ಎಂಡಿ(ವಿಕೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ನಾಲ್ಕು ನಿಗಮಗಳೇನಿವೆ, ಆ 4 ನಿಗಮಗಳ ಕಾರ್ಯ ವ್ಯಾಪ್ತಿಯಲ್ಲಿಯೇ ಚಾಲನೆ ಮಾಡಬೇಕೆಂಬ ಯೋಜನೆಯನ್ನು ಮಾಡಿದ್ದಾರೆ. 2016-17ನೇ ಸಾಲಿನಲ್ಲಿ ಪ್ರಾರಂಭಗೊಂಡ FAME India Scheme Phase 1 ಕಾರ್ಯಕ್ರಮದಲ್ಲಿ 400 ಎಲೆಕ್ಟ್ರಿಕ್ ಬಸ್ಸುಗಳನ್ನು ಖರೀದಿ ಮಾಡಬೇಕೆಂದು ತೀರ್ಮಾನ ಮಾಡಲಾಗಿತ್ತು, ಆ 400 ಎಲೆಕ್ಟ್ರಿಕ್ ಬಸ್ಸುಗಳ ಖರೀದಿಯಲ್ಲಿ ಗೊಂದಲವಾದ ಪ್ರಯುಕ್ತ ಆ ಯೋಜನೆಯೇ ರದ್ದಾಗಿತ್ತು. ಏಕೆಂದರೆ, FAME India Scheme Phase 1 ಈಗಾಗಲೇ ಅಂತ್ಯವಾಗಿದೆ, ಟೆಂಡರನ್ನು ಅಂತಿಮ ಮಾಡುವುದರಲ್ಲಿ ವಿಳಂಬ ಮಾಡಲಾಗಿದೆ ಎಂಬ ಕಾರಣದಿಂದಾಗಿ 400 ಎಲೆಕ್ಟ್ರಿಕ್ ಬಸ್ಸುಗಳ ಖರೀದಿ ಮಾಡುವ ಪ್ರಸ್ತಾವನೆಯು ಬಿದ್ದು ಹೋಗಿತ್ತು. FAME India Scheme Phase 2 ನಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ನಾಲ್ಕು ಚಕ್ರದ ಎಲೆಕ್ಟ್ರಿಕ್ ವಾಹನಗಳು, ದ್ವಿಚಕ್ರ ಎಲೆಕ್ಟ್ರಿಕ್ ವಾಹನಗಳು, ತ್ರಿಚಕ್ರ ಎಲೆಕ್ಟ್ರಿಕ್ ವಾಹನಗಳು ಹಾಗೂ ಇ-ರಿಕ್ಷಾ ವಾಹನಗಳಿಗೆ ಸಬ್ಸಿಡಿ ರೂಪದಲ್ಲಿ ಸಹಾಯಧನ ನೀಡಲು ಸುಮಾರು ರೂ.10,000 ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದರು. ಹಾಗೆಯೇ ನಗರ-ಪಟ್ಟಣ ಪ್ರದೇಶಗಳಲ್ಲಿ ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ Electric Vehicle Charging Infrastructure ಸ್ಥಾಪಿಸಲು ನೆರವು ನೀಡಲಿದೆ. Phase 2 ಅಡಿಯಲ್ಲಿ ರಾಜ್ಯ ಸರ್ಕಾರ ಇ-ಬಸ್ಸುಗಳನ್ನು ರಾಜ್ಯದಲ್ಲಿ ಓಡಾಟ ಮಾಡಲು ಟೆಂಡರ್ ಕರೆಯಲಾಗಿದೆ. Phase 1 ನಲ್ಲಿ ಗಳಿಸಿದಂತಹ ಅನುಭವದ ಆಧಾರದ ಮೇಲೆ ಯಾರು ಇ-ಬಸ್ಸು ತಯಾರು ಮಾಡುತ್ತಾರೆ, ಅವರು ಸಹ ರಾಜ್ಯದ ರಸ್ತೆಗಳ ಮೇಲೆ ಇ-ಬಸ್ಸನ್ನು ಓಡಿಸಲಿ ಎಂಬ ಆಧಾರದ ಮೇಲೆ ಟೆಂಡರ್ ಕರೆಯಲಾಗಿದೆ. ಅದಕ್ಕೆ ಪ್ರತಿ ಕಿ.ಮೀ.ಗೆ ನೀಡುವ milage ದರವನ್ನು ನಿಗದಿ ಮಾಡಲಾಗಿದೆ. ಟೆಂಡರ್ ಕರೆದು ಸುಮಾರು ದಿವಸಗಳಾಗಿದ್ದು, ಅವರು ಕೋಟ್ ಮಾಡಿರುವಂಥ ದರ ಜಾಸ್ತಿಯಾಗಿದೆ ಎಂದು ಹೇಳಿ negotiation ಕೂಡ ಸುಮಾರು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳಿಂದ ಹಾಗೆಯೇ ಉಳಿದುಕೊಂಡಿದ್ದು, ಇದುವರೆವಿಗೂ ತೀರ್ಮಾನವಾಗಿಲ್ಲ. ಕಾರಣವೇನೆಂದರೆ, ಇ-ಬಸ್ಸು ತಯಾರಿಕರು ಹಾಗೂ ಕೆ.ಎಸ್.ಆರ್.ಟಿ.ಸಿ. ಮಧ್ಯೆ ಕೋಟ್ ಮಾಡಿರುವ ದರಕ್ಕೂ ಮತ್ತು ಇವರು ಕೇಳಿರುವ ದರದಲ್ಲಿ ಸಾಕಷ್ಟು ವ್ಯತ್ಯಾಸ ಇರುವುದರಿಂದ ಅದು ನೆನೆಗುದಿಗೆ ಬಿದ್ದಿದೆ. Viability gap fund ಅನ್ನು ಕೇಂದ್ರ ಸರ್ಕಾರ ಭರಿಸಬೇಕೇ, ರಾಜ್ಯ ಸರ್ಕಾರ ಭರಿಸಬೇಕೇ ಅಥವಾ ಕೆ.ಎಸ್.ಆರ್.ಟಿ.ಸಿ. ಯವರು ಭರಿಸಬೇಕೇ ಎಂಬ ಯೋಚನೆಯಿಂದ ಹಾಗೆಯೇ ಉಳಿದುಕೊಂಡಿದ್ದು, ಇಲ್ಲಿಯವರೆಗೂ ಅದು ತೀರ್ಮಾನವಾಗಿಲ್ಲ.

ಮಾನ್ಯ ಸಭಾಪತಿಯವರೇ, ಇ-ವಾಹನಗಳು, ಇ-ಬಸ್, ಇ-ಟ್ರಕ್ಸ್, ಇ-ಸ್ಕೂಟರ್, ಇ-ರಿಕ್ಷಾ ಇದಕ್ಕೆ ಹೆಚ್ಚು ಒತ್ತು ಇದ್ದು, ಇವುಗಳನ್ನು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ವ್ಯಾಪಕವಾಗಿ ಜಾರಿಗೆ ತಂದರೆ, ಮಾಲಿನ್ಯ ನಿಯಂತ್ರಣವಾಗುತ್ತದೆ. ಅದಕ್ಕಾಗಿಯೇ Electric Vehicle Charging Stations ಮಾಡಲು ಹೊರಟಿದ್ದು, ಇದಕ್ಕೂ ನೂರಾರು ಕೋಟಿ ರೂಪಾಯಿ ಹಣ ಭರಿಸಲಾಗುತ್ತಿದೆ. ಈ ಸವಲತ್ತನ್ನು ಸಹ ಪಡೆಯುವುದರಲ್ಲಿ ರಾಜ್ಯ ಸರ್ಕಾರ ಮುಂದಾಗಬೇಕು. ಎಲ್ಲಿಯವರೆಗೆ ಇಂತಹ ಅನುದಾನವನ್ನು ಪಡೆದುಕೊಂಡು, ರಾಜ್ಯ ಹುಂಡಿಯ ಖಜಾನೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಹೋಗುವುದಿಲ್ಲವೋ, ಅಲ್ಲಿಯವರೆಗೂ ನಮ್ಮ ಆರ್ಥಿಕ ಸಂಕಷ್ಟ ಬಗೆಹರಿಯುವುದಿಲ್ಲ. ಇದಕ್ಕೆ ಒಂದು ಚಿಕ್ಕ ಉದಾಹರಣೆಯನ್ನು ನೀಡಲು ಬಯಸುತ್ತೇನೆ. ಅದೇನೆಂದರೆ, central sector schemes or centrally sponsored schemes ಆಗಿರಬಹುದು. ಇದರಿಂದ ಶೇ. 25 ರಷ್ಟು, ಅಥವಾ ಶೇ.35 ರಷ್ಟು ಏನು ಅನುದಾನ ಬರುತ್ತದೆ, ಅದನ್ನು ನಾವು ಮೊದಲು ಪಡೆಯಬೇಕು. ತದನಂತರ ಕಾಲಾನುಕಾಲಕ್ಕೆ ಆ ಯೋಜನೆಗಳನ್ನು ಜಾರಿಗೊಳಿಸುವುದು ಅಥವಾ ಅನುಷ್ಠಾನಗೊಳಿಸುವುದನ್ನು ಯಾರಿಂದ ಸಾಧ್ಯವೋ ಅವರಿಂದ ಮಾಡಿಸಿ, Utilisation Certificate ನ್ನು ನೀಡಿ, ಕಾಲಾನುಕಾಲಕ್ಕೆ ಭಾರತ ಸರ್ಕಾರದಿಂದ ಮತ್ತು ಸಂಬಂಧಪಟ್ಟ ಮಂತ್ರಾಲಯದಿಂದ ಕೂಡ reimbursement ತೆಗೆದುಕೊಳ್ಳಬೇಕು. ಇದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಹಾಗಾಗಿ ನನ್ನ ಒಂದು ಸಲಹೆಯೇನೆಂದರೆ, ಆರ್ಥಿಕ ಇಲಾಖೆಯಲ್ಲಿ ಉನ್ನತಾಧಿಕಾರಿಯನ್ನು ನೇಮಕ ಮಾಡಿ, ಪ್ರತಿ ತಿಂಗಳು ಯಾರ್ಯಾರೂ Utilisation Certificate ಕಳಿಸಬಹುದು ಆರ್.ಡಿ.ಪಿ.ಆರ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, Food and Civil Supplies Department, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗೃಹ ಇಲಾಖೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಂತಹ ಸಂಬಂಧಪಟ್ಟ ಇಲಾಖೆಗಳಲ್ಲಿನ ಅಧಿಕಾರಿಗಳು ಸಮೀಕ್ಷೆ ಮಾಡಿ, ಏತಕ್ಕೆ ಕಳುಹಿಸಲಿಲ್ಲ ತುಂಬ ತಡವಾಗುತ್ತಿದೆ ಎಂದು ಹೇಳಿ ಇದನ್ನು ನಿವಾರಣೆ ಮಾಡಬೇಕು. ನಮ್ಮ ಮೈಸೂರು ಸಂಸ್ಥಾನದಲ್ಲಿ ಚಿಕ್ಕ ದೇವರಾಜ ಒಡೆಯರ್ ಎಂಬ ರಾಜರಿದ್ದರು. ಅವರು ಯಾವಾಗಲೂ ಖಜಾನೆ / ಬೊಕ್ಕಸದ ಜವಾಬ್ದಾರಿಯನ್ನು ಹೊಂದಿದ್ದರು. ಅವರು ಪ್ರತಿ ದಿವಸ ಬೊಕ್ಕಸದಿಂದ ಎಷ್ಟು ಹಣ ವ್ಯರ್ಥವಾಗುತ್ತದೆ ಹಾಗೂ ಪ್ರತಿ ದಿವಸ ಎಷ್ಟು ಹಣ ಬೊಕ್ಕಸಕ್ಕೆ ಬರುತ್ತದೆ ಎಂಬುದನ್ನು ನೋಡುತ್ತಿದ್ದರು. ಒಂದು ವೇಳೆ ಬೊಕ್ಕಸ ಖಾಲಿಯಾಗಿ, ಅಂದಿನ ದಿವಸ 40 ರಿಂದ 50 ಬೆಳ್ಳಿ ನಾಣ್ಯಗಳು ಬೊಕ್ಕಸಕ್ಕೆ ಬರಲಿಲ್ಲವೆಂದರೆ, ಅವರು ಊಟವನ್ನೇ ಮಾಡುತ್ತಿರಲಿಲ್ಲ. ಅದೇ ರೀತಿ ಯಾವಾಗಲೂ ಸಹ ಸರ್ಕಾರಿ ಖಜಾನೆ ಬರಿದಾಗಬಾರದು. Inflow and outflow of cash ಇರಬೇಕು. ಹಣ ಹೋಗುತ್ತಿರಬೇಕು ಮತ್ತು ಹಣ ಬರುತ್ತಿರಬೇಕು. ಅದಕ್ಕಾಗಿಯೇ ಅಂದಿನ ಕಾಲದಲ್ಲಿಯೇ ರಾಜ್ಯ ಹುಜೂರ್ ಖಜಾನೆ ಎಂಬ ಹೆಸರನ್ನು ಇಡಲಾಗಿದೆ. ಹಣ ಇಲ್ಲದ ಸನ್ನಿವೇಶದಲ್ಲಿ ನಾವು ಸಾಲವನ್ನು ಮಾಡಬೇಕಾಗುವ ಪರಿಸ್ಥಿತಿ ಉದ್ಭವಿಸಿದರೆ ಸಾಲ ಮಾಡಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

- ತೈಲ ದರ ಹೊರೆ ಜನತೆಯ ಬದುಕನ್ನು ಬಹಳ ದುಬಾರಿ ಮಾಡಿ, ಕತ್ತು ಹಿಚುಕುವ ತೈಲ ದರವಾಗಿದೆ.
- ಕಳೆದ 10 ದಿನಗಳನ್ನು ಬಿಟ್ಟರೆ, ಸುಮಾರು 2 ತಿಂಗಳಿಂದ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ದರ ದಿನನಿತ್ಯ ಗಗನಕ್ಕೇರುತ್ತಿದೆ. ಅದರಂತೆ, ಜನ ಸಾಮಾನ್ಯರು ಬಳಸುವ ಅಡುಗೆ ಅನಿಲದ ಬೆಲೆ ಕೂಡ ಮುಗಿಲು ಮುಟ್ಟಿದೆ. ಇದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬದವರ ಸ್ಥಿತಿ ಹೀನಾಯವಾಗಿದೆ.
- ಕೊರೋನಾ ಸಂಕಷ್ಟದಿಂದ ಇತ್ತೀಚೆಗಷ್ಟೆ ಚೇತರಿಸಿಕೊಳ್ಳುತ್ತಿದ್ದ ಜನತೆಗೆ ಈ ಬೆಲೆ ಏರಿಕೆ ನುಂಗಲಾರದ ತುತ್ತಾಗಿದೆ.
- ಡೀಸೆಲ್-ಪೆಟ್ರೋಲ್ ದರ ಹೆಚ್ಚಳದಿಂದ ವಸ್ತುಗಳನ್ನು ಸಾಗಿಸುವ ದರವೂ ಸಹ ಹೆಚ್ಚಾಗಿದೆ.
- ಅಕ್ಕಿ ಮತ್ತು ಬೇಳೆ ಕಾಳುಗಳ ದರ ಗಗನ ಮುಟ್ಟಿದೆ. ಅದರಂತೆ, ತರಕಾರಿ ಬೆಲೆಯಲ್ಲಿ ಅಗಾಧವಾದ ಏರಿಕೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಸಂಕಷ್ಟದ ಸಮಯದಲ್ಲಿ ನೆರವಿಗೆ ಬರಬೇಕಾಗಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿದಿನ ದಿನಸಿ ಪದಾರ್ಥ ಬೆಲೆ ಏರಿಸುವಂತಹ ವಾತಾವರಣ ನಿರ್ಮಾಣ ಮಾಡಿದರೆ ಜನಸಾಮಾನ್ಯರು ಮತ್ತು ಸಾರ್ವಜನಿಕರು ಏನು ಮಾಡಬೇಕೆಂದು ತೋರದೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ.
- ಇಂತಹ ವಿಷಮ ಪರಿಸ್ಥಿತಿಯಲ್ಲಿ ಸರ್ಕಾರ ಜನಸಾಮಾನ್ಯರು ಬಳಸುವ ತೈಲಗಳ ದರಗಳನ್ನು ಹೆಚ್ಚಳ ಮಾಡಿ ಲಾಭ ಮಾಡುವ ಪ್ರವೃತ್ತಿಯನ್ನು ಕೂಡಲೇ ನಿಲ್ಲಿಸಬೇಕು.
- ಈಗಾಗಲೇ ರಾಜಸ್ಥಾನ, ಮಹಾರಾಷ್ಟ್ರ, ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಶತಕದ ಗಡಿ ದಾಟಿದೆ. ಡೀಸೆಲ್ ಬೆಲೆ 85 ರೂ.ಗೆ ಮುಟ್ಟಿದೆ. ಸಹಾಯಧನದೊಂದಿಗೆ ಜನತೆಗೆ ಪೂರೈಸುವ ಅಡುಗೆ ಅನಿಲ ಬೆಂಗಳೂರಿನಲ್ಲಿ ಸಿಲಿಂಡರ್‌ಗೆ 822 ರೂ. ಮುಟ್ಟಿದೆ.
- ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬ್ಯಾರೆಲ್‌ಗೆ ಅಂದರೆ, 169 ಲೀಟರ್ ಉಳ್ಳ ಡ್ರಮ್‌ಗೆ $ 60 ಇದೆ. ಅಂದರೆ, ಸರಾಸರಿ 4380 ರೂಪಾಯಿಗಳಾಗುತ್ತದೆ. ಕಳೆದ ಏಪ್ರಿಲ್‌ನಲ್ಲಿ ಇದರ ಬೆಲೆ $ 19 ಇತ್ತು. ಆದರೂ ಕೂಡ ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಮತ್ತು ಬಿಕರಿ ಬೆಲೆ ಮೂಲ ಉಳಿತಾಯವಾದರೂ ಸಹ ರಾಜ್ಯ ಸರ್ಕಾರ ಕಡಿಮೆಯಾಗಿದೆ ಎಂದು ಗ್ರಾಹಕರಿಗೆ ವರ್ಗಾವಣೆ ಮಾಡಲಿಲ್ಲ. ಅದೇ ಬೆಲೆಯನ್ನೇ ನಿಗದಿಪಡಿಸಿತ್ತು.

ಏತಕ್ಕಾಗಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬ್ಯಾರೆಲ್‌ಗೆ ಅಂದರೆ, 169 ಲೀಟರ್ ಉಳ್ಳ ಡ್ರಮ್‌ಗೆ $ 60 ಇದ್ದರೂ ಸಹ ಪೆಟ್ರೋಲ್ ದರ 94.22 ರೂಪಾಯಿ ಮತ್ತು ಡೀಸೆಲ್ ದರ ರೂ. 86.37 ರೂಪಾಯಿ ಹಾಗೂ ಅಡುಗೆ ಅನಿಲ 822 ರೂಪಾಯಿ ಆಗಿದೆ ಎಂದರೆ, ಅಂತರ ರಾಷ್ಟ್ರೀಯ ಮಾರುಕಟ್ಟೆಯ ಆಧಾರದ ಮೇಲೆ ತೆಗೆದುಕೊಂಡರೂ ಸಹ ಪೆಟ್ರೋಲ್‌ನ ಮೂಲ ದರ ಪ್ರತಿ ಲೀಟರ್‌ಗೆ 29 ರೂಪಾಯಿ ಮಾತ್ರ. ಕೇಂದ್ರ ಸರ್ಕಾರ ವಿಧಿಸುವ ಅಬಕಾರಿ ಶುಲ್ಕ excise duty ಪ್ರತಿ ಲೀಟರ್‌ಗೆ 33 ರೂಪಾಯಿ. ಇನ್ನು ರಾಜ್ಯ ಸರ್ಕಾರ ವಿಧಿಸುವ ರಾಜ್ಯ ತೆರಿಗೆ, ವ್ಯಾಟ್ ಮತ್ತು dealer commission ಸೇರಿದರೆ 25 ರೂಪಾಯಿ. ಒಟ್ಟು 91 ರೂಪಾಯಿಗಳಾಗುತ್ತದೆ. ಈಗಾಗಲೇ ಅಸ್ಸಾಂನಲ್ಲಿ ಪ್ರತಿ ಪೆಟ್ರೋಲ್ ಮತ್ತು ಡೀಸೆಲ್‌ಗೆ 5 ರೂಪಾಯಿ ಇಳಿಸಲಾಗಿದೆ. ಅದೇ ರೀತಿ ಕೇಂದ್ರ ಸರ್ಕಾರವು ಏತಕ್ಕೆ ಅಬಕಾರಿ ಸುಂಕವನ್ನು ಕಡಿಮೆ ಮಾಡಬಾರದು? ರಾಜ್ಯ ಸರ್ಕಾರ ಏತಕ್ಕಾಗಿ ತೆರಿಗೆ – ವ್ಯಾಟ್‌ಗಳ ದರಗಳನ್ನು ಕಡಿಮೆ ಮಾಡಬಾರದು. ಬೆಂಗಳೂರಿನಲ್ಲಿ ಇವತ್ತಿನ ಪೆಟ್ರೋಲ್ ದರ 94.22 ರೂಪಾಯಿ ಮತ್ತು ಡೀಸೆಲ್ ದರ 86.37 ರೂಪಾಯಿ. ಇದು ಇಲ್ಲಿಗೆ ನಿಂತಿಲ್ಲ. ಕೇಂದ್ರ ಸರ್ಕಾರವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊಸ ಕೃಷಿ ಮೂಲಸೌಕರ್ಯ ಮತ್ತು ಅಭಿವೃದ್ಧಿ ಸೆಸ್ ಎಂದು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸಿದ್ದಾರೆ. ಇದು ನೇರವಾಗಿ ರೈತರ ಮೇಲೆ ಬೀಳುತ್ತದೆ.

**(ಮುಂದು)**

**(391) 15.03.2021/4.20/ಎಸ್‌ಕೆ-ಎಕೆ**

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):-**

ಇದು ಬಡ ರೈತನ ಮೇಲೆ ಇನ್ನೊಂದು ಹೊರೆ. ಪೆಟ್ರೋಲ್ ಉತ್ಪನ್ನಗಳ ದರ ಇಳಿಕೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೆ ಶ್ರಮಿಸಬೇಕು ಮತ್ತು ಪ್ರಯತ್ನಿಸಬೇಕು. ಆದರೆ ಆಗುತ್ತಿಲ್ಲ. ಕೇಂದ್ರ ಅರ್ಥ ಸಚಿವರು ಹೇಳಿದ್ದಾರೆ: ಕೇಂದ್ರ ಸರ್ಕಾರ ಧರ್ಮ ಸಂಕಟದಲ್ಲಿದೆ. ಬೆಲೆ ಇಳಿಸಬೇಕೋ ಬೇಡವೋ ಎನ್ನುವಂತಹದ್ದು ಕಷ್ಟ ಆಗುತ್ತಿದೆ. ಪೆಟ್ರೋಲ್, ಡಿಸೇಲ್, ಅಡುಗೆ ಅನಿಲ ಬೆಲೆ ಇಳಿಸಬೇಕಾದರೆ, ಈ ರಾಜ್ಯ ಸರ್ಕಾರವೇ ಮುಂದಿನ ಹೆಜ್ಜೆ ಇಡಬೇಕು.

ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರ ಕೇವಲ ಅಬಕಾರಿ ಸುಂಕ ಒಂದೇ ಕಡಿಮೆ ಮಾಡಿದರೆ ಆಗುವುದಿಲ್ಲ ಅಥವಾ ರಾಜ್ಯ ಸರ್ಕಾರದವರು ಬರೀ ತೆರಿಗೆ ಕಡಿಮೆ ಮಾಡಿದರೆ ಆಗುವುದಿಲ್ಲ. ಎರಡೂ ಸರ್ಕಾರಗಳು ಒಗ್ಗೂಡಿ ದಯಮಾಡಿ, ಮುಂದಿನ ದಿನಗಳಲ್ಲಿ ಇದರ ಬಗ್ಗೆ ಯೋಚನೆ ಮಾಡಿ, ಆದಷ್ಟು ದರವನ್ನು ಕಡಿಮೆ ಮಾಡತಕ್ಕಂಥ ಕೆಲಸವೂ ಕೂಡ ಆಗಬೇಕು. ಇಂಧನ ಮತ್ತು ಟೈರ್‌ನ ದರಗಳು ಏರಿದ್ದಷ್ಟೇ ಅಲ್ಲದೇ ಕಳೆದ 8 ವಾರಗಳಲ್ಲಿ ಟ್ರಕ್ ಬಾಡಿಗೆ 13% ಏರಿಕೆಯಾಗಿದೆ ಎಂದು ಭಾರತೀಯ ಸಾರಿಗೆ ಅಧ್ಯಯನ ಮತ್ತು ತರಬೇತಿ ಪ್ರತಿಷ್ಠಾನ (I.F.T.R.T) ಎಂಬ ಒಂದು independent agency ಅವರೇ ಮಾಡಿ, ಬಿಡುಗಡೆ ಮಾಡಿದಂತಹ ಒಂದು facts ಇದು. ಬೆಂಗಳೂರಿನ ಓಲಾ ಮತ್ತು ಉಬರ್ ಟ್ಯಾಕ್ಸಿಗಳನ್ನು Application Software ಮುಖೇನ ಓಡಿಸುತ್ತಿದ್ದರು. ಟ್ಯಾಕ್ಸಿ ಚಾಲಕರು ಪೆಟ್ರೋಲ್ ಉತ್ಪನ್ನಗಳ ದರ ಏರಿಕೆ ಮತ್ತು ಟ್ಯಾಕ್ಸಿ ಮತ್ತು ಕ್ಯಾಬ್‌ಗಳಿಗೆ ಬೇಡಿಕೆ ಇಲ್ಲದ ಪ್ರಯುಕ್ತ ತಮ್ಮ ಉದ್ಯೋಗವನ್ನು ತ್ಯಜಿಸಿ ಬೇರೆ ರೀತಿ ಉದ್ಯೋಗಗಳಾದ ತರಕಾರಿ, ಹಣ್ಣು-ಹಂಪಲು ಮಾರಾಟ ಮತ್ತು ಇತರೆ ಚಿಲ್ಲರೆ ಮಾರಾಟದ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ತುಂಬಾ ಪೆಟ್ಟಾಗಿದೆ. ಜನ ಸಾಮಾನ್ಯರು ಮತ್ತು ಶ್ರೀಸಾಮಾನ್ಯರ ಮೇಲೆ ಸಿಕ್ಕಾಬಟ್ಟೆ ಹೊರೆಯಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ದಯವಿಟ್ಟು, ಯೋಚನೆ ಮಾಡಬೇಕು. ಪೆಟ್ರೋಲ್, ಡೀಸೆಲ್ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೈಸರ್ಗಿಕ ಅನಿಲವನ್ನು ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ಅಂದರೆ, GST ವ್ಯಾಪ್ತಿಗೆ ತರುವುದಾಗಿ ಮಾನ್ಯ ಪ್ರಧಾನ ಮಂತ್ರಿಯವರು ತಮಿಳುನಾಡಿನಲ್ಲಿನ ತೈಲ ಮತ್ತು ಅನಿಲ ಯೋಜನೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಹೇಳಿದರು. ಇದು ಕಾರ್ಯ ಸಾಧ್ಯವಾದುದೇ? ನನಗೆ ತಿಳಿದ ಮಟ್ಟಿಗೆ ಶೇಕಡ 13 ರಿಂದ 14 ರಷ್ಟು ರಾಜ್ಯ ಸರ್ಕಾರದ ಆದಾಯ ಏನಿದೆಯೋ ಅದು ಈ ಜಮೆಗಳಿಂದಲೇ ಬರುತ್ತದೆ. ಅದು ಇದರಿಂದಲೇ ಬರತಕ್ಕಂತಹದ್ದು. ತಾವು ದಯವಿಟ್ಟು Excise Duty ಕಡಿಮೆ ಮಾಡುವ ಮೂಲಕ ರಾಜ್ಯ ವ್ಯಾಪಿ ತೆರಿಗೆಯನ್ನು ಕಡಿಮೆ ಮಾಡಬೇಕು. ಇದನ್ನು ಜಿ.ಎಸ್.ಟಿ. ಒಳಗಡೆ ತರುವುದಕ್ಕೆ ಹೋಗಬೇಡಿ. ನಾನು ಸರ್ಕಾರದ ದೃಷ್ಟಿಯಿಂದ ಹೇಳುತ್ತಿದ್ದೇನೆ. ಜನಸಾಮಾನ್ಯರ ದೃಷ್ಟಿಯಲ್ಲಿ ಒಳ್ಳೆಯದು. ಏಕೆಂದರೆ, ಅದು ಶೇಕಡ 4 ರಿಂದ 5 ರಷ್ಟು ಬೀಳಬಹುದು. ಅದರ ಮೇಲೆ ಇಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಯಾವುದೆ ಪಕ್ಷಗಳು ಆಳಲಿ, ಈ ಸರ್ಕಾರಗಳು ಅಬಕಾರಿ ಸುಂಕ ಮತ್ತು ರಾಜ್ಯ ತೆರಿಗೆ VAT ಗಳ ದರಗಳನ್ನು ಇಳಿಸಿ, ಶ್ರೀಸಾಮಾನ್ಯನ ನೆರವಿಗೆ ಬರಬೇಕು. ಹೊತ್ತಿ ಉರಿಯುತ್ತಿರುವ ಪೆಟ್ರೋಲ್ ಜ್ವಾಲೆಯನ್ನು ನಂದಿಸಬೇಕು. ಇಲ್ಲದಿದ್ದಲ್ಲಿ, ಮುಂದಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿತಪಿಸಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ 1ನೇ ವಲಯವಾದ ಕೃಷಿ ಮತ್ತು ಪೂರಕ ಚಟುವಟಿಕೆಗಳಲಿ ಕಳಸಾ ಮತ್ತು ಬಂಡೂರಿ ನಾಲಾ ತಿರುವು ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3, ಎತ್ತಿನ ಹೊಳೆ ಸಮಗ್ರ ಕುಡಿಯುವ ನೀರು ಯೋಜನೆ, ಬೇಡ್ತಿ–ವರದಾ ನದಿ ಜೋಡಣೆ ಯೋಜನೆ, ತುಂಗಾಭದ್ರಾ ಜಲಾಶಯದಲ್ಲಿ ಹೂಳು ತುಂಬಿ ನೀರಿನ ಸಂಗ್ರಹಣೆಯಲ್ಲಿ ಉಂಟಾಗಿರುವ ಕೊರತೆಯನ್ನು ಸರಿದೂಗಿಸಲು ಕೊಪ್ಪಳ ಜಿಲ್ಲೆಯ ನವಲು ಬಳಿ ಸಮಾನಾಂತರ ಜಲಾಶಯ ನಿರ್ಮಾಣ ಅಂದರೆ Balancing Reservoir ನ್ನು ಮಾಡುತ್ತೇನೆ ಹಾಗೂ ಏತ ನೀರಾವರಿ ಯೋಜನೆಗಳಿಗೆ ಅಗತ್ಯವಿರುವ ಅನುದಾನವನ್ನು ಒದಗಿಸಿದೆ ಎಂದು ಹೇಳಿದ್ದಾರೆ. ಆದರೆ ರಾಜ್ಯ ಸರ್ಕಾರ ತಯಾರಿಸಿರುವ ಮಧ್ಯಮಾವಧಿ ವಿತ್ತೀಯ ಯೋಜನೆ ಅಂದರೆ, 'Medium Term Fiscal Plan 2021-25' ಪ್ರಕಾರ, ಈ ಮೇಲ್ಕಂಡ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜಲ ಸಂಪನ್ಮೂಲ ಇಲಾಖೆ ಅಡಿಯಲ್ಲಿ 4 ನೀರಾವರಿ ನಿಗಮಗಳನ್ನು ಒಳಗೊಂಡಂತೆ ಇತರೆ ಪ್ರಮುಖ ಮೂಲ ಸೌಕರ್ಯ ಕಲ್ಪಿಸತಕ್ಕಂಥ ಇಲಾಖೆಗಳಾದಂತಹ ನಗರಾಭಿವೃದ್ಧಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಬೇಡಿಕೆಯಲ್ಲಿ ಕಡಿತ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಗರಾಭಿವೃದ್ಧಿ ಇಲಾಖೆಗೆ 2020–21ರಲ್ಲಿ ಸುಮಾರು 15,973.33 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ನಿಗದಿಪಡಿಸಲಾಗಿತ್ತು. ಅದರಲ್ಲಿ ಸುಮಾರು 4816.33 ಕೋಟಿ ರೂಪಾಯಿಗಳನ್ನು ಈ ಸಾಲಿನ ಆಯವ್ಯಯದಲ್ಲಿ ಕಡಿತಗೊಳಿಸಿದ್ದಾರೆ. ಬೃಹತ್ ನೀರಾವರಿಗೆ 2020–21ರಲ್ಲಿ ಸುಮಾರು 17,017.72 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಅದರಲ್ಲಿ ಸುಮಾರು 3713.44 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ 2020–21ರಲ್ಲಿ ಸುಮಾರು 10,229.44 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಅದರಲ್ಲಿ ಸುಮಾರು 2317.93 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿದ್ದಾರೆ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಇಲಾಖೆಗೆ 2020–21ರಲ್ಲಿ ಸುಮಾರು 15,496.03 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಅದರಲ್ಲಿ ಸುಮಾರು 1486.48 ಕೋಟಿ ರೂಪಾಯಿಗಳನ್ನು ಕಡಿತಗೊಳಿಸಿದ್ದಾರೆ. ಅಂದರೆ ಈ ವರ್ಷದಲ್ಲಿ ಈ ವಲಯಗಳಿಗೆ ಸುಮಾರು 46,382.34 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದಾರೆ. ಕಳೆದ ವರ್ಷ 58,716.52 ಕೋಟಿ ರೂಪಾಯಿಗಳ ವಿರುದ್ಧವಾಗಿ 46,382.34 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದಾರೆ. ಈ ನಾಲ್ಕು ವಲಯಗಳಿಗೆ ಅಂದರೆ ಸುಮಾರು 12,333.48 ಕೋಟಿ ರೂಪಾಯಿಗಳ ಕೊರತೆ ಇದೆ. ಪ್ರಮುಖವಾಗಿ ಕುಡಿಯುವ ನೀರು, ರಸ್ತೆ, ಕಟ್ಟಡಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡುವಂತಹ ಈ ಇಲಾಖೆಗಳ ಬೇಡಿಕೆಯಲ್ಲಿ ಸರ್ಕಾರ ಅನುದಾನವನ್ನು ಕಡಿತ ಮಾಡಿದರೆ, ಇನ್ನುಳಿದ ಬಾಕಿ ಉಳಿದ ಇಲಾಖೆಗಳ ಗತಿ ಏನಾಗಿದೆ ಎಂಬುದು ಗೊತ್ತಿಲ್ಲ. ಇದನ್ನು ನೋಡಿ, ವಿವರವಾಗಿ ಹೇಳಬೇಕು. ಬೇರೆ ಎಲ್ಲಾ ಇಲಾಖೆಗಳ ಬಗ್ಗೆ ನೋಡಿದ ನಂತರ ಎಲ್ಲಾ ಪಕ್ಷದ ಸದಸ್ಯರು ಇದರ ಬಗ್ಗೆ ಬೆಳಕು ಚೆಲ್ಲಬೇಕು.

**ಉಪ ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ ತಮಗೆ ಮಾತನಾಡಲು ಎಷ್ಟು ಸಮಯ ಬೇಕು?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ನನಗೆ ಮಾತನಾಡಲು ಸುಮಾರು ಹತ್ತು ನಿಮಿಷಗಳ ಸಮಯ ಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ತಿಪ್ಪೇಸ್ವಾಮಿಯವರೇ, ಇನ್ನು ಐದು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಇದು ತುಂಬಾ ಪ್ರಮುಖವಾಗಿದೆ. ನಮ್ಮಲ್ಲಿ ಯಾರಾದರೂ ಸದಸ್ಯರು ಮಾತನಾಡುವುದಾದರೆ, ಅವರಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಪದೇ ಪದೇ ಬರಗಾಲಕ್ಕೆ ತುತ್ತಾಗುವ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಅದರಲ್ಲೂ ಹಿಂದುಳಿದ ಮತ್ತು ಗಡಿ ಭಾಗಗಳಾದ ಶಿರಾ, ಪಾವಗಡ, ಮಧುಗಿರಿ, ಕೊರಟಗೆರೆ ಹಾಗೂ ಹಿರಿಯೂರು, ಚಳ್ಳಕೆರೆ ತಾಲ್ಲೂಕುಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಮತ್ತು ಎತ್ತಿನಹೊಳೆ ಯೋಜನೆಗಳನ್ನು ಯಾವ ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು? ಈ ರೀತಿ ಅನುದಾನವನ್ನು ಕಡಿತ ಮಾಡುತ್ತಾ ಹೋದರೆ, ನೀರು ಕೊಡದೇ ಇದ್ದರೆ ಹೊಸದಾಗಿ ಕಾಲುವೆ ತೋಡಿ, ಕೆರೆಗಳಿಗೆ ನೀರು ತುಂಬಿಸುವಂತಹ ಕಾರ್ಯಕ್ರಮಗಳನ್ನು ಮಾಡುವುದು ಹೇಗೆ? ಕುಡಿಯುವ ನೀರು ಅಗತ್ಯವಿದೆಯೋ ಇಲ್ಲವೋ? ಮಾನ್ಯ ಸಭಾಪತಿಯವರೇ, ದಯವಿಟ್ಟು ಸರ್ಕಾರ ಇದರ ಬಗ್ಗೆ ಅಗತ್ಯವಾದ ಉತ್ತರವನ್ನು ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ವಲಯ–6ರಲ್ಲಿ ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆ ಭಾಗದಲ್ಲಿ ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಇನ್ನಷ್ಟು ಹೆಚ್ಚಿಸಲು ಎರಡನೇ ಆಡಳಿತ ಸುಧಾರಣಾ ಆಯೋಗವನ್ನು ರಚಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಇದರ ಅಧ್ಯಕ್ಷರು ಮತ್ತು ಸದಸ್ಯರು ಯಾರು? ಈ ಆಯೋಗಕ್ಕೆ ನೀಡಿರುವ Terms and References ಯಾವುವು ಎಂದು ಸದನಕ್ಕೆ ತಿಳಿಸಿಲ್ಲ. ಅದನ್ನು ದಯವಿಟ್ಟು ತಿಳಿಸಬೇಕು. ಏಕೆಂದರೆ, ಸರ್ಕಾರಿ ವೆಚ್ಚವನ್ನು ಕಡಿಮೆ ಮಾಡಲು ಆರ್ಥಿಕ ಇಲಾಖೆಯ DMTF ಅಡಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಲಾಗಿರುವ ವಿತ್ತೀಯ ನಿರ್ವಹಣಾ ಪರಿಶೀಲನಾ ಸಮಿತಿ, Fiscal Management Review Committee ಅಲ್ಲಿ ಏನು ತೀರ್ಮಾನ ಮಾಡುತ್ತಾರೆಂದರೆ, ಕೆಲವು ಇಲಾಖೆಗಳ ಪುನರ್ ರಚನೆ ಮತ್ತು ವಿಲೀನ ವಿವಾದ ಹಾಗೂ ಇಲಾಖೆಗಳಲ್ಲಿನ ಅನಗತ್ಯ ಹುದ್ದೆಗಳನ್ನು ರದ್ದುಗೊಳಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ ಮತ್ತು 20 ಕೋಟಿ ರೂಪಾಯಿಗಳಿಗಿಂತ ಕಡಿಮೆ ಗಾತ್ರದ ಯೋಜನೆಗಳನ್ನು ಪುನರ್ ಪರಿಶೀಲಿಸುವುದು ಮತ್ತು ಅವುಗಳನ್ನು ರದ್ದುಗೊಳಿಸಲಾಗುವುದು ಎಂದು ತಿಳಿಸಿದ್ದಾರೆ. ಮಾನ್ಯ ಪಾಟೀಲ್‌ರವರೇ ತಮ್ಮಲ್ಲಿ 20 ಕೋಟಿ ರೂಪಾಯಿಗಳಿಗಿಂತ ಸಾಕಷ್ಟು ಕಡಿಮೆ ಇದ್ದರೆ, ಅದಷ್ಟು Centrally Sponsored Schemes ಇರುತ್ತವೆ. ಇವೆಲ್ಲವನ್ನು ಕೂಡ ರದ್ದು ಮಾಡುವುದಕ್ಕೆ ಬರುವುದಿಲ್ಲ. ಹುದ್ದೆಗಳನ್ನು ರದ್ದು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಏಕೆಂದರೆ, ಅನುದಾನ ಕೊಡಬೇಕಾದರೆ, ಈ ಯೋಜನೆಯನ್ನು ಈ ರೀತಿಯಾಗಿ ಮಾಡಬೇಕೆಂದು ಹೇಳುತ್ತಾರೆ. ಇದು ಬಹಳ ಸೂಕ್ಷ್ಮವಾದಂತಹ ವಿಷಯವಾಗಿದೆ. ನಾವು ಎಲ್ಲಾ ಕಡೆಗಳಲ್ಲಿ 2–3 ಲಕ್ಷ ಹುದ್ದೆಗಳು ಖಾಲಿಯಿವೆ ಎಂದು ಹೇಳುತ್ತೇವೆ. ಒಂದು ಕಡೆ ಎಲ್ಲವನ್ನು

ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಅವುಗಳು Central Sector Schemes and Centrally Sponsored Scheme ಗೆ ಅನ್ವಯಿಸುವುದು ಇದ್ದರೆ, ಅವುಗಳನ್ನು ಹೊರತುಪಡಿಸಿ, ಈ ವಿಷಯವನ್ನು ಆಯೋಗದ Terms of Reference ನಲ್ಲಿ ಸೇರಿಸಬೇಕು. ಅದನ್ನು ಕೂಡ ಸೇರಿಸಿಕೊಂಡು, ನಾವೇನಾದರೂ ಶಿಫಾರಸ್ಸು ಮಾಡಿದರೆ, ಸರ್ಕಾರದವರು ಅನುಷ್ಠಾನ ಎಂಬ ಹೆಸರಿನಲ್ಲಿ ಆಡಳಿತ ಸುಧಾರಣೆಯ ಶಿಫಾರಸ್ಸುಗಳ ಅನುಷ್ಠಾನ ಎಂದು ಹೇಳಿಬಿಟ್ಟರೆ, ಮುಗಿಸಿಬಿಡುತ್ತಾರೆ. ನಮ್ಮವರೇ ಆದ ಶ್ರೀ ವೀರಪ್ಪ ಮೊಯಿಲಿಯವರ ನೇತೃತ್ವದ ಕೇಂದ್ರದ 2ನೇ ಆಡಳಿತ ಸುಧಾರಣಾ ಆಯೋಗ ನೀಡಿದ ವರದಿಗಳಲ್ಲಿನ ಸುಮಾರು ಶಿಫಾರಸ್ಸುಗಳು ಬಂದವು. ಆ ಶಿಫಾರಸ್ಸುಗಳನ್ನು ಅನುಷ್ಠಾನ ಮಾಡಿದರೆ ಕೇಂದ್ರ ಸರ್ಕಾರದಿಂದ ಸಾಕಷ್ಟು ಅನುದಾನ ಬರುತ್ತದೆ. ಅನುಷ್ಠಾನಕ್ಕೆ ಅನುದಾನ ಬರುತ್ತದೆ. Reforms ಅನುಷ್ಠಾನ ಮಾಡಿದರೆ, ಅನುದಾನ ಬರುತ್ತದೆ. ಅದು ಯಾವ್ಯಾವುದಕ್ಕೆ ಮಾಡಿದ್ದೀರಿ ಎಂದು ಕೂಡ ಎಲ್ಲಿಯೂ ಹೇಳಿಲ್ಲ. ದಯವಿಟ್ಟು, Terms of Reference ನಲ್ಲಿ ಹಾಕಿ.

**(ಮುಂದು)**

**(392) 15.03.2021, 4.30, ಟಿಸಿಹೆಚ್-ಎಕೆ**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):-**

ಒಂದೇ ಒಂದು ಹೆಗ್ಗಳಿಕೆ ವಿಷಯವೇನೆಂದರೆ, ಎರಡನೆಯ ಕೇಂದ್ರದ ಆಡಳಿತ ಸುಧಾರಣಾ ಆಯೋಗದ ನೇತೃತ್ವವನ್ನು ನಮ್ಮವರೇ ಆದ ಮಾನ್ಯ ವೀರಪ್ಪಮೊಯಿಲಿಯವರು ವಹಿಸಿದ್ದರು ಹಾಗೂ ನಮ್ಮ ರಾಜ್ಯದ ಮೊಟ್ಟಮೊದಲನೆಯ ಆಡಳಿತ ಸುಧಾರಣೆ ಮಾಡಿರತಕ್ಕಂಥವರು ಅಂದಿನ ಕರ್ನಾಟಕ ಮುಖ್ಯಮಂತ್ರಿಗಳು ಕೇಂದ್ರದಲ್ಲಿ ರೈಲ್ವೇ ಸಚಿವರಾಗಿದ್ದಂತಹ ಹಾಗೂ ಈ ವಿಧಾನಸೌಧವನ್ನು ಕಟ್ಟಿಸಿದಂತಹ ಶಿಲ್ಪಿ ಹಾಗೂ ರುವಾರಿಯಾದಂಥ ಶ್ರೀ ಕೆಂಗಲ್ ಹನುಮಂತಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರು ಹೇಳಿದಂತೆ, ಈ ಹಿಂದೆ ಕೂಡ ಮೊಟ್ಟಮೊದಲನೆಯ ರಾಜ್ಯ ಆಡಳಿತ ಸುಧಾರಣೆಯ ನೇತೃತ್ವವನ್ನು ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ವಹಿಸಿದ್ದರು. ಅವರು ಕೂಡ ಕೆಲವೊಂದು ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ. ಅದರಿಂದ ಇಲಾಖೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ನಾವು ಇದನ್ನೆಲ್ಲಾ ಕೂಡ ನೋಡಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2021–22ನೇ ಮುಂಗಡ ಪತ್ರದಲ್ಲಿ ನಿರೀಕ್ಷಿಸಿದ ಜಮಾಗಳು–ಅಂದಾಜು ಮಾಡಿದ ಜಮಾಗಳು–Revenue Receipts 1,72,271 ಕೋಟಿ ರೂಪಾಯಿಗಳು, ಸಾಲ ಮತ್ತು ಬಂಡವಾಳ ಸೇರಿ ಜಮಾ–Loan and Capital 71,463 ಕೋಟಿ ರೂಪಾಯಿಗಳು, ಒಟ್ಟು 2,43,734 ಕೋಟಿ ರೂಪಾಯಿಗಳು. ಇನ್ನು ವಿನಿಯೋಗಿಸಬಹುದಾದ ವೆಚ್ಚ ವಿವರ–ರಾಜಸ್ವ ವೆಚ್ಚ–Revenue Expenditure 1,87,405 ಕೋಟಿ ರೂಪಾಯಿಗಳು, ಬಂಡವಾಳ ವೆಚ್ಚ–Capital Expenditure 44,237 ಕೋಟಿ ರೂಪಾಯಿಗಳು, ಸಾಲದ ಮರುಪಾವತಿ–Loan Repayment 14,565 ಕೋಟಿ ರೂಪಾಯಿಗಳು, ಒಟ್ಟು 2,46,207 ಕೋಟಿ ರೂಪಾಯಿಗಳು. ಈ ಅಂಶಗಳಿಂದ ನಮಗೆ ಗೊತ್ತಾಗುವುದೇನೆಂದರೆ, ನಾವೇನು ರಾಜಸ್ವ ಕೊರತೆ– Revenue Deficit ಎಂದು ಹೇಳುತ್ತೇವೆ, ಅದು 15,134 ಕೋಟಿ ರೂಪಾಯಿಗಳು ಇದೆ. ಇದು ಜಿ.ಎಸ್.ಡಿ.ಪಿ.ಯ ಶೇ.2 ರಷ್ಟು ಇದೆ. ಇದುವರೆಗೆ ಕಳೆದ ವರ್ಷದವರೆಗೂ ಕೂಡ ನಮ್ಮ ರಾಜ್ಯದಲ್ಲಿ ಯಾವುದೇ ಸರ್ಕಾರ, ಸಮಿಶ್ರ ಸರ್ಕಾರ ಇರಬಹುದು, ಬಿ.ಜೆ.ಪಿ. ಸರ್ಕಾರ ಇರಬಹುದು ಮತ್ತು ಕಾಂಗ್ರೆಸ್ ಸರ್ಕಾರ ಇರಬಹುದು. ಈ ಫಿಸ್ಕಲ್ ಮ್ಯಾನೇಜ್‌ಮೆಂಟ್‌ನಲ್ಲಿ ತುಂಬಾ prudent ಆಗಿತ್ತು. ಯಾವಾಗಲೂ ಶೇ.1ಕ್ಕಿಂತ ಕಡಿಮೆ ಇರುತ್ತಿತ್ತು. ಆದರೆ, ಇವತ್ತಿನ ಆರ್ಥಿಕ ಪರಿಸ್ಥಿತಿಯಲ್ಲಿ ಅದನ್ನು ಶೇ.2 ಮಾಡಿದ್ದಾರೆ. ವಿತ್ತೀಯ ಕೊರತೆ ಅಂದರೆ Fiscal Deficit 59,240 ಕೋಟಿ ರೂಪಾಯಿಗಳು ಅಥವಾ ಜಿ.ಎಸ್.ಡಿ.ಪಿ.ಯ ಶೇ.3.48 ಇರಬೇಕೆಂದು ಮಾಡಿದ್ದಾರೆ. ಇದಕ್ಕೆ ಯಾವ ರೀತಿಯಾದ ಸಂಪನ್ಮೂಲ ಕ್ರೋಢಿಕರಣ ಮಾಡಿದ್ದಾರೆಂದು ಹೇಳುವುದಾದರೆ; GST Collection including GST Compensation 1,24,202 ಕೋಟಿ ರೂಪಾಯಿಗಳು, Non-Tax Revenue Collection 8258 ಕೋಟಿ ರೂಪಾಯಿಗಳು, ಕೇಂದ್ರ ತೆರಿಗೆ ಪಾಲಿನ ರೂಪದಲ್ಲಿ ಅಂದರೆ ಸೆಂಟ್ರಲ್ ಶೇರ್ 24,273 ಕೋಟಿ ರೂಪಾಯಿಗಳು ಇರುತ್ತದೆ. ಕೇಂದ್ರದ ಸಹಾಯಧನ ಅಂದರೆ Central Assistance 15,538 ಕೋಟಿ ರೂಪಾಯಿಗಳು ಬರುತ್ತದೆ. ಸಾಲಗಳು 71,332 ಕೋಟಿ ರೂಪಾಯಿಗಳು, ಸ್ವೀಕೃತಿಗಳು 40 ಕೋಟಿ ರೂಪಾಯಿಗಳು, ಲೋನ್ ರೀಕಾಲ್ 91 ಕೋಟಿ ರೂಪಾಯಿಗಳು. ಇದಲ್ಲದೇ ಕೆಲವು ಪಾಯಿಂಟ್ಸ್ ಹೇಳಿದ್ದಾರೆ, ಅದಕ್ಕೆ ನನಗೆ ಕ್ಲಾರಿಫಿಕೇಷನ್ ಬೇಕು. 23,763 ಕೋಟಿಗಳು ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಸಾಲ ಎತ್ತಲಾಗುವುದೆಂದು ತಿಳಿಸಿದ್ದಾರೆ. ಹಾಗಾದರೆ, ನೀರಾವರಿ ನಿಗಮ ಅಥವಾ ಕೆಎಸ್ಎಸ್ಐಡಿಸಿ, ಇಂತಹ ನಿಗಮಗಳ ಮುಖೇನವೇನಾದರೂ ಸಾಲವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತಾರೆಯೇ? ಇದು Off Budget Borrowing ಆಗಿದೆಯೇ? ಇದು Fiscal Deficit ಗೆ ಒಳಗಾಗುವುದಿಲ್ಲವೇ? ಇದರ ವಿವರಣೆ ಬೇಕು. ಬಹುಶಃ ಇದಕ್ಕೆ ವಿವರಣೆಯನ್ನು ಕೊಡದಿದ್ದರೆ ಬಹಳ ಕಷ್ಟವಾಗುತ್ತದೆ. ದಿನಾಂಕ 04.03.2021 ರಂದು ನನ್ನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 606ಕ್ಕೆ ನೀಡಿರುವ ಉತ್ತರದಲ್ಲಿ ಕೇಂದ್ರ ಸರ್ಕಾರ ರಿಸರ್ವ್ ಬ್ಯಾಂಕ್‌ನೊಂದಿಗೆ ಮಾಡಿಕೊಂಡಿರುವ ಸ್ಪೆಷಲ್ ವಿಂಡೋ ವ್ಯವಸ್ಥೆಯಲ್ಲಿ ಕರ್ನಾಟಕ ರಾಜ್ಯದ ಪರವಾಗಿ Back-to-Back Loan ಆಗಿ 15,936.43 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಸಾಲವನ್ನು ಎತ್ತಿ ರಾಜ್ಯ ಸರ್ಕಾರಕ್ಕೆ ವರ್ಗಾವಣೆ ಮಾಡಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ಜಿ.ಎಸ್.ಟಿ ಲುಕ್ಸಾನಿಗೆ ಪರಿಹಾರವಾಗಿ ಡಿಸೆಂಬರ್ ಮತ್ತು ಜನವರಿ ಅಂತ್ಯದವರೆಗೆ ಪರಿಹಾರ ರೂಪವಾಗಿ ನೀಡಬೇಕಾಗಿದ್ದ 11,355.55 ಕೋಟಿ ರೂಪಾಯಿಗಳನ್ನು Back-to-Back ಸಾಲದ ವ್ಯವಸ್ಥೆಯಲ್ಲಿ ನೀಡಿದೆ. ಆದರೆ, ನನಗೆ ತಿಳಿದ ಮಟ್ಟಿಗೆ ಈ ರೀತಿ ಕೇಂದ್ರ ಸರ್ಕಾರ ಎತ್ತಿದ ಸಾಲ ಕೇಂದ್ರದ ಲೆಕ್ಕದ ಪುಸ್ತಕದಲ್ಲಿ ಪ್ರತಿಬಿಂಬವಾಗುವುದಿಲ್ಲ. ಅವರು ನಮ್ಮ ಪರವಾಗಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಅದು ಅವರ Books of Accounts ನಲ್ಲಿ ಬರುವುದಿಲ್ಲ. ಅದು ರಾಜ್ಯ ಸರ್ಕಾರದ ಲೆಕ್ಕದ ಪುಸ್ತಕದಲ್ಲಿ ಪ್ರತಿಬಿಂಬವಾಗುತ್ತದೆ. ಕೇಂದ್ರ ಸರ್ಕಾರದ ಜವಾಬ್ದಾರಿ ಈ ಸಾಲ ಮತ್ತು ಇದಕ್ಕೆ ತಗಲುವ ಬಡ್ಡಿಯನ್ನು ಮರುಪಾವತಿ ಮಾಡುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ತಾವು ಇನ್ನೂ ಹೆಚ್ಚಿಗೆ 10 ನಿಮಿಷ ಸಮಯ ತೆಗೆದುಕೊಂಡಿರುವುದು ಮುಗಿಯಿತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಎರಡು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಬಹಳ ಮುಖ್ಯವಾದ ವಿಷಯ ಹೇಳುವುದಿದೆ.

**ಉಪ ಸಭಾಪತಿಯವರು:–** ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ಆಯಿತು. ಎರಡು ನಿಮಿಷದಲ್ಲಿ ಮಾತನ್ನಾಡಿ ಮುಗಿಸಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಎಲ್ಲಾ ನನ್ನ ಅನಿಸಿಕೆ ವರದಿ ಸರಿಯೆಂದರೆ, ಆರ್ಥಿಕ ಇಲಾಖೆ 2020–21ನೇ ಸಾಲಿನಲ್ಲಿ ವಿತ್ತೀಯ ಕೊರತೆಯೆಂದು ತೋರಿಸಿರುವ ಜಿ.ಎಸ್.ಡಿ.ಪಿ.ಯ ಶೇ.3.28 ಸರಿಯಲ್ಲವೆಂದು ಭಾವಿಸುತ್ತೇನೆ. ಏಕೆಂದರೆ, Back-to-Back ಸಾಲ ಸೇರಿ ವಿತ್ತೀಯ ಕೊರತೆ ಶೇ.5ಗಿಂತ ಮಿಗಿಲಾದರೆ, ನೀವು ಯಾವ ರೀತಿ ವಿತ್ತೀಯ ಕೊರತೆಯನ್ನು ತುಂಬಿಸುತ್ತೀರಿ? ಇನ್ನು 2021–22ನೇ ಸಾಲಿಗೆ ರೆವೆನ್ಯೂ ಡೆಫಿಸಿಟ್ 15,134 ಕೋಟಿ ರೂಪಾಯಿಗಳು,

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2021–22ನೇ ಸಾಲಿಗೆ ಫಿಸ್ಕಲ್ ಡೆಫಿಸಿಟ್ 59,240 ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿದೆ. ಈ ರೀತಿಯಾಗಿರುವುದನ್ನು ಮುಂದಿನ ದಿನಗಳಲ್ಲಿ ಸರ್ಕಾರ ಯಾವ ರೀತಿ ಮಾಡುತ್ತದೆ. ಕೇಂದ್ರ ಸರ್ಕಾರದ The Goods and Services Tax (Compensation to States) Act, 2017 ಮತ್ತು The Goods and Services Tax (Compensation Cess) Act ಏನಿದೆ, ಇವುಗಳು 2022 ರವರೆಗೆ ಮಾತ್ರ ಇರುತ್ತವೆ; ಇವು ನಂತರದಲ್ಲಿ ಇರುವುದಿಲ್ಲ. ಏನಾದರೂ ರಾಜ್ಯ ಸರ್ಕಾರದ ಜಿ.ಎಸ್.ಟಿ. ಕೌನ್ಸಿಲ್‌ನಲ್ಲಿ ಆರ್ಥಿಕ ಇಲಾಖೆ ಸಚಿವರಾಗಿರುವಂಥ ಮಾನ್ಯ ಮುಖ್ಯಮಂತ್ರಿಯವರು ಸದಸ್ಯರಾಗಿರುತ್ತಾರೆ. ಅಲ್ಲಿಗೆ ಹೋಗಿ ಏನಾದರೂ ಬದಲಾವಣೆಯನ್ನು ತರುತ್ತಾರೆಯೇ? ಏಕೆಂದರೆ, ಮುಂದಿನ ದಿನಗಳಲ್ಲಿ ಏನಾದರೂ ಕೇಂದ್ರ ಸರ್ಕಾರದಲ್ಲಿ ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದರೆ ನಮಗೆ ಜಿ.ಎಸ್.ಟಿ compensation ಬರುವುದಿಲ್ಲ. ಜಿಎಸ್‌ಟಿ ಸೆಸ್‌ನಲ್ಲಿ ಬರತಕ್ಕಂಥ ಲುಕ್ಸಾನು ಕೂಡ ಬರುವುದಿಲ್ಲ. ಆದ್ದರಿಂದ ದಯಮಾಡಿ ರಾಜ್ಯ ಸರ್ಕಾರ ಸಂಪನ್ಮೂಲ ಕ್ರೋಢಿರಣಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಮುಂದಿನ ವರ್ಷಗಳಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸದಿದ್ದರೆ, ಜಿ.ಎಸ್.ಟಿ ಅಡಿಯಲ್ಲಿ ಸಂಗ್ರಹವಾಗುವ ತೆರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಇತರೆ ಮೂಲಗಳಿಂದ ಬರುವ ಆದಾಯ ಕೇವಲ ಸರ್ಕಾರಿ ನೌಕರರ ಮತ್ತು ನಮ್ಮೆಲ್ಲರ ಸಂಬಳ–ಸಾರಿಗೆ, ಪಿಂಚಣಿ, ಸಾಮಾಜಿಕ ಭದ್ರತೆ ಕಾರ್ಯಕ್ರಮ ಹಾಗೂ ಸಾಲ ತೀರುವಳಿ ಮಾಡತಕ್ಕಂಥದ್ದಕ್ಕೆ ಸರಿಯಾಗುತ್ತದೆ. ಆದ್ದರಿಂದ ದಯಮಾಡಿ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಈ ದಿಸೆಯಲ್ಲಿ ತಾವು ದಯಮಾಡಿ ಸಂಪನ್ಮೂಲ ಕ್ರೋಢೀಕರಣದಲ್ಲಿ ಮುಂದಾಗಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾನು ಎಲ್ಲಾ ಮಾನ್ಯ ಸದಸ್ಯರುಗಳ ಪರವಾಗಿ ಒಂದು ಮನವಿಯನ್ನು ತಮ್ಮ ಮುಂದಿಡುತ್ತಿದ್ದೇನೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ಮಾತನಾಡುತ್ತಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಬಜೆಟ್ ಮೇಲೆ ಮಾತನಾಡುತ್ತಾರೆಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಇಲ್ಲ, ಮಾನ್ಯ ಎಂ.ನಾರಾಯಣಸ್ವಾಮಿಯವರು ಒಂದು ವಿಷಯ ಪ್ರಸ್ತಾಪ ಮಾಡಬೇಕೆಂದು ಎರಡು ನಿಮಿಷ ಸಮಯ ಕೇಳಿದ್ದಾರೆ, ಅದಕ್ಕೆ ಅವಕಾಶ ಕಲ್ಪಿಸಲಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದಿನಾಂಕ 24.09.2020ರಂದು ನಡೆದಂಥ ಅಧಿವೇಶನದಲ್ಲೂ ಕೂಡ ನಮ್ಮ ಹಿರಿಯ ಸದಸ್ಯರಾದಂಥ ಮಾನ್ಯ ಅಲ್ಲಂ ವೀರಭದ್ರಪ್ಪನವರು ಒಂದು ಪ್ರಶ್ನೆ ಎತ್ತಿದ್ದರು. ಅದಕ್ಕೆ ಮಾನ್ಯ ಸಭಾನಾಯಕರು ಉತ್ತರವನ್ನು ಕೂಡ ಕೊಟ್ಟಿದ್ದರು. ಈ ಸದನದ ಪಕ್ಕದಲ್ಲೇ ಒಂದು ಉಪಾಹಾರ ಗೃಹ ಏನಿದೆ, ಅದು ಮೊದಲು ಶೌಚಾಲಯವಾಗಿತ್ತು. ಇಲ್ಲಿ ಒಂದೇ ಒಂದು ಶೌಚಾಲಯ ಇದೆ. ಮಾನ್ಯ ಸದಸ್ಯರು ಅದನ್ನು ಉಪಯೋಗಿಸುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಅಲ್ಲಿ ಸಾರ್ವಜನಿಕರು, ನೌಕರರು ಕೂಡ ಅದನ್ನು ಉಪಯೋಗಿಸುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಬಹಳಷ್ಟು ಅನಾನುಕೂಲವಾಗುತ್ತಿದೆ. ಆದ್ದರಿಂದ ಈ ಹಿಂದೆ ಸರ್ಕಾರ ಕೂಡ ಹೇಳಿತ್ತು, ಅವೊತ್ತು ಮಾನ್ಯ ಸಭಾನಾಯಕರು ಕೂಡ ಮುಂದಿನ ಅಧಿವೇಶನದೊಳಗೆ ಅದನ್ನು ಶೌಚಾಲಯವನ್ನಾಗಿ ಪರಿವರ್ತನೆ ಮಾಡಿಕೊಡುತ್ತೇನೆಂದು ಉತ್ತರವನ್ನು ಕೊಟ್ಟಿದ್ದರು. ಆದ್ದರಿಂದ ದಯಮಾಡಿ ಸರ್ಕಾರ ಅದರ ಕಡೆ ಗಮನ ಕೊಡಬೇಕೆಂದು ನಾನು ತನ್ಮೂಲಕ ಮಾನ್ಯ ಸಭಾನಾಯಕರಿಗೆ ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಹೇಳಿದ್ದು ಸರಿ ಇದೆ. ಕಳೆದ ಬಾರಿ ನಾವು ಒಪ್ಪಿದ್ದೇವೆ. ಮಾನ್ಯ ಸಭಾಪತಿಯವರು ಬಂದ ಕೂಡಲೇ ಅದರ ಬಗ್ಗೆ ಮತ್ತೆ ಮಾತನಾಡಿ, ಚರ್ಚೆ ಮಾಡಿ ಅದನ್ನು ಪರಿಹಾರ ಮಾಡುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಏಕೆಂದರೆ, ಸಭಾನಾಯಕರು ಸದನದಲ್ಲಿ ಮುಂದಿನ ಅಧಿವೇಶನದೊಳಗೆ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಈಗ ಸ್ವಲ್ಪ ಹಳಿ ತಪ್ಪಿದಂತೆ ಕಾಣುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಿಂದಿನ ಅಧಿವೇಶನದಲ್ಲಿ ಅದನ್ನು ಸರಿಪಡಿಸುತ್ತೇವೆಂದು ಹೇಳಿದ್ದೆವು. ಆದರೆ, ಬೇರೆ ಬೇರೆ ಕಾರಣಕ್ಕಾಗಿ ಮಾಡುವುದಕ್ಕೆ ಆಗಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ಮಾನ್ಯ ಸಭಾಪತಿಯವರು ಬಂದ ನಂತರ, ಅವರ ಜೊತೆ ಮಾತನಾಡಿ, ಒಂದು ತೀರ್ಮಾನ ಮಾಡಲಾಗುವುದೆಂದು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ತಾವು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಸುಮಾರು 60 ಲಕ್ಷ ರೂಪಾಯಿಗಳಿಂದ 70 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿ ಶೌಚಾಲಯ ಇದ್ದುದನ್ನು ಕ್ಯಾಂಟೀನ್ ಮಾಡಿದ್ದೀರಿ. ಈಗ ಪುನಃ ಆ ಕ್ಯಾಂಟಿನ್‌ನ್ನು ಶೌಚಾಲಯವನ್ನಾಗಿ ಮಾಡಬೇಕಾಗುತ್ತದೆ. ಆದ್ದರಿಂದ ಅಧಿಕಾರಿಗಳಿಗೂ ಕೂಡ ಒಂದು ರೀತಿ ಮುಜುಗರವಿದೆ. ಆದರೆ ಸಮಸ್ಯೆ ಏನೆಂದರೆ, ನಾವು ಯಾವ ಶೌಚಾಲಯಕ್ಕೆ ಹೋಗಬೇಕು? ಉಪ ಸಭಾಪತಿಯವರೇ, ಒಂದುವೇಳೆ ನಿಮ್ಮ ಕಚೇರಿ ಏನಾದರು ಹತ್ತಿರದಲ್ಲಿ ಇದ್ದಿದ್ದರೆ, ನಾವು ಅಲ್ಲಿಗೆ ಬರುತ್ತಿದ್ದೆವು. ನಿಮ್ಮ ಕಚೇರಿಗೆ ನಾವೆಲ್ಲರೂ ಬರುವುದಕ್ಕೆ ಅವಕಾಶ ಇರುವುದಾದರೆ ಪರವಾಗಿಲ್ಲ. ನೀವು ಅದಕ್ಕೆ ಅವಕಾಶ ಕೊಡಿಯೆಂದು ನಾನು ಹೇಳುವುದಿಲ್ಲ. ನಿಮ್ಮ ಕಚೇರಿ ಅಥವಾ ಎಲ್ಲೂ ಇಲ್ಲವೆಂದರೆ ಎಲ್ಲಾದರೂ ಒಂದು ಕಡೆ ಅದಕ್ಕೆ ಅವಕಾಶ ಮಾಡಿಕೊಡಬೇಕಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಕೆ.ಪ್ರತಾಪಚಂದ್ರಶೆಟ್ಟಿಯವರು ಹೇಳುವುದು ಸರಿಯಿದೆ. ಮಾನ್ಯ ಸಭಾಪತಿಯವರು ಬಂದ ಕೂಡಲೇ ಅವರ ಸಮಕ್ಷಮದಲ್ಲಿ ತೀರ್ಮಾನ ಮಾಡುತ್ತೇನೆ.

**ಉಪ ಸಭಾಪತಿಯವರು:–** ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ಸದನ ಪ್ರಾರಂಭವಾದ ದಿವಸವೇ ನಿಯಮ 59 ರಡಿಯಲ್ಲಿ ಪ್ರಸ್ತಾಪಿಸಲಾಗುವುದೆಂದು ಕೊಟ್ಟಿದ್ದೇವೆ. ಅದು ನಿಯಮ 68ಕ್ಕೆ ಕನ್ವರ್ಟ್ ಆಗಿದೆ.

**(ಮುಂದು)**

(393)15.3.2021/420/ಎಂ.ಎಂ–ಆರ್.ಎನ್

**ಶ್ರೀ ಎಸ್.ಆರ್. ಪಾಟೀಲ್ (ಮುಂದು):–**

ಇದು ಈ ದಿನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ಕೈಗೆತ್ತಿಕೊಳ್ಳಬೇಕೆಂದು ನಿಯಮ 59 ಹೇಳುತ್ತದೆ. ಸಭಾಪತಿಯವರು ಮೊದಲ ದಿವಸವೇ ಅದನ್ನು ನಿಯಮ 68ಕ್ಕೆ convert ಮಾಡಿದ್ದಾರೆ. ಆದರೆ ಅದು ಇನ್ನೂ ಬರುತ್ತಾ ಇಲ್ಲ. ಗಮನ ಸೆಳೆಯುವ ಸೂಚನೆ, ನಿಯಮ 330; Business Advisory Committee ಯಲ್ಲಿ ತಾವು ಕೂಡ ಇದ್ದೀರಿ. ಗೃಹ ಮಂತ್ರಿಯವರಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ನಿಯಮ 59ರಲ್ಲಿ ಬಹಳ most urgent matters

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುತ್ತವೆ ಅದನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಿದರು. ಅದಕ್ಕೆ ಸಭಾಪತಿಯವರೂ ಸಮ್ಮತಿಸಿದರು, ತಾವು ಕೂಡ ಅದಕ್ಕೆ ಸಹಮತವನ್ನು ವ್ಯಕ್ತ ಮಾಡಿದಿರಿ, ನಾವೆಲ್ಲರೂ ವ್ಯಕ್ತ ಮಾಡಿದೆವು. ಅದನ್ನು ಬಿಟ್ಟು ನಿಯಮ 59ರ ಬದಲು ಗಮನ ಸೆಳೆಯುವ ಸೂಚನೆ, ನಿಯಮ 330 ತೆಗೆದುಕೊಂಡರೆ ನಿಯಮ 59ರ sanctity ಏನಿದೆ? ಈ ಸದನದಲ್ಲಿ ಏತಕ್ಕೆ ಹೀಗಾಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. BAC Committee ಗೆ ,ಚಿಟಿಥಿಣುಣಥಿ ಯಾದರೂ ಇದೆಯೋ ಇಲ್ಲವೋ? ನಾವು Business Advisory Committee ಗೆ ಏತಕ್ಕೆ ಹೋಗಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಿಯಮ 68ನ್ನು ತೆಗೆದುಕೊಳ್ಳಬೇಕೆಂದು ಅವರು ಹೇಳುತ್ತಿರುವುದು ಸರಿ ಇದೆ. ಅದರ ಲಿಸ್ಟ್ ಆಗಿದೆ, ಅದನ್ನು ಮುಗಿಸಿ. ನಾಳೆಗೆ ಪ್ರಶ್ನೋತ್ತರವಾದ ಕೂಡಲೇ ತೆಗೆದುಕೊಳ್ಳುವುದು ಒಳ್ಳೆಯದೆನಿಸುತ್ತದೆ. ತಾವು ಹೇಗೆ ಹೇಳುತ್ತೀರೋ ಹಾಗೆ.

**ಶ್ರೀ ಎಸ್.ಆರ್. ಪಾಟೀಲ್:–** ನೀವು ಹೇಳಿದ ಹಾಗೆಯೇ ನಾವು ಕೇಳುತ್ತಾ ಬಂದಿದ್ದೇವೆ. You are the leader of this House.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ನಿಮ್ಮ ಭಾವನೆಯನ್ನು ಅರ್ಥ ಮಾಡಿಕೊಂಡೇ ಕೆಲಸ ಮಾಡುತ್ತೇವೆ. ಅದನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

**ಉಪಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ನಿಮ್ಮ ಅಪೇಕ್ಷೆಯ ಮೇರೆಗೆ ಇವತ್ತು ಸದನವನ್ನು ಬೇಗನೆ ಮುಗಿಸಬೇಕೆಂದು ತಾವುಗಳೇ ಕೇಳಿಕೊಂಡಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಬಾಪತಿಯವರೇ, ಸಭಾನಾಯಕರು ಈಗ ಸಲಹೆ ಕೊಟ್ಟಿದ್ದಾರೆ, ಅವರಿಗೆ ಗೌರವಿಸಿ, ಅವರ ಮಾತನ್ನು ಗೌರವಿಸಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ರೀತಿ ಆಗಬಾರದಲ್ಲವೇ?

**ಉಪಸಭಾಪತಿಯವರು:–** ಖಂಡಿತ. ಈಗ ಗಮನ ಸೆಳೆಯುವ ಸೂಚನೆ.

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, 2020–21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು . . . .

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಅವರ ಹೇಳಿಕೆಯನ್ನು ಓದುತ್ತಿದ್ದರು)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದು Calling Attention. Hon'ble Member must draw the attention of the Government. ಸರ್ಕಾರ ಉತ್ತರ ಕೊಟ್ಟ ಮೇಲೆ ಮಾನ್ಯ ರವಿಕುಮಾರ್‌ರವರು ಸುದೀರ್ಘವಾಗಿ ಪ್ರಸ್ತಾಪಿಸಲಿ.

**ಉಪಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ಇದು Calling Attention ಆಗಿದೆ. ಅದನ್ನು ಅಷ್ಟೊಂದು brief ಆಗಿ ಹೇಳುವ ಅವಶ್ಯಕತೆಯಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ರವಿಕುಮಾರ್‌ರವರೇ, ನೀವು ಚಿಣಣಜಟಿಐಂಟಿ ಜಡಿಚಿತಿ ಮಾಡಿ ಸರ್ಕಾರದ ಗಮನ ಸೆಳೆದರೆ ಆಯಿತು. ಆಮೇಲೆ ಬೇಕಾದರೆ ವಿವರವಾಗಿ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, Calling Attention ಗೆ ಮಾನ್ಯ ರವಿಕುಮಾರ್‌ರವರು ಗಮನ ಸೆಳೆದಿದ್ದಾರೆ. ಮಂತ್ರಿಗಳು 'ಕೋವಿಡ್' ಮೀಟಿಂಗ್‌ನಲ್ಲಿದ್ದಾರೆ, ಕಾಲು ಗಂಟೆ ಬಿಟ್ಟು ಬರುತ್ತಾರೆ. ಮುಂದಿನ ಅಜೆಂಡಾವನ್ನು ತೆಗೆದುಕೊಳ್ಳಿ.

**ಉಪಸಭಾಪತಿಯವರು:–** ಸಚಿವರು ಚೀಟಿ ಕೊಟ್ಟು ಹೋಗಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ರವಿಕುಮಾರ್‌ರವರೇ, ಸಚಿವರು ಬಂದ ಮೇಲೆ ಮಾತನಾಡಿ ಆಗ ಉಪಯೋಗವಾಗುತ್ತದೆ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟರೆ ಮಂತ್ರಿಗಳು ಇದ್ದಾಗ ಇದನ್ನು ಪ್ರಸ್ತಾಪ ಮಾಡುತ್ತೇನೆ.

**ಉಪಸಭಾಪತಿಯವರು:–** ತಾವು ಈಗಾಗಲೇ ಸರ್ಕಾರದ ಗಮನ ಸೆಳೆದಿದ್ದೀರಿ. ಸಭಾನಾಯಕರು ಉತ್ತರ ಕೊಡುವುದಾದರೆ ಕೊಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವರು ಅರ್ಧ ಗಂಟೆ ಬಿಟ್ಟು ಬರುತ್ತಾರೆ ಆಗ ಉತ್ತರ ಕೊಡುತ್ತಾರೆ. ಆದ್ದರಿಂದ ಎರಡನೆಯ ಗ.ಸೆ. ಸೂಚನೆಯನ್ನು ತೆಗೆದುಕೊಳ್ಳಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಆಗಬಹುದು. ಮಾನ್ಯ ರವಿಕುಮಾರ್‌ರವರೇ, ಮಂತ್ರಿಗಳು ಬರಲಿ ನಂತರ ಉತ್ತರ ಕೊಡಿಸುವ ಕೆಲಸ ಮಾಡುತ್ತೇವೆ. ಈಗ ಮಾನ್ಯ ಕೆ. ಹರೀಶ್‌ಕುಮಾರ್‌ರವರು.

## 5. ನಿಯಮ 72ರ ಮೇರೆಗೆ ಗಮನ ಸೆಳೆಯುವ ಸೂಚನೆಗಳು

**ಅ)** ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಮೀನುಗಾರರ ಸರ್ವತೋಮುಖ ಅಭಿವೃದ್ಧಿಗೆ ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಗಳನ್ನು ಜಾರಿಗೊಳಿಸುವ ಕುರಿತು.

– – – –

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿ ಮೀನುಗಾರರ ಸರ್ವತೋಮುಖ ಅಭಿವೃದ್ಧಿಗೆ ನಿರ್ದಿಷ್ಟ ಕಾಲಮಿತಿಯಲ್ಲಿ ಯೋಜನೆಗಳನ್ನು ಜಾರಿಗೊಳಿಸುವ ಕುರಿತು ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಎಸ್. ಅಂಗಾರ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಲಾಗಿದೆ.

**ಉಪಸಭಾಪತಿಯವರು:–** ಈಗ ಮಾನ್ಯ ಶಶೀಲ್.ಜಿ.ನಮೋಶಿ.

**ಶ್ರೀ ಕೆ. ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ಮಾನ್ಯ ಹರೀಶ್ ಕುಮಾರ್‌ರವರಿಗೆ ಉತ್ತರ ಕೊಟ್ಟಿದೆಯಲ್ಲವೇ. ಅವರು ಉತ್ತರ ತೆಗೆದುಕೊಂಡು ಸುಮ್ಮನೆ ಕುಳಿತಿದ್ದರಿಂದ ಅವರು satisfied ಎಂದು ತಿಳಿದುಕೊಳ್ಳಲಾಯಿತು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ತಾವು ಈಗ ಉತ್ತರ ಕೊಟ್ಟು ಮಾನ್ಯ ಸದಸ್ಯರು ಸುಮ್ಮನೆ ಕುಳಿತಿದ್ದಾರೆ ಎಂದರೆ ಹೇಗೆ? ಅರ್ಧ ಗಂಟೆ ಮುಂಚೆ ಉತ್ತರವನ್ನು ಕೊಡಬೇಕಲ್ಲವೇ?

**ಉಪಸಭಾಪತಿಯವರು:–** ಆಯಿತು, ಮಾನ್ಯ ಹರೀಶ್ ಕುಮಾರ್‌ರವರು ಮಾತನಾಡಲಿ.

**ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರ ಕೊಟ್ಟಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ, ಅವರು ಓದಬೇಕು. ಅವರು ಓದುವಾಗ ನಾವು ಸಹ ಓದಬೇಕು, ಅನಂತರ ನಾವು ಕೇಳಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಉಪಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರವನ್ನು ಓದಿಬಿಡಿ.

**ಶ್ರೀ ಎಸ್. ಅಂಗಾರ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):–** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿ ಲಗತ್ತಿಸಿದೆ)**

**(ಮುಂದು)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(394) 15–03–2021/ 04–50/ ಕೆಹೆಚ್–ಆರ್‌ಎಸ್**

**ಶ್ರೀ ಕೆ.ಹರೀಶ್‌ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮೀನುಗಾರಿಕೆಯು ಕರ್ನಾಟಕ ಕರಾವಳಿಯಲ್ಲಿ ಒಂದು ದೊಡ್ಡ ಉದ್ದಿಮೆಯಾಗಿದೆ. ಮಾನ್ಯ ಸಚಿವರು ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ–ಅಂಶಗಳನ್ನು ಕೊಟ್ಟಿದ್ದಾರೆ. ಬಹುಶಃ ರಾಜ್ಯದಲ್ಲಿ ಸುಮಾರು 22 ಸಾವಿರ ಬೋಟುಗಳು ಮೀನುಗಾರಿಕೆಯಲ್ಲಿ ತೊಡಗಿವೆ. 4 ಸಾವಿರ ಯಾಂತ್ರೀಕೃತ ಬೋಟುಗಳು, ನಾಡ ದೋಣಿಗಳು, Outboard ಯಾಂತ್ರೀಕೃತ ಬೋಟುಗಳು ಇವೆಲ್ಲವುಗಳಿಂದ ವರ್ಷಕ್ಕೆ ಸುಮಾರು 5 ಸಾವಿರ ಕೋಟಿ ರೂಪಾಯಿಗಳಷ್ಟು ವಿದೇಶಿ ವಿನಿಮಯ ಕೂಡ ಬರುತ್ತದೆ. ಹೀಗಾಗಿ ಇದು ಆರ್ಥಿಕವಾಗಿ ಬಹಳಷ್ಟು ಶಕ್ತಿ ತುಂಬುವಂತಹ ಒಂದು ದೊಡ್ಡ ಉದ್ದಿಮೆಯಾಗಿದೆ. ಇವತ್ತಿನ ದಿವಸ ಮೀನುಗಾರರು ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಹಸುವಿನ ವ್ಯಾಪಾರಸ್ಥರು ಇರಬಹುದು, ಕೊಡಮೀನು ವ್ಯಾಪಾರಸ್ಥರು ಇರಬಹುದು, ಅದರೊಟ್ಟಿಗೆ ಇರುವಂತಹ ಕೂಲಿ–ಕಾರ್ಮಿಕರು, ಮೆಕಾನಿಕ್‌ಗಳು ಇರಬಹುದು. ಬೋಟ್ ರಿಪೇರಿ ಮಾಡುವಂತಹ ಎಲೆಕ್ಟ್ರೀಷಿಯನ್‌ಗಳು ಇರಬಹುದು. ಇವರಲ್ಲಿ ಸುಮಾರು ಲಕ್ಷಾಂತರ ಮಂದಿ ಕೆಲಸವನ್ನು ಮಾಡಿಕೊಂಡು ತಮ್ಮ ಜೀವನೋಪಾಯವನ್ನು ನಿರ್ಮಿಸಿಕೊಂಡಿದ್ದಾರೆ. ಆದರೆ, ಇವತ್ತು ಇಲ್ಲಿ ಸುಮಾರು 5 ವರ್ಷಗಳಿಂದ ಬರುತ್ತಿರುವಂತಹ ಚಂಡಮಾರುತ, ಕಳೆದ ವರ್ಷ ಬಂದಂತಹ ಕೋವಿಡ್ ಕಾಯಿಲೆ ಇದರಿಂದಾಗಿ ಮೀನುಗಾರಿಕೆ ಋತುವಿನಲ್ಲಿ ಬಹಳಷ್ಟು ಇಳಿಮುಖವಾಗಿದೆ. ಇದಲ್ಲದೇ, ಡೀಸೆಲ್ ಮತ್ತು ಸೀಮೆಎಣ್ಣೆ ಇವುಗಳ ದರಗಳು ಕೂಡ ಬಹಳಷ್ಟು ಹೆಚ್ಚಾಗಿರುವುದರಿಂದ, ಶೇಕಡಾ 75 ರಷ್ಟು ಬೋಟುಗಳು ಲಂಗರು ಹಾಕಿ ನಿಂತಿವೆ. ಮೀನುಗಾರಿಕೆ ಮಾಡುವುದಕ್ಕೆ ಬೋಟುಗಳು ಹೋಗುತ್ತಿಲ್ಲ. ಮೀನುಗಳು ಕೂಡ ಬಹಳಷ್ಟು ತ್ಯಾಜ್ಯ ವಸ್ತುಗಳಿಂದಾಗಿ ಸಮುದ್ರದ ಒಳಗೆ ಸೇರಿರುವುದರಿಂದ ಮತ್ತು ರಸಗೊಬ್ಬರ, ಪ್ಲ್ಯಾಸ್ಟಿಕ್ ಇತರೆ ತ್ಯಾಜ್ಯ ವಸ್ತುಗಳು ಕೂಡ ಮಳೆಗೆ ಕೊಚ್ಚಿಕೊಂಡು ಸಮುದ್ರವನ್ನು ಸೇರಿ, ಮೀನುಗಳೆಲ್ಲಾ ದೂರ ಹೋಗುವಂತಹ ಕೆಲಸ ಆಗಿದೆ. ಇವತ್ತಿನ ದಿವಸ ಸುಮಾರು 150 ರಿಂದ 800 ಕಿ.ಮೀವರೆಗೆ ಮೀನುಗಳನ್ನು ಹುಡುಕಿಕೊಂಡು ಹೋಗುವಂತಹ ವ್ಯವಸ್ಥೆ ಇದೆ. ಬಹುಶಃ 2–3 ದಿವಸಗಳಲ್ಲಿ ಮಾಡುತ್ತಿದ್ದಂತಹ ಮೀನುಗಾರಿಕೆ ಇವತ್ತು ಸುಮಾರು 7 ರಿಂದ 15 ದಿವಸಗಳವರೆಗೆ ಹೋಗಿದೆ. ಇದಲ್ಲದೇ ಪ್ರತಿದಿನ ಡೀಸೆಲ್ 300 ರಿಂದ 500 ಲೀಟರ್‌ಗಳಷ್ಟು ಖರ್ಚಾಗುತ್ತದೆ. ಇದೆಲ್ಲದರಿಂದ, ಮೀನುಗಾರರು ಬಹಳಷ್ಟು ತೊಂದರೆಯಲ್ಲಿ ಸಿಲುಕಿದ್ದಾರೆ. ಡೀಸೆಲ್ ಮತ್ತು ಸೀಮೆಎಣ್ಣೆಗೆ ಕೊಡುತ್ತಿದ್ದಂತಹ ಸಬ್ಸಿಡಿ 6 ತಿಂಗಳಿನಿಂದ ಬರುತ್ತಿಲ್ಲ. ಇವತ್ತಿನ ಆಯವ್ಯಯದಲ್ಲಿ ಮೀನುಗಾರರಿಗೆ ಡೀಸೆಲ್ ಪೂರೈಕೆ ಮಾಡುವಂತಹ delivery point ಗಳಿಗೆ ರಿಯಾಯಿತಿ ಕೊಡುವಂತಹ ಒಂದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಕೂಲವನ್ನು ಆಯವ್ಯಯದಲ್ಲಿ ಮಾಡಿಕೊಡಲಾಗಿದೆ. ಆದರೆ, 6 ತಿಂಗಳಿನಿಂದ ಸಬ್ಸಿಡಿ ಇವತ್ತಿನವರೆಗೂ ಬಂದಿಲ್ಲ. ಇದರಿಂದ ಮೀನುಗಾರರೆಲ್ಲಾ ಕಂಗಾಲಾಗಿರುವಂತಹ ಪರಿಸ್ಥಿತಿ ಉದ್ಭವಿಸಿದೆ. ಮೀನುಗಾರರ ಬೇಡಿಕೆ ಏನೆಂದರೆ, ಅವರಿಗೆ ಬೇಕಾಗಿರುವಷ್ಟು ಕರ ರಹಿತ ಸೀಮೆಎಣ್ಣೆಯನ್ನು ಕೊಡುವಂತಹ ವ್ಯವಸ್ಥೆ ಸರ್ಕಾರದಿಂದ ಆಗಬೇಕು. ಅವರು ಬಹಳಷ್ಟು ಸಾಲವನ್ನು ಮಾಡಿ ಬೋಟುಗಳನ್ನು ಖರೀದಿ ಮಾಡಿ ಮೀನುಗಾರಿಕೆಯನ್ನು ಮಾಡುತ್ತಿದ್ದಾರೆ. ಸಾಲದ ಹಣವನ್ನು ಯಾರಿಗೂ ಕಟ್ಟುವುದಕ್ಕೆ ಆಗುತ್ತಿಲ್ಲ. ಅವರ ಬಡ್ಡಿಯನ್ನು ಮನ್ನಾ ಮಾಡುವುದರೊಂದಿಗೆ, ಅವರಿಗೆ ಆರ್ಥಿಕ ಸವಲತ್ತುಗಳನ್ನು ಕೊಡುವಂತಹ ಕೆಲಸ ಆಗಬೇಕು. ಶೇಕಡಾ 4 ರಷ್ಟು ಬಡ್ಡಿ ದರದಲ್ಲಿ ಅವರಿಗೆ ಸಾಲ ಕೊಡುವಂತಹ ವ್ಯವಸ್ಥೆಯಾಗಬೇಕು. Dredging ಮಾಡುವಂತಹ ವ್ಯವಸ್ಥೆಯಾಗಬೇಕು. Dredging ಇಲ್ಲದೆ ಈ ಬೋಟುಗಳಿಗೆ ಬಹಳಷ್ಟು ತೊಂದರೆಯಾಗುತ್ತಿರುವುದನ್ನು ಅವರು ಗಮನಿಸುತ್ತಿದ್ದಾರೆ. ಬಹುಶಃ ಇವತ್ತು ಒಂದು ಉತ್ಕೃಷ್ಟವಾದ ಒಳ್ಳೆಯ ಮೀನುಗಳನ್ನು ಇಡೀ ರಾಜ್ಯದಲ್ಲಿ ಕೊಡುವಂತಹ ಕೆಲಸ ಮೀನುಗಾರರಿಂದ ಆಗುತ್ತಿದೆ. ಇಡೀ ರಾಜ್ಯದಲ್ಲಿ hygienic ಮೀನುಗಾರಿಕೆ ಮಾರುಕಟ್ಟೆಯನ್ನು ಮಾಡುವಂತಹ ವ್ಯವಸ್ಥೆಯಾಗಬೇಕು. ಇದಕ್ಕೆ ಸುಮಾರು 30 ಕೋಟಿ ರೂಪಾಯಿಗಳನ್ನು ಮೀನುಗಾರಿಕೆಗೆ ಒದಗಿಸಿದ್ದಾರೆ. 30 ಕೋಟಿ ರೂಪಾಯಿಗಳಿಂದ ರಾಜ್ಯದಲ್ಲಿ hygienic ಮೀನುಗಾರಿಕೆ ಮಾರುಕಟ್ಟೆಯನ್ನು ಮಾಡುವುದಕ್ಕೆ ಸಾಧ್ಯ ಇಲ್ಲ. ಇಡೀ ರಾಜ್ಯದ ಜನರಿಗೆ ಪೌಷ್ಟಿಕಾಂಶವುಳ್ಳ ಸತ್ವಭರಿತ ಮೀನುಗಳು ಸಿಗುವಂತಹ ವ್ಯವಸ್ಥೆಯಾಗಬೇಕು. ಅವರಿಗೆ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ರಚನೆ ಮಾಡುವಂತಹದ್ದು ಮತ್ತು ಒಂದು ದೊಡ್ಡ ಪ್ಯಾಕೇಜ್ ಮಾಡುವಂತಹದ್ದು; ಇವತ್ತಿನ ಸಂಕಷ್ಟದ ಪರಿಸ್ಥಿತಿಯಲ್ಲಿ ಈ ಕೋವಿಡ್‌ನಿಂದ ಆಗಿರಬಹುದು, ಚಂಡಮಾರುತ ಈ ರೀತಿಯ ತೊಂದರೆಗಳಿಂದ ಆಗಿರಬಹುದು, ಮೀನುಗಾರರು ಬಹಳಷ್ಟು ಸಂಕಷ್ಟದಲ್ಲಿ ಇರುವುದರಿಂದ, ಇದಕ್ಕೆ ದೊಡ್ಡ ಪ್ಯಾಕೇಜ್‌ಅನ್ನು ಸರ್ಕಾರ ಘೋಷಣೆ ಮಾಡಬೇಕು. ಇದು ಕೂಡ ಒಂದು ಕೃಷಿ. ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟು ಸಮುದ್ರದಲ್ಲಿ ಹೋಗಿ 7 ರಿಂದ 10 ದಿವಸ ಊರಿಗೆ ಬರದೇ ಕೆಲಸ ಮಾಡುತ್ತಿರುತ್ತಾರೆ. ಕಳೆದ ಎರಡು ವರ್ಷಗಳ ಹಿಂದೆ ಉಡುಪಿಯಲ್ಲಿ ಒಂದು ಬೋಟು ಮುಳುಗಿ ಇವತ್ತಿನವರೆಗೂ ಪತ್ತೆ ಆಗಿಲ್ಲದಿರುವ ವಿಷಯ ಮಾನ್ಯ ಸಭಾನಾಯಕರಿಗೂ ಗೊತ್ತಿದೆ. ಇಂತಹ ಒಂದು ವೈಜ್ಞಾನಿಕ ಕಾಲದಲ್ಲಿಯೂ ಕೂಡ ಒಂದು ಬೋಟು ಅಥವಾ ಒಂದು ವಿಮಾನ ಸಮುದ್ರಕ್ಕೆ ಬಿದ್ದರೆ, ಅದನ್ನು ಪತ್ತೆ ಮಾಡುವಂತಹ ವ್ಯವಸ್ಥೆ ಆಗಲಿಲ್ಲ ಎನ್ನುವುದು ಕೂಡ ಬೇಸರದ ಸಂಗತಿಯಾಗಿದೆ. ಆದ್ದರಿಂದ, ಅವರ ಈ ಸಂಕಷ್ಟಗಳನ್ನು ಸರ್ಕಾರ ಅರಿತು ಸುಮಾರು 5 ಸಾವಿರ ಕೋಟಿ ಅಥವಾ 10

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಾವಿರ ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್ ಅನ್ನು ಘೋಷಣೆ ಮಾಡಿ, ಈ ಒಂದು ದೊಡ್ಡ ಹಣಕಾಸು ವ್ಯವಸ್ಥೆಯನ್ನು ಸರ್ಕಾರಕ್ಕೆ ಕೊಡುತ್ತಿರುವಂತಹ ಮೀನುಗಾರರನ್ನು ಮತ್ತು ಮೀನುಗಾರಿಕೆಯಲ್ಲಿ ನಷ್ಟದಲ್ಲಿ ಇರುವಂತಹವರನ್ನೂ ಸುಸ್ಥಿತಿಗೆ ತರುವಂತಹ ಕೆಲಸವನ್ನು ಮಾಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

**(ಮುಂದು)**

**(395) 15/03/2021/ಎಸ್‌ಪಿಆರ್/ವಿಕೆ(ಎಂಡಿ)/5:00**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರು ಮೀನುಗಾರರ ದೋಣಿಯು ಪತ್ತೆಯಾಗಿಲ್ಲವೆಂದು ಪ್ರಸ್ತಾಪಿಸಿದ್ದು, ಆದರೆ ಅದನ್ನು ಪತ್ತೆ ಹಚ್ಚಲಾಗಿದೆ. 'ಸುವರ್ಣ ತ್ರಿಭುಜ' ಎನ್ನುವ ದೋಣಿಯು ಮುಳುಗಿ ಹೋಗಿ, ಅದು ಪತ್ತೆಯಾಗಿಲ್ಲವೆಂದು ಸುದ್ದಿಯಾಗಿತ್ತು. ಆದರೆ ಸದರಿ ದೋಣಿಯನ್ನು ಪತ್ತೆ ಹಚ್ಚಲಾಗಿದೆ. ಇತಿಹಾಸದಲ್ಲಿ ಪ್ರಥಮ ಬಾರಿಗೆ ಮೃತ ಒಬ್ಬೊಬ್ಬ ಮೀನುಗಾರರ ಕುಟುಂಬಕ್ಕೆ ಸುಮಾರು 20 ಲಕ್ಷ ರೂಪಾಯಿಗಳಷ್ಟು ಪರಿಹಾರ ಧನವನ್ನು ಕೊಡಲಾಗಿದೆ. ಇದನ್ನು ದಾಖಲೆಗಾಗಿ ತಿಳಿಸಲಾಗಿದೆ.

**ಶ್ರೀ ಎಸ್.ಅಂಗಾರ(ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು):–**ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಮೀನುಗಾರರಿಗೆ ಸಂಬಂಧಿಸಿದ ಸೀಮೆ ಎಣ್ಣೆ ಮತ್ತು ಡೀಸೆಲ್ ಸಮಸ್ಯೆಗಳ ಬಗ್ಗೆ ಉಲ್ಲೇಖಿಸಿದ್ದು, ಇದು ನಿಜವಾಗಿದೆ. ಒಟ್ಟಾರೆಯಾಗಿ 3,313 ಕಿಲೋ ಲೀಟರ್‌ನಷ್ಟು ಸೀಮೆ ಎಣ್ಣೆಯು ಇನ್ನು ಬಿಡುಗಡೆಯಾಗಬೇಕಾಗಿದ್ದು; ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ. ಈ ನಿಟ್ಟಿನಲ್ಲಿ ನಾನು ಖುದ್ದು ಇಲಾಖಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಮುಂದುವರೆದು, ಸದಸ್ಯರು ಡಿಸೇಲ್ ಸಬ್ಸಿಡಿ ಬಗ್ಗೆಯೂ ಸಹ ಉಲ್ಲೇಖಿಸಿದ್ದಾರೆ. ಈ ವಿಷಯವನ್ನು ರಾಜ್ಯದ ಮುಖ್ಯಮಂತ್ರಿಗಳ ಹಾಗೂ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳ ಗಮನಕ್ಕೆ ತರಲಾಗುವುದು. ಇದನ್ನೂ ಸಹ ತಕ್ಷಣವೇ ಬಿಡುಗಡೆ ಮಾಡುವ ಪ್ರಯತ್ನ ಮಾಡುತ್ತೇವೆ. ಒಟ್ಟಾರೆಯಾಗಿ ಮೀನುಗಾರರ ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖಿಸಿದ್ದಾರೆ. ನಾನು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಕೆಲವು ಸ್ಥಳಗಳಿಗೆ ಭೇಟಿ ನೀಡಿ ಮೀನುಗಾರರ ಸಮಸ್ಯೆಗಳನ್ನು ನಾನು ಸ್ವತಃ ಪರಿಶೀಲಿಸಿ, ತಿಳಿದುಕೊಂಡಿದ್ದೇನೆ. ಮುಂದಿನ ದಿನಗಳಲ್ಲಿ ಸದರಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಇಲಾಖೆಯಿಂದ ಮತ್ತು ಕೇಂದ್ರ ಸರ್ಕಾರದಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವ ದಿಕ್ಕಿನಲ್ಲಿ ಕೆಲಸವನ್ನು ಮಾಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಂಗಳೂರು ತಾಲ್ಲೂಕಿನ ಮೀನುಗಾರಿಕಾ ಬಂದರಿನ 3ನೇ ಹಂತದ ವಿಸ್ತರಣೆ ಕಾಮಗಾರಿಯು ಕೆಲವು ಕಾರಣಗಳಿಂದ ವಿಳಂಬವಾಗಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದ್ದು, ಅವು ಯಾವುವು ಎಂದು ಸಚಿವರು ತಿಳಿಸಬಹುದೇ?

**ಶ್ರೀ ಎಸ್.ಅಂಗಾರ:-** ಮಾನ್ಯ ಸಭಾಪತಿಯವರೇ, ಮಂಗಳೂರಿನ ಹಳೆಯ ಬಂದರಿನಲ್ಲಿ ಸಂಬಂಧಪಟ್ಟ ಗುತ್ತಿಗೆಯನ್ನು ಕರೆಯಲಾಗಿದೆ. ಅಲ್ಲಿನ ಖಾಸಗಿ ವ್ಯಕ್ತಿಯೊಬ್ಬರಿಂದ ಸ್ವಲ್ಪ ತಕರಾರು ಇತ್ತು. ಇದರಿಂದಾಗಿ ಕಾಮಗಾರಿಯು ವಿಳಂಬವಾಗಿದ್ದು, ಪ್ರಸ್ತುತ ಸಮಸ್ಯೆಯ ಬಗ್ಗೆ ನಾನು ಮತ್ತು ಇಲಾಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದೇವೆ. ಇದನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲಾಗುವುದು.

**ಆ) ವಿಷಯ:- ಹೈದ್ರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಪ್ರದೇಶಾಭಿವೃದ್ಧಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಗೆ ತಂದಿರುವ ತಿದ್ದುಪಡಿಯು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು/ನಿರುದ್ಯೋಗಿಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ**

* * *

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 371(ಜೆ)ಗೆ ತಂದಿರುವ ತಿದ್ದುಪಡಿಯು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಹೈದ್ರಾಬಾದ್-ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು/ನಿರುದ್ಯೋಗಿಗಳು ತೊಂದರೆ ಅನುಭವಿಸುತ್ತಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಸದಸ್ಯರಿಗೆ ಸಮಾಧಾನವಾಗುವ ಹಾಗೂ ಸರಿಯಾದ ಉತ್ತರವನ್ನು ಕೊಡಲಾಗಿದೆ.

**(ಲಿಖಿತ ಉತ್ತರವನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಅಧಿಕಾರಿಗಳು ನೀಡಿದ ಉತ್ತರವನ್ನು ಓದಿದ್ದಾರೆ. ನಿಜ ಹೇಳಬೇಕೆಂದರೆ, ನೀಡಿರುವ ಉತ್ತರದಿಂದ ಸ್ವಲ್ಪ ನೋವಾಗಿದೆ. ಏಕೆಂದರೆ, ನಿಜವಾದ ರೀತಿಯಲ್ಲಿ ನಾವು ನೋಡಿದಾಗ, ಅಷ್ಟು ಪ್ರಮಾಣದಲ್ಲಿ ಮೀಸಲಾತಿಯು ಜಾರಿಯಾಗುತ್ತಿಲ್ಲ. ಈ ಕಾರಣಕ್ಕಾಗಿ ನಾನು ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ದಿನಾಂಕ 01/01/2013 ರಂದು ಸಂವಿಧಾನದ ಅನುಚ್ಛೇದ 371 (ಜೆ) ಜಾರಿಗೆ ಬಂದಿತು. ಇದು ಏಕೆ ಜಾರಿಗೆ ಬಂದಿತು ಎನ್ನುವುದರ ಬಗ್ಗೆ ಸ್ವಲ್ಪ ಹಿನ್ನೆಲೆಯನ್ನು ಹೇಳುವುದು ಬಹಳ ಮಹತ್ವದ್ದು ಎಂದು ನನಗನ್ನಿಸುತ್ತದೆ. ಈ ಕಾರಣಕ್ಕಾಗಿ ಇತಿಹಾಸದ ಬಗ್ಗೆ ನಾನು ಸ್ವಲ್ಪ ಬೆಳಕನ್ನು ಚೆಲ್ಲುತ್ತೇನೆ. ಸಂವಿಧಾನದ ಅನುಚ್ಛೇದ 371 (ಜೆ) ನೇರವಾಗಿ ಜಾರಿಗೆ ಬರಲಿಕ್ಕೆ ಅಥವಾ ಸಂವಿಧಾನದ ಅನುಚ್ಛೇದ 371 ಕ್ಕೆ ಎಲ್ಲಾ ತಿದ್ದುಪಡಿಗಳು ಬರಲು ರಾಜ್ಯ ಪುನರ್ ವಿಂಗಡಣೆ ಕಾಯ್ದೆ ಅಂದರೆ, State Reorganization Act ಬಹಳ ಮಹತ್ವದ್ದಾಗಿದೆ. ಭಾಷೆಗಳ ಆಧಾರದ ಮೇಲೆ ರಾಜ್ಯಗಳನ್ನು ರಚಿಸಲಾಯಿತು ಅಂದರೆ, ರಾಜ್ಯ ಪುನರ್ ವಿಂಗಡಣೆ ಕಾಯ್ದೆಯನ್ನು ಜಾರಿಗೆ ತರಲಾಯಿತು. ಇದೇ ಎಲ್ಲಾ ರೀತಿಯ ತಿದ್ದುಪಡಿಗಳಿಗೆ ಕಾರಣವಾಯಿತು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಶ್ಚರ್ಯವೆಂದರೆ, 1895 ನೇ ಇಸವಿಯಿಂದಲೇ ಭಾಷಾವಾರು ಪ್ರಾಂತ್ಯಗಳ ರಚನೆಯ ಬೇಡಿಕೆಯು ಚರ್ಚೆಯಲ್ಲಿತ್ತು. ಈ ಪೈಕಿ ಮೊದಲನೇಯವರು ಓರಿಸ್ಸಾ ರಾಜ್ಯದವರಾಗಿದ್ದಾರೆ. ಅಂದು ಶ್ರೀ ಮಧುಸೂಧನ್ ದಾಸ್, who is also called as the Father of Odisha, ಇವರು 1895 ನೇ ಇಸವಿಯಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಬೇಡಿಕೆಯನ್ನಿಟ್ಟಿದ್ದರು. ಈ ಕಾರಣಕ್ಕಾಗಿ ನಮ್ಮ ದೇಶದಲ್ಲಿ ಸ್ವಾತಂತ್ರಕ್ಕಿಂತ ಪೂರ್ವದಲ್ಲಿ ಅಂದರೆ 1936 ರಲ್ಲಿ ಮೊದಲನೇ ಭಾಷಾವಾರು ಪ್ರಾಂತ್ಯವಾಗಿ, ಓರಿಸ್ಸಾ ರಾಜ್ಯದ ರಚನೆಯಾಯಿತು. ಇದಾದ ಬಳಿಕ, 1927 ರಿಂದ ಕಾಂಗ್ರೆಸ್ ಪಕ್ಷದಲ್ಲಿ ಅಂದಿನ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಯ ಬೇಡಿಕೆಯ ಬಗ್ಗೆ ಸುಮಾರು ಬಾರಿ ಚರ್ಚೆಯಾಯಿತು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(ಮುಂದು)

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(396) 15–3–2021/5–10/ಎಲ್ಎಂ/ವಿಕೆ(ಎಂಡಿ)**

**ಶ್ರೀ ಶಶೀಲ್ ಜಿ.ನಮೋಶಿ**(ಮುಂದು):–

1927ನೇ ಸಾಲಿನಿಂದಲೇ ಚರ್ಚೆಯಲ್ಲಿತ್ತು. 1929ರಲ್ಲಿಯು ಕಾಂಗ್ರೆಸ್‌ನ ಒಂದು ಸಭೆಯಲ್ಲಿ ಈ ವಿಷಯಕ್ಕೆ ಬಹಳ ಒತ್ತು ಕೊಟ್ಟು ಭಾಷಾವಾರು ರಾಜ್ಯಗಳು ರಚನೆಯಾಗಬೇಕು ಎನ್ನುವ ಬೇಡಿಕೆಯನ್ನು ಇಟ್ಟರು. ನಂತರ 1948ರಲ್ಲಿ ಡಾ:ರಾಜೇಂದ್ರ ಪ್ರಸಾದ್‌ರವರ ನೇತೃತ್ವದಲ್ಲಿ ಪಂಡಿತ ಜಹರಲಾಲ್‌ರವರು ಒಂದು ಸಮಿತಿಯನ್ನು ರಚನೆ ಮಾಡಿದರು. ಅಲ್ಲಿ ಇದನ್ನು ಯಾವ ರೀತಿ ಮಾಡಬೇಕು ಎನ್ನುವ ಚರ್ಚೆಯು ಆಗಿದೆ. ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ ಡಾ: ಬಿ.ಆರ್.ಅಂಬೇಡ್ಕರ್‌ರವರು ಕೂಡಾ ಇದಕ್ಕಾಗಿ ಒಂದು ಮನವಿಯನ್ನು ಕೊಟ್ಟು linguistic state ರಚನೆಯಾಗಬೇಕು ಎನ್ನುವ ಬೇಡಿಕೆಯನ್ನು ಇಟ್ಟರು. ನಂತರ 1952ರಲ್ಲಿ ಶ್ರೀ ಪೊಟ್ಟಿ ಶ್ರೀರಾಮಲುರವರು ಆಂಧ್ರ ರಾಜ್ಯವನ್ನು ರಚನೆ ಮಾಡಿ ನಮ್ಮನ್ನು ಮದ್ರಾಸ್ ರಾಜ್ಯದಿಂದ ಬೇರ್ಪಡಿಸಿ ಎಂದು ಮನವಿಯನ್ನು ಇಟ್ಟರು. ಅವರು ಆ ಹೋರಾಟದಲ್ಲಿ ಮರಣ ಹೊಂದಿದರು. ಅವರು ಮರಣ ಹೊಂದಿದ ತಕ್ಷಣವೆ ಪಂಡಿತ ಜವಹರಲಾಲ್ ನೆಹರುರವರು ಆಂಧ್ರ ರಾಜ್ಯವನ್ನು ರಚನೆ ಮಾಡಿದರು. ಇದು ಆದನಂತರ ದೇಶದ ಎಲ್ಲ ಭಾಗಗಳಲ್ಲಿ ಹೋರಾಟದ ಸ್ಥಿತಿಯನ್ನು ಕಂಡಿದ್ದಕ್ಕಾಗಿ immediately state reorganisation ಆಗಬೇಕು ಎನ್ನುವ ಬೇಡಿಕೆ ಇಟ್ಟಿದ್ದಕ್ಕಾಗಿ retired Supreme Court Judge ಶ್ರೀ ಫಸಲ್ ಅಲಿರವರ ನೇತೃತ್ವದಲ್ಲಿ 1953ರಲ್ಲಿ ಸಮಿತಿಯನ್ನು ರಚನೆ ಮಾಡಲಾಯಿತು. ಇದರಲ್ಲಿ ಶ್ರೀ ಕೆ.ಎಂ.ಫಣಿಕರ್‌ರವರು ಮತ್ತು ಶ್ರೀ ಕುಂಜುರು ಎನ್ನುವವರು ಆ ಸಮಿತಿಯ ಸದಸ್ಯರಾಗಿದ್ದರು. 13/9/1955ರಲ್ಲಿ ಈ ಸಮಿತಿ ವರದಿಯನ್ನು ಕೊಟ್ಟಿದೆ. ಎಲ್ಲರಿಗೂ ಗೊತ್ತಿದೆ 1–11–1956ರಲ್ಲಿ ಬಹಳಷ್ಟು ರಾಜ್ಯಗಳು ರಚನೆಯಾದವು. ಮೈಸೂರು ರಾಜ್ಯ, ಆಂಧ್ರಪ್ರದೇಶ ಹೀಗೆ ಎಲ್ಲ ರಾಜ್ಯಗಳ ರಚನೆಯಾಯಿತು. ಇದು ಇದರ ಹಿಂದಿನ ಇತಿಹಾಸವಾಗಿದೆ. ಮೈಸೂರು ಸರ್ಕಾರ ರಚನೆಯಾಗುವಾಗ ಕೂರ್ಗ್‌ನ ಕೆಲವು ಭಾಗಗಳು ನಮ್ಮಲ್ಲಿ ಸೇರಿಕೊಂಡವು. Kannada speaking belt, Madras Province ನವರು ನಮ್ಮ ಪ್ರದೇಶದಲ್ಲಿ ಸೇರ್ಪಡೆಯಾದರು. Southern part of Mumbai State and Western Hyderabad State ಇವೆಲ್ಲವುಗಳನ್ನು ಒಳಗೊಂಡು ಅಂದಿನ ಮೈಸೂರು ರಾಜ್ಯ ಸ್ಥಾಪನೆಯಾಯಿತು. Article 370 ಆಗಲಿ 371 ಆಗಲಿ, Article 371 ಸಂವಿಧಾನದಲ್ಲಿಯೇ ಬಂದುಬಿಟ್ಟಿದೆ. ಅಂದರೆ ಸಂವಿಧಾನ ರಚನೆಯಾಗುವ ಸಮಯದಲ್ಲಿ ಇದಕ್ಕೆ ಸಂಬಂದಪಟ್ಟ ರಾಜ್ಯಗಳಾದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಅವರಿಗೆ ಬೇರೆ ಬೋರ್ಡ್‌ನ್ನು ರಚನೆ ಮಾಡಿ ಎಂದು ಹೇಳಲಾಗಿದೆ. ಇದಕ್ಕೆ ಕಾರಣ ಏನು ಎಂದರೆ. ಮರಾಠವಾಡ ಮತ್ತು ವಿಧರ್ಬ ಒಂದು ಕಡೆ, ಸೌರಾಷ್ಟ್ರ ಮತ್ತು ಖಚ್ಚ್. ಇವುಗಳಿಗೆ special funds ಕೊಡಬೇಕೆಂದು ಅಂದಿನ ರಾಷ್ಟ್ರಪತಿಗಳು ಆದೇಶ ಮಾಡಿದ್ದಾರೆ. ಅವರಿಗೆ special funds ಕೊಟ್ಟು Article 371 ಅಂದಿನಿಂದ ಪ್ರಾರಂಭವಾಯಿತು. ನಾಗಾಲ್ಯಾಂಡ್‌ಗೆ ಅನುಚ್ಛೇಧ 371ಎ, 1969ರಲ್ಲಿ 372ಬಿ ಆಸ್ಸಾಂಗೆ, 1971ರಲ್ಲಿ 371ಸಿ ಮಣಿಪುರಕ್ಕೆ, 1973ರಲ್ಲಿ ಆಂಧ್ರ ಮತ್ತು ತೆಲಂಗಾಣಕ್ಕೆ 371ಡಿ ರಚನೆಯಾಯಿತು.

**ಉಪಸಭಾಪತಿಯವರು:–** ಸರ್ಕಾರದಿಂದ ಏನು ಆಗಬೇಕು ಅದನ್ನು ಕೇಳಿ. ಸರ್ಕಾರದ ಕೊಟ್ಟಿರುವ ಉತ್ತರದಿಂದ ನಿಮಗೆ satisfaction ಆಗಿದೆಯಾ ಇಲ್ಲವೆ, ಇಲ್ಲದಿದ್ದರೆ ಏನು ಆಗಬೇಕು ಹೇಳಿ.

**ಶ್ರೀ ಶಶೀಲ್.ಜಿ.ನಮೋಶಿ:–** ಮಾನ್ಯ ಸಭಾಪತಿಗಳೆ, ನಾನು ಅದೇ ವಿಚಾರಕ್ಕೆ ಬರುತ್ತೇನೆ. ನಮ್ಮ ರಾಜ್ಯದಲ್ಲಿ ಹೋರಾಟ ಪ್ರಾರಂಭವಾಗಲು ಕಾರಣವಾದ ವಿಷಯಗಳ ಮೇಲೆ ಸ್ವಲ್ಪ ಬೆಳಕು ಚೆಲ್ಲಬೇಕಾಗುತ್ತದೆ. ನಮ್ಮಲ್ಲಿ 1992ರಲ್ಲಿ ಈ ಬೇಡಿಕೆಯನ್ನು ಇಟ್ಟು incidentally ನಾನು ಆ leadership ತೆಗೆದುಕೊಂಡಿದ್ದೆ. ನಂತರ 1995ರಲ್ಲಿ ಮಾನ್ಯ ವೈಜನಾಥ್ ಪಾಟೀಲ್‌ರವರು ಮತ್ತು ಇನ್ನಿತರ ಅನೇಕ ನಾಯಕರು ಈ ಹೋರಾಟದಲ್ಲಿ ಭಾಗಿಗಳಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರು 2011ರಲ್ಲಿ ಈ ಬಿಲ್‌ನ್ನು ಎರಡು ಮನೆಗಳಲ್ಲಿ ತಂದು ಪಾಸ್ ಮಾಡಿಸಿಕೊಂಡು ಕೇಂದ್ರಕ್ಕೆ ಕಳುಹಿಸಿದರು. ನಂತರ ಕೇಂದ್ರದ ಮಂತ್ರಿಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಆ ಸಮಯದಲ್ಲಿ ಕೇಂದ್ರದಲ್ಲಿ Article 371(ಎ) Constitutional amendment ಆಗಿ ಜಾರಿಗೆ ಬಂದು. ಇದನ್ನು ಹೇಳಲೇಬೇಕಾಗುತ್ತದೆ. ಇದರಲ್ಲೇನು ಎರಡು ಮಾತಿಲ್ಲ. ಅಡ್ವಾಣಿಯವರು ಏಕೆ reject ಮಾಡಿ ಕಳುಹಿಸಿದರು ಎನ್ನುವುದು ಬೇರೆ ವಿಚಾರ. ಏಕೆ reject ಮಾಡಿದರು ಎಂದು ಹೇಳಬೇಕೆಂದರೆ ಅದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಬಹುದು. Reject ಏಕೆ ಮಾಡಿದರು ಎಂದರೆ,...

**ಉಪಸಭಾಪತಿಯವರು:–** ಈಗ ಆ ವಿಚಾರದ ಬಗ್ಗೆ ಚರ್ಚೆ ಬೇಡ.

**ಶ್ರೀ ಶಶೀಲ್.ಜಿ.ನಮೋಶಿ:–** ಮಾನ್ಯ ಸಭಾಪತಿಗಳೆ, Article 371(ಎ), 1-1-2013ರಲ್ಲಿ ಜಾರಿಗೆ ಬಂತು. ಅದರಲ್ಲಿ ಬಹಳ ಮುಖ್ಯವಾದ ಅಂಶ ಎಂದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*"The Governor shall within a period of three months from the commencement of this order, by notification identify posts in the civil services or civil posts under the State Government in the Hyderabad-Karnataka Region or posts in Local Authority or body or organization under the control of the State Government in that region into the local cadre to the extent and in the manner, hereinafter provided."*

ತಕ್ಷಣ ಮೂರು ತಿಂಗಳ ಒಳಗೆ local cadre ನ್ನು ಎಲ್ಲಾ ಹುದ್ದೆಗಳಲ್ಲಿ ರಚನೆ ಮಾಡಬೇಕು ಎಂದು ಹೇಳಿದ್ದಾರೆ. ಆದರೆ ದುರ್ದೈವದ ಸಂಗತಿ ಎಂದರೆ ಇವತ್ತಿಗೆ 8 ವರ್ಷವಾಯಿತು ಇನ್ನು ಅನೇಕ ಕಡೆಗಳಲ್ಲಿ ಈ ಲೋಕಲ್ ಕೇಡರ್ ರಚನೆಯಾಗಿರುವುದಿಲ್ಲ. ನಮ್ಮೆಲ್ಲರ ಒತ್ತಾಯ ಬಂದಮೇಲೆ, ನೇಮಕಾತಿ ಮಾಡಬೇಕು, ಬಡ್ತಿ ಕೊಡುವಾಗ local cadre ಮಾಡುತ್ತಾರೆ. ಇನ್ನೊಂದು ವಿಚಾರ ಹೇಳಿದರೆ ಎಲ್ಲರಿಗೂ ಬಹಳ ಆಶ್ಚರ್ಯವಾಗುತ್ತದೆ, ಕಂದಾಯ ಇಲಾಖೆಯಲ್ಲಿ ಶಿರಸ್ತೆದಾರರಿಂದ ತಹಸೀಲ್ದಾರ್ ಗ್ರೇಡ್-2, ತಹಸೀಲ್ದಾರ್ ಗ್ರೇಡ್-2 ದಿಂದ ತಹಸೀಲ್ದಾರ್ ಗ್ರೇಡ್-1 ಗೆ ಇನ್ನುವರೆಗೆ ಯಾವ local cadre ಮಾಡಿರುವುದಿಲ್ಲ. ಇಂತಹ ಇನ್ನು ಅನೇಕ ಉದಾಹರಣೆಗಳು ಇವೆ. ಮಾನ್ಯ ಸಭಾನಾಯಕರು ಎಲ್ಲಾ local cadre ಮಾಡುತ್ತಿದ್ದೇವೆ, ಎಲ್ಲ ಕಡೆ ಮಾಡಿದ್ದೇವೆ, ಅದು ಮಾಡಿದ್ದೇವೆ, ಇದು ಮಾಡಿದ್ದೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ಉತ್ತರ. ನನ್ನ ಒತ್ತಾಯ ಏನು ಎಂದರೆ, ಯಾವ ಕಾರಣಕ್ಕಾಗಿ ಎನ್ನುವುದು ನನಗೆ exact instance ನೆನಪಿಲ್ಲ. ತೆಲಂಗಾಣ ರಾಜ್ಯ ಒಂದು ದಿನ ಕರೆ ಕೊಟ್ಟರು. ಸರ್ಕಾರ ಏನು ಹೇಳಿತು ಎಂದರೆ, ಇವತ್ತು ಒಂದು ದಿವಸ ಯಾರೂ ಏನೂ ಕೆಲಸ ಮಾಡಬಾರದು they have asked them to do that particular job. ಅದೇ ರೀತಿಯಾಗಿ ನಾನು ಮಾನ್ಯ ಸಭಾನಾಯಕರಲ್ಲಿ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು, ನಮ್ಮ ಭಾಗದಲ್ಲಿ ಒಂದು ವಾರ, entire week has to be entrusted to all the Government servants, ನೀವು local cadre ನ್ನು ಮಾಡಿಮುಗಿಸಿ. ಆಗಬಹುದಾ, ಮಾಡಲು ಏನು ತೊಂದರೆ?

**Sri B.K. HARIPRASAD:-** A special drive.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri SHASHIL G. NAMOSHI:-** Yes you are right. Special drive ನ್ನು ಒಂದು ವಾರ ಮಾಡಿ ಎಲ್ಲಾ local cadre ನ್ನು ಮುಗಿಸಿ objection call-for ಮಾಡುವುದಿದ್ದರೆ ಮಾಡಿ, objection ಹಾಕುತ್ತಾರೆ ಅದರಲ್ಲಿ ಎರಡು ಮಾತಿಲ್ಲ. But ನೀವು notify ಆದರು ಮಾಡಬೇಕು. ಇವತ್ತಿನವರೆಗೂ local cadre ಎಲ್ಲಾ ಇಲಾಖೆಯಲ್ಲಿ ಆಗಿರುವುದಿಲ್ಲ. ದುರ್ದೈವದ ಸಂಗತಿ ಎಂದರೆ ಈ ಮೀಸಲಾತಿ ನಮಗಾಗಿಯೇ ಅಥವಾ ಬೇರೆಯವರಿಗಾಗಿಯೇ ಅನ್ನಿಸುತ್ತಿದೆ. ಏಕೆಂದರೆ ರಾಜ್ಯದಲ್ಲಿ parent cadre ಮಾಡುತ್ತಾರೆ, local cadre ಪ್ರಯತ್ನ ಮಾಡುತ್ತಾರೆ, residual cadre. ಈ ಮೂರು ಕೇಡರ್ ಮಾಡುವಾಗ parent cadre ನಲ್ಲಿ ಬಡ್ತಿ ಕೊಟ್ಟುಬಿಡುತ್ತಾರೆ, ನೇಮಕಾತಿಯು ಆಗುತ್ತದೆ. ಆದರೆ ಈ cadre ಮಾಡುವಾಗ ತೊಂದರೆಯಾಗುತ್ತಿದೆ. ಇದನ್ನು ಆಮೇಲೆ ಮಾಡೋಣ ಎಂದು ತೆಗೆದಿಡುತ್ತಾರೆ. ಇದು ಯಾವ ನ್ಯಾಯ? ಈ ರೀತಿಯ ಅನೇಕ ತಪ್ಪುಗಳಾಗಿವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಉಪಸಭಾಪತಿಗಳು:- ಈಗ ಸಭಾನಾಯಕರು ಉತ್ತರ ಕೊಡುತ್ತಾರೆ.

**ಶ್ರೀ ಶಶೀಲ್.ಜಿ.ನಮೋಶಿ:-** ಮಾನ್ಯ ಸಭಾಪತಿಗಳೆ, ಇನ್ನು ನಾಲ್ಕು ಉದಾರಹರಣೆಗಳನ್ನು ಕೊಡುತ್ತೇನೆ. ನಂತರ ಸಭಾನಾಯಕರು ಉತ್ತರ ಹೇಳಲಿ ಎಂದು ವಿನಂತಿಸಿಕೊಳ್ಳುತ್ತೇನೆ. ರೂಲ್ 10ನ್ನು ಬಹಳ ಸ್ಪಷ್ಟವಾಗಿ ನಾನು ಮೊನ್ನೆಯು ಓದಿದ್ದೇನೆ, ಇವತ್ತು ಕೂಡಾ ಓದುತ್ತೇನೆ. For every other... ಏನೇ ಬೇಡಿಕೆ ಇಟ್ಟಾಗ financial conditions ಇದೆ ಕೊಡಲು ಬರುವುದಿಲ್ಲ, ಆರ್ಥಿಕ ಮಿತವ್ಯಯವಿದೆ ಕೊಡಲು ಬರುವುದಿಲ್ಲ ಎಂದು ಹೇಳುತ್ತಾರೆ. *"Concurrence of the Finance Department shall be presumed for the direct recruitment and the promotions made under.... No economy measure shall apply for the reserve posts."* ಯಾವುದೇ ರೀತಿಯ ಕೋವಿಡ್ ತರಹದ ಕಾರಣವನ್ನು ಹೇಳಲು ಬರುವುದಿಲ್ಲ. ನೇರವಾಗಿ ನೇಮಕಾತಿ ಅಥವಾ ಬಡ್ತಿ ಕೊಡಬೇಕು. The concurrence is deemed to have been given ಎಂದು ಇವತ್ತಿನವರೆಗೂ ಯಾವ ಸರ್ಕಾರವಿದ್ದರೂ ಒಂದು ಆದೇಶವು ಬಂದಿರುವುದಿಲ್ಲ. ಇದನ್ನು ಹೇಳಬೇಕಾಗುತ್ತದೆ. ಈ ಕಾನೂನನ್ನು ಏಕೆ ತಂದಿದ್ದೀರಿ? ಈ ರೀತಿಯ ತೊಂದರೆಗಳನ್ನು ಕೊಡುವುದನ್ನು ಬಹಳ ಸಾಮಾನ್ಯವಾಗಿ ನೋಡುತ್ತೇವೆ. Contract

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

appointment ನಲ್ಲೂ ಕೂಡಾ local cadre ತೆಗೆದುಕೊಂಡು ಮಾಡಬೇಕು ಎಂದು ಸ್ಪಷ್ಟವಾಗಿ ಇದರಲ್ಲಿ ಇದೆ. ಇಂತಹ ಅನೇಕ ಉದಾಹರಣೆಗಳು ಇವೆ. ಬಡ್ತಿ ಯಾವಾಗ ಕೊಡಬೇಕು ಆಗ ಕೊಡಲಿಲ್ಲ. 2012ರಲ್ಲಿ ಐಟಿಐ ನಲ್ಲಿ JTO (Junior Training Officer) ನಿಂದ TO (Training Officer) ಬಡ್ತಿ ಕೊಟ್ಟಿದ್ದರು. ಇದು ಆದ ಮೇಲೆ ಅನೇಕ ಹುದ್ದೆಗಳು ಖಾಲಿ ಇದ್ದರೂ ಇವತ್ತಿನವರೆಗೆ ಒಂದು ಬಡ್ತಿಯನ್ನು ಕೊಟ್ಟಿರುವುದಿಲ್ಲ.

(ಮುಂದು)

**(397)15–03–2021(05–20)ಬಿಎಸ್‌ಡಿ–ಬಿಎನ್‌ಎಸ್**

**ಶ್ರೀ ಶಶೀಲ್ ಜಿ. ನಮೋಶಿ (ಮುಂದು):–**

Financial ban ಎಂದು ಹೇಳಿ ಮಾಡಲು ತಯಾರಿಲ್ಲವೋ ಅಥವಾ ಮತ್ತೇನೋ conditions ಹೇಳುತ್ತಾರೋ, ಗೊತ್ತಿಲ್ಲ. ಯಾರೋ objections ಹಾಕುತ್ತಾರೆ ಅಥವಾ ಹಾಕಿದ್ದಾರೆ, ಆ ಕಾರಣದಿಂದ promotion ಕೊಡುವುದಿಲ್ಲ ಎನ್ನುವ ಅನೇಕ ಉದಾಹರಣೆಗಳು ಇವೆ. ಈ ವಿಚಾರವನ್ನು ಮಾನ್ಯ ಸಭಾನಾಯಕರ ಗಮನಕ್ಕೆ ತರುತ್ತಿದ್ದೇನೆ ಹಾಗೂ ಈ ರೀತಿಯ ಅನೇಕ ಉದಾಹರಣೆಗಳ details ಅನ್ನು ಕೊಡುತ್ತೇನೆ.

ಇನ್ನು ನಾನು ನೇರವಾಗಿ appointment ಬಗ್ಗೆ ಹೇಳುವುದೇನೆಂದರೆ, in respect of appointment or promotions, 75% ಗ್ರೂಪ್ ಎ ಮತ್ತು ಬಿ ವೃಂದಗಳಿಗೆ ಕೊಟ್ಟಿದ್ದಾರೆ. 80% of the reservation is for Group ‘C’ and ‘D’. ಇಲ್ಲಿ ಏನಾಗುತ್ತಿದೆ ಎಂದರೆ ಅವರು ನೇರವಾಗಿ ಪಾಲು ಮಾಡಿಕೊಂಡುಬಿಟ್ಟಿದ್ದಾರೆ. 20% ಇವರಿಗೆ ಮತ್ತು 80% ಅವರಿಗೆ ಎಂದು ಪಾಲು ಮಾಡಿಕೊಂಡಿದ್ದಾರೆ. 20% ಅನ್ನು residual cadre ರವರು ಅಪ್ಲೈ ಮಾಡಿ, 80% local cadre ನವರು ಅಪ್ಲೈ ಮಾಡಿ ಎನ್ನುವಂತೆ ಆಗಿದ್ದು, reservation ಅಂದರೆ ಈ ಅರ್ಥ ಅಲ್ಲ. ನಾನು ನೇರವಾಗಿ ಹೇಳುತ್ತೇನೆ. When it is called reservation, what is the meaning of reservation? I just want to compare. ಎಸ್.ಸಿ ಮತ್ತು ಎಸ್.ಟಿ. reservation ನಲ್ಲಿ ಯಾವುದೇ ಕೇಡರ್ ಅಥವಾ ಯಾವುದೇ ಹುದ್ದೆ ಇದ್ದರೂ everybody

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

will apply. ಅದರಲ್ಲಿ General quota ಇರುವವರು ಅಪ್ಲೈ ಮಾಡುತ್ತಾರೆ. ಮೊದಲು 82% reservation ಮಾಡಿ, ಅದರಲ್ಲಿ ಎಸ್.ಸಿ., ಎಸ್.ಟಿ. ಸೇರಿದಂತೆ ಎಲ್ಲರೂ ಬರುತ್ತಾರೆ. ಉಳಿದಂತಹ ಹುದ್ದೆಗಳನ್ನು 18%ಗೆ reservation ಕೊಡುತ್ತೇವೆ. This is followed everywhere. Very unfortunately ಇದು ನಮ್ಮಲ್ಲಿ ಬಳಕೆ ಆಗುತ್ತಿಲ್ಲ. ಈ ರೀತಿ ಮಾಡಬೇಕೆಂದು Circular ಹೊರಡಿಸಿದ್ದಾರೆ. ಇಲಾಖೆಯವರು Article 371ಎ ರ ಅಡಿಯಲ್ಲಿ Joint Director ರವರು ದಿನಾಂಕ 16-11-2016ರಂದು ಒಂದು Circular ಹೊರಡಿಸಿದ್ದಾರೆ. ಇಷ್ಟಾದರೂ ಕೆಪಿಎಸ್‌ಸಿ ರವರು 20% ಅಪ್ಲೈ ಮಾಡಿದ್ದರೆ ಅದಕ್ಕೆ ಅಪ್ಲೈ ಮಾಡಿ, 80%ಗೆ eligible ಇದ್ದರೆ ಅದಕ್ಕೆ ಅಪ್ಲೈ ಮಾಡಿ ಎಂದು ನೇರವಾಗಿ division ಮಾಡಿಬಿಟ್ಟಿದ್ದಾರೆ. ಇದರಿಂದ ತೊಂದರೆಯಾಗಿರುವುದಲ್ಲದೇ, ಬಹಳ ದುಃಖದ ಸಂಗತಿಯೆಂದರೆ, High School Teachers promotion ನಲ್ಲಿ ಏನಾಯಿತು ಎಂದರೆ, ಎಲ್ಲರೂ ಅರ್ಜಿಗಳನ್ನು ಹಾಕಿದರು, ಅದರಲ್ಲಿ local cadre and residual cadre ಎಂದು ಬೇರೆ ಮಾಡಿದರು. ಬಹಳ ದೊಡ್ಡ ತಪ್ಪು ಎಂದರೆ ಪ್ರಾರಂಭದಲ್ಲಿ local cadre and residual cadre ಅನ್ನು bifurcation ಮಾಡುವಾಗ ಕೇಳಿರುವವರಿಗೆ ಏನು ಕೇಳಿದ್ದಾರೆ ಎಂದು ಸರಿಯಾಗಿ ಅವರಿಗೆ ಗೊತ್ತೇ ಇಲ್ಲ. The Rule itself says that. Rule ಏನು ಹೇಳುತ್ತದೆ, 'anybody who proves that he is from local area ಅವರು ಮಾತ್ರ local cadre ನಲ್ಲಿ ಬರುತ್ತಾರೆ, ಅದನ್ನು ಬಿಟ್ಟು ಉಳಿದವರೆಲ್ಲರೂ residual cadre ನಲ್ಲಿ ಬರುತ್ತಾರೆ ಎಂದು ರೂಲ್ ಹೇಳುತ್ತದೆ. ಆದರೆ ಅವರು option ಕೊಟ್ಟು ಏನು ಬರೆದುಕೊಟ್ಟಿರುತ್ತಾರೋ, ಅದನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ದುರ್ದೈವದ ಸಂಗತಿ ಎಂದರೆ ಅಲ್ಲಿನವರು ಇಲ್ಲಿಗೆ ಮತ್ತು ಇಲ್ಲಿನವರು ಅಲ್ಲಿಗೆ ಕೇಳಿದ್ದಾರೆ. It is not based on the whims and fancies. ದಯವಿಟ್ಟು ಇದಕ್ಕೆ amendment ಮಾಡಬೇಕು. ಆ ವ್ಯಕ್ತಿ ಯಾವ ಏರಿಯಾದವನು ಎಂದು, that itself will prove or say as to whether he belongs to local cadre or residual cadre. ಇದಕ್ಕೆ ತಿದ್ದುಪಡಿ ತರಬೇಕು.

**ಉಪ ಸಭಾಪತಿಯವರುಃ-** ಮಾನ್ಯ ಸದಸ್ಯರೇ, ಗಮನ ಸೆಳೆಯುವ ಸೂಚನೆ ಅರ್ಧ ಗಂಟೆಯಲ್ಲಿ ಮುಕ್ತಾಯವಾಗಬೇಕಾಗಿದ್ದು, ತುಂಬಾ lengthy ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಶಶೀಲ್ ಜಿ. ನಮೋಶಿಃ–** ಮಾನ್ಯ ಸಭಾಪತಿಯವರೇ, ಇನ್ನು 10 ನಿಮಿಷ ಅವಕಾಶ ಕೊಡಿ.

**ಉಪ ಸಭಾಪತಿಯವರುಃ–** ಇಲ್ಲ, ಅವಕಾಶ ಇರುವುದು ಅರ್ಧ ಗಂಟೆ ಮಾತ್ರ ಆಗಿದ್ದು, ಇಷ್ಟು ಸಮಯ ತೆಗೆದುಕೊಂಡರೆ ಹೇಗೆ?

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಮಾನ್ಯ ಸಭಾಪತಿಯವರೆ, ಬಹಳ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದು, ದಯಮಾಡಿ ಇದನ್ನು half an hour discussion ಗೆ convert ಮಾಡಿ.

**ಉಪ ಸಭಾಪತಿಯವರುಃ–** ನಂತರ convert ಮಾಡಿ ಅವಕಾಶ ಕೊಡೋಣ.

**ಶ್ರೀ ಶಶೀಲ್ ಜಿ. ನಮೋಶಿಃ–** ಮಾನ್ಯ ಸಭಾಪತಿಯವರೇ, ಇನ್ನು ಮೂರ್ನಾಲ್ಕು ಅಂಶಗಳಿದ್ದು, ದಯವಿಟ್ಟು ಅವಕಾಶ ಕೊಡಬೇಕು.

**ಉಪ ಸಭಾಪತಿಯವರು:–** ಮೂರು ನಿಮಿಷಗಳಲ್ಲಿ ಮುಕ್ತಾಯ ಮಾಡಿ.

**ಶ್ರೀ ಶಶೀಲ್ ಜಿ. ನಮೋಶಿಃ–** ಇನ್ನು 10 ನಿಮಿಷಗಳ ಕಾಲಾವಕಾಶ ಕೊಡಿ.

**ಉಪ ಸಭಾಪತಿಯವರುಃ–** 10 ನಿಮಿಷ ಆದರೆ convert ಮಾಡೋಣ. ಅರ್ಧ ಗಂಟೆ ಚರ್ಚೆಗೆ convert ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್ಃ–** ಗಮನ ಸೆಳೆಯುವ ಸೂಚನೆಯನ್ನು ಅರ್ಧ ಗಂಟೆ ಚರ್ಚೆಗೆ ಹೇಗೆ ಛಿಂಟಿತಜಡಿಣ ಮಾಡುತ್ತೀರಿ? ಈ ವಿಚಾರವನ್ನು ಚರ್ಚೆ ಮಾಡಿ ಮುಗಿಸಬೇಕು.

**ಉಪ ಸಭಾಪತಿಯವರುಃ–** ಅರ್ಧ ಗಂಟೆ ಚರ್ಚೆಗೆ ಬರುವುದಿಲ್ಲ, ಬೇರೆ ನಿಯಮಗಳಲ್ಲಿ ಅವಕಾಶ ಇದ್ದರೆ ನೋಡಬೇಕು. ಬೇರೆ ನಿಯಮದಲ್ಲಿ ಸೇರಿಸಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡೋಣ.

**ಶ್ರೀ ಎಸ್.ಆರ್. ಪಾಟೀಲ್ಃ–** ಇದರಲ್ಲಿಯೇ ಮುಕ್ತಾಯವಾಗಬೇಕು.

**(ಗೊಂದಲ)**

**ಶ್ರೀ ಬಸವರಾಜ ಪಾಟೀಲ್ ಇಟಗಿಃ–** ಈ ವಿಚಾರದ ಚರ್ಚೆಗೆ ಒಂದು ಅಥವಾ ಎರಡು ತಾಸು ಸಮಯಾವಕಾಶ ಬೇಕು. ಬಹಳಷ್ಟು ವಿಷಯಗಳಿವೆ ಹಾಗೂ ಅನ್ಯಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಉಪ ಸಭಾಪತಿಯವರು:–** ಈಗ 5–25 ಸಮಯವಾಗಿದ್ದು, ದಯಮಾಡಿ 5–30ಕ್ಕೆ ಮುಕ್ತಾಯ ಮಾಡಿ. 5 ನಿಮಿಷಗಳಲ್ಲಿ ಮುಗಿಸಿ.

**ಶ್ರೀ ಎಸ್.ಆರ್. ಪಾಟೀಲ್:–** ನಿಯಮ 330ಕ್ಕೆ convert ಮಾಡಬಹುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಇದರಲ್ಲಿ ಕಲ್ಯಾಣ ಕರ್ನಾಟಕದ ಪ್ರಶ್ನೆ ಇದ್ದು, ನಿಯಮ 330ಕ್ಕೆ convert ಮಾಡಿ. ಸಾಕಷ್ಟು ಸಮಸ್ಯೆಗಳಿದ್ದು, ಪ್ರತಿದಿನ ಹೋರಾಟಗಳು ನಡೆಯುತ್ತಿವೆ. ಪ್ರತಿಯೊಂದು transfer ನಲ್ಲಿ, ಪ್ರತಿಯೊಂದು Department ನಲ್ಲಿ ಸಮಸ್ಯೆ ಇದೆ. ಮಾನ್ಯ ಸವದಿಯವರು ಸದನದಲ್ಲಿದ್ದು, ಅವರ ಇಲಾಖೆಯಲ್ಲಿ transfer ನಲ್ಲಿ ಸಮಸ್ಯೆ ಇದೆ.

**(ಗೊಂದಲ)**

**ಉಪ ಸಭಾಪತಿಯವರು:–** 5 ನಿಮಿಷದಲ್ಲಿ ಮುಗಿಸಿ.

**ಶ್ರೀ ಶಶಿಲ್ ಜಿ ನಮೋಶಿ:–** ಮಾನ್ಯ ಸಭಾಪತಿಯವರೇ, 10 ನಿಮಿಷ ಅವಕಾಶ ಕೊಡಿ, 1997ರಲ್ಲಿ ಇದ್ದ local cadre ನವರಿಗೆ promotion ಸಿಕ್ಕಿಲ್ಲ, ಆದರೆ 2004ರಲ್ಲಿ ಇದ್ದ residual cadre ಅಂದರೆ, ಹೈದ್ರಾಬಾದ್–ಕರ್ನಾಟಕದ ಹೊರಗಿನವರು promotion ತೆಗೆದುಕೊಂಡಿದ್ದಾರೆ. Constable ಹುದ್ದೆಯಿಂದ Head Constable ಹುದ್ದೆಗೆ 2011ರಲ್ಲಿ ಇದ್ದ non-local area ನವರು promotion ತೆಗೆದುಕೊಂಡಿದ್ದಾರೆ. 1997ರಲ್ಲಿದ್ದ local cadre ನವರಿಗೆ promotion ಸಿಕ್ಕಿಲ್ಲ. ನಾನು ಪ್ರಶ್ನೆ ಮಾಡುವುದೇನೆಂದರೆ, is it for the benefit of local cadre or for outsiders? ಇದಕ್ಕೆ solution ಏನೆಂದರೆ, ಯಾವುದೇ promotion ಅಥವಾ ಉದ್ಯೋಗಕ್ಕೆ ಅಪ್ಲೈ ಮಾಡಿದರೆ, let all should apply. ಮೊದಲು 20% reservation ಮಾಡಿ, ಅದಕ್ಕೆ ಎಲ್ಲರೂ ಅಪ್ಲೈ ಮಾಡುವುದರಿಂದ natural justice will be retained. ಇಲ್ಲಿ ಏನಾಗಿದೆ ಎಂದರೆ natural justice ಹೋಗಿದೆ. ಒಬ್ಬ Non-local area ದ Junior ಇದ್ದವನು promotion ತೆಗೆದುಕೊಂಡಿದ್ದಾನೆ. ಅವನಿಗೆ ಸಿಕ್ಕಿ ಇವನಿಗೆ promotion ಸಿಕ್ಕಿಲ್ಲ. ಈ ರೀತಿಯಾಗಿ ಅನೇಕ ಕಡೆ ತೊಂದರೆಯಾಗಿದೆ. ಇದಲ್ಲದೇ 8%

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

reservation ಬಗ್ಗೆ ಉತ್ತರವನ್ನು ಕೊಟ್ಟಿದ್ದು, ಇದು ಉಳಿದ ಭಾಗದಲ್ಲಿ ಅನೇಕ ಕಡೆ ರಾಜ್ಯದ ಹುದ್ದೆಯಲ್ಲ ಮತ್ತು ಸಂಬಂಧ ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಎಲ್ಲಾ University ಗಳಲ್ಲಿ Ph.D. ಸೀಟುಗಳಲ್ಲಿ these 8% seats are not given. ಇದನ್ನು ಏಕೆ ಕೊಡಬಾರದು? ಉತ್ತರದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕೊಡುತ್ತೇವೆ ಎಂದು ಕೊಟ್ಟಿಲ್ಲ. ಇದನ್ನು ಗಮನಕ್ಕೆ ತರುತ್ತಿದ್ದೇನೆ ಮತ್ತು ಕೆಪಿಎಸ್‌ಸಿ ಯಲ್ಲಿ ನೇರವಾಗಿ bifurcate ಮಾಡಿದ್ದು, they are not willing to agree. ಅದಕ್ಕೆ ಯಾರು ಉತ್ತರ ಕೊಡಬೇಕು, ಅದರ ಬಗ್ಗೆ ದಯವಿಟ್ಟು ನೋಡಿ. ಇದಲ್ಲದೇ ಒಂದೇ ಹುದ್ದೆ ಅಥವಾ fraction ಹುದ್ದೆ ಇರುತ್ತದೆ. ಈ ರೀತಿ ಇದ್ದಾಗ ರೂಲ್ ಏನು ಹೇಳುತ್ತದೆ, 'it should be considered as one and given to the local cadre' ಎಂದು ಹೇಳುತ್ತದೆ. ಆದರೆ ಅದನ್ನು use ಮಾಡುತ್ತಿಲ್ಲ. ನಂತರ domicile ನಲ್ಲಿ ಯಾರು local person ಎನ್ನುವುದರ definition ನಲ್ಲಿ ಕನ್ನಡ ಭಾಷೆಯಲ್ಲಿ ಬೇರೆ ಇದೆ ಮತ್ತು ಆಂಗ್ಲ ಭಾಷೆಯಲ್ಲಿ ಬೇರೆ ಇದೆ. ನಾನು ಸಮಯದ ಅಭಾವದಿಂದ ವಿವರವಾಗಿ ಹೇಳುವುದಿಲ್ಲ. ಅರ್ಥಗಳು ಬೇರೆ ಇದ್ದು, ಅದನ್ನು ಓದಿದವರು ಅದು ಸರಿ ಹಾಗೂ ಇದನ್ನು ಓದಿದವರು ಇದು ಸರಿ ಎಂದು ಹೇಳುತ್ತಾರೆ. ಇದರಲ್ಲಿ ಯಾವುದನ್ನು implement ಮಾಡಬೇಕು? ಸಾಕಷ್ಟು ಕೇಸ್‌ಗಳು KAT, High Court ಗೆ ಹೋಗಿವೆ. ಇವತ್ತು ಆಕ್ಟ್‌ನ Rule 12 ನಲ್ಲಿ Local Bench of Tribunal for disputes should be formed ಎಂದು ಇದೆ. ಇದಕ್ಕೆ Tribunal ಏಕೆ ಮಾಡಬಾರದು? ಇದಕ್ಕಾಗಿಯೇ ಒಂದು Tribunal ಮಾಡಿ, Tribunal ಮಾಡಿದ ನಂತರ ಕೇಸ್ ಅಲ್ಲಿಯೇ fight ಮಾಡಲಿ. Why should they go to High Court or anywhere? ಇದು ನನ್ನ ಪ್ರಶ್ನೆ. ಇನ್ನೊಂದು, shifting of State level officers ಬಗ್ಗೆ ಏಕೆ? ಈ ಎಲ್ಲಾ ವಿಷಯ ಏಕೆ ಬಂತು ಎಂದರೆ, at one time, ಡಾ: ನಂಜುಂಡಪ್ಪ ವರದಿಯಲ್ಲಿ, Karnataka Government Services ನಲ್ಲಿ there are only 4% people who are residing in that region ಎಂದು ಹೇಳಿದ್ದು, ಕೇವಲ 4% ಜನರಿದ್ದಾರೆ ಎಂದು ಉಲ್ಲೇಖವಾಗಿದೆ. ಆದರೆ ನಮ್ಮ population ಏನಿದೆ, our population is 19% but whether 19% of people are there in the reservation or State

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Officers are there? ಆದರೆ ಇಲ್ಲ. ಇದನ್ನು ಸಮಾನವಾಗಿ ಯಾವಾಗ ಮಾಡುತ್ತಾರೆ? ಆ ಕಾರಣಕ್ಕಾಗಿ why don't you shift certain posts which are there in Bengaluru? ನಮಗೆ ಸಂಬಂಧಪಟ್ಟಿರುವುದನ್ನು ಅಲ್ಲಿಯೇ ಏಕೆ ಮಾಡುವುದಿಲ್ಲ? ಇದನ್ನು ನಾವು ಹೇಳಬೇಕೇ? ಇನ್ನೊಂದು ವಿಷಯವನ್ನು ಒತ್ತು ಕೊಟ್ಟು ಹೇಳುವುದೇನೆಂದರೆ, grace marks can also be given, age relaxation can also be made. ಇವುಗಳನ್ನು ಏಕೆ ಮಾಡಬೇಕು. ಇವತ್ತು 6 ರಿಂದ 7 ಸಾವಿರ ಹುದ್ದೆಗಳು ಬೇಕಾಗಿದ್ದು, TET ಮಾಡುತ್ತಾರೆ, CET ಮಾಡುತ್ತಾರೆ, ಅದರೆ 2 ಸಾವಿರ ಹುದ್ದೆಗಳನ್ನು ತುಂಬುತ್ತಿಲ್ಲ. ಏಕೆ ಸ್ವಲ್ಪ relax ಮಾಡಬಾರದು? When the Act provides for that. ಈ ಮಾತನ್ನು ಒತ್ತು ಕೊಟ್ಟು ಹೇಳಲು ಬಯಸುತ್ತೇನೆ. ಕೊನೆಗೆ ಒಂದು Commission ಮಾಡಿ, ಅದರಡಿಯಲ್ಲಿ ಎಲ್ಲವನ್ನೂ ನೋಡಿಕೊಳ್ಳುವಂತೆ ಆಗಲಿ. ಇದಕ್ಕೆ ಒಂದು ಮಂತ್ರಾಲಯವನ್ನು ಏಕೆ ಮಾಡಬಾರದು? ನನ್ನ ಮಾತಿನ ಅರ್ಥ ಏನೆಂದರೆ, let one of the Ministers, ಈ ವಿಚಾರಕ್ಕೆ ಸಂಬಂಧಪಟ್ಟಂತೆ attach ಮಾಡುವುದಕ್ಕೆ....... ಬೇರೆ ಬೇರೆ ಸಣ್ಣ ಸಣ್ಣ ಕೆಲಸಕ್ಕೆ ಒಬ್ಬ ಮಂತ್ರಿಯನ್ನು ಕೊಡುತ್ತೇವೆ, ಈ ವಿಷಯಕ್ಕೆ ಏಕೆ ಮಾಡಬಾರದು ಎಂದು ನನ್ನ ಬೇಡಿಕೆಯಾಗಿದೆ. ದಯವಿಟ್ಟು ಒಂದು ಸಮಿತಿಯನ್ನು ರಚನೆ ಮಾಡಿ, ಒಬ್ಬ Senior IAS officer ಅಥವಾ Additional Chief Secretary ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಬೇಕು. ಸಾಕಷ್ಟು grievance ಗಳಿವೆ, ಸಮಸ್ಯೆಗಳಿವೆ, let him hear that.

**(ಮುಂದು)**

**(398)/15.03.2021/5.30/ಹೆಚ್‌ವಿಃಬಿಎನ್‌ಎಸ್**

**ಶ್ರೀ ಶಶಿಲ್ ಜಿ.ನಮೋಶಿ(ಮುಂದು):-**

ಮಾನ್ಯ ಸಭಾಪತಿಯವರೇ, ಆ ಭಾಗದ ತಜ್ಞರು ಮತ್ತು ಜನರು ಇದರಲ್ಲಿ ಪಾಲ್ಗೊಳ್ಳುವ ಮೂಲಕ ಆ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನವನ್ನು ಮಾಡಲಿ, ಅವಶ್ಯಕತೆ ಬಿದ್ದರೆ ಸಂವಿಧಾನಕ್ಕೆ ತಿದ್ದುಪಡಿಯನ್ನು ಸಹ ತರಬೇಕೆನ್ನುವ ಅಂಶಕ್ಕೆ ನಾನು ಒತ್ತು ಕೊಡುತ್ತಿದ್ದೇನೆ. ಈ ಬಗ್ಗೆ ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಕೊಡುತ್ತಿದ್ದೇವೆ. ಅವರು ಒಂದು ಸಭೆಯನ್ನು ಕರೆದು ನಮ್ಮ ಸಮಸ್ಯೆಗಳನ್ನು ಆಲಿಸಿ, ಒಂದು ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ ಈ ಸಮಸ್ಯೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗೆಹರಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಎಲ್ಲಿ ಅವಶ್ಯಕತೆ ಇದೆ, ಅಲ್ಲಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತರಬೇಕೆಂದು ಒತ್ತಾಯಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಉಪ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆ):–** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 371(ಜೆ)ಗೆ ತಂದಿರುವ ತಿದ್ದುಪಡಿಯು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಹೈದ್ರಾಬಾದ್–ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು/ನಿರುದ್ಯೋಗಿಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ ಸವಿಸ್ತಾರವಾಗಿ ಚರ್ಚೆ ನಡೆದಿದೆ. ಆ ಭಾಗದಿಂದ ಅನೇಕ ಜನರು ವಿಧಾನ ಪರಿಷತ್ತಿನ ಸದಸ್ಯರಾಗಿ ಈ ಸದನಕ್ಕೆ ಬಂದಿದ್ದಾರೆ. ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ.ಯಲ್ಲಿನ ಕೆಲವು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊನ್ನೆ ನಮ್ಮ ಕೆ.ಎಸ್.ಆರ್.ಟಿ.ಸಿ.ಯ ನಾಲ್ಕೂ ನಿಗಮಗಳ ನೌಕರರು ಮುಷ್ಕರವನ್ನು ನಡೆಸಿ, ಅಂತರ್ ನಿಗಮ ವರ್ಗಾವಣೆ ಮಾಡಬೇಕೆನ್ನುವ ಬೇಡಿಕೆಯನ್ನು ಇಟ್ಟಿದ್ದರು. ಆ ಬೇಡಿಕೆಯನ್ನು ಈಡೇರಿಸುವುದಕ್ಕೆ ನಾವು ಈಗಾಗಲೇ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಈ ಪ್ರಶ್ನೆ ಯಾವಾಗ ಉದ್ಭವವಾಗುತ್ತದೆ ಎಂದರೆ, ನಾನು ಮೊನ್ನೆ ಕಲಬುರಗಿಗೆ ಭೇಟಿ ನೀಡಿದ್ದೆ, ಅಲ್ಲಿ ಅನೇಕ ಸಂಘಟನೆಗಳು ಬಂದು ಒಂದು ಮನವಿ ಕೊಟ್ಟವು. ‘ನೀವು ಅಂತರ್ ನಿಗಮ ವರ್ಗಾವಣೆ ಮಾಡುವಂತಹ ಸಂದರ್ಭದಲ್ಲಿ ಸ್ಥಳೀಯರು ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಅಂತರ್ ನಿಗಮ ವರ್ಗಾವಣೆ ಮಾಡಬಾರದು’ ಎನ್ನುವ ಬೇಡಿಕೆಯನ್ನಿಟ್ಟಿದ್ದರು. ಮತ್ತೇ ಕೆಲವರು’ ನಾವು ಕಲ್ಯಾಣ ಕರ್ನಾಟಕ ಭಾಗದಿಂದ ಬಂದು ಬಿ.ಎಂ.ಟಿ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದೇವೆ, ನಮ್ಮನ್ನು ಅಲ್ಲಿಗೆ ವರ್ಗಾವಣೆ ಮಾಡಿ’ ಎಂದು ಕೇಳಿಕೊಳ್ಳುತ್ತಿದ್ದಾರೆ. ಇಲ್ಲಿ ಎರಡು ವ್ಯತಿರಿಕ್ತವಾದ ಬೇಡಿಕೆಗಳು ಇವೆ. ಇದರ ಬಗ್ಗೆ ಆ ಭಾಗದವರು ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ.

**ಶ್ರೀ ಪಿ.ಆರ್.ರಮೇಶ್:–** ಸನ್ಮಾನ್ಯ ಸಭಾಪತಿಯವರೇ, ಆ ಭಾಗದಿಂದ ನೇಮಕಗೊಂಡು ಇಲ್ಲಿಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ, ಹೀಗಾದರೆ, ಅಲ್ಲಿ ಕೆಲಸ ಮಾಡುವವರು ಯಾರು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀ ಜಿ.ನಮೋಶಿಯವರು ಸಂವಿಧಾನದ ಅನುಚ್ಛೇದ 371(ಜೆ)ಗೆ ತಂದಿರುವ ತಿದ್ದುಪಡಿಯು ಸಮರ್ಪಕವಾಗಿ ಜಾರಿಯಾಗದಿರುವುದರಿಂದ ಹೈದ್ರಾಬಾದ್–ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳು/ನಿರುದ್ಯೋಗಿಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ ಬಹಳ ಸುದೀರ್ಘವಾಗಿ, ಭಾವನಾತ್ಮಕವಾಗಿ ಮತ್ತು ಅಲ್ಲಿನ ಸಮಸ್ಯೆಯನ್ನು ಆಳವಾಗಿ ಅರ್ಥ ಮಾಡಿಕೊಂಡು ಮಾತನಾಡಿದ್ದಾರೆ ಮತ್ತು ಯಾರ್‍ಯಾರು ಇದಕ್ಕೆ ಕಾರಣೀಭೂತರಾಗಿದ್ದಾರೆ ಅವರ ಬಗ್ಗೆ ಉಲ್ಲೇಖ ಮಾಡಿದ್ದಾರೆ ಹಾಗೂ ಈ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಸ್ಯೆಯನ್ನು ಸರಿಪಡಿಸಬೇಕೆನ್ನುವ ಅಗ್ರಹ ಮಾಡಿದ್ದಾರೆ. ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಸಂವಿಧಾನದ ಅನುಚ್ಛೇದ 371(ಜೆ)ಗೆ ತಿದ್ದುಪಡಿಯನ್ನು ಜಾರಿಗೆ ತಂದ ಮೇಲೆ ಸುಮಾರು 15,098 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಮತ್ತು 5129 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಅದು ಇನ್ನೂ ಪ್ರಗತಿಯಲ್ಲಿದೆ. ಈ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗುತ್ತದೆ. ಸುಮಾರು 14,334 ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗಿದೆ. ಸುಮಾರು 949 ಹುದ್ದೆಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಭೆಯನ್ನು ನಡೆಸಲಾಗಿದೆ. ಅದನ್ನು ತುರ್ತಾಗಿ ನೀಡುವ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ. ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳು ಕೆಲವು ಬಾಕಿ ಇವೆ. ಕೆಲವು ಪ್ರಕರಣಗಳಲ್ಲಿ ವೃಂದ ಮತ್ತು ನೇಮಕಾತಿ ವಿಚಾರದಲ್ಲಿ ಬಾಕಿ ಇವೆ. ಮತ್ತೆ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇರುವುದರಿಂದ ಪ್ರಗತಿ ಸ್ವಲ್ಪ ಮಟ್ಟಿಗೆ ಕುಂಠಿತವಾಗಿರುವುದು ಸತ್ಯ ಸಂಗತಿಯಾಗಿದೆ. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಬೇಗ ಇತ್ಯರ್ಥಗೊಳಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಜ್ಯೇಷ್ಠತಾ ಪಟ್ಟಿಯಲ್ಲಿರುವ ಕೆಲವು ಸಮಸ್ಯೆಗಳ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ, ಅವುಗಳನ್ನು ಶೀಘ್ರವೇ ಪರಿಹರಿಸುವಂತಹ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಸಂವಿಧಾನದ ಅನುಚ್ಛೇದ 371(ಜೆ)ಗೆ ತಿದ್ದುಪಡಿಯನ್ನು ಜಾರಿಗೆ ತಂದ ಹಿನ್ನೆಲೆಯಲ್ಲಿ ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಆಗಿರುವ ಪ್ರಗತಿಯನ್ನು ಪರಿಶೀಲಿಸುವುದರ ಬಗ್ಗೆ, ಆ ನಿಟ್ಟಿನಲ್ಲಿ ತೀವ್ರವಾಗಿ ಕ್ರಮಕೈಗೊಳ್ಳುವುದರ ಬಗ್ಗೆ ಯಾವುದಾದರೂ ಅಡೆತಡೆಗಳು ಬಂದರೆ ಅವುಗಳನ್ನು ನಿವಾರಿಸುವುದಕ್ಕೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿದೆ.

ಮಾನ್ಯ ಶಶಿಲ್ ಜಿ.ನಮೋಶಿಯವರು ಮಾತನಾಡುತ್ತಾ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಜೊತೆಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಸಭೆ ನಡೆಸಬೇಕು ಮತ್ತು ವಿಶೇಷ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಹೇಳಿದ್ದಾರೆ. ಇದನ್ನೆಲ್ಲ ಪರಿಶೀಲನೆ ಮಾಡುವುದಕ್ಕೆ ಈ ಸದನದ ಅವಧಿಯೊಳಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವ ಅವಕಾಶವನ್ನು ಕಲ್ಪಿಸಿ, ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಏನೇನು ಸಮಸ್ಯೆಗಳಿವೆ ಅವುಗಳನ್ನು ಪರಿಹರಿಸಿ, ಆ ಭಾಗದ ಅಭಿವೃದ್ಧಿಗೆ ಬೇಕಾದಂತಹ ಯೋಜನೆಗಳನ್ನು ರೂಪಿಸುವುದಕ್ಕೆ ಸರ್ಕಾರ ಬದ್ಧವಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

**(ಅ) ವಿಷಯ:– ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸ, ಶಿರೋಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಕುರಿತು.**

– – –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯರೇ, ಬೆಳಗಾವಿ ಜಿಲ್ಲೆಯ ಪಶ್ಚಿಮಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸ, ಶಿರೋಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಕುರಿತು ಪ್ರಸ್ತಾಪ ಮಾಡುತ್ತಿದ್ದೇನೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಸುಮಾರು 51 ಗ್ರಾಮ ಪಂಚಾಯಿತಿಗಳಲ್ಲಿ ಸುಮಾರು 20 ಗ್ರಾಮ ಪಂಚಾಯಿತಿಗಳು ಅರಣ್ಯ ಪ್ರದೇಶಗಳನ್ನು ಒಳಗೊಂಡಿವೆ. ಅದರಲ್ಲಿ 17 ಗ್ರಾಮಪಂಚಾಯಿತಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ರಸ್ತೆ ಕಾಮಗಾರಿಗಳಾಗಿಲ್ಲ. ಕಾಮಗಾರಿಗಳಿಗೆ ಟೆಂಡರ್ ಕರೆದರೂ ಸಹ ತಾಲ್ಲೂಕಿನ ಅರಣ್ಯ ಅಧಿಕಾರಿಗಳು ಅನಗತ್ಯವಾದ ತೊಂದರೆಯನ್ನು ಕೊಡುತ್ತಿದ್ದಾರೆ. ಇದರಿಂದಾಗಿ ಆ 17 ಗ್ರಾಮಪಂಚಾಯಿತಿಯ ಜನರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆ ತಾಲ್ಲೂಕಿನ ಗ್ರಾಮಪಂಚಾಯಿತಿಗಳಾದ ಪಾರವಾಡ, ಕನಕುಂಬಿ, ಗೊಲಯಾಳಿ, ಬೈಲೂರು, ಶಿರೋಳಿ, ಗೋದಳಿ, ನಿಲವಡೆ, ಬಿಜಗರಣಿ, ನಾಗರಗಾಳಿ, ಲೋಂಡಾ, ಘೊಟಗಾಳಿ, ಮುಂತುರ್ಗಾ, ಅಮತಿ, ಗುಂಜಿ, ಕಾಪೋಲಿ, ಹಲಗಾ, ನೇರಸೆ ಮತ್ತು ಮೊಹಿಶೆಟ್ ಗ್ರಾಮಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಮಹದಾಯಿ ನದಿ ಹುಟ್ಟಿರುವಂತಹ ಖಾನಪುರ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರು ಸಿಗುತ್ತಿಲ್ಲ. ಮಹದಾಯಿ ನಮ್ಮ ರಾಜ್ಯದ ಜೀವನಾಡಿಯಾಗಿದೆ. ವಿಶೇಷವಾಗಿ ಬೆಳಗಾವಿ ಮತ್ತು ಧಾರವಾಡಗಳಂತಹ 3–4 ಜಿಲ್ಲೆಗಳಿಗೆ ಮತ್ತು ಅನೇಕ ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಮತ್ತು ಕೃಷಿ ಭೂಮಿಗೆ ನೀರಾವರಿಯನ್ನು ಒದಗಿಸುವಂತಹ ಯೋಜನೆಯಾಗಿದೆ. ಯಾವ ನಾಡಿನಲ್ಲಿ ಮಹದಾಯಿ ನದಿ ಹುಟ್ಟಿದೆ ಆ ನಾಡಿನಲ್ಲಿಯೇ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಕುಡಿಯುವ ನೀರಿನ ಕೊರತೆಯುಂಟಾಗಿದೆ. ಇದರ ಜೊತೆಗೆ ಶಿಕ್ಷಕರ ಕೊರತೆಯೂ ಇದೆ.

ಸನ್ಮಾನ್ಯ ಸಭಾಪತಿಯವರೇ, 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಇದರ ಬಗ್ಗೆ 3–4 ಬಾರಿ ಲೇಖನ ಪ್ರಕಟವಾಗಿದೆ. 'ಮೊಹಿಶೆಟ್' ಎನ್ನುವಂತಹ ಗ್ರಾಮ ಪಂಚಾಯಿತಿಯಲ್ಲಿನ 'ಮಾಚಾಳಿ' ಮತ್ತು 'ಸಾತನಾಳೆ' ಗ್ರಾಮದ ಮಕ್ಕಳು ಲೋಂಡಾದಲ್ಲಿರುವ ಶಾಲೆಗೆ ಹೋಗುವಂತಹ ಸಂದರ್ಭದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶೇಷವಾಗಿ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳಿನಲ್ಲಿ ಮಲಪ್ರಭಾ ನದಿಗೆ ಪ್ರವಾಹ ಬಂದಂತಹ ಸಂದರ್ಭದಲ್ಲಿ ಮಕ್ಕಳು ಶಾಲೆಗೆ ತಲುಪಲು ಹಗ್ಗದ ಮೇಲೆ ನಡೆದುಕೊಂಡು ಹೋಗುತ್ತಾರೆ. ಕಳೆದ ಹಲವು ವರ್ಷಗಳಿಂದ ಪ್ರತಿ ಬಾರಿ ಪ್ರವಾಹ ಬಂದಾಗಲೂ ಅನೇಕ ಜನ ವಿದ್ಯಾರ್ಥಿನಿಯರು ಸಾವಿಗೀಡಾಗಿದ್ದಾರೆ. ಇದು ಅತ್ಯಂತ ಶೋಚನೀಯ ವಿಚಾರವಾಗಿದೆ. ಅನೇಕ ಸಂದರ್ಭಗಳಲ್ಲಿ ಹಾಸ್ಟೆಲ್‌ಗಳ ಕೊರತೆಯಿಂದಾಗಿ ಮತ್ತು ನಿಯಮಿತವಾಗಿ ಹಾಸ್ಟೆಲ್ ಕಟ್ಟಡಗಳು ಇಲ್ಲದೇ ಇರುವುದರಿಂದ ಪ್ರೌಢಶಾಲೆಗಳಲ್ಲಿ ಕಲಿಯುತ್ತಿರುವ ಹೆಣ್ಣುಮಕ್ಕಳು ಆ ಮೂರು ತಿಂಗಳ ಕಾಲ ಬಾಡಿಗೆ ಮನೆಗಳಲ್ಲಿಯೇ ಇದ್ದು, ತಮ್ಮ ಸ್ವಂತ ಮನೆಗಳಿಗೆ ಹಿಂತಿರುಗಿ ಹೋಗುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, 'ಭೀಮಘಡ' ವನ್ನು ಹುಲಿ ಸಂತತಿ ಮತ್ತು ಅರಣ್ಯ ಸಂರಕ್ಷಿತ ಪ್ರದೇಶವನ್ನು ಘೋಷಣೆ ಮಾಡಲಾಗಿದೆ. ಇದರಿಂದಾಗಿ ಅರಣ್ಯ ಅಧಿಕಾರಿಗಳು ಈ ಗ್ರಾಮಗಳಲ್ಲಿ ರಸ್ತೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ'ಯಡಿಯಲ್ಲಿ ರಸ್ತೆ ಮಂಜೂರಾಗಿ, ಟೆಂಡರ್ ಕರೆಯಲಾಗಿದೆ. ಆದರೆ, ಅಲ್ಲಿನ ಅರಣ್ಯ ಅಧಿಕಾರಿಗಳು ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಬಿಡುತ್ತಿಲ್ಲ. 'ಮೊಹಿಶೆಟ್' ಎನ್ನುವ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯ ಆ ಗ್ರಾಮ ಪಂಚಾಯಿತಿಯ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕಾದರೆ, ಅರಣ್ಯ ಪ್ರದೇಶದಲ್ಲಿ ಸುಮಾರು 8 ಕಿಲೋಮೀಟರ್‌ಗಳಷ್ಟು ದೂರ ಅವರು ನಡೆದುಕೊಂಡು ಹೋಗಬೇಕಾಗುತ್ತದೆ. 'ಅಮಗಾಂವ' ಎನ್ನುವ ಗ್ರಾಮ ಪಂಚಾಯಿತಿಗೆ ಮೊನ್ನೆ ಚುನಾವಣೆ ನಡೆಯಿತು. ಮತದಾನ ಮಾಡುವುದಕ್ಕೆ ಸಾರ್ವಜನಿಕರು ಸುಮಾರು 50 ಕಿಲೋಮೀಟರ್‌ಗಳಷ್ಟು ದೂರವನ್ನು ಸುತ್ತಿಬಳಸಿ ಹೋದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಅಭಿವೃದ್ಧಿ ಕಾಮಗಾರಿಗಳಿಂದ ಕುಂಠಿತವಾಗಿರುವ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಈ 17 ಗ್ರಾಮ ಪಂಚಾಯಿತಿಗಳ ಬಗ್ಗೆ ನಿಯಮ 77ರಡಿಯಲ್ಲಿ ಪ್ರಸ್ತಾಪ ಮಾಡಿದ್ದೆ. ಆದರೆ, ಅದಕ್ಕೆ ಸಮರ್ಪಕವಾಗಿರುವ ಉತ್ತರ ಬಂದಿರಲಿಲ್ಲ. ಈ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವಂತಹ ಜನರು ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆದ ಮೇಲೂ ಸಹ ಈ ಗ್ರಾಮಗಳ ಜನರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಮಾನ್ಯ ಸಚಿವರು ದಯವಿಟ್ಟು ಆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾಲ್ಲೂಕಿಗೆ ಭೇಟಿ ಕೊಟ್ಟು ಅಲ್ಲಿರುವಂತಹ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಪಿ.ಡಿ.ಓ.ಗಳ ಸಭೆಯನ್ನು ಕರೆಯುವುದರ ಜೊತೆಗೆ ಸಂಬಂಧಪಟ್ಟ ಅರಣ್ಯ ಅಧಿಕಾರಿಗಳ ಸಭೆಯನ್ನು ಸಹ ಕರೆಯಬೇಕಾಗಿದೆ. ಇದರ ಜೊತೆಗೆ ಬೇರೆಬೇರೆ ಇಲಾಖೆಗಳ ಮುಖ್ಯಸ್ಥರನ್ನು ಅಂದರೆ, ಬಿ.ಇ.ಓ., ಡಿ.ಡಿ.ಪಿ.ಐ., ಮತ್ತು ಜಿಲ್ಲಾ ಪಂಚಾಯಿತಿಯ ಸಿ.ಇ.ಓ.ಗಳ ಸಭೆ ಕರೆದು ಚರ್ಚೆ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಇಲ್ಲಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದಕ್ಕೆ ದೊಡ್ಡ ಮೊತ್ತದ ಅನುದಾನ ಬೇಕಾಗುತ್ತದೆಂದು ನಾನು ಹೇಳುವುದಿಲ್ಲ. ಅಲ್ಲಿ ಇರುವಂತಹ ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅಭಿವೃದ್ಧಿ ಕೆಲಸಗಳು ಆಗಿಲ್ಲವೆನ್ನುವುದು ನನ್ನ ಅನಿಸಿಕೆಯಾಗಿದೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪ್ರಾರಂಭವಾಗಿದೆ, ಅದರೆ ಪ್ರಕರಣ ಕೋರ್ಟ್‌ನಲ್ಲಿರುವುದರಿಂದ ಸುಮಾರು 20 ಗ್ರಾಮಗಳು ಸಂಪರ್ಕವನ್ನು ಕಳೆದುಕೊಂಡಿವೆ ಎನ್ನುವ ವಿಚಾರವನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಭಾಷೆಯ ವಿಚಾರವಾಗಿ ಹೇಳಬೇಕಾದರೆ, ಸ್ವಾತಂತ್ರ್ಯ ಭಾರತದ ಒಂದು ಭಾಗವಾಗಿರುವ ಖಾನಾಪುರ ಎಲ್ಲಿಯೋ ಕಳೆದು ಹೋಗಿದೆ ಎನ್ನುವ ರೀತಿಯಲ್ಲಿ ಈ ತಾಲ್ಲೂಕಿನ ಗ್ರಾಮಪಂಚಾಯಿತಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ ಎನ್ನುವ ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ನೀಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

**(ಮುಂದು)**

**(399) 15.3.2021 5.40 ಪಿಕೆ:ಜಿಆರ್**

**ಶ್ರೀ ಕೆ.ಎಸ್.ಈಶ್ವರಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಯವರೇ,** . . .

**(ಲಿಖಿತ ಹೇಳಿಕೆಯನ್ನು ಲಗತ್ತಿಸಲಾಗಿದೆ)**

ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠರವರು ತಮ್ಮ ವಿಚಾರಗಳನ್ನು ಸವಿಸ್ತಾರವಾಗಿ ಹೇಳಿದ್ದಾರೆ. ನಾನು ಸುಮ್ಮನೆ ಎಂಥದೋ ಒಂದು ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ. 14ನೇ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹಣಕಾಸು ಆಯೋಗ, 15ನೇ ಹಣಕಾಸು ಆಯೋಗ, ನರೇಗಾ, ಸ್ವಚ್ಛ ಭಾರತ ಮಿಷನ್, ಶಾಸನಬದ್ಧ ಅನುದಾನ ಈ ರೀತಿ ಯಾವ ಯಾವ ಯೋಜನೆಗಳ ಮುಖಾಂತರ ನಾವು ಕೆಲಸ ಮಾಡಿದ್ದೇವೆ ಎನ್ನುವುದರ ಬಗ್ಗೆ ಉತ್ತರದಲ್ಲಿ ತಿಳಿಸಿದ್ದೇವೆ. ಆದರೆ ಮಾನ್ಯ ಸದಸ್ಯರು, ಆ ಭಾಗದ ಗ್ರಾಮೀಣ ಪ್ರದೇಶಗಳ ಸಮಸ್ಯೆಗಳೇನು ಎನ್ನುವುದರ ಬಗ್ಗೆ ಮನಮುಟ್ಟುವ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಅಪೇಕ್ಷೆಗೆ ತಕ್ಕಂತೆ, ಖಾನಾಪುರಕ್ಕೆ ಹೋಗಿ ಅಲ್ಲಿನ ಚುನಾಯಿತ ಪ್ರತಿನಿಧಿಗಳ ಜೊತೆ ಮಾತನಾಡುತ್ತೇನೆ. ಜಿಲ್ಲಾ ಉಸ್ತುವಾರಿ ಸಚಿವರನ್ನು ಜೊತೆಗೆ ಕರೆದುಕೊಂಡು ಹೋಗಿ ಮಾತುಕತೆ ನಡೆಸುವ ವ್ಯವಸ್ಥೆ ಮಾಡುತ್ತೇನೆ. ಯಾವ ಯಾವ ವಿಷಯಗಳಲ್ಲಿ ಸಮಸ್ಯೆ ಇದೆಯೋ ಅದಕ್ಕೆ ಸಂಬಂಧಪಟ್ಟ ಇಲಾಖೆಗಳ ಎಲ್ಲಾ ಅಧಿಕಾರಿಗಳನ್ನು ಕರೆದು ಸಭೆ ಮಾಡಿ, ಅವರ ಸಮಸ್ಯೆಗಳನ್ನು ಪರಿಹರಿಸುವ ಕೆಲಸ ಮಾಡುತ್ತೇವೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಅಲ್ಲಿ ಹಣಕಾಸಿನ ಸಮಸ್ಯೆ ಇಲ್ಲ ಎಂದು ಹೇಳಿದರು. ಹಣಕಾಸಿನ ಸಮಸ್ಯೆ ಇಲ್ಲದೇ ಇರುವಾಗ ಆ ನಿಟ್ಟಿನಲ್ಲಿ ತಕ್ಷಣ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ನಡೆಸುತ್ತೇವೆ. ಹಣಕಾಸಿನ ಸಮಸ್ಯೆಗಳಿದ್ದರೂ ಎಷ್ಟು ಸಾಧ್ಯವೋ ಅಷ್ಟು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಒಂದು ದಿನಾಂಕ ನಿಗದಿಪಡಿಸಿ, ಅದೇ ಸ್ಥಾನಕ್ಕೆ ಹೋಗಿ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡುತ್ತೇನೆ ಎಂದು ತುಂಬಾ ಸ್ಪಷ್ಟವಾಗಿ ಈ ಸದನದ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಭೀಮ್‌ಘಡ್ ಪ್ರದೇಶವನ್ನು “ಹುಲಿ ರಕ್ಷಿತ ಪ್ರದೇಶ” ವೆಂದು ಗುರುತಿಸಿದ್ದಾರೆ. ಅಲ್ಲಿರುವ ಕುಗ್ರಾಮದ ಜನರಿಗೆ ಮೂಲಭೂತ ಸೌಲಭ್ಯಗಳಾದ ವಿದ್ಯುತ್ತಿನ ಸಂಪರ್ಕ ಇಲ್ಲ. ನಾನು ಕಳೆದ ಸಲ ಸಮ್ಮಿಶ್ರ ಸರ್ಕಾರವಿದ್ದಾಗ ಈ ಕುರಿತು ಪ್ರಸ್ತಾಪ ಮಾಡಿದ್ದೆ. ಒಂದು ವೇಳೆ ಅಲ್ಲಿ ಕೇಬಲ್ ಹಾಕುವುದಕ್ಕೆ ಆಗದೇ ಇದ್ದರೆ ಸೋಲಾರ್ ಮೂಲಕ ವಿದ್ಯುತ್ತನ್ನು ತಲುಪಿಸುವ ಕೆಲಸ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅದು ಅರಣ್ಯ ಪ್ರದೇಶವಾಗಿರುವುದರಿಂದ ಸೋಲಾರ್ ಅಲ್ಲಿ ಕೆಲಸ ಮಾಡುವುದಿಲ್ಲ. ಅಂಡರ್ ಕೇಬಲಿಂಗ್ ಮಾಡುತ್ತೇವೆ ಎಂದು ಹೇಳಿದರು. ಅಂದರೆ ಭೂಮಿಯಲ್ಲೇ ನಾವು ಕೇಬಲಿಂಗ್ ಮಾಡಿ ಅಲ್ಲಿರುವ ಜನರಿಗೆ ಕೆ.ಇ.ಬಿ., ಕನೆಕ್ಟಿವಿಟಿ ಕೊಟ್ಟು ವಿದ್ಯುತ್ ಕೊಡುತ್ತೇವೆ ಎಂದು ಹೇಳಿದರು. ಆ ಕಾರ್ಯ ಸಹಿತ ವಿಳಂಬವಾಗಿದೆ. ಮಾನ್ಯ ಸಚಿವರು ಅಲ್ಲಿ ಭೇಟಿ ಕೊಡುವ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಕರೆದು ಸಭೆ ಮಾಡಿ ಪರಿಹಾರ ಒದಗಿಸುವ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ನಾನು ತುಂಬಾ ಸ್ಪಷ್ಟವಾಗಿ ಹೇಳಿದ್ದೇನೆ. ಅರಣ್ಯ ಇಲಾಖೆಯ ಅಧಿಕಾರಿಗಳಿರಬಹುದು, ವಿದ್ಯುತ್ ಇಲಾಖೆಯ ಅಧಿಕಾರಿಗಳಿರಬಹುದು ಅವರ ಜೊತೆ ಆ ಸಭೆಗೆ ಹೋಗುವುದಕ್ಕೆ ಮುಂಚೆ ಒಂದು ಸಲ ಸಮಾಲೋಚನೆ ಮಾಡುತ್ತೇನೆ. ಯಾವ ಯಾವ ಇಲಾಖೆಗಳ ಅಧಿಕಾರಿಗಳ ಜವಾಬ್ದಾರಿ ಇದರಲ್ಲಿದೆ ಎಂದು ತಿಳಿದುಕೊಂಡು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳನ್ನು ಕರೆಸಿ ಸಭೆ ಮಾಡುತ್ತೇನೆ, ಎಲ್ಲಾ ಅಧಿಕಾರಿಗಳ ಜೊತೆ ಆ ಸ್ಥಳಕ್ಕೆ ಹೋಗಿ ಎಲ್ಲಾ ರೀತಿಯ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ಮಾಡುತ್ತೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಅರಣ್ಯ ಸಚಿವರು ಈಗ ಸದನದಲ್ಲಿ ಉಪಸ್ಥಿತರಿದ್ದಾರೆ. ಮಾನ್ಯ ಅರವಿಂದ ಲಿಂಬಾವಳಿಯವರು ನೂತನವಾಗಿ ಸಚಿವರಾದ ಮೇಲೆ ತಾವು ಖಾನಾಪುರಕ್ಕೆ ಭೇಟಿ ಕೊಡಬೇಕು ಎಂದು ಕೇಳಿದ್ದೆ. ಅಲ್ಲಿನ ಅಧಿಕಾರಿ ಜೊತೆ ಮಾತನಾಡಿದರೆ ಅವರು ನಿಯಮಗಳ ಬಗ್ಗೆ ಮಾತನಾಡುತ್ತಾರೆ. ಅಲ್ಲಿರುವ ಜನ ಸುಮಾರು 100 ವರ್ಷಗಳಿಂದ ಆ ಕುಗ್ರಾಮಗಳಲ್ಲಿ ವಾಸ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ವಿದ್ಯುತ್ ಸಿಗಲಿಲ್ಲ, ಶಾಲೆ ಇಲ್ಲ, ಮೂಲಭೂತ ಸೌಕರ್ಯಗಳಿಲ್ಲ. ಅರಣ್ಯ ಇಲಾಖೆಗಳ ಅಧಿಕಾರಿಗಳೂ ಸಹ ಬಹಳ ಮುತುವರ್ಜಿ ವಹಿಸಬೇಕಾಗುತ್ತದೆ. ಮಾನ್ಯ ಸಚಿವರೂ ಕೂಡ ಇದಕ್ಕೆ ಸ್ಪಂದಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರವಿಂದ ಲಿಂಬಾವಳಿ:-** ಮಾನ್ಯ ಸಭಾಪತಿಯವರೇ, ಭೀಮ್‌ಘಡ್ ಮೀಸಲು ಅರಣ್ಯ ಪ್ರದೇಶವಾಗಿದೆ. ಅದಕ್ಕೆ ನಿಯಮಗಳಿವೆ. ಅವರಿಗೆ ಮೂಲಭೂತ ಸೌಕರ್ಯಗಳನ್ನು ಕೊಡುವುದರ ಬಗ್ಗೆ ಯಾವುದೇ ತೊಂದರೆ ಇಲ್ಲ. ಆದರೆ, ಮಾನ್ಯ ಈಶ್ವರಪ್ಪನವರು ಅಲ್ಲಿ ಭೇಟಿ ಕೊಡುವುದಕ್ಕೆ ಮುಂಚೆ ಆನ್‌ಲೈನ್‌ನಲ್ಲಿ ಅಪ್ಲೈ ಮಾಡಿದ್ದರೆ ಅದಕ್ಕೆ ಅನುಮತಿ ಸಿಗುವಂತಹ ಪ್ರಯತ್ನವನ್ನು ಮಾಡುತ್ತೇನೆ. ಆನ್‌ಲೈನ್‌ನಲ್ಲಿ ಅಪ್ಲೈ ಮಾಡಿ ಎಂದು ಹೇಳಿದ ತಕ್ಷಣ, ಇವರು ಕೊಡುವುದಿಲ್ಲ ಎಂದು ಭಾವಿಸಿ ಜನ ಹಿಂಜರಿಯುತ್ತಾರೆ. ಆ ರೀತಿ ಭಾವನೆಯನ್ನು ಇಟ್ಟುಕೊಳ್ಳಬಾರದು. ಮೂಲಭೂತ ಸೌಕರ್ಯಗಳಿಗೆ ಅನುಮತಿ ಸಿಗುತ್ತದೆ, ಆದರೆ ಆನ್‌ಲೈನ್ ನಲ್ಲಿ ಅಪ್ಲೈ ಮಾಡಬೇಕಾಗುತ್ತದೆ.

## 7. ಪ್ರಕಟಣೆ

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ನೇ ನಿಯಮದ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೇರೆಗೆ ವಿಧಾನಸಭೆಯು ದಿನಾಂಕ 15.3.2021ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 2021
2. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ 2021

ಮಾನ್ಯ ತಿಪ್ಪೇಸ್ವಾಮಿ, ಮಾನ್ಯ ಅಪ್ಪಾಜಿಗೌಡ, ಮಾನ್ಯ ಶ್ರೀಕಂಠೇಗೌಡ ಹಾಗೂ ಮಾನ್ಯ ಗೋವಿಂದರಾಜುರವರುಗಳು ಏನು, ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಕೋವಿಡ್–19 ಸಾಂಕ್ರಾಮಿಕ ರೋಗದ ಪರಿಣಾಮದಿಂದಾಗಿ ಲಾಕ್‌ಡೌನ್ ವಿಧಿಸಲಾಗಿ ಶಾಲಾ ಮಕ್ಕಳ ಕಲಿಕೆಯಲ್ಲಿ ತೀವ್ರ ಹಿನ್ನಡೆ ಉಂಟಾಗಿರುವುದರಿಂದ ವಿದ್ಯಾರ್ಥಿಗಳ ಕುಟುಂಬಗಳ ಸ್ಥಿತಿ, ಆರ್ಥಿಕ ಸಂಕಷ್ಟ ಹಾಗೂ ಜೀವನ ಶೈಲಿಗಳ ಕುರಿತಂತೆ ಸಮಗ್ರ ಸಮೀಕ್ಷೆ ನಡೆಸುವ ಕುರಿತು ಪ್ರಸ್ತಾಪಿಸ ಬಯಸಿರುವ ವಿಷಯಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಸದನದಲ್ಲಿ ಇಲ್ಲದೇ ಇರುವುದರಿಂದ ನಾಳೆ ತೆಗೆದುಕೊಳ್ಳಲಾಗುತ್ತದೆ.

## 8.ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

(ಅ) **ವಿಷಯ**: ಕೊಡಗು ಜಿಲ್ಲೆಯಲ್ಲಿ ವನ್ಯ ಪ್ರಾಣಿಗಳ ದಾಳಿಯಿಂದಾಗಿ ಜೀವ ಹಾನಿ ಹಾಗೂ ಬೆಳೆ ಹಾನಿ ಹೆಚ್ಚಾಗಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಆಯ್ಕೆಯಾದವರು)**:– ಮಾನ್ಯ ಸಭಾಪತಿಯವರೇ, ನಾನು ಕಳೆದ ವಾರ ಕೂಡ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಮಂತ್ರಿಗಳು ಇರಲಿಲ್ಲ. ಮಾನ್ಯ ಸುನೀಲ್ ಸುಬ್ರಮಣಿಯವರು ಬೆಳಿಗ್ಗೆ ಮಾತನಾಡುತ್ತಾ ಈ ಕುರಿತು ಪ್ರಸ್ತಾಪಿಸಿದ್ದಾರೆ. ಹುಲಿಯ ದಾಳಿಯಿಂದ ಈಗಾಗಲೇ 3 ಜೀವಗಳು ಹೋಗಿರುವ ವಿಚಾರ ಎಲ್ಲರಿಗೂ ತಿಳಿದಿದೆ. ಅಲ್ಲಿನ ಜನ ಹುಲಿಯ ದಾಳಿಯಿಂದ ತತ್ತರಿಸಿ ಹೋಗಿದ್ದಾರೆ. ಜೊತೆಗೆ, ಪ್ರತಿದಿನ ನಾಲ್ಕು ಜನ ಜನಪ್ರತಿನಿಧಿಗಳಾದ ನಾವುಗಳೂ ಕೂಡ ಭೇಟಿ ಮಾಡಿ ಅವರಿಗೆ ಸಮಾಧಾನಕಾರವಾದ ಮಾತುಗಳನ್ನು ಹೇಳಿದರೂ ಅವರು ಭಾರೀ ಗೊಂದಲದಲ್ಲಿದ್ದಾರೆ. ಇದರಿಂದ ಅವರ ಬದುಕು ಅಲ್ಲೋಲ–

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಲ್ಲೋಲವಾಗಿದೆ ಎನ್ನುವ ವಿಚಾರ ದಿನವೂ ಪತ್ರಿಕೆಗಳಲ್ಲಿ ಬರುತ್ತಿವೆ. ಅಲ್ಲಿನ ಜನ ಈಗ ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಇವತ್ತು ಆ ಜಾಗದಿಂದ ಮಡಿಕೇರಿವರೆಗೆ ಹೋಗಿ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ಮಾಡುತ್ತಿದ್ದಾರೆ. ನಮ್ಮ ಅರಣ್ಯ ಇಲಾಖೆಯವರು ಕೈಚೆಲ್ಲಿ ಕುಳಿತ್ತಿದ್ದಾರೆ; ಶಾರ್ಪ್‌ಶೂಟರ್‌ಗಳು ಹಠಾತ್ ನಿರ್ಗಮಿಸಿದ್ದಾರೆ ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ. ನಮ್ಮ ಸಚಿವರು ಇದರ ಬಗ್ಗೆ ಉತ್ತರ ಕೊಡಬೇಕು. ಕೊಡಗಿನಲ್ಲಿ ನಾವು ನಾಲ್ಕು ಜನ ಜನಪ್ರತಿನಿಧಿಗಳಿದ್ದೇವೆ. ಆಡಳಿತ ಪಕ್ಷದವರು ಮೂರು ಜನ ಮತ್ತು ನಾನೊಬ್ಬಳು ವಿರೋಧ ಪಕ್ಷದ ಪ್ರತಿನಿಧಿ ಆಗಿದ್ದೇನೆ. ನೀವೆಲ್ಲಾ ರಾಜೀನಾಮೆ ಕೊಡಬೇಕು ಎಂದು ಆ ಜನ ಕೇಳಿದರು. ನಮ್ಮ ರಾಜೀನಾಮೆಯಿಂದ ಆ ಹುಲಿ ಜನರಿಗೆ ತೊಂದರೆ ಕೊಡುವುದಿಲ್ಲ ಎನ್ನುವುದಾದರೆ ಖಂಡಿತವಾಗಿ ನಾವು ರಾಜೀನಾಮೆ ಕೊಡುತ್ತೇವೆ. ಅಲ್ಲಿನ ಹೆಣ್ಣು ಮಕ್ಕಳು ತಮ್ಮ ಗಂಡಂದಿರ ಜೊತೆ ಬಂದು ಪ್ರತಿಭಟನೆಯಲ್ಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ಇದೆ. ಅವರು ಮನೆಯಲ್ಲಿ ಇರುವುದಕ್ಕೆ ಭಯ ಪಡುತ್ತಾರೆ. ತೋಟಕ್ಕೆ ಹೋಗುವುದಕ್ಕೂ ಭಯ ಪಡುತ್ತಾರೆ. ಈ ರೀತಿ ಭಯದ ವಾತಾವರಣ ಅಲ್ಲಿದೆ. ಇಡೀ ದಕ್ಷಿಣ ಕೊಡಗು ಏನಿದೆ, ಅಂದರೆ ಪೊನ್ನಂಪೇಟೆ ತಾಲ್ಲೂಕು ಏನಿದೆ ಅಲ್ಲೆಲ್ಲಾ ಜನ ಭಯಭೀತರಾಗಿದ್ದಾರೆ. ಅದನ್ನು ನೋಡುವುದಕ್ಕೆ ನಮಗೆ ಬೇಜಾರಾಗುತ್ತದೆ. ಮಾನ್ಯ ಸಭಾಪತಿಯವರೇ, ನಮ್ಮ ಜನ ತುಂಬಾ ಒಳ್ಳೆಯವರು. ಕೊಡಗಿನ ಜಿಲ್ಲೆಯವರಷ್ಟು ಒಳ್ಳೆಯ ಜನರನ್ನು ನಾನು ಬೇರೆ ಯಾವ ಜಿಲ್ಲೆಯಲ್ಲೂ ಕಂಡಿಲ್ಲ, ನಾನು ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೇನೆ.

**ಉಪಸಭಾಪತಿಯವರು:–** ಹಾಗಾದರೆ ಉಳಿದವರೆಲ್ಲರೂ ಕೆಟ್ಟವರೇ?

**(ಸದನದಲ್ಲಿ ನಗು)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಕೆಟ್ಟವರು ಎಂದು ಹೇಳುತ್ತಿಲ್ಲ. ಮಾನ್ಯ ಸಚಿವರು ಅಲ್ಲಿ ಒಂದು ಸಲ ಭೇಟಿ ಕೊಡಬೇಕು. ನಾವೂ ಕೂಡ ನಿಮ್ಮ ಜೊತೆ ಬರುತ್ತೇವೆ, ನಿಮಗೆ ಅಲ್ಲಿನ ಜನ ಯಾವರೀತಿಯಿಂದಲೂ ತೊಂದರೆ ಕೊಡುವುದಿಲ್ಲ.

**ಉಪಸಭಾಪತಿಯವರು:–** ಮಾನ್ಯ ಸಚಿವರು ಹುಲಿಗೆ ಹೆದರಿಬಿಟ್ಟಿದ್ದಾರೆಯೇ?

**(ಸದನದಲ್ಲಿ ನಗು)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಬಹುಶಃ ಹುಲಿಗೆ ಹೆದರಿಕೊಂಡಿರಬೇಕು. ಅವರ ಜೊತೆ ನಾವೆಲ್ಲರೂ ಇರುತ್ತೇವೆ. ಆಗಲೇ ನಾನು ಮಾನ್ಯ ಮಂತ್ರಿಯವರಿಗೆ ಒಂದು ಫೋಟೋ ಕೊಟ್ಟೆ. ಅರಣ್ಯ ಇಲಾಖೆಯವರು ಆನೆಯನ್ನು ಬಳಸಿಕೊಂಡು ಹುಲಿಯನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ತೋಟದಲ್ಲಿ ಆ ಆನೆಯನ್ನು ನುಗ್ಗಿಸಿದ್ದರಿಂದ ಆ ತೋಟದಲ್ಲಿ ಎಲ್ಲಾ ಅವ್ಯವಸ್ಥಿತ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಸರ್ಕಾರ ಇವತ್ತು ಎಚ್ಚೆತ್ತುಕೊಳ್ಳಬೇಕಾಗಿದೆ.

**ಉಪಸಭಾಪತಿಯವರು:-** ತಾವು ಮಾತನಾಡುತ್ತಾ, ಮಾನ್ಯ ಸಚಿವರೇ ನೀವು ಹುಲಿಗೆ ಹೆದರಬೇಡಿ, ಹುಲಿ ಬಂದರೂ ನಾವು ನಿಮ್ಮ ಜೊತೆಯಲ್ಲಿರುತ್ತೇವೆ ಎಂದು ಸಚಿವರಿಗೆ ಹೇಳಿದಿರಿ.

**(ಸದನದಲ್ಲಿ ನಗು)**

**ಶ್ರೀ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಚಿವರು ಅಲ್ಲಿಗೆ ಬರಲೇ ಬೇಕು. ಅಲ್ಲಿನ ಜನರೊಂದಿಗೆ ಸಮಾಧಾನಕರವಾದ ಮಾತುಗಳನ್ನಾಡಲೇ ಬೇಕು. ಅರಣ್ಯ ಇಲಾಖೆಯವರಿಗೆ ಹೆಚ್ಚು ಶಕ್ತಿಯನ್ನು ತುಂಬಬೇಕು. ಯಾವುದಾದರೂ ಒಂದು ರೀತಿಯಲ್ಲಿ ಹುಲಿಯನ್ನು ಹಿಡಿಯಲೇಬೇಕಾಗಿದೆ. ಮಾನ್ಯ ಸಚಿವರು ಇದಕ್ಕೆ ಸೂಕ್ತ ಉತ್ತರ ಕೊಡಬೇಕು.

**ಶ್ರೀ ಬಸವರಾಜ ಪಾಟೀಲ್ ಇಟಗಿ**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):- ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಈ ಕುರಿತು ಸದನದಲ್ಲಿ ಮಾತನಾಡಿದಾಗ ಮಾನ್ಯ ಸಚಿವರು ಅದಕ್ಕೆ ಸಮರ್ಪಕವಾದ ಉತ್ತರ ಕೊಟ್ಟರು. ಆದರೆ ಒಂದು ವಿಷಯವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಎಲ್ಲಾ ಕಾಡು ಪ್ರಾಣಿಗಳು ನಾಡಿಗೆ ಬರುತ್ತಿವೆ. ನನಗೆ ತಿಳಿದ ಮಟ್ಟಿಗೆ ಇದಕ್ಕೆ ಒಂದು ಕಾರಣ ಇದೆ. ನನ್ನ ಕ್ಲಾಸ್‌ಮೇಟ್ ಆಗಿರುವ ಒಬ್ಬ ಐ.ಎಫ್.ಎಸ್., ಅಧಿಕಾರಿಗೆ, ಈ ರೀತಿ ಪ್ರಾಣಿಗಳು ಕಾಡಿನಿಂದ ನಾಡಿಗೆ ಏಕೆ ಬರುತ್ತಿದೆ ಎಂದು ಕೇಳಿದೆ. ಅದಕ್ಕೆ ಅವರು ಏನು ಹೇಳಿದರು ಎನ್ನುವುದನ್ನು ಹೇಳುತ್ತೇನೆ. ಮೊದಲು ಇವುಗಳ ಸಂಖ್ಯೆ ತಾನೇ ನಿಯಂತ್ರಿತವಾಗುತ್ತಿತ್ತು. ಜನ poaching ಮಾಡುತ್ತಿದ್ದರು. ಈಗ ಗಂಡು ಆನೆಗಳ ಸಂಖ್ಯೆ ಜಾಸ್ತಿಯಾಗಿವೆ. ಮೊದಲು ಗಂಡು ಆನೆಗಳಿಂದ tuskers ತೆಗೆಯುವುದಕ್ಕೆ ಜನ poach ಮಾಡುತ್ತಿದ್ದರು. ಆಗ automatically mating ಪ್ರಮಾಣ ಕಡಿಮೆಯಾಗಿ ratio maintain ಆಗುತ್ತಿತ್ತು. ಈಗ ಇವುಗಳ ಸಂಖ್ಯೆ ಸಿಕ್ಕಾಪಟ್ಟೆ ಜಾಸ್ತಿಯಾಗಿರುವುದರಿಂದ, ನಗರ ಪ್ರದೇಶಗಳಲ್ಲಿ ನಾಯಿಗಳನ್ನು ಹೇಗೆ sterilise ಮಾಡುತ್ತೇವೆಯೋ ಅದೇರೀತಿ ಸರ್ಕಾರ ಇವುಗಳಿಗೂ sterilisation ಮಾಡಬೇಕಾಗುತ್ತದೆ.

(ಮುಂದ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(400) 15-03-2021 5.50 ಡಿಎಸ್-ಜಿಆರ್**

**ಶ್ರೀ ಬಸವರಾಜ ಪಾಟೀಲ್ ಇಟಗಿ**(ಮುಂದು):-

ಅದು ಫಾರೆಸ್ಟ್ ಆಕ್ಟ್‌ನಲ್ಲೇ ಇರುತ್ತದೆ. ಈ ಏರಿಯಾಕ್ಕೆ ಎಷ್ಟು ಇರಬೇಕು, ಎಷ್ಟು ಇರಬಾರದು ಎನ್ನುವುದರ ಬಗ್ಗೆಯೂ ಸಾಕಷ್ಟು ಗಮನಹರಿಸಬೇಕಾಗುತ್ತದೆ. ಏಕೆಂದರೆ, ಇವತ್ತು poaching ಕಡಿಮೆಯಾಗಿದೆ. ಇವತ್ತು ಅರಣ್ಯ ಇಲಾಖೆ efficient ಆಗಿದೆ. ಯಾರು poaching ಮಾಡುತ್ತಿದ್ದಾರೆ ಅವರನ್ನು ಹಿಡಿದು ಒಳಗೆ ಹಾಕುತ್ತಿದ್ದಾರೆ. ಎಲ್ಲಾ ಚೆನ್ನಾಗಿ ಕೆಲಸ ಆಗುತ್ತಿದೆ. ಅದರ ಜೊತೆಗೆ ಇದನ್ನು ನೋಡಬೇಕಾಗುತ್ತದೆಯಲ್ಲವೇ? Wild animals population excess ಆಗಿ ಆಹಾರ ಮತ್ತು ನೀರು ಸಿಗಲಾರದೆ ಅರಣ್ಯದಿಂದ ಹೊರಗೆ ಬರುತ್ತಿದೆ. Wild animals' population ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕಾಗುತ್ತದೆ. ಅರಣ್ಯ ಇಲಾಖೆಯಲ್ಲಿ Sanctuary wise Wild animals' population details ಇಟ್ಟಿರುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇವತ್ತು ಬೆಂಗಳೂರು ಸುತ್ತಮುತ್ತ ಇದೇ ರೀತಿ ಆಗಿದೆ. ನಿನ್ನೆ ರಾತ್ರಿ ನನ್ನ ತೋಟದಲ್ಲಿ ಚಿರತೆ ಬಂದು ನಾಯಿಯನ್ನು ಎತ್ತಿಕೊಂಡು ಹೋಗಿದೆ. ಇವತ್ತು ಡಿ.ಎಫ್.ಓ ರವರಿಗೆ ಹೇಳಿದ್ದೇನೆ. ಇವತ್ತು ಪ್ರಾಣಿಗಳು ಬೆಂಗಳೂರು ನಗರ ಪ್ರದೇಶದ ಸುತ್ತಮುತ್ತ ಬರುತ್ತಿವೆ ಎಂದರೆ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿರುವುದು ನಿಜ. ಪ್ರಾಣಿಗಳ ಸಂಖ್ಯೆ ಹೆಚ್ಚಾಗಿದೆ ಮತ್ತು ಅಲ್ಲಿ ಅವುಗಳಿಗೆ ಸರಿಯಾದ ಆಹಾರ ಸಿಗುತ್ತಿಲ್ಲ. ಪ್ರಾಣಿಗಳು ಬೆಂಗಳೂರು ನಗರಕ್ಕೆ ಬಂದಿದೆ ಎಂದರೆ ಅರಣ್ಯದಲ್ಲಿ ಪ್ರಾಣಿಗಳಿಗೆ ಎಷ್ಟು ತೊಂದರೆಯಾಗಿರಬಹುದು ಎನ್ನುವುದು ಗೊತ್ತಾಗುತ್ತದೆ. ಅದು ಬಡಾವಣೆಗಳಿಗೆ ಹೋಗುತ್ತದೆ, ಸಾಕಷ್ಟು ಕಟ್ಟಡಗಳ ಹತ್ತಿರ ಹೋಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಯಾವುದಾದರೂ ಉತ್ತಮವಾದಂತಹ ಒಂದು ಕಾರ್ಯಕ್ರಮ ಅಥವಾ ಯೋಜನೆಯನ್ನು ಹಾಕಿಕೊಂಡರೆ ಮಾತ್ರ ಇಂಥವುಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅರವಿಂದ ಲಿಂಬಾವಳಿ(ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಷಯ ಬೆಳಗ್ಗೆ ಮಾನ್ಯ ಸುನೀಲ್ ಸುಬ್ರಮಣಿ ರವರ ಪ್ರಶ್ನೆಯಲ್ಲಿ ಬಂದಿತ್ತು. ಈಗ ಅದೇ ಉತ್ತರವನ್ನು ಕೊಟ್ಟಿದ್ದೇನೆ.

**(ಸಚಿವರ ಹೇಳಿಕೆಯನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಮಾನ್ಯ ವೀಣಾ ಅಚ್ಚಯ್ಯನವರು ಮುಖ್ಯವಾಗಿ ನನಗೆ ಕೊಡಗು ಜಿಲ್ಲೆಗೆ ಬರುವುದಕ್ಕೆ ಹೇಳಿದ್ದಾರೆ. ನಾನು ಬೆಳಿಗ್ಗೆಯೂ ಹೇಳಿದ್ದೇನೆ, ನನಗೇನೂ ಆ ರೀತಿ ರಿಸರ್ವೇಶನ್ ಏನು ಇಲ್ಲ. ವಿಧಾನಸಭೆಯಲ್ಲಿ ಸಭೆ ಕರೆದಿಲ್ಲ ಎಂದು ಹೇಳಿದ್ದರಿಂದ ಆ ಸದನದಲ್ಲಿ ಮಾತು ಕೊಟ್ಟಿದ್ದರಿಂದ ಅಲ್ಲಿರುವವರನ್ನು ಕರೆದಿದ್ದೆ. ಇವತ್ತು ಬೆಳಿಗ್ಗೆ ಈ ಸದನದ ಸದಸ್ಯರುಗಳು ಸಭೆ ಕರೆಯುವುದಕ್ಕೆ ಹೇಳಿದ್ದಾರೆ. ಈ ಪ್ರಕರಣಗಳು ಆಗುವುದಕ್ಕಿಂತ ಮುಂಚೆಯೂ ಸಹ ಕೊಡಗು ಜಿಲ್ಲೆಗೆ ಹೋಗಿ ಬಂದಿದ್ದೇನೆ. ಅಲ್ಲಿ ಅಧಿಕಾರಿಗಳ ಸಭೆಯನ್ನು ಮಾಡಿದ್ದೇನೆ. 4 ಶಾಸಕರುಗಳ ಜೊತೆಯಲ್ಲೂ ಚರ್ಚೆ ಮಾಡಿದ್ದೇನೆ. ಅದಾದ ನಂತರ ಈ ರೀತಿಯ ಪ್ರಕರಣಗಳು ನಡೆದಿವೆ. ನಾವು ನೀವು ಅಲ್ಲಿಗೆ ಹೋಗುವುದರಿಂದ ಹುಲಿ ಸಿಗುತ್ತದೆ ಎನ್ನುವುದಾದರೆ ನಾನು ಖಂಡಿತವಾಗಿಯೂ ಅಲ್ಲಿಗೆ ಬರುತ್ತೇನೆ. ಅದಕ್ಕೆ ನನಗೇನು ಬೇಜಾರು ಇಲ್ಲ. ಆದರೆ ನಾವು ಹೋಗುವುದರಿಂದ ಕಾರ್ಯಾಚರಣೆಗೆ ತೊಂದರೆಯಾಗಬಾರದು. ಈಗಾಗಲೇ ಅಲ್ಲಿ ಕಾರ್ಯಾಚರಣೆ ಮಾಡುತ್ತಿದ್ದಾರೆ. ಅದಕ್ಕೋಸ್ಕರ ನಾನು ನಿಧಾನ ಮಾಡಿದ್ದೇನೆಯೇ ಹೊರತು, ನಾವು ಹೋಗುವುದರಿಂದ ಅನಗತ್ಯವಾಗಿ ಪ್ರೋಟೋಕಾಲ್, ಅಧಿಕಾರಿಗಳು ನಮ್ಮ ಹಿಂದೆ ಓಡಾಡುವುದಕ್ಕೆ ಶುರು ಮಾಡುತ್ತಾರೆ. ಆ ಕಾರ್ಯಾಚರಣೆಗೆ ತೊಂದರೆಯಾಗಬಾರದು ಎನ್ನುವ ಕಾರಣಕ್ಕಾಗಿ ನಾನು ನಿಧಾನ ಮಾಡಿದ್ದೇನೆ. ನಾನು ಮಾನ್ಯ ಸದಸ್ಯರುಗಳ ಜೊತೆ ಮಾತನಾಡಿ ಯಾವ ದಿನಾಂಕ ಸರಿ ಅನಿಸುತ್ತದೆ ಆ ದಿನಾಂಕಕ್ಕೆ ನಾನು ಬರುವುದಕ್ಕೆ ಸಿದ್ಧನಿದ್ದೇನೆ. ಈಗ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದರು, ಇದು ಹೆಮ್ಮೆಯ ವಿಷಯವೂ ಹೌದು. ನಮ್ಮ ಇಡೀ ರಾಜ್ಯದಲ್ಲಿ 524 ಹುಲಿಗಳಿವೆ. Madhyapradesh stands at number one. ಅವರ ಹತ್ತಿರ 526 ಹುಲಿಗಳಿವೆ. ನಮ್ಮ ಹತ್ತಿರ 524 ಹುಲಿಗಳಿವೆ. ಹಾಗಾಗಿ ಸಂಖ್ಯೆಯಲ್ಲಿ ಎರಡು ಮಾತ್ರ ವ್ಯತ್ಯಾಸ ಇದೆ. ಅಲ್ಲಿ ಆಹಾರ ಸಿಗುತ್ತಿಲ್ಲ, ಇತ್ಯಾದಿ ಎಲ್ಲಾ ಇದೆ. ಹುಲಿಗೆ ಒಂದು ಸಲ ಮನುಷ್ಯನ ಮಾಂಸದ ರುಚಿ ಸಿಕ್ಕಿಬಟ್ಟರೆ ಮನುಷ್ಯನನ್ನೇ ಬೆನ್ನ ಹತ್ತುವುದು ಅದರ ಸ್ವಭಾವ. ಅದೇ ಬೇಕೆಂದು ನಿರೀಕ್ಷೆ ಮಾಡುತ್ತಿರುತ್ತದೆ. ಮೂರು ಜನಕ್ಕೆ ಹೊಡೆದ ಪರಿಣಾಮದಿಂದಲೇ ಅದಕ್ಕೆ ಶೂಟ್ ಮಾಡಿ ಎಂದು ನಾನು ಆದೇಶವನ್ನು ಮಾಡಿದ್ದೇನೆ. ಅದರ ಹುಡುಕಾಟ ನಡೆಯುತ್ತಿದೆ. ಅಲ್ಲಿರತಕ್ಕಂಥ ಜನರಿಗೆ ಸಮಾಧಾನ ಮಾಡುವ ದೃಷ್ಟಿಯಿಂದ ನಿಶ್ಚಿತವಾಗಿ ಅಲ್ಲಿನ ಉಸ್ತುವಾರಿ ಸಚಿವರು, ನಾನು ಅಲ್ಲಿಗೆ ಭೇಟಿ ಕೊಡುತ್ತೇವೆ. ಅವರಿಗೆ ಬೇರೆ ಬೇಡಿಕೆಗಳಿವೆ. ಅದು ತಮಗೂ ಗೊತ್ತಿದೆ. ಅಲ್ಲಿರುವಂತಹ ಬೇರೆ ಬೇಡಿಕೆ ಏನೆಂದರೆ, ಅಲ್ಲಿ ಹುಲಿಗಳ ಧಾಳಿಯಿಂದ ದನ, ಹಸುಗಳು ಸಾಯುತ್ತಿವೆ, ಅದಕ್ಕೆ ಈಗ ಸರ್ಕಾರ ಕೊಡತಕ್ಕಂಥ, ಅರಣ್ಯ ಇಲಾಖೆಯಿಂದ ಕೊಡತಕ್ಕಂಥ ಪರಿಹಾರ ಕೇವಲ 10,000 ರೂಪಾಯಿ ಮಾತ್ರ ಕೊಡುತ್ತಿದ್ದೇವೆ. ನಾನು ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅದನ್ನು

ಪರಿಶೀಲನೆ ಮಾಡಬೇಕು. ಏಕೆಂದರೆ, 10,000 ರೂಪಾಯಿಗೆ ಎಮ್ಮೆ ಆಗಲಿ, ಹಸು ಆಗಲಿ ಇವತ್ತಿನ ಕಾಲದಲ್ಲಿ ಸಿಗುವುದಿಲ್ಲ. ಅದನ್ನು enhance ಮಾಡಬೇಕು. ಅದಕ್ಕೆ Calamity Relief Fund ನಲ್ಲಿ ಏನು ಪರಿಹಾರ ಕೊಡುತ್ತಿದ್ದೇವೆ ಅದನ್ನಾದರೂ ಕೊನೆ ಪಕ್ಷ ಕೊಡಬೇಕೆನ್ನುವುದರ ಬಗ್ಗೆ ಆರ್ಥಿಕ ಇಲಾಖೆಯವರನ್ನು ಒಪ್ಪಿಸುತ್ತೇವೆ. Calamity ನಲ್ಲಿ ಒಂದು ಹಸು, ದನ ಸತ್ತರೆ ಅದಕ್ಕೆ 30,000 ರೂಪಾಯಿ ಇದೆ. ಕುರಿಗಳಿಗೆ ಕಡಿಮೆ ಇದೆ. ಕುರಿಗಳಿಗೆ 3,000 ರೂಪಾಯಿ ಇಟ್ಟಿದ್ದಾರೆ. ನಾವು 5,000 ರೂಪಾಯಿ ಕೊಡುತ್ತಿದ್ದೇವೆ. ಅದೇ ರೀತಿ ಬೆಳೆ ಹಾನಿಯಾಗಿರುವಂಥದ್ದನ್ನು ಇವತ್ತು ಬೆಳಿಗ್ಗೆ ಮಾನ್ಯ ವೀಣಾ ಅಚ್ಚಯ್ಯನವರು ತೋರಿಸಿದರು. ಅವರ ತೋಟದಲ್ಲೇ ಬೆಳೆ ಹಾನಿಯಾಗಿದೆ. ನಾನು ಮೊದಲು ಅದಕ್ಕೆ ಆದ್ಯತೆಯನ್ನು ಕೊಡಬೇಕಾಗಿದೆ. ಕೊಡಗಿನವರು ಒಳ್ಳೆಯವರು ಎಂದು ಮಾನ್ಯ ವೀಣಾ ಅಚ್ಚಯ್ಯನವರು ಹೇಳಿದ್ದಾರೆ. ಪರಿಹಾರ ದೃಷ್ಟಿಯಿಂದ ವಿಧಾನ ಪರಿಷತ್ತಿನ ಸದಸ್ಯರಿಂದ ನಾವು ಮೊದಲು ಶುರು ಮಾಡಬೇಕು. ಅವರ ತೋಟದಲ್ಲೇ ಬೆಳೆ ನಾಶವಾಗಿದೆ. ಜನರ ತೋಟದಲ್ಲೂ ಬೆಳೆ ನಾಶವಾಗಿದೆ. ಇದನ್ನು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ಲಿಂಕ್ ಮಾಡಬಹುದೇ ಎಂಬುದನ್ನು ಚರ್ಚೆ ಮಾಡಿದ್ದೇವೆ. ಅದಕ್ಕೆ ವಾರ್ಷಿಕವಾಗಿ ಈಗೇನು ಪರಿಹಾರವಾಗಿ ಹಣ ಕೊಡುತ್ತಿದ್ದೇವೆ, ಅದಕ್ಕೆ ಸ್ವಲ್ಪ ಪ್ರಮಾಣದಲ್ಲಿ ಜಾಸ್ತಿಯಾಗುವ ಸಾಧ್ಯತೆ ಇದೆಯೇ ಅಥವಾ ಹೇಗೆ ಎನ್ನುವಂಥದ್ದನ್ನು ಚಿಂತನೆ ಮಾಡುತ್ತಿದ್ದೇವೆ.

ಈಗ ಮನುಷ್ಯ ಸತ್ತರೆ ಅವರ ಮನೆತನಕ್ಕೆ ಏಳೂವರೆ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತಿದ್ದೇವೆ. ಜನರ ಮುಖ್ಯವಾದ ಬೇಡಿಕೆ ಏನೆಂದರೆ, ಬೆಳೆಗಳು ನಾಶವಾಗುತ್ತಿದೆ. ಆ ಬೆಳೆ ನಾಶಕ್ಕೆ ಸರಿಯಾದ ಪರಿಹಾರ ಸಿಗಬೇಕೆನ್ನುವುದು ನಿಜವಾದ ಬೇಡಿಕೆಯಾಗಿದೆ. ಅದರ ಬಗ್ಗೆ ಸರ್ಕಾರ, ನಾನು ನಿಶ್ಚಿತವಾಗಿ ಆರ್ಥಿಕ ಇಲಾಖೆಯವರ ಜೊತೆಗೆ ಮಾತನಾಡುತ್ತೇನೆ. ಈಗೇನು ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಅಡಿಯಲ್ಲಿ ಎರಡು ಪರ್ಸೆಂಟ್ ಮಾತ್ರ ರೈತರು ಕಟ್ಟಬೇಕಾಗುತ್ತದೆ. ಉಳಿದಿರುವಂತಹದ್ದು 49 ಪರ್ಸೆಂಟ್ ಕರ್ನಾಟಕ ಸರ್ಕಾರ, 49 ಪರ್ಸೆಂಟ್ ಕೇಂದ್ರ ಸರ್ಕಾರ ಕಟ್ಟಬೇಕಾಗುತ್ತದೆ. ಅದನ್ನು ಇದಕ್ಕೆ ಸೇರಿಸಬಹುದೇ, ಹೊಂದಿಸಬಹುದೇ ಎಂದು ನಮ್ಮ ಕೃಷಿ ಸಚಿವರು, ಕೃಷಿ ಇಲಾಖೆಯವರ ಜೊತೆ ಚರ್ಚೆ ಮಾಡಿ ಅದನ್ನು ಒಂದು ಹಂತಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಾರೆಯಾಗಿ ಪ್ರಾಣಿಗಳಿಗೂ ತೊಂದರೆಯಾಗಬಹುದು, ಪ್ರಾಣಿಗಳಿಂದ ಮನುಷ್ಯರು ಏನು ತೊಂದರೆಪಡುತ್ತಿದ್ದಾರೆ ಅದು ದೂರವಾಗಬೇಕೆನ್ನುವುದೇ ಉದ್ದೇಶವಾಗಿದೆ. ಆ ಪ್ರಯತ್ನವನ್ನು ನಮ್ಮ ಇಲಾಖೆಯಿಂದ ಮುಂದುವರೆಸುತ್ತೇವೆ. ಹುಲಿ ಸಿಕ್ಕ ನಂತರ ಮಾನ್ಯ ಸದಸ್ಯರ ಜಿಲ್ಲೆಗೆ ಬರುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಗಿನವರು ನಿಜಕ್ಕೂ ಒಳ್ಳೆಯವರು. ಬೇರೆ ಜಿಲ್ಲೆಗಳಿಗೆ ಹೋಲಿಸಿಕೊಂಡರೆ ಕೊಡಗಿನವರು ಬಹಳ ಒಳ್ಳೆಯವರು.

**ಉಪ ಸಭಾಪತಿಯವರು:–** ಅತಿವೃಷ್ಟಿ ಬಂದರೂ ವೀಣಾ ಅಚ್ಚಯ್ಯನವರ ಮನೆ ಸುತ್ತ ಬರುತ್ತದೆ. ಹುಲಿ ಬಂದರೂ ಅವರ ಮನೆ ಪಕ್ಕ ಬರುತ್ತದೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ತೊಂದರೆ ಯಾರಿಗೆ ಆಗುತ್ತದೆ ಎಂದರೆ ಒಳ್ಳೆಯವರಿಗೆ ತೊಂದರೆಯಾಗುವುದು. ನನಗೂ ಹಾಗೆ ಆಗಿತ್ತು. ನಾನು ಖಂಡಿತವಾಗಿಯೂ ಕೊಡಗು ಜಿಲ್ಲೆಗೆ ಭೇಟಿ ಕೊಡುತ್ತೇನೆ. ಅಲ್ಲಿರತಕ್ಕಂಥ ಜನರ ಅಹವಾಲುಗಳೇನಿವೆ ಅವುಗಳನ್ನು ನಾನು ಸ್ವೀಕಾರ ಮಾಡುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸುನೀಲ್ ಸುಬ್ರಮಣಿ ಯವರು ಒಳ್ಳೆಯವರಲ್ಲವೇ?

**ಶ್ರೀ ಅರವಿಂದ ಲಿಂಬಾವಳಿ:–** ಕೊಡಗು ಜಿಲ್ಲೆಯಲ್ಲಿ ಮಾನ್ಯ ಸುನೀಲ್ ಸುಬ್ರಮಣಿ ಯವರು ಬರುತ್ತಾರೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರವು ಚೆನ್ನಾಗಿದೆ. ಏಕೆಂದರೆ, ಅವರು ಭಾರೀ ಅನುಕಂಪದಿಂದ, ಮಾನವೀಯತೆಯಿಂದ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅವರು ಸರ್ಕಾರವಾಗಿ ಉತ್ತರವನ್ನು ಕೊಟ್ಟಿಲ್ಲ. ಸರ್ಕಾರ ಸ್ಪಷ್ಟವಾಗಿರಬೇಕು. ಆ ಸಮಸ್ಯೆಯಾಗಿದೆ, ಈ ಸಮಸ್ಯೆಯಾಗಿದೆ, ಅಲ್ಲಿ ತೊಂದರೆಯಾಗಿದೆ, 10,000 ರೂಪಾಯಿ ಸಾಕಾಗುವುದಿಲ್ಲ ಎಂದು ಎಲ್ಲಾ ವಿಚಾರಗಳನ್ನು ಮಾನ್ಯ ಸಚಿವರು ಪ್ರಸ್ತಾಪ ಮಾಡಿದ್ದಾರೆ. Flood ನಲ್ಲಾದರೆ ಜಾಸ್ತಿ ಕೊಡುತ್ತೇವೆ, ಇದರಲ್ಲಿ ಜಾಸ್ತಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಲ್ಲ. ಸರ್ಕಾರ ಸ್ಪಷ್ಟವಾಗಿ ನಿಮಗೇನು ತೊಂದರೆಯಾಗಿದೆ, ಆ ತೊಂದರೆಯನ್ನು ಭರಿಸುತ್ತೇವೆ ಎನ್ನುವಂತಹ ವಿಶ್ವಾಸದ ಮಾತನ್ನು ಹೇಳಬೇಕೇ ಹೊರತು ಅಸಹಾಯಕತೆಯ ಮಾತುಗಳನ್ನು ಹೇಳಬಾರದು.

**ಶ್ರೀ ಅರವಿಂದ ಲಿಂಬಾವಳಿ:–** ನಾನು ಅಸಹಾಯಕವಾಗಿ ಹೇಳಲಿಲ್ಲ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಚಿವರೇ, ನಾನು ನಿಮಗೆ ಏನು ಹೇಳಿದ್ದೇನೆಂದರೆ, ನಾವೇನು ಹೇಳುತ್ತೇವೆ ಅದನ್ನೇ ನೀವು ಹೇಳಿದ್ದೀರಿ. ನಮ್ಮ ಭಾವನೆಗಳೇನಿವೆ, ನಮ್ಮ ನೋವು ಏನಿದೆ ಅದನ್ನು ತಾವು ಹೇಳಿದ್ದೀರಿ. ಆದರೆ ಸರ್ಕಾರವಾಗಿ ಏನು ಹೇಳಬೇಕಾಗಿದೆ ಅದನ್ನು ತಾವು ಹೇಳಲಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ನಾನು ಉತ್ತರ ಓದುತ್ತಿದ್ದೆ. ಸರ್ಕಾರದ ಉತ್ತರವನ್ನು ನಮ್ಮ ಅಧಿಕಾರಿಗಳು ತಯಾರು ಮಾಡಿಕೊಟ್ಟಿದ್ದಾರೆ. ಈಗಲೂ ನಾನು ಉತ್ತರವನ್ನು ಓದುತ್ತೇನೆ. ಆದರೆ ನಮ್ಮ ಸರ್ಕಾರದ ಹಂತದಲ್ಲಿ ಇಲಾಖೆಯ ಹಂತದಲ್ಲಿ ಏನು ಚಿಂತನೆ ನಡೆಯುತ್ತಿದೆ ಎನ್ನುವಂತಹ ಮಾಹಿತಿಗಳನ್ನು ಸದನಕ್ಕೆ ಕೊಟ್ಟಿದ್ದೇನೆ. ಏಕೆಂದರೆ, ಈ ಸದನಕ್ಕೆ ಚಿಂತಕರ ಚಾವಡಿ ಎಂದು ಹೆಸರು ಇದೆ. ಇದು ಚಿಂತನೆಯಾಗಿ ಮಂಥನವಾಗಿ ಸಲಹೆಗಳು ಬರಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಚಿಂತಕರ ಚಾವಡಿಯಲ್ಲಿ ಕೇವಲ ಚಿಂತನೆ ಮಾಡುವುದು ಹೊರಟು ಹೋಗುವುದು. ಕರಾರುವಕ್ಕಾಗಿ ಉತ್ತರ ಕೊಡಬೇಕೆಂದು ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಹೇಳುತ್ತಿದ್ದಾರೆ.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಕರಾರುವಕ್ಕಾದಂತಹ ಉತ್ತರ ಇಲ್ಲಿದೆ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅಂತಹ ಉತ್ತರ ಅವರಿಗೆ ಗೊತ್ತು, ನಮಗೂ ಗೊತ್ತು. ಏಕೆಂದರೆ ಅದು ನಮ್ಮ ಅವರ ಭಾವನೆಗಳಿಗೆ ಸ್ಪಂದಿಸುತ್ತಿರುವಂತಹ ಉತ್ತರ. ಅಧಿಕಾರಿಗಳು ಹಣಕಾಸು ಪರಿಸ್ಥಿತಿ ನೋಡಿಕೊಂಡು ಹೇಳುತ್ತಾರೆ. ಮಾನ್ಯ ಸಚಿವರು ನಮಗೆ ಎಷ್ಟು ತೊಂದರೆಯಾಗುತ್ತಿದೆ, ಅಸಹಾಯಕ ಪರಿಸ್ಥಿತಿಯಲ್ಲಿ ಅಲ್ಲಿಯ ರೈತರು ಇದ್ದಾರೆ, ಏನೆಲ್ಲಾ ನೋವಾಗಿದೆ, ಯಾವ ರೀತಿ ಪರಿಹಾರ ಕೊಡಬೇಕೆನ್ನುವುದನ್ನು ಹೇಳಿದ್ದಾರೆ. ಆದರೆ ಪರಿಹಾರ ಕೊಡತಕ್ಕಂಥ ಸಂದರ್ಭದಲ್ಲಿ ಹಾಗೆ ಕೊಟ್ಟರೆ ಈ ರೀತಿಯಾಗುತ್ತದೆ, ಇಂತಹ ಸಮಸ್ಯೆಗಳಿವೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳುವುದೇನೆಂದರೆ, ಇದು ಪರಿಹಾರವಲ್ಲ. ಅವರು ಸಚಿವರಾಗಿ, ಸರ್ಕಾರವಾಗಿ ನಿಮಗೇನು ತೊಂದರೆಯಾಗಿದೆ ಅದನ್ನು ಕೊಡುತ್ತೇವೆ ಎನ್ನುವಂತಹ ನಿಖರವಾದ, ಸ್ಪಷ್ಟವಾದ ಉತ್ತರವನ್ನು ನಾನು ಕೇಳುತ್ತಿದ್ದೇನೆ. ಆದರೆ, ಇದು ಅವರಿಗೆ ಕಷ್ಟವಾಗಬಹುದು. ಹಣಕಾಸು ಸಮಸ್ಯೆಯೆಲ್ಲಾ ಅವರಿಗೆ ಇರಬಹುದು. ಆದರೆ ನಮಗೆ ಸಮಸ್ಯೆಗೆ ಪರಿಹಾರ ಬೇಕಾಗಿದೆ. ಅದಕ್ಕೆ ನಾನು ಮಾನ್ಯ ಸಚಿವರ ಹತ್ತಿರ ಮನವಿ ಮಾಡುತ್ತಿರುವಂಥದ್ದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ಈಗಿರುವಂತಹ ನಿಯಮವೇನಿದೆ ಅದಕ್ಕನುಗುಣವಾಗಿ ನಾನು ಹೇಳಿದ್ದೇನೆ. ನಾವೇನು ಪ್ರಯತ್ನ ಮಾಡುತ್ತಿದ್ದೇವೆ, ಅದನ್ನು ಕೂಡ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಾನು ಈಗ ಬಂದು ಎರಡು ತಿಂಗಳಾಗಿದೆ. ಮಗು ಆಗಬೇಕೆಂದರೆ ಒಂಬತ್ತು ತಿಂಗಳು ಬೇಕಲ್ಲವೇ?

**ಉಪ ಸಭಾಪತಿಯವರು:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ, ಅವರು ಹೇಳಿದಂತಹ ವಿಚಾರ ಪ್ರಾಕ್ಟಿಕಲ್ ಆಗಿದ್ದು, ಈಗ ಅಧಿಕಾರಿಗಳು ಕೊಟ್ಟಿರುವ ಉತ್ತರವನ್ನು ಓದಿದ್ದರೆ ನಾವು ಮಾಡಿಬಿಡುತ್ತೇವೆ ಎನ್ನುವ ಹಾಗೆ ಆಗುತ್ತಿತ್ತು.

**ಶ್ರೀ ಅರವಿಂದ ಲಿಂಬಾವಳಿ:–** ಮಾನ್ಯ ಸಭಾಪತಿಯವರೇ, ನಾವು ಹೇಳಿರುವಂತಹ ಭಾವನೆಗಳನ್ನು ನಮ್ಮ ಇಲಾಖೆಯಲ್ಲಿ ಚರ್ಚೆ ಮಾಡಿಯೇ ನಾನು ಇಲ್ಲಿ ಹೇಳಿರುವುದು. ಪ್ರೋಸೆಸ್ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಇನ್ನು ಸ್ವಲ್ಪ ದಿವಸದೊಳಗೆ ಒಂದಿಷ್ಟು ವಿಷಯಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಗ ಸದನ ನಡೆಯುತ್ತದೆ. ಆಗಲೂ ಅವರು ಪ್ರಶ್ನೆ ಕೇಳಿಯೇ ಕೇಳುತ್ತಾರೆ. ನಾನು ನಿಖರವಾಗಿ ಈಗೇನು ಸಲಹೆ ರೂಪದಲ್ಲಿ ಹೇಳಿದ್ದೇನೆಯೋ, ಅವತ್ತು ನಿಖರವಾಗಿ ಉತ್ತರ ಕೊಡುತ್ತೇನೆ ಮತ್ತು ಸಲಹೆ ರೂಪದಲ್ಲಿ ಕೊಡುತ್ತೇನೆ. ಈ ಸದನಕ್ಕೆ ಉತ್ತರ ಕೊಡದೆ ಇನ್ಯಾವ ಸದನದಲ್ಲಿ ಉತ್ತರ ಕೊಡುವುದಕ್ಕಾಗುತ್ತದೆ? ಸದನದಲ್ಲೇ ಸುದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ಅದಕ್ಕೆ ಅವರು ಸಲಹೆಗಳನ್ನು ಕೊಡಲಿ ಎನ್ನುವ ಕಾರಣಕ್ಕಾಗಿ ನಾನು ಆ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದೇನೆ.

**(ಮುಂದು)**

**(401)15–03–2021/6–00/ಬಿಕೆಪಿ–ಎಂಡಿ**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಬೆಳಗ್ಗಿನಿಂದ ಇಲ್ಲಿಯವರೆಗೆ ಬಹುತೇಕ ಮಂತ್ರಿಗಳು ನಾನು ಹಣಕಾಸು ಇಲಾಖೆಯ ಜೊತೆಗೆ ಚರ್ಚೆ ಮಾಡುತ್ತೇನೆ, ಮಾಡುತ್ತೇನೆ ಎನ್ನುತ್ತಾರೆ. Finance Department, is it a Super Government? ಮಂತ್ರಿಗಳು ಏನು commitment ಮಾಡುತ್ತಾರೋ ಅದಕ್ಕೆ ಆರ್ಥಿಕ ಇಲಾಖೆಯವರು adjust ಆಗಬೇಕು. ಮುಂದಿನದು ಕೆಲವು curtail ಮಾಡಲಿ. The commitment made by a Minister on the floor of this Council is binding on the Finance

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Department. ಅವರದೇ Super Government ಆಗಿದೆ ಎಂದು ನನಗನ್ನಿಸುತ್ತಿದೆ. ಇವತ್ತು ಕನಿಷ್ಟ ಅರ್ಧ ಡಜನ್ ಮಂತ್ರಿಗಳು ಆರ್ಥಿಕ ಇಲಾಖೆಯವರ ಜೊತೆಗೆ ಚರ್ಚೆ ಮಾಡುತ್ತೇವೆ, ಅವರಿಂದ ಸಕಾರಾತ್ಮವಾಗಿ ಬಂದಾಗ ನಾವು ಹೇಳುತ್ತೇವೆಂದು ಹೇಳಿದ್ದಾರೆ. ಇವರ ಮೇಲೆ ಆರ್ಥಿಕ ಇಲಾಖೆ ಇದೆಯೇ? 33 ಇಲಾಖೆಗಳಲ್ಲಿ ಅದು ಸಹ ಒಂದು ಇಲಾಖೆ. ಅವರು ಹಣಕಾಸಿನ ವಹಿವಾಟು ಮಾಡುತ್ತಾರೆ. ಚರ್ಚೆ ಮಾಡುವುದು ನಂತರದ್ದು. ಈ ಸದನದಲ್ಲಿ ಎಲ್ಲರೂ ಆರ್ಥಿಕ ಇಲಾಖೆಯವರ ಜೊತೆಗೆ ಚರ್ಚೆ ಮಾಡುತ್ತೇವೆಂದು ಹೇಳುತ್ತಾರೆ. ಈಗಾಗಲೇ ನಾವು ಆರ್ಥಿಕ ಇಲಾಖೆಯವರ ಜೊತೆಗೆ ಚರ್ಚೆ ಮಾಡಿದ್ದೇವೆ. ಆರ್ಥಿಕ ಇಲಾಖೆಯವರು ಸಕಾರಾತ್ಮಕವಾದ ಸ್ಪಂದನೆ ಮಾಡಲಿಲ್ಲ, ನಕಾರಾತ್ಮಕವಾದ ಉತ್ತರವನ್ನು ಕೊಟ್ಟರು, sorry ಎಂದು ಹೇಳಿದರೆ ನಮ್ಮ ಗತಿ ಏನು? Finance Department is not a Super Government. It is one among 33 Departments. ಗೌರವಾನ್ವಿತ ಸಚಿವರು ಈ ಸದನದಲ್ಲಿ ಸರ್ಕಾರ ಇದ್ದ ಹಾಗೆ. No doubt, Cabinet is Government. Hon'ble Chief Minister alone is not a Government. ಇವರೆಲ್ಲರನ್ನು ಸೇರಿಸಿ Council of Ministers form a Government. ಗೌರವಾನ್ವಿತ ಸಚಿವರು ನಾವು ಈ ರೀತಿಯಾದಂಥ ಪರಿಹಾರ ಧನವನ್ನು ಕೊಡುತ್ತೇವೆ, ಈ ರೀತಿಯಾದಂಥ ಅನುದಾನವನ್ನು ಬಿಡುಗಡೆ ಮಾಡುತ್ತೇವೆಂದು ಈ ಸದನದಲ್ಲಿ ಒಂದು ನಿರ್ಣಯವನ್ನು ಕೈಗೊಂಡರೆ, it is binding on the Finance Department. ಆರ್ಥಿಕ ಇಲಾಖೆಯವರ ಹೇಳಿಕೆ ನಿಮ್ಮ ಮೇಲೆ binding ಇಲ್ಲ. You are above all. ಅದಕ್ಕೆ ದಯಮಾಡಿ. ನಾನು ನಿಮ್ಮ ಮುಖಾಂತರ ಈ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳೇ, ಬೆಳಿಗ್ಗಿನಿಂದಲೂ ನೋಡುತ್ತಿದ್ದೇನೆ. ಅದು ಸ್ವಲ್ಪ rectify ಆಗಲಿ. ಅದರಲ್ಲಿಯೂ ನೀವು ಗಟ್ಟಿಯಾಗಿರಬೇಕು. ನೀವು ನಮ್ಮ ಊರಿನವರು.

**ಉಪ ಸಭಾಪತಿಯವರು:–** ನಿಮ್ಮ ಊರಿನವರು. ಬೆಂಗಳೂರಿನಲ್ಲಿ settle ಆಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:** ನೀವು ಬೆಂಗಳೂರಿನಿಂದ ಆಯ್ಕೆಯಾಗಿ ಬಂದಿರಬಹುದು. ಆದರೆ, ಬಾಗಲಕೋಟೆಯ ಶ್ರೇಷ್ಠತೆಯನ್ನು ವ್ಯಕ್ತ ಮಾಡುತ್ತದೆ. You be firm. ಅವರನ್ನು ಕೇಳುತ್ತೇನೆ, ಇವರನ್ನು ಕೇಳುತ್ತೇನೆ. ನೀವು ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ ಅಂದುಕೊಳ್ಳಿ. I do agree. ನಮ್ಮ ಗೌರವಾನ್ವಿತ ಮುಖ್ಯಮಂತ್ರಿಗಳ ಜೊತೆಗೆ ನಾನು ಚರ್ಚೆ ಮಾಡಿ ನಿಮಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಹೇಳುತ್ತೇವೆ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಒಂದು ಇಲಾಖೆಯವರನ್ನು ಕೇಳುತ್ತೇನೆ, ಆರ್ಥಿಕ ಇಲಾಖೆಯ ಅಧಿಕಾರಿಗಳನ್ನು ಕೇಳುತ್ತೇನೆ ಎಂದರೆ ಹೇಗೆ? Are they above the Government?

**ಶ್ರೀ ಅರವಿಂದ ಲಿಂಬಾವಳಿ(ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):** ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವಂತಹ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ಈ ವರ್ಷದ ಪರಿಸ್ಥಿತಿ ಏನಿದೆ ಎಂದರೆ, ಕೊರೊನಾ ಕಾರಣಕ್ಕಾಗಿ ಅನೇಕ ಕಡೆಗಳಲ್ಲಿ ಅನೇಕ ಇಲಾಖೆಗಳಿಗೆ ಕೊಟ್ಟಿರುವಂತಹ ಅನುದಾನವನ್ನು ಕಡಿತಗೊಳಿಸಿದ್ದಾರೆ ಮತ್ತು ಅದು ಅನಿವಾರ್ಯತೆಯೂ ಹೌದು. ಆ ಕಾರಣಕ್ಕಾಗಿ ಆರ್ಥಿಕ ಇಲಾಖೆಯ ಜೊತೆಗೆ ಚರ್ಚೆ ಮಾಡುತ್ತೇವೆಂದು ಪದ ಬಳಸಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:** ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇವೆಂದು ಹೇಳಿದ್ದೀರಿ.

**ಶ್ರೀ ಅರವಿಂದ ಲಿಂಬಾವಳಿ:** ಮಾನ್ಯ ಸಭಾಪತಿಗಳೇ, ಉಳಿದವರೂ ಕೂಡ ಅದೇ ಪದವನ್ನು ಬಳಸಿದ್ದಾರೆ. ಆ ಹಿನ್ನೆಲೆಯಲ್ಲಿ . . . .

**(ಗೊಂದಲ)**

ಒಂದೇ ನಿಮಿಷ ಮುಗಿಸಿಬಿಡುತ್ತೇನೆ.

**ಉಪ ಸಭಾಪತಿಗಳು:** ವಿರೋಧ ಪಕ್ಷದ ನಾಯಕರೆ, let them complete. ಅವರು ಮಾತನಾಡಲಿ. ಅವರದ್ದು ಮುಗಿದ ಮೇಲೆ ನೀವು ಮಾತನಾಡಿ.

**Sri S.R.PATIL:-** Hon'ble Chief Minister is holding the Finance Department portfolio. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇವೆ ಎಂದು ಹೇಳಿದ್ದೀರಿ. ನಾವು ನಿಮ್ಮ ಮಾತಿಗೆ ಗೌರವ ಕೊಡುತ್ತೇವೆ. ನಾವು ಅದಕ್ಕೆ ತಲೆಬಾಗಿಸುತ್ತೇವೆ. ಆದರೆ, ವಿತ್ತ ಇಲಾಖೆಯನ್ನು ಕೇಳುತ್ತೇವೆ ಎಂದು ಹೇಳಬೇಡಿ.

**ಶ್ರೀ ಅರವಿಂದ ಲಿಂಬಾವಳಿ:** ಮಾನ್ಯ ಸಭಾಪತಿಗಳೇ, ಏಕೆ ಅದನ್ನು ಹೇಳಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ultimately ಅಂತಹ ಪರಿಸ್ಥಿತಿ ಬಂದಾಗ ನಿಶ್ಚಿತವಾಗಿ ಕೇಳಿಯೇ ಕೇಳುತ್ತೇವೆ. ಅನೇಕ ಸಂದರ್ಭಗಳಲ್ಲಿ ನಾವು ಆರ್ಥಿಕ ಇಲಾಖೆಯ ಅಧಿಕಾರಿಗಳನ್ನು ಕರೆದು ಮಾತನಾಡುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಧಿಕಾರ ನಮಗಿದೆ, ಎಲ್ಲಾ ಮಂತ್ರಿಗಳಿಗೂ ಅಧಿಕಾರವಿದೆ, ನಾನು ಅವರುಗಳನ್ನು ಕರೆಸಿದ್ದೇನೆ. ಆ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯವರನ್ನು ಕರೆದು ಈ ಸಂಗತಿಗಳನ್ನು ಒಪ್ಪಿಸುವಂತಹ ಪ್ರಯತ್ನ ಮಾಡುವುದಕ್ಕೋಸ್ಕರ ಆರ್ಥಿಕ ಇಲಾಖೆಯ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡುತ್ತೇವೆ ಎಂಬ ಪದ ಬಳಸಿದ್ದು ವಿಶೇಷವಾದ ಸಂದರ್ಭ ಏಕೆ ಎಂದರೆ ಕೊರೊನಾ ಕಾರಣಕ್ಕಾಗಿ. ಇಲ್ಲದಿದ್ದರೆ, ಹಿಂದಿನ ಅಧಿವೇಶನಗಳಲ್ಲಿ ಅಂದರೆ 2008ನೇ ಸಾಲಿನ ಅಧಿವೇಶನಗಳಲ್ಲಿ ಆ ರೀತಿಯ ಉತ್ತರಗಳನ್ನು ಯಾರೂ ಕೊಟ್ಟಿಲ್ಲ. ನಮಗೆ ಅಧಿಕಾರವಿದೆ. ಆ ಕಾರಣಕ್ಕಾಗಿ ಆ ಪದವನ್ನು ಬಳಸಿದ್ದೇನೆ. ವಿರೋಧ ಪಕ್ಷದ ನಾಯಕರು ಅದನ್ನು ಅನ್ಯಥಾ ಭಾವಿಸಬಾರದು.

**ಶ್ರೀ ಎಸ್,ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೇ, ಪ್ರಾಣಿಗಳಿಂದ ಮರಣಕ್ಕೆ ಒಳಗಾಗುತ್ತಿರುವ ಕುಟುಂಬಗಳಿಗೆ ಪರಿಹಾರವಾಗಿ ಎರಡೂವರೆ ಲಕ್ಷ ರೂಪಾಯಿಗಳು ಕೊಡಲಾಗುತ್ತದೆ ಎಂದು ಹೇಳಿದ್ದೀರಿ.

**ಶ್ರೀ ಅರವಿಂದ್ ಲಿಂಬಾವಳಿ–** ಏಳೂವರೆ ಲಕ್ಷ ರೂಪಾಯಿಗಳು.

**ಶ್ರೀ ಎಸ್,ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ನನಗೆ ಎರಡೂವರೆ ಲಕ್ಷಗಳು ಎಂದು ಕೇಳಿಸಿತು. ಏಳೂವರೆ ಲಕ್ಷ ರೂಪಾಯಿಗಳು ಆಗಿದ್ದರೆ ಸತ್ತ ನಂತರ ಅವರುಗಳ ಕುಟುಂಬಗಳಿಗೆ 5 ವರ್ಷಗಳ ಕಾಲದವರೆಗೆ ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿಗಳು ಮಾಸಾಶನ ಕೊಡುವಂತಹದ್ದು ಇದೆ. ಅದು ಈಗ ಕೆಲವು ಕಡೆಗಳಲ್ಲಿ ಅಂದರೆ ನಮ್ಮ ಜಿಲ್ಲೆಯಲ್ಲಿಯೇ ಆ ಯೋಜನೆ ಇನ್ನೂ ಬಂದಿಲ್ಲ. ನಾನು ನಿನ್ನೆ ಕೂಡ ನಿಮ್ಮ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಫೋನ್ ಮಾಡಿದೆ. ಅದರ ಬಗ್ಗೆ ಇನ್ನೂ ಸರಿಯಾಗಿ clarification ಇಲ್ಲ. ದಯಮಾಡಿ ಏನಾದರೂ ಗೊಂದಲವಿದ್ದರೆ ನಿವಾರಣೆ ಮಾಡಿ ತುರ್ತಾಗಿ ಅದನ್ನು ಬಿಡುಗಡೆ ಮಾಡಿಸಿ.

**ಶ್ರೀ ಅರವಿಂದ ಲಿಂಬಾವಳಿ:** ಗೊಂದಲವೇನೂ ಇಲ್ಲ. ಯಾರು ಪ್ರಾಣಿಗಳ ಹಾವಳಿಯಿಂದ ಸಾಯುತ್ತಾನೋ ಅವರಿಗೆ ಏಳೂವರೆ ಲಕ್ಷ ರೂಪಾಯಿಗಳಲ್ಲಿ ಎರಡೂವರೆ ಲಕ್ಷ ರೂಪಾಯಿಗಳನ್ನು immediate ಆಗಿ ಕಳುಹಿಸಿಬಿಡುತ್ತೇವೆ. ಆ ನಂತರ ಕುಟುಂಬದವರು ಯಾರು ಎಂದು ಸರಿಯಾಗಿ ಅರ್ಥಮಾಡಿಕೊಂಡು ಉಳಿದಂತಹ 5 ಲಕ್ಷ ರೂಪಾಯಿಗಳನ್ನು ಕಳುಹಿಸುತ್ತೇವೆ. ಆ ನಂತರ ಪ್ರತಿ ವರ್ಷ ತಾವು ಹೇಳಿದ ಹಾಗೆ ಪ್ರತಿ ತಿಂಗಳು ಅವರಿಗೆ ಎರಡು ಸಾವಿರ ರೂಪಾಯಿಗಳನ್ನು 5 ವರ್ಷಗಳವರೆಗೆ ಮಾಸಾಶನ ಕೊಡಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ.ಕೆ.ಟಿ.ಶ್ರೀಕಂಠೇಗೌಡ( ಪದವೀಧರರ ಕ್ಷೇತ್ರ);–** ನಮ್ಮಲ್ಲಿ ಕೆಲವರಿಗೆ ಬಿಡುಗಡೆಯಾಗಿಲ್ಲ. ರಾಮನಗರ ಜಿಲ್ಲೆಯಲ್ಲಿ ಬಿಡುಗಡೆಯಾಗಿಲ್ಲ.

**ಶ್ರೀ ಅರವಿಂದ ಲಿಂಬಾವಳಿ:** ಬಾಕಿ ಎಲ್ಲಾದರೂ ಇದ್ದರೆ ದಯವಿಟ್ಟು ಅದನ್ನು ನಮ್ಮ ಗಮನಕ್ಕೆ ತನ್ನಿ. Immediate ಆಗಿ ಅದನ್ನು ಬಿಡುಗಡೆ ಮಾಡಿಸುವ ವ್ಯವಸ್ಥೆ ಮಾಡಿಸುತ್ತೇನೆ.

**ಶ್ರೀ.ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಚರ್ಚೆ ಬಹಳ ಚೆನ್ನಾಗಿ ಆಗುತ್ತಿದೆ. ಇತ್ತೀಚೆಗೆ ನಮ್ಮಲ್ಲಿ ಏನಾಗಿದೆ ಎಂದರೆ ಮಂಡ್ಯ ಜಿಲ್ಲೆಯಲ್ಲಿ ಕಾಡು ಕಡಿಮೆ. ಕಬ್ಬಿನ ಗದ್ದೆ ಜಾಸ್ತಿಯಿದೆ. ಚಿರತೆಯ ಹಾವಳಿ ವಿಪರೀತವಾಗಿದೆ. ವಿಪರೀತ ಎಂದರೆ ನಮ್ಮ ಮಾನ್ಯ ಸಚಿವರಿಗೆ ಅದು ಗೊತ್ತಿರಬೇಕು. ಪ್ರತಿನಿತ್ಯ ಪತ್ರಿಕೆಗಳಲ್ಲಿ ಅದೇ ಸುದ್ದಿ ಬರುತ್ತದೆ. ಇಡಿ ಊರು ಗಾಬರಿಗೊಳ್ಳುವಂತಹ ಸಂದರ್ಭವದು. ಅವರು ಮನೆಯೊಳಗಿದ್ದು ಕಿಟಕಿಯಲ್ಲಿ ನೋಡುತ್ತಿರುತ್ತಾರೆ. Neat ಆಗಿ ಚಿರತೆ ಬರುತ್ತದೆ. ಒಂದು ಕುರಿ ಅಥವಾ ಮೇಕೆಯನ್ನೋ ಹೊತ್ತುಕೊಂಡು ಹೋಗುತ್ತಿರುತ್ತದೆ. ಇದು ಎಲ್ಲಾ ಹಳ್ಳಿಗಳಲ್ಲಿ ನಡೆಯುತ್ತಿದೆ. ನಮ್ಮ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರ ಸಲಹೆ ಬಹಳ ಚೆನ್ನಾಗಿದೆ. ಹುಲಿಯ ಸಂಖ್ಯೆ 540 ಇದೆ. ಅದರ ಸಂತತಿ ಬೆಳವಣಿಗೆಗೆ ಏನು ಮಾಡಬೇಕೋ ಮಾಡಿ. ಎಲ್ಲೋ ಅಪರೂಪಕ್ಕೆ ಇಂತಹ ಪ್ರಕರಣಗಳು ಅಂದರೆ ಮನುಷ್ಯರ ಮೇಲೆ ಹುಲಿ ಹಾವಳಿ ಮಾಡುವಂತಹದ್ದು ನಡೆಯುತ್ತದೆ. It is a very rare case. ನೀವು ಇದಕ್ಕೆ ಏಳೂವರೆ ಲಕ್ಷಗಳಲ್ಲದಿದ್ದರೆ 10 ಲಕ್ಷ ರೂಪಾಯಿಗಳ ಪರಿಹಾರವನ್ನಾದರೂ ಕೊಡಿ ನನ್ನದು ಅಡ್ಡಿಯಿಲ್ಲ. ಇಂತಹವು ಯಾವಾಗಲೋ ಒಮ್ಮೆ ಲಕ್ಷಕ್ಕೆ ಒಂದು ಸಲ ಬರುತ್ತದೆ, ಅದು ಆತಂಕವಿಲ್ಲ. ಆದರೆ, ಚಿರತೆಯ ಹಾವಳಿ ನಮ್ಮ ಬಯಲು ಸೀಮೆಯಲ್ಲಿ ಅರಣ್ಯವಿಲ್ಲದಿದ್ದರೂ ಸಹಿತ ಕಬ್ಬಿನ ಗದ್ದೆಗಳಲ್ಲಿ ಈಗ ಬೀಡು ಬಿಟ್ಟಿವೆ. 4–5 ಮರಿಗಳಿರುತ್ತವೆ. ಈಗ ಜನರು ಕಬ್ಬಿನ ಗದ್ದೆಗಳಿಗೆ ಕಟಾವು ಮಾಡುವುದಕ್ಕೇ ಬರುವುದಿಲ್ಲ. ಹಳ್ಳಿಗಳ ಸುತ್ತಮುತ್ತ ಅರಣ್ಯವೇ ಇಲ್ಲ, ಹಳ್ಳಿ–ಹಳ್ಳಿಗಳಲ್ಲಿ ಚಿರತೆಗಳ ಹಾವಳಿ ತುಂಬಾ ಇದೆ. ಇದಕ್ಕೆ ನೀವು ಏನಾದರೂ ಒಂದು ಯೋಜನೆ ರೂಪಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ನೀವು ಚಿರತೆ ಸಂತತಿ avoid ಮಾಡುವುದಕ್ಕೆ ನೋಡುತ್ತೀರೋ ಅಥವಾ ಚಿರತೆಯನ್ನು ಏನಾದರೂ ಪರ್ಯಾಯವಾಗಿ ಅವುಗಳನ್ನು ಬೇಟೆಯಾಡುವಂತಹದ್ದೋ ಅಥವಾ ಹಳ್ಳಿಗಳಿಗೆ ಬರದಂತೆ ನೋಡಿಕೊಳ್ಳುತ್ತೀರೋ ಗೊತ್ತಿಲ್ಲ. ತಾವು ಇದಕ್ಕೆ ಏನಾದರೂ ಒಂದು ಮಾರ್ಗ ಹುಡುಕಲೇ ಬೇಕು. ಇದರ ಹಾವಳಿಯಂತೂ ನಮ್ಮ ಬಯಲುಸೀಮೆಯ ನಾಲ್ಕಾರು ಜಿಲ್ಲೆಗಳಲ್ಲಿ ವಿಪರೀತಕ್ಕೆ ಹೋಗಿದೆ. ಅದು ಎಷ್ಟು ಅಸದಳವೆಂದರೆ ಇಡೀ ಊರು ಊರೇ ಗಾಬರಿಯಾಗಿಬಿಡುತ್ತದೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಷ್ಟರಮಟ್ಟಿಗೆ ಚಿರತೆಯ ಹಾವಳಿಯಿದೆ. ತಾವು ದಯಮಾಡಿ ಅದರ ಬಗ್ಗೆ ಸಭೆ ಮಾಡಬೇಕು, ಆ ದಿಸೆಯಲ್ಲಿ ಅದರ ಬಗ್ಗೆ ಕ್ರಮಕ್ಕೂ ಮುಂದಾಗಬೇಕು.

**ಉಪ ಸಭಾಪತಿಯವರು:** ವಿರೋಧ ಪಕ್ಷದ ನಾಯಕರೆ, ರೂಲ್–68ರಲ್ಲಿ ನೀವೇ ಕೇಳಿರುವುದು. ನೀವೇ ಹೋಗಬೇಕೆಂದು ಹೇಳಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ನಾಳೆ ತೆಗೆದುಕೊಳ್ಳೋಣ.

**ಉಪ ಸಭಾಪತಿಯವರು:** ಸದನವನ್ನು ನಾಳೆ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 9 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 16ನೇ ಮಾರ್ಚ್ ಮಾಹೆ 2021ರ ಮಂಗಳವಾರದಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"